ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ

DESCRIPTIVE GLOSSARY OF ADMINISTRATIVE TERMS IN ANCIENT KARNATAKA

ಸಂಪಾದಕ

ಶ್ರೀನಿವಾಸ ರಿತ್ತಿ

ಸಹ ಸಂಪಾದಕರು

ಹುಚ್ಚರಾವ್ ಬೆಂಗೇರಿ

ಸದಾನಂದ ನಾಯಕ

ಎಸ್. ಎಲ್. ಶಾಂತಕುಮಾರಿ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ

DESCRIPTIVE GLOSSARY OF ADMINISTRATIVE TERMS IN ANCIENT KARNATAKA

ಕರ್ನಾಟಕ ಸರಕಾರ

ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ

ಸಂಪಾದಕ

ಶ್ರೀನಿವಾಸ ರಿತ್ತಿ

ಸಹ ಸಂಪಾದಕರು

ಹುಚ್ಚರಾವ್ ಬೆಂಗೇರಿ

ಸದಾನಂದ ನಾಯಕ

ಎಸ್.ಎಲ್. ಶಾಂತಕುಮಾರಿ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

2000

ಪ್ರಥಮ ಮುದ್ರಣ : 1000 ಪ್ರತಿಗಳು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಬೆಲೆ : ರೂ **325/-**

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, 116/1, 6ನೇ ತಿರುವು, ಗೋಕುಲಂ ಮೊದಲನೇ ಹಂತ, ಮೈಸೂರು-2. ☎ 411325
ಮುದ್ರಣ: ಪ್ರಜ್ವಲ್ ಎಂಟರ್‌ಪ್ರೈಸಸ್, ಮೈಸೂರು

GOVERNMENT OF KARNATAKA

DESCRIPTIVE GLOSSARY OF ADMINISTRATIVE TERMS IN ANCIENT KARNATAKA

Editor
SHRINIVAS RITTI

Associate Editors
HUCHCHARAO BENGERI
SADANAND NAYAK
S.L. SHANTAKUMARI

Directorate of Archaeology & Museums, Mysore
2000

First Edition : 1000 copies

Directorate of Archaeology and Museums, Mysore

Price : Rs. 325/-

DTP Composed by Comptek Computer Systems, 116/1, 6th Cross, Gokulam 1st Stage, Mysore-2. Ph: 411325
Printed by Prajwal Enterprises, Mysore.

ಮುನ್ನುಡಿ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಸ್ಮಾರಕಗಳ ಸಂರಕ್ಷಣೆ, ಪುರಾತತ್ವ ನೆಲೆಗಳ ಉತ್ಖನನ ಮತ್ತು ಕರ್ನಾಟಕ ಇತಿಹಾಸ, ಶಾಸನಶಾಸ್ತ್ರ ಮತ್ತು ಸಂಸ್ಕೃತಿ ಮುಂತಾದ ರಾಷ್ಟ್ರೀಯ ಮಹತ್ವದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿಚಾರ ಸಂಕಿರಣ ಮತ್ತು ಸಮ್ಮೇಳನಗಳನ್ನು ಸಹ ಏರ್ಪಡಿಸಲಾಗುತ್ತಿದೆ. ಇಂತಹವುಗಳ ವರದಿಗಳು ಮತ್ತು ನಡೆವಳಿಗಳನ್ನು ಮತ್ತು ಇತರ ಸಂಶೋಧನಾ ಕೃತಿಗಳನ್ನು ನಿಯತಕಾಲದಲ್ಲಿ ಪ್ರಕಟಿಸಲಾಗುತ್ತಿದೆ. ನಿರ್ದೇಶನಾಲಯವು ಹೊರಗಿನ ವಿದ್ವಾಂಸರ ಸಂಶೋಧನೆಯನ್ನು ಪ್ರೋತ್ಸಾಹಿಸಿ, ಅವರ ಪ್ರಮುಖ ಕೃತಿಗಳನ್ನು ಪ್ರಕಟಿಸುತ್ತದೆ.

ಪ್ರಸ್ತುತ ಕೃತಿ "ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ" ನಿಜವಾಗಿಯೂ ವಿಶೇಷ ಸ್ವರೂಪವನ್ನು ಹೊಂದಿದೆ. ಇದು ವಿವಿಧ ಆಕರಗಳಿಂದ ಎಚ್ಚರಿಕೆಯಿಂದ ಆಯ್ಕೆ ಮಾಡಿದ, ವಿವರವಾದ ಟಿಪ್ಪಣಿಯನ್ನೊಳಗೊಂಡ ಮತ್ತು ಸಂಬಂಧಪಟ್ಟ ಉದ್ಧರಣೆ ಮತ್ತು ಉಲ್ಲೇಖಗಳೊಂದಿಗೆ ದೃಢೀಕರಿಸಿದ ಮೂರು ಸಾವಿರಕ್ಕೂ ಹೆಚ್ಚಿನ ಆಕರ್ಷಕ ಶಬ್ದಗಳನ್ನು ಒಳಗೊಂಡಿದೆ. ಈ ಕೃತಿಯು ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿ ಮತ್ತು ನಮ್ಮ ಪೂರ್ವಜರ ಸಾಮಾಜಿಕ ಮತ್ತು ಆರ್ಥಿಕ ಜೀವನದ ನಸು ನೋಟವನ್ನು ನೀಡುವುದು. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ವಿಷಯದ ಮೇಲೆ ಸಂಶೋಧನೆ ಮಾಡಲಿಚ್ಛಿಸುವ ವಿದ್ವಾಂಸರಿಗೆ ವಿಪುಲವಾದ ಸಾಮಗ್ರಿಯನ್ನು ಇದು ಒದಗಿಸುತ್ತದೆ. ಕೃತಿಯು ದ್ವಿಭಾಷೆಯಲ್ಲಿರುವುದರಿಂದ ಕನ್ನಡೇತರ ವಿದ್ವಾಂಸರಿಗೂ ಉಪಯುಕ್ತವಾಗಿದೆ.

ಈ ಕೃತಿಯು ಖ್ಯಾತ ವಿದ್ವಾಂಸರೂ ಮತ್ತು ಪ್ರಸಿದ್ಧ ಶಾಸನತಜ್ಞರೂ ಆದ ಡಾ. ಶ್ರೀನಿವಾಸ ರಿತ್ತಿ ಮತ್ತು ಅವರ ವಿದ್ವಾಂಸ ಸಂಗಾತಿಗಳ ಕಠಿಣ ಮತ್ತು ಪ್ರಾಮಾಣಿಕ ಪರಿಶ್ರಮದ ಫಲವಾಗಿದೆ. ಕೃತಿಯನ್ನು ನಮ್ಮ ನಿರ್ದೇಶನಾಲಯದಿಂದ ಪ್ರಕಟಿಸಲು ಅವಕಾಶ ಮಾಡಿಕೊಟ್ಟುದಕ್ಕೆ ಡಾ. ರಿತ್ತಿಯವರಿಗೆ ನಾನು ಕೃತಜ್ಞನಾಗಿದ್ದೇನೆ. ಜನ ಸಾಮಾನ್ಯರು ಮತ್ತು ವಿದ್ವಾಂಸರು ಈ ಕೃತಿಯನ್ನು ಸ್ವಾಗತಿಸುವರೆಂಬುದು ನನ್ನ ನಂಬಿಕೆ.

ನಮ್ಮ ಎಲ್ಲಾ ಸಂಶೋಧನಾ ಮತ್ತು ಪ್ರಕಟಣಾ ಕಾರ್ಯಕ್ರಮಗಳಿಗೆ ನಿರಂತರವಾಗಿ ಪ್ರೋತ್ಸಾಹ ಮತ್ತು ಬೆಂಬಲ ನೀಡುತ್ತಿರುವ ಶ್ರೀ ಆ.ರಾ. ಚಂದ್ರಹಾಸಗುಪ್ತ, ಐಎಎಸ್, ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ, ಇವರಿಗೆ ನಾನು ಋಣಿಯಾಗಿದ್ದೇನೆ. ಈ ಗ್ರಂಥದ ಮುದ್ರಣ ಕಾರ್ಯವನ್ನು ದಕ್ಷತೆಯಿಂದ ನೋಡಿಕೊಂಡ ನನ್ನ ಸಹೋದ್ಯೋಗಿ ಡಾ. ಸಿ.ಎಸ್. ಪಾಟೀಲ, ಉಪ ನಿರ್ದೇಶಕ, ಇವರಿಗೂ ಅಭಾರಿಯಾಗಿದ್ದೇನೆ. ಅಂದವಾದ ಅಕ್ಷರ ಜೋಡಣೆಯನ್ನು ಮಾಡಿದ ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್ ಅವರಿಗೂ ಮತ್ತು ಗ್ರಂಥವನ್ನು ಉತ್ತಮವಾಗಿ ಮುದ್ರಿಸಿದ ಪ್ರಜ್ವಲ್ ಎಂಟರ್‌ಪ್ರೈಸಸ್ ಅವರಿಗೂ ನನ್ನ ಕೃತಜ್ಞತೆಗಳು.

ಮೈಸೂರು
22-03-2000

ಪ್ರೊ. ಎಂ.ವಿ. ಕೃಷ್ಣಪ್ಪ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

FOREWORD

The Directorate of Archaeology and Museums conducts several programmes of national interest such as protection and conservation of monuments, excavation of archaeological sites and researches in history, epigraphy and culture of Karnataka. Seminars and conferences are also organised. Reports and proceedings of such programmes and other research works are published periodically. The Directorate also encourages and sponsors research work of outside scholars and publishes outstanding works by them.

The present work *The Descriptive Glossary of Administrative Terms in Ancient Karnataka*, our first publication in the new millenium, is indeed of a unique nature. It contains a collection of more than three thousand fascinating terms, carefully selected from various sources, annotated with explanations and authenticated by relevant quotations and references. The work gives a glimpse of the system of administration in ancient Karnataka and also of the social and economic life of our people of the bygone days. It also provides ample material for scholars who intend to work on any aspect of history and culture of Karnataka. Being a bilingual work, it can be used by non-Kannada scholars also.

The work is the outcome of hard and sincere work by the erudite scholar and noted epigraphist Dr. Shrinivas Ritti and his learned associates. I am thankful to Dr. Ritti for providing me an opportunity to publish this useful work through my Directorate. I am sure both the laymen and the scholars will welcome this interesting work.

I am thankful to Shri A.R. Chandrahasa Gupta, I.A.S., Secretary, Kannada and Culture for his constant encouragement and support in all our research and publication programmes. My thanks are due to my colleague Dr. C.S. Patil, Deputy Director for ably handling the printing of this work. M/s. Comptek Computer Systems deserve our appreciation for the neat execution of DTP work. Thanks are also due to M/s. Prajwal Enterprises for excellent printing in record time.

Mysore
22-03-2000

Prof. M.V. Krishnappa
Director
Directorate of Archaeology and
Museums

ಪ್ರಸ್ತಾವನೆ

ಯೋಜನೆಯ ಹೊಳಹು

ಸಾಮಾನ್ಯ ಜನರ ಅನುಕೂಲತೆಯ ದೃಷ್ಟಿಯಿಂದ ಆಡಳಿತದಲ್ಲಿ ಕನ್ನಡವನ್ನೇ ಬಳಸಬೇಕೆಂದು ಕರ್ನಾಟಕ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಉದ್ದೇಶವನ್ನು ಕಾರ್ಯಗತಗೊಳಿಸಲು ಬಹುವಾಗಿ ಶ್ರಮಿಸುತ್ತಿದೆ. ಆದರೂ ಈ ದಿಶೆಯಲ್ಲಿ ಇನ್ನೂ ಪ್ರಗತಿ ಸಾಧಿಸಬೇಕಾಗಿದೆ. ಇದರಲ್ಲಿ ಹಲವಾರು ತೊಡಕುಗಳಿವೆ. ಅನೇಕ ವರ್ಷಗಳಿಂದ ಇಂಗ್ಲಿಷಿಗೆ ಹೊಂದಿಕೊಂಡು ಈಗ ಕನ್ನಡಕ್ಕೆ ಬದಲಾಯಿಸುವಲ್ಲಿ ಮಾನಸಿಕ ಸಿದ್ಧತೆ ಹಲಕೆಲವರಲ್ಲಿ ಇಲ್ಲದಿರುವುದು ಒಂದು ತೊಡಕಾದರೂ ಮುಖ್ಯವಾದ ವ್ಯಾವಹಾರಿಕ ತೊಂದರೆಯೆಂದರೆ ಕನ್ನಡವನ್ನು ಆಡಳಿತದಲ್ಲಿ ಬಳಸಲು ಬರುವಂಥ ಶಬ್ದಗಳ ಸಂಗ್ರಹ. ಇಂಥ ಶಬ್ದಸಂಗ್ರಹ ನಮ್ಮಲ್ಲಿದೆಯೇ ಎಂಬ ಸಂಶಯ ಕೆಲವರಿಗಾದರೆ ನಿರ್ದಿಷ್ಟವಾದ ಅರ್ಥವನ್ನು ಕೊಡುವ ಶಬ್ದಗಳನ್ನು ರೂಪಿಸುವುದು ಶಕ್ಯವೇ ಎಂಬ ಸಂದೇಹ ಇನ್ನು ಕೆಲವರಿಗಿದೆ. ಈ ಸಂದೇಹಗಳಿಗೆ ಅವಕಾಶವಿದೆಯಾದರೂ ಇವುಗಳನ್ನು ನಿವಾರಿಸುವುದು ಕಷ್ಟ ಸಾಧ್ಯವೇನಲ್ಲ ಎಂಬುದು ಈಚೀಚಿನ ಪ್ರಯತ್ನಗಳಿಂದ ತಿಳಿದುಬಂದ ವಿಷಯ. ಹಾಗೆಯೇ ಇಂಗ್ಲಿಷ್ ಭಾಷೆ ನಮ್ಮ ದೇಶದಲ್ಲಿ ಕಾಲಿಡುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಇಲ್ಲಿ ಸುವ್ಯವಸ್ಥಿತವಾದ ಆಡಳಿತ ಪದ್ಧತಿ ರೂಪುಗೊಂಡಿದ್ದು ಪ್ರಾದೇಶಿಕ ಭಾಷೆಗಳಲ್ಲಿ ಯಾವ ತೊಡಕೂ ಇಲ್ಲದೆ ಆಡಳಿತ ನಡೆಯುತ್ತಿತ್ತು ಎಂಬ ವಿಷಯವನ್ನೂ ಗಮನಿಸಬೇಕು. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಇಡೀ ದೇಶಕ್ಕೆ ಅನ್ವಯಿಸುವಂತೆ ಆಡಳಿತಕ್ಕೆ ಸಂಬಂಧಿಸಿದ ಅತ್ಯುತ್ತಮ ಮಾರ್ಗದರ್ಶಿಯಾದ ಕೌಟಿಲ್ಯನ ಅರ್ಥಶಾಸ್ತ್ರವಷ್ಟೇ ಅಲ್ಲದೆ ಕ್ರಿಸ್ತಶಕದ ಆರಂಭದಿಂದ ಈಚಿನ ಕಾಲದವರೆಗಿನ ಶಿಲಾಶಾಸನಗಳನ್ನು, ತಾಮ್ರಪತ್ರಗಳನ್ನು ಸಾಹಿತ್ಯಗ್ರಂಥಗಳನ್ನು ಅಭ್ಯಸಿಸಿದಾಗ ಆಯಾ ಕಾಲದ ಸುವ್ಯವಸ್ಥಿತವಾದ ಕೇಂದ್ರೀಯ, ಸ್ಥಾನಿಕ ಮತ್ತು ಗ್ರಾಮೀಣ ಆಡಳಿತದ ಸ್ಪಷ್ಟವಾದ ಚಿತ್ರಣ ನಮಗೆ ದೊರೆಯುತ್ತದೆ. ಆಯಾ ಕಾಲದಲ್ಲಿ ಆಡಳಿತದ ವಿವಿಧ ಅಂಗಗಳಲ್ಲಿ ಬಳಸಲ್ಪಡುತ್ತಿದ್ದ ಶಬ್ದಗಳು ಹೇರಳವಾಗಿ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನಾದರೂ ನೇರವಾಗಿಯೂ, ಇನ್ನೂ ಕೆಲವನ್ನು ಇಂದಿನ ಅವಶ್ಯಕತೆಗೆ ಹೊಂದಿಕೊಳ್ಳುವಂತೆಯೂ ಮಾರ್ಪಡಿಸಿಕೊಂಡು ಬಳಸಿಕೊಳ್ಳುವುದು ಸಾಧ್ಯವಾಗುತ್ತದೆ. ಎಷ್ಟೋ ಸಲ ಹೊಸ ಶಬ್ದಗಳನ್ನು ರೂಪಿಸುವುದಕ್ಕೂ ಇವು ಸಹಾಯಕವಾಗುತ್ತವೆ. ಈ ದೃಷ್ಟಿಯಿಂದ ಪ್ರಾಚೀನ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಆಡಳಿತ ವಿಷಯಕ ಶಬ್ದಗಳ ವಿವರಣಾತ್ಮಕವಾದ ಕೋಶವೊಂದನ್ನು ರಚಿಸುವ ಪ್ರಯತ್ನವು ಫಲಪ್ರದವಾದೀತು ಎಂಬ ವಿಚಾರದಿಂದ ಒಂದು ಯೋಜನೆಯನ್ನು ತಯಾರಿಸಿ ಕರ್ನಾಟಕ ಸರ್ಕಾರಕ್ಕೆ ಒಪ್ಪಿಸಿದೆವು. ಅಂದಿನ 'ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ'ದ (ಇದು ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದು ಕರೆಯಲ್ಪಡುತ್ತಿದೆ) ನಿರ್ದೇಶಕರಾಗಿದ್ದ ಶ್ರೀ ಎಮ್. ಕೇಶವಭಟ್ಟ ಅವರು ಈ ಯೋಜನೆಯ ಮಹತ್ವವನ್ನು ಮನಗಂಡು ಅದನ್ನು ಪುರಸ್ಕರಿಸಿದರು. ಅವರ ಪ್ರೋತ್ಸಾಹ ಮತ್ತು ಸರ್ಕಾರದ ಸಹಾಯದಿಂದ ಕೆಲಸ ಮುಂದುವರೆಯಿತು. ತದನಂತರ ನಿರ್ದೇಶಕರಾಗಿ ಬಂದ ಶ್ರೀ ಜಯತೀರ್ಥ ರಾಜಪುರೋಹಿತ ಹಾಗೂ ಶ್ರೀ ಅನಿರುದ್ಧ ದೇಸಾಯಿಯವರ ಬೆಂಬಲದಿಂದ ಯೋಜನೆಯನ್ನು ಶೀಘ್ರವಾಗಿ ಪೂರೈಸಲು ಸಾಧ್ಯವಾಯಿತು.

ಕೋಶದ ವ್ಯಾಪ್ತಿ

ಈ ಕೋಶವನ್ನು ರಚಿಸಲು ಕರ್ನಾಟಕದಲ್ಲಿ ಪ್ರಾರಂಭದಿಂದ ಹದಿನಾರನೆಯ ಶತಮಾನದವರೆಗಿನ ಲಭ್ಯವಿದ್ದ ಶಾಸನಗಳಿಂದ ಮತ್ತು ಸಾಹಿತ್ಯ ಗ್ರಂಥಗಳಿಂದ ಶಬ್ದಗಳನ್ನು ಆಯ್ದುಕೊಳ್ಳಲಾಗಿದೆ. ಹೀಗೆ ಎಪಿಗ್ರಾಫಿಯಾ ಕರ್ನಾಟಿಕಾ, ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಎಪಿಗ್ರಾಫಿಯಾ ಇಂಡಿಕಾ ಮತ್ತು ಇನ್ನೂ ಹಲವಾರು ಶಾಸನಸಂಗ್ರಹ ಗ್ರಂಥಗಳನ್ನು ಅಲ್ಲದೆ ಅನೇಕ ಅಪ್ರಕಟಿತ

ಶಾಸನಗಳನ್ನು, ಹೀಗೆ ಸುಮಾರು ಮೂವತ್ತು ಸಾವಿರ ಶಾಸನಗಳನ್ನು, ಅಲ್ಲದೆ ಅನೇಕ ಹಳೆಗನ್ನಡ ಕಾವ್ಯಗ್ರಂಥಗಳನ್ನು ಪರಿಶೀಲಿಸಿ ಸುಮಾರು ಆರು ಸಾವಿರಕ್ಕೂ ಹೆಚ್ಚು ಶಬ್ದಗಳನ್ನು ಸಂಗ್ರಹಿಸಲಾಯಿತು. ಅವುಗಳಲ್ಲಿ ವಿಷಯಕ್ಕೆ ಸಂಬಂಧಿಸಿದ ಮಹತ್ವದ ಶಬ್ದಗಳನ್ನು ಆರಿಸಿ ಅವುಗಳ ಸಂದರ್ಭ, ಪ್ರಯೋಗ, ವ್ಯುತ್ಪತ್ತಿ ಮುಂತಾದವುಗಳನ್ನು ಗಮನಿಸಿ ಅವುಗಳಿಗೆ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಅರ್ಥಗಳನ್ನು ನಿರ್ಧರಿಸಲಾಯಿತು.

ಹದಿನಾರನೆಯ ಶತಮಾನದ ನಂತರ ರಾಜಕೀಯ ರಂಗದಲ್ಲಿ ಮಹಮ್ಮದೀಯ, ಮರಾಠಾ, ಮತ್ತು ನಂತರ ಇಂಗ್ಲಿಷರ ಪ್ರವೇಶದಿಂದಾಗಿ ತೀವ್ರವಾದ ಬದಲಾವಣೆಗಳುಂಟಾದವು. ಈ ಪ್ರಭಾವಗಳಿಂದ ಆಡಳಿತದ ಸ್ವರೂಪದಲ್ಲಿಯೂ ಬದಲಾವಣೆಗಳಾಗಿ ಪರ್ಶಿಯನ್, ಮರಾಠಿ ಮತ್ತು ಇಂಗ್ಲಿಷ್ ಪದಗಳು ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿ ಬಂದವು. ಆದ್ದರಿಂದ ಈ ಕೋಶದ ವ್ಯಾಪ್ತಿಯನ್ನು ಹದಿನಾರನೆಯ ಶತಮಾನದವರೆಗೆ ಸೀಮಿತಗೊಳಿಸಲಾಗಿದೆ.

ಈ ಕೋಶವನ್ನು 'ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ' ಎಂದು ಕರೆಯಲಾಗಿದೆ. ಇತಿಹಾಸಜ್ಞರಲ್ಲಿ ಪ್ರಾಚೀನ, ಮಧ್ಯ ಮತ್ತು ಅರ್ವಾಚೀನ ಎಂದು ಮುಂತಾದ ಕಾಲವಿಂಗಡನೆಯ ಬಗ್ಗೆ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ತಾತ್ವಿಕ ಚರ್ಚೆಗಳೇನೇ ಇದ್ದರೂ ದಕ್ಷಿಣ ಭಾರತದ, ವಿಶೇಷವಾಗಿ ಕರ್ನಾಟಕದ ಮಟ್ಟಿಗೆ, ಆರಂಭದಿಂದ ವಿಜಯನಗರಕಾಲದ ಕೊನೆಯವರೆಗೂ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವ್ಯವಸ್ಥೆಗಳು, ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬಂದರೂ, ಹರಿಗಡಿಯದೆ ಒಂದೇ ಸಮನಾಗಿ ನಡೆದುಕೊಂಡು ಬಂದವೆಂಬುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ ವಿಜಯನಗರ ಕಾಲದ ಅಂತ್ಯದವರೆಗಿನ ಈ ದೀರ್ಘಕಾಲವನ್ನು ಸ್ಥೂಲವಾಗಿ ಪ್ರಾಚೀನ ಎಂದು ಕರೆದಿದ್ದೇವೆ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸಿದ್ಧವಾದ ಈ ಕೋಶದ ಮುದ್ರಣದ ಏರ್ಪಾಡು ಕೂಡ ಆಗಿತ್ತು. ಆದರೆ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಕೆಲಸ ಸ್ಥಗಿತಗೊಂಡು ನಿಂತುಹೋಯಿತು. ಅದು ಇದೀಗ ಬೆಳಕು ಕಾಣುತ್ತಿರುವುದು ಸಂತೋಷದ ಸಂಗತಿಯಾಗಿದೆ. ಈ ಸುದೀರ್ಘ ಅವಧಿಯಲ್ಲಿ ಅನೇಕ ಹೊಸ ಶಾಸನಗಳು ಮತ್ತು ಗ್ರಂಥಗಳು ಬೆಳಕಿಗೆ ಬಂದಿದ್ದು ಅವುಗಳನ್ನು ಬಳಸಿಕೊಂಡು ಒಟ್ಟಾರೆ ಈ ಕೋಶವನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೋಧಿಸಿ, ಪರಿಷ್ಕರಿಸಿ ಅನೇಕ ಹೊಸ ಶಬ್ದಗಳನ್ನು, ವಿಷಯಗಳನ್ನು ಸೇರಿಸಿ ಇದು ಇನ್ನಷ್ಟು ಉಪಯುಕ್ತವಾಗುವಂತೆ ಮಾಡಲು ಯತ್ನಿಸಲಾಗಿದೆ.

ಕೋಶದ ರೂಪರೇಷೆ

ಈ ಕೋಶಕ್ಕಾಗಿ ಶಬ್ದಗಳನ್ನು ಸಂಗ್ರಹಿಸುವಾಗ ಕೇವಲ ಆಡಳಿತವಷ್ಟೇ ಅಲ್ಲದೆ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಭಾಗಗಳನ್ನು ಪರಿಗಣಿಸಲಾಗಿದೆ. ಹೀಗಾಗಿ ಈ ಕೋಶವು ಸಾಮಾನ್ಯ ಆಡಳಿತವಲ್ಲದೆ ಅರ್ಥವ್ಯವಸ್ಥೆ, ಒಕ್ಕಲುತನ, ವ್ಯಾಪಾರ, ವಾಣಿಜ್ಯ, ನಾಣ್ಯಪದ್ಧತಿ, ನ್ಯಾಯದಾಡಳಿತ, ಶಿಕ್ಷಣ, ಸೈನ್ಯದಾಡಳಿತ, ಧಾರ್ಮಿಕ ಸಂಸ್ಥೆಗಳು ಇತ್ಯಾದಿ ಎಲ್ಲ ಪ್ರಮುಖ ಅಂಗಗಳನ್ನು ಒಳಗೊಂಡಿದೆ. ಈ ಶಬ್ದಗಳನ್ನು ವಿವಿಧ ವಿಭಾಗಗಳಲ್ಲಿ ವಿಂಗಡಿಸಿ ವಿವರಣೆಗಳನ್ನು ಕೊಡಲಾಗಿದೆ. ಹೀಗೆ ಮಾಡುವಾಗ ಆಯಾ ವಿಭಾಗಗಳಲ್ಲಿ ಅಕ್ಷರಾನುಕ್ರಮವನ್ನು ಅನುಸರಿಸಲಾಗಿದೆ. ಪದಗಳ ಜೋಡಣೆಯ ವಿಧಾನ ಹೀಗಿದೆ: ಕನ್ನಡದಲ್ಲಿ ಶಬ್ದ, ಅದೇ ಶಬ್ದ ರೋಮನ್ ಲಿಪಿಯಲ್ಲಿ; ಕನ್ನಡದಲ್ಲಿ ಅರ್ಥ; ಇಂಗ್ಲಿಷಿನಲ್ಲಿ ಅರ್ಥ; ಅಗತ್ಯವಿದ್ದಲ್ಲಿ ಆಯಾ ಶಬ್ದಗಳ ಪ್ರಯೋಗಗಳನ್ನೊಳಗೊಂಡ ವಾಕ್ಯಗಳ ಉದ್ಧರಣೆ; ಶಬ್ದಗಳು ದೊರೆಯುವ ಗ್ರಂಥಗಳ ಉಲ್ಲೇಖ ಮತ್ತು ಅವುಗಳ ಕಾಲ. ಕೆಲವು ಸಂದರ್ಭಗಳಲ್ಲಿ ವಿವರವಾದ ಟಿಪ್ಪಣಿಗಳನ್ನೂ ಕೊಡಲಾಗಿದೆ.

ಈ ಶಬ್ದಸಂಗ್ರಹದ ಸಿಂಹಾವಲೋಕನ ಮಾಡಿದರೆ ಹಿಂದಿನ ಕಾಲದ ಕರ್ನಾಟಕದ ಆಡಳಿತ ಪದ್ಧತಿಯ ಪರಿಚಯ ನಮಗಾಗುತ್ತದೆ. ಇದರ ಉಪಯುಕ್ತತೆ ಆಡಳಿತ ವಿಷಯಕ್ಕಷ್ಟೇ ಸೀಮಿತವಾಗಿಲ್ಲ. ಅಂದಿನ ಕಾಲದ ಆರ್ಥಿಕ ಸ್ಥಿತಿಗತಿಗಳು, ಒಕ್ಕಲುತನ, ವ್ಯಾಪಾರ, ವಾಣಿಜ್ಯ, ವಿವಿಧ ವೃತ್ತಿಗಳು, ಸಾಮಾಜಿಕ, ಧಾರ್ಮಿಕ ಆಚರಣೆಗಳು, ಭಾಷೆ ಮುಂತಾದವುಗಳನ್ನು ಅಭ್ಯಸಿಸಲೂ ಇಲ್ಲಿ ಬಹಳಷ್ಟು ಸಾಮಗ್ರಿಯು ದೊರೆಯುತ್ತದೆ.

ಮಾದರಿಗಾಗಿ ಕೆಲವು ಶಬ್ದಗಳು

ಆಡಳಿತ ಮತ್ತು ಅಧಿಕಾರಿಗಳು

ಅಪ್ಪಣೆಕಾರ (Executive Officer), ಅಧಿಕಾರ್ತಿ (Female Officer), ಆಚಾರ ವ್ಯವಸ್ಥೆ (Code of Conduct), ಅರ್ಥಾಧಿಕಾರಿ (Finance Officer), ದಾನಾಧಿಕಾರಿ (Commissioner of Endowments), ಏಕಾಂತಭವನ (Confidential Hall), ಕಾರ್ಯಕರ್ತ (Worker, Clerk), ಮಾಸವರ್ಗಡೆ (Officer on Temporary Assignment), ಮೇಲಾಳ್ಕೆ (Supervision), ಮುದ್ರಾಧಿಕಾರಿ (Sanctioning Officer), ಮೇಲುಪಾರುಪತ್ಯ (Overall Supervision), ಪುರಪತಿ (Mayor), ಸರ್ವಾಧ್ಯಕ್ಷ (Chief Executive), ಸುದ್ದಿಕಾರ (Reporter) ವನಮಹತ್ತರ (Conservator of Forests), ಜನಪದಕಲ್ಯಾಣೆ (Female Welfare Officer).

ಕರ ತೆರಿಗೆಗಳು

ಅಂಗಡಿದೆರೆ (Tax on Shops), ಬಾಗಿಲಹಣ, ಹೊಸಲಹಣ (House Tax), ಬಾಲವಣ (Tax on Cattle), ಗಾಣದೆರೆ (Tax on Oil Mills), ಮಗ್ಗದ ಸುಂಕ (Tax on Looms), ಚಕ್ರಕಾಣಿಕೆ (Potters' Cess), ಹಂದರಹಣ (Tax on Festivities), ಹಸೆಯ ಹಣ (Marriage Tax), ಹೊಳೆಯ ಸುಂಕ (Tax on Ferries), ಮೇಲುವಣ (Surcharge), ಮೇಲ್ಬಟ್ಟೆಯ ಸುಂಕ (Highway Tax), ಮಾರ್ಗಾದಾಯ (Income from Roads), ನೀರುಣಿ-ಸುಂಕ (Irrigation Cess), ನೆಲದೆರೆ (Land Tax), ಪಸಾರದೆರೆ (Tax on Petty Shops), ಸಾರಿಗೆ ಸುಂಕ (Transport Tax).

ಒಕ್ಕಲುತನ

ಕಾಡಾರಂಭ (Dry Land Farming), ನೀರಾರಂಭ (Wet Land Farming), ನೀರುಕೂಲಿ (Irrigation Cess), ನೀರ್ನೆಲ, ನೀರ್ಮಣ್ಣು (Irrigated Land), ನೀರ್ವರಿ (Irrigation Canal), ಜಲಸೂತ್ರ (Irrigation Engineering).

ವಾಣಿಜ್ಯ

ಅರ್ಥಪರಿಚ್ಛೇದ (Money Transaction), ಧಾನ್ಯಾಧಿಕಾರಿ (Officer of Food Grains), ಭ್ರಮಾಂತುಕ (Street Vendor), ಮಳಿಗೆಯ ಮನೆ (Warehouse), ಮಳಿಗೆಯ ಅಧಿಷ್ಠಾಯಕ (Keeper of Godowns), ಗಂಧಿಗ (Perfumes Merchant), ರಾಯಮಳಿಗೆ (Government Warehouse), ಪೇಟೆದಾಣ (Market Place), ವಣಿಕ್‌ಸಭಾ (Chamber of Commerce).

ನ್ಯಾಯ ಪದ್ಧತಿ

ಅಪುತ್ರಿಕಧನ (Unclaimed Property, Heirless Property), ಬುದ್ಧಿವಂತರು (Jury), ಧರ್ಮಾಧಿಕರಣ, ಧರ್ಮಾಸನ (Law Court, Seat of Justice), ಧರ್ಮನಿರ್ಣಯ (Legal Decision), ಧರ್ಮಸೂಕ್ಷ್ಮ (Law Point), ಧರ್ಮದ್ರೋಹಿ (Law Breaker), ಧರ್ಮದೂರ (Illegal, Unlawful), ಸತ್ಯಾಧಿಕಾರಿ (Judicial Officer), ವೃತ್ತಿಲೋಪ (Dereliction of Duty), ಜಯಪತ್ರ (Decree, Verdict).

ಶಿಕ್ಷಣ

ಅಕ್ಕರಿಗ (Scholar, Man of Letters), ಅಕ್ಕರಿಗ ವೃತ್ತಿ (Fellowship for a Scholar), ಬಾಲಶಿಕ್ಷೆ (Primary Education), ಕನ್ನಡದಕ್ಷರ ಶಿಕ್ಷೆ (Teaching Kannada Alphabet), ಪುಸ್ತಕಪಾಲ, ಸರಸ್ವತೀಭಂಡಾರಿಗ (Librarian), ಸರಸ್ವತೀ ಭೋಜನ (Convocation Dinner), ಸರಸ್ವತೀ ಮಂಟಪ (Library Hall), ಶಾಸ್ತ್ರದಾನ (Donation of Books, Library Movement), ವಿದ್ಯಾಮಂಡಲ (Academic Council), ಆಹಾರಧಾನಿ (Students Hostel, Refectory).

ಉಂಬಳಿಗಳು ಮತ್ತು ದಾಖಲೆಗಳು

ಅಣುಗಜೀವಿತ (Maintenance of a Minor), ಆಣೆವೋಲೆ, ಆಣೆಪತ್ರ (Affidavit), ಧರ್ಮವತ್ತಳೆ (Legal Charter), ದೇವಧನ (Religious Endowment), ಜೀವಧನ, ಜೀವಿತಹಣ (Maintenance for Life), ಕ್ರಯಪತ್ರ (Sale Deed), ಕೀರ್ತಿಶಾಸನ (Award for Achievements), ವೀರಶಾಸನ (Gallantry Award), ಕಾರ್ಯಪತ್ರ (Memorandum).

ಕೃತಜ್ಞತೆಗಳು

ಈ ಯೋಜನೆಯನ್ನು ಹಮ್ಮಿಕೊಂಡಾಗ ನಮಗೆ ಸುದೈವದಿಂದ, ಹಿರಿಯರೂ ಅನುಭವಿಕ ವಿದ್ವಾಂಸರೂ ಆದ ಶ್ರೀ ಹುಚ್ಚರಾವ ಬೆಂಗೇರಿ ಮತ್ತು ಡಾ. ಸದಾನಂದ ನಾಯಕ ಅವರ ನೆರವು ದೊರೆಯಿತು. ಶಬ್ದಗಳ ಸಂಗ್ರಹಣೆಯಲ್ಲಿ, ಸಂದರ್ಭಾನುಸಾರ ಅವುಗಳ ಅರ್ಥವನ್ನು ನಿರ್ಧರಿಸುವಲ್ಲಿ, ಕನ್ನಡ ಭಾಷೆ ಮತ್ತು ಸಾಹಿತ್ಯಗಳಲ್ಲಿ ನಿಷ್ಣಾತರಾಗಿದ್ದ ಈ ವಿದ್ವಾಂಸರ ಸಹಾಯ ಅಮೂಲ್ಯವೆನಿಸಿತು. ಈ ಗ್ರಂಥ ಬೆಳಕು ಕಾಣುತ್ತಿರುವ ಸಮಯದಲ್ಲಿ ಈ ಇಬ್ಬರೂ ವಿದ್ವಾಂಸರು ನಮ್ಮ ನಡುವೆ ಇಲ್ಲದಿರುವುದು ತೀವ್ರ ವಿಷಾದದ ಸಂಗತಿಯಾಗಿದೆ. ಅವರಿಗೆ ಈ ಮೂಲಕ ನಮ್ಮ ಗೌರವ ಮತ್ತು ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತೇನೆ.

ಈ ಕಾರ್ಯದಲ್ಲಿ ಬಹಳಷ್ಟು ನೆರವಾದ ಇನ್ನಿಬ್ಬರೆಂದರೆ ಅಂದು ವಿದ್ಯಾರ್ಥಿಗಳಾಗಿದ್ದು ಇಂದು ಜವಾಬ್ದಾರಿ ಹುದ್ದೆಗಳಲ್ಲಿರುವ ಇಬ್ಬರು ಮಿತ್ರರು, ಶ್ರೀ ಲಕ್ಷ್ಮೀಕಾಂತ ರಾವ್ ಮತ್ತು ಡಾ. ಸಿ.ಎಸ್. ಪಾಟೀಲ. ಲಕ್ಷ್ಮೀಕಾಂತ ಈಗ ಭಾರತೀಯ ಪುರಾತತ್ವ ಸರ್ವೇಕ್ಷಣೆಯಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟ್ ಎಂದು ಕೆಲಸ ಮಾಡುತ್ತಿದ್ದಾರೆ. ಡಾ. ಸಿ.ಎಸ್. ಪಾಟೀಲ ಅವರು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯಲ್ಲಿ ಡೆಪ್ಯುಟಿ ಡೈರೆಕ್ಟರ್ ಹುದ್ದೆಯಲ್ಲಿದ್ದಾರೆ. ಆಗ ಇವರಿಬ್ಬರೂ ವಿದ್ಯಾರ್ಥಿ ಸಹಾಯಕರಾಗಿ ಈ ಕೋಶಕ್ಕಾಗಿ ಶಬ್ದ ಸಂಗ್ರಹಣೆಯ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಡಾ. ಪಾಟೀಲ ಅವರು ಈಗ ತಮ್ಮ ಇಲಾಖೆಯ ಮುಖಾಂತರವೇ ಈ ಕೋಶದ ಮುದ್ರಣಕಾರ್ಯವನ್ನು ನೋಡಿಕೊಳ್ಳುತ್ತಿರುವುದು ಯೋಗಾಯೋಗವೇ ಸರಿ.

ಈ ಯೋಜನೆಯ ನಿರ್ವಹಣೆಯ ಹೊಣೆಯ ಬಹುಭಾಗವನ್ನು ಈ ಕಾರ್ಯ ನಡೆಯುತ್ತಿದ್ದಾಗ ಪ್ರಾಚೀನ ಭಾರತೀಯ ಚರಿತ್ರೆಯ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿರುವ ಡಾ. ಎಸ್.ಎಲ್. ಶಾಂತಕುಮಾರಿ ಅವರು ಜವಾಬ್ದಾರಿಯಿಂದ ನಿರ್ವಹಿಸಿದ್ದಾರೆ. ಕೋಶದ ಪರಿಷ್ಕರಣ ಕಾರ್ಯದಲ್ಲಿಯೂ ಅವರಿಂದ ಬಹಳ ನೆರವು ದೊರೆತಿದೆ. ಇನ್ನೊಬ್ಬ ಮಿತ್ರರಾದ ಚಂದ್ರಶೇಖರ ಕಡಕೋಳ ಅವರು ಈ ದ್ವಿಭಾಷಾ ಗ್ರಂಥದ ಬೆರಳಚ್ಚು ಪ್ರತಿಯನ್ನು ತಯಾರಿಸುವ ಜಟಿಲ ಕಾರ್ಯದಿಂದ ಹಿಡಿದು ಈ ಯೋಜನೆ ಪೂರೈಸುವವರೆಗಿನ ಎಲ್ಲ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸಿದ್ದಾರೆ. ಇವರಿಗೆಲ್ಲ ಆತ್ಮೀಯವಾಗಿ ಶುಭಕೋರುವುದು ನನಗೆ ಸಂತೋಷದ ವಿಷಯವಾಗಿದೆ.

ಆಪ್ತ ಮಿತ್ರರೂ, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಆದ ಡಾ. ಬಿ.ವಿ. ಮಲ್ಲಾಪುರ ಅವರು ಈ ಕೋಶದ ಪರಿಷ್ಕರಣ ಕಾರ್ಯಕ್ಕಾಗಿ ತಮ್ಮ ಹಳೆಗನ್ನಡ ಕಾವ್ಯಗಳ ಸಂಗ್ರಹವನ್ನೇ ನನಗಾಗಿ ತೆರೆದಿಟ್ಟರು. ಇದರಿಂದ ಈ ಕೆಲಸ ಬಹಳ ಸುಲಭವಾಯಿತು. ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ದೀರ್ಘಕಾಲದವರೆಗೆ ಕತ್ತಲೆಯಲ್ಲಿದ್ದ ಈ ಕೋಶವು ಇದೀಗ ಪರಿಷ್ಕೃತ ರೂಪದಲ್ಲಿ ಬೆಳಕಿಗೆ ಬರಲು ಕಾರಣರಾದವರು ಯುವ ಮಿತ್ರ ಶ್ರೀ ಪ್ರಹ್ಲಾದ ಮಹಿಷಿ, ಐ.ಎ.ಎಸ್., ಅವರು. ಈ ಗ್ರಂಥದ ಆಮೂಲಾಗ್ರ ಪರಿಷ್ಕರಣೆಗೆ ಮತ್ತು ಇದರ ಮುದ್ರಣದ ಏರ್ಪಾಡಿಗೆ ಅವರೇ ಕಾರಣರು. ಈ ಕಾರ್ಯದಲ್ಲಿ ಅತ್ಯಂತ ಆಸ್ಥೆ ವಹಿಸಿದ ಶ್ರೀ ಮಹಿಷಿ ಮತ್ತು ಅವರ ಧರ್ಮಪತ್ನಿ ಡಾ. ಮೀನಾ ದೇಶಪಾಂಡೆ ಇವರಿಬ್ಬರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತ ಅವರಿಗೆ ಶುಭವನ್ನು ಕೋರುತ್ತೇನೆ.

ಈ ಕಾರ್ಯವನ್ನು ಆಸಕ್ತಿಯಿಂದ ಕೈಗೆತ್ತಿಕೊಂಡು ಅದು ಪ್ರಾಚ್ಯವಸ್ತು ಇಲಾಖೆಯ ಮುಖಾಂತರ ಪ್ರಕಟವಾಗುವಂತೆ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಆ.ರಾ. ಚಂದ್ರಹಾಸ ಗುಪ್ತ ಇವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಶ್ರದ್ಧೆಯಿಂದ ಸಹಕರಿಸಿದ ಯುವ ಮಿತ್ರರೂ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರೂ ಆದ ಡಾ. ಎಂ.ವಿ. ಕೃಷ್ಣಪ್ಪ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಮುದ್ರಣ ಕಾರ್ಯವನ್ನು ಮೊದಲಿನಿಂದ ಕೊನೆಯವರೆಗೆ ಅತ್ಯಂತ ಜಾಗರೂಕತೆಯಿಂದ ನೋಡಿಕೊಂಡ ಡಾ. ಸಿ.ಎಸ್. ಪಾಟೀಲ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಈ ಕಾರ್ಯದಲ್ಲಿ ಸಹಕಾರ ಮತ್ತು ಸಕಾಲಿಕ ಸಹಾಯವನ್ನೊದಗಿಸಿದ ಇಲಾಖೆಯ ಎಲ್ಲ ಕಾರ್ಯಕರ್ತರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಧಾರವಾಡ
ಮಾರ್ಚ್ ೧೫, ೨೦೦೦

ಶ್ರೀನಿವಾಸ ರಿತ್ತಿ
ನಿವೃತ್ತ ಪ್ರಾಧ್ಯಾಪಕರು
ಪ್ರಾಚೀನ ಭಾರತ ಚರಿತ್ರೆ ಮತ್ತು ಶಾಸನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ

PREFACE

The Project:

The Government of Karnataka is taking various measures to introduce Kannada at all levels of administration for the facility of the common people. Though several steps have been taken in this direction, complete success is yet to be achieved. There have been some difficulties in this endeavour. Having been closely associated with English for years together, it goes difficult for some to accept the change over to Kannada, readily. Some even doubt if Kannada can provide at all, the vocabulary required for efficient conduct of the administration; and they are sceptic about the coining of new words also, to suit the situation. Recent efforts, however, have shown that such fears have no basis. Further, it is to be remembered that long before the advent of English into our country, administration was conducted in regional languages only; and in Karnataka, people were using Kannada only, for this purpose. This is vouchsafed by the vast literature of the earlier periods. Apart from the famous *Arthaśāstra* of Kauṭilya which is an outstanding treatise on administration, applicable to the whole of the country, there are a large number of inscriptions and literary works spread over several centuries, which give us a glimpse of the system of administration of those days, at central, regional and local levels. These works contain a large number of words and expressions in relation to different aspects of administration. Some of them can be directly adopted for administrative purposes and some others can be modified to suit the present circumstances. Sometimes they are useful in coining new words also. It was thus thought that the compilation of a glossary of such terms would be helpful to understand the system of administration in the bygone days and to derive benefit from it. A project to this effect was drawn up and submitted to the Government of Karnataka for consideration.

Sri M.Keshav Bhat, the then Director of Language and Kannada Development, (now known as the Department of Kannada and Culture), realised the importance of the project and sponsored it. With his encouragement and the support of the Government, the work proceeded. With the help of the successor Directors of the

Department, Shri Jayatirtha Rajapurohit and Shri Aniruddha Desai, the project was completed in due course.

Scope of the Glossary:

For the purpose of this Glossary, words have been collected from a large number of inscriptions and many Kannada literary works belonging to a vast period from the beginning of the Christian era to about the 16th century. Thus inscriptions from the volumes of *Epigraphia Carnatica, South Indian Inscriptions, Epigraphia Indica,* and several other volumes of inscriptions and numerous unpublished inscriptions, as many as about 30,000 in all, and many works of ancient Kannada literature, were consulted and more than six thousand words were collected. Important words connected with the subject were selected from out of them and their meanings in Kannada and English were determined, taking into consideration the context in which they were used, their derivation etc. From the 16th century onwards, the political scenario changed with the advent of the new powers like the Muslims, Marathas and the English. With these influences, the face of administration also changed and more and more Persian, Marathi and subsequently English words crept into the system. For this reason the scope of this work is restricted to upto the 16th century.

This Glossary is called 'Descriptive Glossary of Administrative Terms in Ancient Karnataka'. There are indeed differences of opinion among the historians about the beginning and end of the periods like ancient, medieval and modern. Scholastic discussions apart, in our opinion, so far as South India in general and Karnataka in particular, is concerned, the political, social, economic, religious and cultural institutions continued to flourish, with minor variations, uninterruptedly, from very early times till about the end of the Vijayanagara period. Hence we have covered this vast period upto the end of 16th century for this work and have designated it as ancient, in a broad sense.

The Glossary was prepared about twenty years back and even arrangements were made for its printing. But due to some technical problems the printing could not be completed. In this long period, a large number of new inscriptions and literary works have come to light and these have been utilised for revising this work. It has been thoroughly revised and with several additions, an attempt has been made to make it more useful.

Nature of the work:

While collecting words for this Glossary, the choice was not restricted to general administration alone. All important aspects related to it such as economy, coinage, agriculture, trade and commerce, judiciary, education, army, religious institutions and the like were also included. These words have been classified according to topics and they have been listed alphabetically in each section.

The following order has been followed in the arrangement of the words: The word in Kannada, its transliteration in Roman script; meaning in Kannada, meaning in English; quotation with the occurrence of such words wherever necessary; references to the works containing the word and the date or period of such references. Detailed notes are added in some places.

Even a cursory glance at the Glossary gives a glimpse of the system of administration in ancient Karnataka. Its utility is not restricted to administration alone. There is enough material here for the study of such aspects as economic conditions, agriculture, trade and commerce, various professions followed by the people, social and religious practices, language and the like.

A Few Examples of words:

Administration and Authorities

Appaṇekāra (Executive Officer), *Adhikārtti* (Female Officer), *Āchāra-vyavasthe* (Code of conduct), *Arthādhikāri* (Finance Officer), *Dānādhikāri* (Commissioner of Endowments), *Ēkānta-bhavana* (Confidential Hall), *Kāryakarta* (Worker, Clerk), *Māsavergaḍe* (Officer on Temporary Assignment), *Mēlāḷke* (Supervision), *Mudrādhikāri* (Sanctioning Officer), *Mēlupārupatya* (Overall Supervision), *Purapati* (Mayor), *Sarvādhyaksha* (Chief Executive), *Suddikāra* (Reporter), *Vana-mahattara* (Conservator of Forests), *Janapada Kalyāṇe* (Female Welfare Officer).

Taxes

Angaḍidere (Tax on shops), *Bāgila-haṇa, Hosala-haṇa* (House Tax), *Bālavaṇa* (Tax on cattle), *Gāṇadere* (Tax on Oil Mills), *Maggada-sunka* (Tax on Looms), *Chakra-Kāṇike* (Potter's Cess), *Handara-haṇa* (Tax on Festivities), *Haseya-haṇa* (Marriage Tax), *Hoḷeya-sunka* (Tax on Ferries),

Mēluvaṇa (Surcharge), *Mēlvaṭṭeya-sunka* (Highway Tax), *Mārgādāya* (Income from Roads), *Nīruṇi-sunka* (Irrigation Cess), *Neladere* (Land Tax), *Pasāradere* (Tax on Petty Shops), *Sārige-sunka* (Transport Tax).

Agriculture

Kāḍāraṁbha (Dry Land Farming), *Nīrāraṁbha* (Wet Land Farming), *Nīru-Kūli* (Irrigation Cess), *Nīrnela, Nīrmaṇṇu* (Irrigated Land), *Nīrvari* (Irrigation Canal), *Jalasūtra* (Irrigation Engineering).

Trade

Arthaparichchhēda (Money Transaction), *Dhānyādhikāri* (Officer of Food Grains), *Bhramāntuka* (Street Vendor), *Maḷigeya-mane* (Warehouse), *Maḷigeya-adhishṭhāyaka* (Keeper of Godowns), *Gandhiga* (Perfumes Merchant), *Rāya-maḷige* (Government Warehouse), *Pēṭedāṇa* (Market Place), *Vaṇik-sabhā* (Chamber of Commerce).

Judiciary

Aputrikadhana (Unclaimed Property; Heirless Property), *Buddhivantaru* (Jury), *Dharmādhikaraṇa, Dharmāsana* (Law Court; Seat of Justice), *Dharmanirṇaya* (Legal Decision), *Dharma-sūkshma* (Law Point), *Dharmadrōhi* (Law Breaker), *Dharmadūra* (Illegal, Unlawful), *Satyādhikāri* (Judicial Officer), *Vṛitti-lōpa* (Dereliction of Duty), *Jayapatra* (Decree, Verdict).

Education

Akkariga (Scholar, Man of Letters), *Akkariga-vṛitti* (Fellowship for a Scholar), *Bālaśikshe* (Primary Education), *Kannaḍad-akshara-śikshe* (Teaching Kannada Alphabet), *Pustakapāla, Sarasvatī-bhāṇḍāriga* (Librarian), *Sarasvatī-bhōjana* (Convocation Dinner), *Sarasvatī-manṭapa* (Library Hall), *Śāstradāna* (Donation of Books, Library Movement), *Vidyāmaṇḍala* (Academic Council), *Āhāradhāni* (Students Hostel, Refectory)

Grants and Documents

Aṇugajīvita (Maintenance of a Minor), *Āṇevōle, Āṇepatra* (Affidavit), *Dharmavattaḷe* (Legal Charter), *Dēvadhana* (Religious

Endowment), *Jīvadhana, Jīvitahaṇa* (Maintenance for Life), *Krayapatra* (Sale Deed), *Kīrtiśāsana* (Award for Achievements), *Vīraśāsana* (Gallantry Award), *Kāryapatra* (Memorandum).

Acknowledgements:

When we commenced this project, we were fortunate in getting the help and guidance of senior scholars like Shri Huchharao Bengeri and Dr. Sadanand Nayak. Their experience, expertise and erudition in ancient literature were highly helpful in the selection of the words and their interpretation. It is indeed unfortunate that both these scholars are not with us today when the book is seeing the light of the day. We offer our respects to these scholars with a deep sense of gratitude.

Two other persons who were associated with this work are my student friends Sri Lakshmikant Rao and Dr. C.S.Patil. Both of them occupy responsible positions today, the former as the Deputy Superintending Archaeologist in the Archaeological Survey of India and the latter as Deputy Director in the Department of Archaeology and Museums, Government of Karnataka, Mysore. As student-assistants, they did commendable work in the collection of words for the Glossary. It is a happy coincidence that Dr. Patil is now looking after the printing of this work through his own Department.

The major responsibility of managing this project was ably borne by Dr. S.L.Shantakumari, who was then professor in the Department of Ancient Indian History and Epigraphy, Karnataka University, Dharwad (since retired). Her help in revising the Glossary is also considerable. Our friend Shri C.R. Kadkol, formerly of the same Department, efficiently handled all the work pertaining to the project, including the intricate job of typing this bilingual work. I have pleasure in offering my sincere thanks to them all and wishing them well.

My thanks are due to my friend and former Professor of Kannada in the Karnatak University, Dr. B.V. Mallapur, who kindly spared for my use, his whole collection of old Kannada *kāvyas* which were essential for the revision of this work.

The Glossary, in the revised form, could see the light of the day, after a long period of darkness, through the good offices of my young friend Sri Prahlad Mahishi, IAS. He is solely responsible for arranging for the printing of this work in the revised form. I am grateful to him and his gracious wife Dr. Meena Deshpande for evincing keen interest in this work.

My sincere thanks are due to Sri Chandrahasa Gupta, IAS, Secretary, Department of Kannada and Culture, Government of Karnataka, for arranging the printing and publication of this work through the Directorate of Archaeology and Museums, Mysore. I am also thankful to my young friend Dr. M.V. Krishnappa, Director of Archaeology and Museums, for his active help and cooperation in the publication of this work. I highly appreciate the zeal and enthusiasm of Dr. C.S.Patil in efficiently handling the printing of this work. I also thank all the members of the Directorate of Archaeology and Museums, for their cooperation and timely help.

Dharwad
March 15, 2000

Shrinivas Ritti
Formerly Professor of Ancient Indian History and Epigraphy
Karnatak University

ಪರಿವಿಡಿ
CONTENTS

ಸಂಕ್ಷೇಪಗಳು ಮತ್ತು ಸಂಕೇತಗಳು

ಅ.ಪು. : ಜನ್ನನ *ಅನಂತನಾಥ ಪುರಾಣಂ;* ಸಂ. ಮಹೀಶವಾಡಿ, ಬಿ.ಬಿ., ಧಾರವಾಡ, 1975.

ಅಜಿ.ಪು. : ರನ್ನನ *ಅಜಿತತೀರ್ಥಂಕರ ಪುರಾಣತಿಲಕಂ;* ಸಂ. ದೇವೀರಪ್ಪ, ಎಚ್., ಮತ್ತು ಜವರೇಗೌಡ, ಡಿ., ಮೈಸೂರು, 1964.

ಆದಿ.ಪು. : ಪಂಪನ *ಆದಿಪುರಾಣಂ;*

(1) ಸಂ. ನರಸಿಂಹಾಚಾರ್, ಎಸ್.ಜಿ., ಮೈಸೂರು, 1900.

(2) ಸಂ. ಬಸವರಾಜು, ಎಲ್., ಮೈಸೂರು, 1976.

ಕ.ಕಾ. : ಆಂಡಯ್ಯನ *ಕಬ್ಬಿಗರ ಕಾವಂ;* ಸಂ. ಜವರೇಗೌಡ, ದೇ., ಮೈಸೂರು, 1964.

ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕವಿ.ರಾ. : ನೃಪತುಂಗನ *ಕವಿರಾಜಮಾರ್ಗಂ;* ಸಂ. ಶಂಕರ ಕೆದಿಲಾಯ, ಎ., ಮದ್ರಾಸ್, 1973.

ಕಾ.ಲೋ. : ನಾಗವರ್ಮನ *ಕಾವ್ಯಾವಲೋಕನಂ;* ಸಂ. ದೇವಿರಪ್ಪ, ಎಚ್., ಮೈಸೂರು, 1967.

ಕು.ಕಾ. : ದೇವಕವಿಯ *ಕುಸುಮಾವಳೀ ಕಾವ್ಯಂ;* ಸಂ. ಕಡಬದ ನಂಜುಂಡ ಶಾಸ್ತ್ರಿ, ನ.

ಕು.ವ್ಯಾ.ಭಾ. : ಕುಮಾರವ್ಯಾಸನ *ಕುಮಾರವ್ಯಾಸಭಾರತ (ಕರ್ಣಾಟಭಾರತಕಥಾಮಂಜರಿ);* ಸಂ. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮೈಸೂರು, 1974. ಪ. = ಪರ್ವ

ಖಗೇ.ಮ. : ಮಂಗರಾಜನ *ಖಗೇಂದ್ರಮಣಿದರ್ಪಣಂ;* ಸಂ. ವೆಂಕಟರಾವ್, ಎನ್., ಮತ್ತು ಶೇಷ ಅಯ್ಯಂಗಾರ್, ಹೆಚ್., ಮದ್ರಾಸ, 1942.

ಗ.ಯು. : ರನ್ನನ *ಗದಾಯುದ್ಧಂ (ಸಾಹಸಭೀಮವಿಜಯಂ);* ಸಂ. ಕೃಷ್ಣಭಟ್ಟ, ಕೆ.ವಿ., ಮದ್ರಾಸ್, 1973.

ಚಂ.ಪು. : ಅಗ್ಗಳನ *ಚಂದ್ರಪ್ರಭ ಪುರಾಣಂ;* ಸಂ. ನರಸಿಂಹಾಚಾರ್, ಎಸ್.ಜಿ., ಮೈಸೂರು, 1901.

ಜೀ.ಚ. : ಭಾಸ್ಕರನ *ಜೀವಂಧರ ಚರಿತೆ;* ಸಂ. ಕುಲಕರ್ಣಿ, ಬಿ.ಎಸ್., ಧಾರವಾಡ, 1970.

ಜೀ.ಸಂ. : ಬಂಧುವರ್ಮನ *ಜೀವ ಸಂಭೋಧನೆ;* ಸಂ. ಬ್ರಹ್ಮಸೂರಯ್ಯ, ಮೈಸೂರು, 1915.

ಜೈ.ಭಾ. : ಲಕ್ಷ್ಮೀಶನ *ಜೈಮಿನಿಭಾರತ;* ಸಂ. ನರಸಿಂಹಶಾಸ್ತ್ರಿ, ದೇವುಡು ಮತ್ತು ಶಿವಮೂರ್ತಿಶಾಸ್ತ್ರಿ, ಬಿ., ಬೆಂಗಳೂರು, 1985.

ಧರ್ಮಾ. : ನಯಸೇನನ *ಧರ್ಮಾಮೃತಂ;* ಸಂ. ವೆಂಕಟರಾಮಪ್ಪ, ಕೆ., ಬೆಂಗಳೂರು, 1977.

ನೀ.ವಾ.ಕ.ವ್ಯಾಖ್ಯಾನ : ಸೋಮದೇವಸೂರಿಯ *ನೀತಿವಾಕ್ಯಾಮೃತಂ (ನೇಮಿನಾಥನ ಕನ್ನಡ ಟೀಕೆ ಸಹಿತ);* ಸಂ. ದೀಕ್ಷಿತ, ಜಿ.ಎಸ್., ರಾಮಸ್ವಾಮಿ, ಬಿ., ರಿತ್ತಿ ಶ್ರೀನಿವಾಸ, ಹಂಪೆ, 2000.

ನೇ.ಪು. : ಕರ್ಣಪಾರ್ಯನ ನೇಮಿನಾಥ ಪುರಾಣಂ; ಸಂ. ಶೇಷ ಅಯ್ಯಂಗಾರ್, ಎಚ್., ಮದ್ರಾಸ, 1940.

ನೇಮಿಚಂದ್ರನ ನೇಮಿನಾಥ ಪುರಾಣಂ, ಸಂ. ಬಿ.ಎಸ್. ಕುಲಕರ್ಣಿ, ಧಾರವಾಡ, 1968.

ನೇಮಿಚಂದ್ರನ *ನೇಮಿನಾಥ ಪುರಾಣಂ;* ಸಂ. ಸಣ್ಣಯ್ಯ, ಬಿ.ಎಸ್., ಮೈಸೂರು, 1961.

ಪಂ.ಭಾ. : ಪಂಪನ *ಪಂಪಭಾರತಂ (ವಿಕ್ರಮಾರ್ಜುನವಿಜಯಂ),* ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1976.

ಪಂ.ರಾ. : ಅಭಿನವಪಂಪ (ನಾಗಚಂದ್ರ)ನ *ಪಂಪರಾಮಾಯಣಂ (ರಾಮಚಂದ್ರಚರಿತಪುರಾಣಂ);* ಬೆಂಗಳೂರು, 1921.

ಪು.ಪು. : ಗುಣವರ್ಮನ *ಪುಷ್ಪದಂತಪುರಾಣಂ;* ಸಂ. ವೆಂಕಟರಾವು, ಎ., ಮತ್ತು ಶೇಷಅಯ್ಯಂಗಾರ್, ಎಚ್., ಮದ್ರಾಸ, 1933.

ಬ.ಪು. : ಭೀಮಕವಿಯ *ಬಸವರಾಜಪುರಾಣಂ;* ಸಂ. ಹಿರೇಮಠ, ಆರ್.ಸಿ., ಧಾರವಾಡ, 1971.

ಬ.ವ. : *ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು;* ಸಂ. ಹಿರೇಮಠ ಆರ್.ಸಿ., ಧಾರವಾಡ, 1968

ಮ.ಪು. : ನಾಗಚಂದ್ರನ *ಮಲ್ಲಿನಾಥಪುರಾಣಂ;* ಸಂ. ಹೆಂಡಿ, ಬಿ.ಬಿ., ಧಾರವಾಡ, 1974.

ಯ.ಚ. : ಜನ್ನನ *ಯಶೋಧರಚರಿತೆ;* ಸಂ. ತೆಕ್ಕುಂಜೆ ಗೋಪಾಲಕೃಷ್ಣಭಟ್ಟ, ಬೆಂಗಳೂರು, 1977.

ವಡ್ಡಾ. : ಶಿವಕೋಟ್ಯಾಚಾರ್ಯನ *ವಡ್ಡಾರಾಧನೆ;* ಸಂ. ನರಸಿಂಹಾಚಾರ್, ಡಿ.ಎಲ್., ಮೈಸೂರು, 1959 (ಎರಡನೆಯ ಮುದ್ರಣ).

ವ.ಪು. : ಆಚಣ್ಣನ *ವರ್ಧಮಾನಪುರಾಣಂ;* ಸಂ. ಶಾಮರಾಯ, ತ.ಸು., ದೆಹಲಿ, 1975.

ಶಾಂ.ಪು. : ಪೊನ್ನನ *ಶಾಂತಿಪುರಾಣಂ;* ಸಂ. ನಾಗರಾಜಯ್ಯ, ಹಂಪ, ಬೆಂಗಳೂರು, 1982.

ಸ.ಪ. : ಬ್ರಹ್ಮಶಿವನ *ಸಮಯಪರೀಕ್ಷೆ,* ಸಂ. ಕುಲಕರ್ಣಿ, ಬಿ.ಎಸ್, ಧಾರವಾಡ, 1958.

ಶಾಂತೀ.ಪು. : ಕಮಲಭವನ *ಶಾಂತೀಶ್ವರಪುರಾಣಂ;* ಸಂ. ಕುಲಕರ್ಣಿ, ಆರ್.ವಿ., ಬೆಂಗಳೂರು, 1977.

ಸೂ.ಸೂ. : ಮಲ್ಲಿಕಾರ್ಜುನನ *ಸೂಕ್ತಿಸುಧಾರ್ಣವಂ;* ಸಂ. ಅನಂತರಂಗಾಚಾರ್, ಎನ್., ಮೈಸೂರು, 1972.

ಸೋ.ಚಾ. : ರಾಘವಾಂಕನ *ಸೋಮನಾಥಚಾರಿತ್ರ;* ಸಂ. ಹಿರೇಮಠ ಆರ್.ಸಿ. ಮತ್ತು ಸುಂಕಾಪುರ ಎಮ್.ಎಸ್., ಧಾರವಾಡ, 1961.

ಹ.ಕಾ. : ರಾಘವಾಂಕನ *ಹರಿಶ್ಚಂದ್ರಕಾವ್ಯಂ;* ಸಂ. ನಾಗೇಶಶಾಸ್ತ್ರಿ, ವಾಯ್., ಮತ್ತು ವೆಂಕಟೇಶಯ್ಯ, ಎಮ್.ಜಿ., ಬೆಂಗಳೂರು, 1985.

ತ. = ತಮಿಳು; ತೆ. = ತೆಲುಗು; ಪ. = ಪರ್ವ; ಪ್ರಾ. = ಪ್ರಾಕೃತ; ವ. = ವಚನ; ಸಂ. = ಸಂಸ್ಕೃತ

ABBREVIATIONS AND INDICATIONS

A.Pu.	:	*Anantanātha Purāṇa* of Janna; Ed. Mahīshawadi B.B., Dharwad, 1975.
Ādi.Pu.	:	*Ādi Purāṇam* of Paṁpa; 1) Ed. Narasimhachar, S.G., Mysore, 1900. 2) Ed. Basavaraju L., Mysore, 1976.
Aji.Pu.	:	*Ajitatīrthapurāṇa-tilaka* of Ranna; Ed. Devirappa, H. and Javaregauḍa, D., Mysore.
APGAS	:	*Andhra Pradesh Government Archaeological Series*; 1st figure stands for number of the volume; 2nd figure stands for the number of the inscription in the volume; 3rd figure stands for the date of inscription in Christian Era.
Apte	:	*Sanskrit-English Dictionary* by V.S. Apte.
ARIE	:	*Annual Report on Indian Epigraphy*; 1st figure stands for the year of the Report; 2nd figure stands for the number of the inscription in Appendix B; 3rd figure stands for the date of the inscription in Christiaṇ Era.
ARSIE	:	*Annual Report on South Indian Epigraphy;* Explanation of figures as above.
Artha	:	*Arthaśāstra* of Kauṭilya; Ed. Venkatanāthacharya, Mysore, 1960.
Ba.Pu.	:	*Basavarāja Purāṇam* of Bhīmakavi; Ed. Hiremath, R.C., Dharwad, 1971.
Ba.Va.	:	*Bhakti-Bhāṇḍāri Basavaṇṇanavara Vachanagaḷu,* Ed. Hiremath, R.C., 1968.
Chaṁ Pu	:	*Chandraprabha Purāṇa* of Aggaḷa; Ed. Narasimhachar, S.G., Mysore, 1901.
C.I.I.	:	*Corpus Inscriptionum Indicarum;* Vol. I, Edicts of Asoka, Ed. Hultczh E.
Dharmā	:	*Darmāmṛitam* of Nayasēna; Ed. Venkataramappa, K., Bangalore, 1977.
E.C.	:	*Epigraphia Carnatica,* Mysore The Roman figure stands for the number of volume in the series; O in brackets stands for Old Edition, ed. by Rice B.L.; R in brackets stands for Revised Edition ed. by Gopal B.R. Next abbreviated letters stand for the name of the Taluk; and the figure stands for the number of the inscription in the Taluk. The last figure stands for the date of the inscription in Christian Era.

E.I. : *Epigraphia Indica,* New Delhi.

Roman figure stands the number of volume in the series. Next figure stands for the number of the article in the volume. The last figure stands for the date in Christian Era.

G.T. : *Gangas of Talkad* by Krishnarao, M.V., Mysore.

Ga.yu. : *Gadāyuddhaṁ (Sāhasabhīma-vijayaṁ)* of Ranna; Ed. Krishna Bhat, K.V., Madras, 1973.

Ha.Kā. : *Hariśchaṁdrakāvyaṁ* of Rāghavānka; Ed. Nagesha Shastri, Y. and Venkateshayya, M.G., Bangalore, 1985.

HAS : *Hyderabad Archaeological Series;* No. XVIII, Ed. Desai, P.B., Hyderabad.

1st figure stands for the number of the inscription in the volume; 2nd figure stands for the date of the inscription in Christian Era.

HD : *History of Dharmaśāstra;* by Kane P.V. (2nd Edn.), Poona, 1973.

HOS : *History of South Kanara;* by Ramesh K.V., Dharwad, 1970.

IAP : *Inscriptions from Andhra Pradesh,* (Karimnagar District); Ed. Parabrahmasastri, P.V., Hyderabad.

1st figures stands for the number of inscription in the volume and the next figure stands for the date in Christian Era.

IEG : *Indian Epigraphical Glossary;* by Sircar, D.C., Delhi, 1966.

IKD : *Inscriptions from Kolhapur District;* Ed. Ritti Shrinivas and Karvirkar, A.B., Hampi, 2000.

1st figure stands for the number of inscription in the the volume and the next figure denotes the date of the inscription in Christian Era.

IND : *Inscriptions from Nanded District;* Ed. Ritti Shrinivas and Shelke G.C.; Nanded, 1968. Explanation of figures as above.

INKK : *Inscriptions from Northern Karnataka and Kolhapur State;* Ed. Kundangar, K.G., Kolhapur, 1939.

Explanation of the figures as above.

Jī.Cha. : *Jīvandhara-charite* of Bhāskara; Ed. Kulkarni B.S., Dharwad, 1970.

Jī.Sam. : *Jīvasaṁbōdhane* of Bandhuvarma; Ed. Brahmasūrayya, Mysore, 1915.

Jai.Bhā. : *Jaimini-bhārata* of Lakshmīśa; Ed. Devudu Narasiṁha Shastri and Sivamurti Shastri, B., Bangalore, 1985.

KI : *Karnatak Inscriptions;* Dharwad.

1st number stands for the number of the volume in the series; 2nd number stands for the number of the inscription in the volume and the 3rd number for the date of the inscription in Christian Era.

Ka.Kā.	:	*Kabbigara Kāvaṁ* of Andayya; Ed. Javaregauda, D., Mysore, 1964.
Ka.lō.	:	*Kāvyāvalōkana* of Nāgavarma; Ed. Devirappa, H., Mysore, 1967.
Khagē ma	:	*Khagēndramaṇidarppaṇa* of Mangarāja; Ed. Venkatarao, N. and Shesha Ayyangar, H., Madras, 1942.
Kittel	:	*Kannada-English Dictionary* by F.Kittel; 1st Edn. 1894.
Kavirā	:	*Kavirājamārgaṁ* of Nṛipatuṁga; Ed. Shankara Kedilāya, A., Madras, 1973.
Ku.Kā	:	*Kusumāvaḷī-kāvyaṁ* of Dēvakavi; Ed. Kaḍabada Nanjunda Shastri, N.
Ku.Vyā.Bhā.	:	*Kumāra-Vyāsa-Bhārata; Karṇāṭa Bhārata Kathāmanjari* of Kumaravyāsa. Ed. Kuvempu and Masti Venkatesh Ayyangar, Mysore, 1974. Pa. stands for Parva.
Maṁ.Ni.	:	Maṁgarāja Nighaṇṭu.
Ma.Pu.	:	*Mallinātha Purāṇam* of Nāgachandra; Ed. Hendi, B.B., Dharwad, 1974.
My.Arch.Rep.	:	*Mysore Archaeological Report;* 1st number stands for the year of the Rep. following number indicates the number of inscription in the list and the last figure stands for the date in Christian era.
Nē.Pu.	:	*Nēminātha Purāṇaṁ* of Karṇapārya; Ed. Sesha Ayyar, H. Madras,1940, *Nēminātha Purāṇaṁ of Nēmichandra;* Ed. Kulkarni, B.S., Dharwad, 1968. *Nēminātha Purāṇaṁ of Nēmichandra;* Ed. Sannayya B.S., Mysore, 1961.
Kannaḍa Nighaṇṭu	:	*Kannada Nighaṇṭu,* Kannada Sahitya Parishat, Bangalore.
Nī.Vā Kan.Com	:	*Nīti-Vakyāmṛitaṁ* of Sōmadēva Sūri; with Kannada Commentary of Nēminātha, Ed. Dikshit, G.S., Ramaswamy, B., Ritti Shrinivas; Hampi, 2000.
Paṁ.Bhā.	:	*Paṃpa Bhāratam - Vikramārjuna Vijayam* of Pampa; Mysore.
Paṁ.Rā.	:	*Pampa Rāmāyaṇam - Rāmachandracharita-purāṇam* of Abhinava Pampa Nāgachandra; Bangalore, 1921.
Pu.Pu.	:	*Pushpadanta Purāṇaṁ* of Guṇavarma; Ed. Venkatarau, A., Sesha Ayyangar, H., Madras, 1933.
Śāṁ.Pu.	:	*Śāntipurāṇaṁ* of Ponna; Ed. Nagarajayya Hampa, Bangalore, 1982.
Śāṁtī.pu.	:	*Śāntīśvarapurāṇaṁ* of Kamalabhava; Ed. Kulkarni R.V., Bangalore, 1977.
Sa.Pa.	;	*Samaya-parīkshe* of Brahmaśiva, Ed. Kulkarni, B.S., Dharwad, 1958.

SGAMI	:	*Studies in Geography of Ancient and Medieval India;* Ed. Sircar, D.C.
Sēü	:	*The Sēuṇas* (The Yādavas of Dēvagiri); by Ritti Shrinivas, Dharwad, 1973.
SII	:	*South Indian Inscriptions;* New Delhi. 1st figure stands for the number of the volume; 2nd figure stands for the number of the inscription in the volume and the 3rd figure denotes the date of the inscription in Christian Era.
Sō.chā.	:	*Sōmanātha-chāritra* of Rāghavānka; Ed. Hiremath, R.C. and Suṁkapur, M.S., Dharwad, 1961.
Summaries	:	*Summaries of Inscriptions,* 1943-44 to 1949-50; Ed. Gopal, B.R. and Ritti Shrinivas, Dharwad, 1966.
Sū.su.	:	*Sūktisudhārṇava* of Mallikārjuna; Ed. Anantarangachār, N., Mysore, 1972.
TTDI	:	*Tirupati Tirumala Dēvasthānam Inscriptions.*
Vaḍḍā	:	*Vaḍḍārādhane* of Śivakōṭyāchārya; Ed. Narasimhachar, D.L. (2nd Edn.), Mysore, 1959. P. stands for page number and l. stands for the number of the line in the given page.
Va.pu	:	*Vardhamānapurāṇaṁ* of Āchaṇṇa; Ed. Shamaraya, T.S., New Delhi, 1975.
Vij. Adm.	:	*Administration And Social Life, under Vijayanagara* by Mahalingaṁ, T.V., Madras, 1940.
Ya.Cha.	:	*Yaśōdharacharite* of Janna; Ed. Gopalakrishna Bhatta, Tekkunje; Bangalore, 1977.

Pr. = Prose; Prā = Prākṛit; Ta = Tamil; Te = Telugu; Saṁ = Sanskrit.

ಅಧ್ಯಾಯ ೧ CHAPTER I

ಸಾಮಾನ್ಯ ಆಡಳಿತ
GENERAL ADMINISTRATION

೧. ಆಡಳಿತ ಘಟಕಗಳು
1. ADMINISTRATIVE UNITS

ಊರು; Ūru: ಗ್ರಾಮ, ಊರು, ಜನವಸತಿಯಿದ್ದ ಸ್ಥಳ, ಆಡಳಿತದ ಅತಿ ಚಿಕ್ಕ ಘಟಕ; Village or town, smallest unit of administration; ಪೂಜೆಯ ಪುಟ್ಟಕ್ಕೆಂದು ಊರಿಂ ಮೂಡ; (SII. XX, 65, 1101).

ಕಂಪಣ; Kaṁpaṇa: ಒಂದು ಆಡಳಿತ ವಿಭಾಗ; An administrative unit; ದಣ್ಡನಾಯಕಂ ಗುಣ್ಡಮರಸರು ಬನವಾಸೆ ನಾಡೊಳಗಣ ಕಂಪಣಮಗ್ರಹಾರಂ ವಡ್ಡರಾವುಳಂ ಹೆಜ್ಜುಂಕ ಯೆರಡುಂ ಬಿಲ್ಕೊಡೆಯಮನಾಳುತ್ತಿರೆ; (EC. VII(O), Sk.111, 11th Cent.)

ಕಾಲ್ವಳ್ಳಿ; Kālvaḷḷi: s.a., ಕಾಲುವಳಿ; Kāluvaḷi; ಆ ಪೂರ ಕಾಲ್ವಳ್ಳಿಯೆನಿಸಿದ ಬೆಳ್ವಡಿ (EC. XI(O), Dg. 32, 1171).

ಕಾಲುವಳಿ; Kāluvaḷi: ಒಂದು ಗ್ರಾಮಕ್ಕೆ ಸೇರಿದ ಚಿಕ್ಕ ಹಳ್ಳಿ, ಉಪಗ್ರಾಮ; A hamlet attached to a bigger village, a suburb; (SII. IX, II, 562, 1534; Ibid. 641, 1551) Cf. ಕಾಲೂರು, Kālūru, below.

ಕಾಲೂರು; Kālūru: ಚಿಕ್ಕ ಹಳ್ಳಿ; ಆಡಳಿತದ ಅತಿ ಚಿಕ್ಕ ಘಟಕ; A hamlet, A smallest unit of administration; (ಪಂ.ಭಾ. Paṁ.Bhā. II, 97, ಪ Pr. 10th cent.; ಕ.ಕಾ. Ka.Kā, 18, 13th cent.).

ಖರ್ವ್ವಡ; Kharvaḍa: ಸಣ್ಣ ಗಾತ್ರದ ನಗರ; a small town; ಬೆಟ್ಟದ ಬದಿಯ ನಗರ; a town at the foot of the hill; ಖರ್ವಡ ನಗರ ಮಡಂಬೌಘದಿಂ; (EI. XIX, 38B, 1179)

ಖಂಪಣ; Khaṁpaṇa: s.a. ಕಂಪಣ; Kaṁpaṇa; ಗಂಗವಾಡಿ ಛಣ್ಣವತಿ ಸಹಸ್ರ ಮಧ್ಯ ಖಂಪಣ ಕುಂದುನಾಡು ಎಪ್ಪತ್ತರ ತತುಮಧ್ಯೇ .... (EC. IX(O), Bn.142, 1105)

ಖೇಟ; Khēṭa: ಗ್ರಾಮ, ಹಳ್ಳಿ, ಖೇಡ; A village; (ಕು.ವ್ಯಾ.ಭಾ., ಆದಿ ಪ. Ku Vyā Bhā, Ādi.pa, XVIII, 4; ಸು.1400).

ಖೇಡ; Khēḍa: s.a. ಖೇಟ; Khēṭa (EI. XIX, 38B, 1179).

ಗ್ರಾಮ; Grāma; ಹಳ್ಳಿ; Village; (EC. X(O), Mb.157, 338).

ಗ್ರಾಮಪಂಚಕ; Grāma-pañchaka: ಐದು ಹಳ್ಳಿಗಳ ಆಡಳಿತ ವಿಭಾಗ; A unit of administration consisting of five villages; (SII. XX, 180, 1192).

ಛಪ್ಪನ್ನದೇಶ; Chappanna-dēśa: ಪರಂಪರೆಯಿಂದ ಹೆಸರಾದ ಐವತ್ತಾರು ದೇಶಗಳು; Conventionally known fifty-six territories, such as:

1.	ಅಂಗ	Anga
2.	ವಂಗ	Vanga
3.	ಕಳಿಂಗ	Kalinga
4.	ಕಾಶ್ಮೀರ	Kāśmīra
5.	ಕಾಂಬೋಜ	Kāṁbōja
6.	ಕಾಮರೂಪ	Kāmarūpa
7.	ಸೌರಾಷ್ಟ್ರ	Saurāshṭra
8.	ಮಹಾರಾಷ್ಟ್ರ	Mahārāshṭra
9.	ಗುಜರಿ	Gujari
10.	ಮಗಧ	Magadha
11.	ಮಾಳವ	Māḷava
12.	ನೇಪಾಳ	Nēpāḷa
13.	ಚೋಳ	Chōḷa
14.	ಬಂಗಾಳ	Bangāḷa
15.	ಮಲೆಯಾಳ	Maleyāḷa
16.	ಸಿಂಹಳ	Siṁhaḷa
17.	ದ್ರಾವಿಡ	Drāviḍa
18.	ದ್ರವಿಡ	Draviḍa
19.	ಕರ್ನಾಟ	Karnāṭa
20.	ವರಾಟ	Varāṭa
21.	ನ್ವಿರಾಟ	Nvirāṭa
22.	ಪಾನಾಟ	Pānāṭa
23.	ಪಾಂಡ್ಯ	Pāṇḍya
24.	ಪುಳಿಂದ	Puḷinda
25.	ಶಾರ್ನವ	Śārnava
26.	ಭೋಜ	Bhōja
27.	ಕುರು	Kuru
28.	ಹೇರಾಳಕುರು	Hērāḷakuru
29.	ಗಾಂಧಾರಿ	Gāndhāri
30.	ವಿದೇಹ	Vidēha
31.	ವಿದರ್ಭ	Vidarbha
32.	ಬಾ(ಂ)ಹ್ಲೀಕ	Ba(ṁ)hlīka
33.	ಕೇಕಯ	Kēkaya
34.	ಕೋಸಲ	Kōsala
35.	ಯಮುನ	Yamuna
36.	ಸುರಸೇನ	Surasēna
37.	ಟೆಂಕ್ಕಣ	Teṁkkaṇa
38.	ಕೊಂಕ್ಕಣ	Koṁkkaṇa
39.	ಮತ್ಸ್ಯ	Matsya
40.	ಮಾಂದ್ರ	Māndra
41.	ಸಿಂಧು	Sindhu
42.	ಗುರ್ಜರ	Gurjara
43.	ಆವಂತಿ	Avanti

- ಆದಿ ಛಪ್ಪಂನ್ನಾದಿ ದೇಶಂಗಳಿಗೆ (EC. IX(O), Bn.96, 1301)

K. Isvara Dat's *Inscriptional Glosarry* gives the following list.

1.	ಅಂಗ	Anga
2.	ವಂಗ	Vaṅga
3.	ಕಲಿಂಗ	Kaliṅga
4.	ಕಲಿಂಗ	Kaliṅga
5.	ಕೇರಲ	Kēraḷa
6.	ಹಂಸಕೇರಲ	Haṁsakērala
7.	ಸರ್ವೇಶಕೇರಲ	Sarvēśakērala
8.	ಕಾಶ್ಮೀರ	Kāśmīra
9.	ಕಾಮರೂಪ	Kāmarūpa
10.	ಮಹಾರಾಷ್ಟ್ರ	Mahārāshṭra
11.	ಆಂಧ್ರ	Āndhra
12.	ಸೌರಾಷ್ಟ್ರ	Saurāshṭra
13.	ತ್ರೈಲಿಂಗ	Tailinga
14.	ಮಲೆಯಾಳ	Maleyāḷa
15.	ಕರ್ನಾಟ	Karnāṭa
16.	ಆವಂತಿ	Āvanti
17.	ವಿದರ್ಭ	Vidarbha
18.	ಮರು	Maru
19.	ಆಭೀರ	Ābhīra
20.	ಮಾಳವ	Māḷava
21.	ಚೋಳ	Chōḷa
22.	ಪಾಂಚಾಳ	Pāñchaḷa
23.	ಕಾಂಬೋಜ	Kāmbōja
24.	ವಿರಾಟ	Virāṭa
25.	ಪಾಂಡ್ಯ	Pāṇḍya
26.	ವಿದೇಹ	Vidēha
27.	ಬಾಹ್ಲಿಕ	Bāhlika
28.	ಕಿರಾತ	Kirāta
29.	ವಕ್ರಾಂತ	Vakrānta
30.	ಖುರಾಸನ	Khurāsana
31.	ಐರಕ	Airaka

32. ಭೋಕಾಂತ Bhōkānta
33. ಚೀನ Chīna
34. ಮಹಾಚೀನ Mahāchīna
35. ನೇಪಾಲ Nēpāla
36. ಕಿಕತ Kikata
37. ಗೌಡ Gauḍa
38. ಸಿಲ್ವಟ್ಟ Silvaṭṭa
39. ಮಹಾಕೋಸಲ Mahākōsala
40. ಉತ್ಕಲ Utkala
41. ಸಿಕುಮಾತಲ Sikumātala
42. ಹೂಣ Hūṇa
43. ಕೊಂಕಣ Koṁkaṇa
44. ಕೈಕಯ Kaikaya
45. ಸಿಂಹಳ Siṁhaḷa
46. ಕುರು Kuru
47. ಪುಲಿಂದ Pulinda
48. ಕಚ್ಚ Kachcha
49. ಮತ್ಸ್ಯ Matsya
50. ಮದ್ರ Madra
51. ಸೌವೀರ Sauvīra
52. ಲಾಟ Lāṭa
53. ಬರ್ಬರ Barbara
54. ಸಂಧನ Sandhana
55. ಮಗಧ Magadha
56. ಸೌರಸೇನ Saurasēna

ಕೆಲವು ಸಲ ಛಪ್ಪನ್ನೈವತ್ತಾರು ದೇಶ ಎಂಬ ಉಲ್ಲೇಖ ಬರುತ್ತದೆ Sometime reference is found to Chhappan-aivattāru-dēśa; See also SGAMI, pp. 77ff.

ಜನಪದ; Janapada; ಪ್ರದೇಶ, ಆಡಳಿತ ವಿಭಾಗ, Territory, administrative division, region, country; ಮೂವತ್ತಿಚ್ಚಾಸಿರ ಜನಪದಂಗಳುಂ (ಅಜಿ.ಪು. Aji.Pu. X.1ವ, Pr. 10th cent.); ಅತ್ರ ವಿದ್ಯಾರ್ಥಿನಃ ಸಂತಿ ನಾನಾಜನ ಪದೋದ್ಭವಾ; (EI. IV, 6A, 945).

ಠಾಣೆ; Ṭhāṇe: ಉಕ್ಕಡ, ಕಾವಲು ದಳದ ಠಾಣೆ; Out-post (EC. VIII(O), Sb.325, 940)

ಠಾಣಾಂತರ; Ṭhāṇāntara: ಬೇರೆ ಬೇರೆ ಉಕ್ಕಡಗಳು; Different out-posts (EC. VIII(O), Sb.492, 1240).

ಠಾಣೆ, ಠಾಣೆಯ; Ṭhāṇe, Ṭhāṇeya: (1) ಆಡಳಿತ ವಿಭಾಗದ ಮುಖ್ಯಸ್ಥಳ; Headquarters of an administrative division; (2) ಸೈನಿಕ ನೆಲೆ; Cantonment; (3) ಉಕ್ಕಡ; Out-post; ತಿಳುವಳ್ಳಿಯ ಠಾಣೆಯದ ಅಧಿಷ್ಠಾಯಕಂ; (SII. XX, 34, 1053).

ದೇಶ; Dēśa: ನಾಡು, ಪ್ರಾಂತ, ಆಡಳಿತದ ವಿಭಾಗ; Territory, administrative unit; ಲಾಟದೇಶ ಖೇಟಕ ಮಂಡಲಾನ್ತರ್ವ್ವರ್ತ್ತಿ...ಕಾವಿಕಾ ಮಹಾಸ್ಥಾನ; (EI. VII, 6, 930) Cf. ಬನವಾಸಿ ದೇಶ; Banavāsi-dēśa (SII. XVIII, 89, 1080).

ದ್ರೋಣಮುಖ; Drōṇamukha: ನಾನೂರು ಹಳ್ಳಿಗಳ ಮುಖ್ಯ ಪಟ್ಟಣ; Headquarters of the four hundred villages; ದ್ರೋಣಮುಖ ಶ್ರೇಣಿಯಂ; (EI. XIX, 38B, 1179), Cf. Artha, III, I.

ನಗರ; Nagara: ಪಟ್ಟಣ; City; (EI. XVIII, 26, 871). ಖರ್ವ್ವಡ ನಗರ ಮಡಂಬೌಘದಿಂ; (EI. XIX, 38B, 1179)

ನಾಡು; Nāḍu: ದೇಶ, ಪ್ರಾಂತ, ಆಡಳಿತ ವಿಭಾಗ; Territory, province, administrative unit; ಪಿಂಗಳ ನಾಡು; (EI. IV, 9, 10th cent.); ಬನವಾಸಿ ನಾಡು Banavāsi-nāḍu (SII. XVIII, 16, 907-08).

ಪಟ್ಟಣ; Paṭṭaṇa: ನಗರ; City; (ಧರ್ಮಾ; Dharmā, VI, 42, 1112). ಪಲವುಂ ಗ್ರಾಮಗಳಿಂ ಪಟ್ಟಣ ನಿಕರದೆ; (EI. XIX, 38B, 1179)

ಪತ್ತನ; Pattana: s.a. ಪಟ್ಟಣ; Paṭṭaṇa; (ಅಜಿ.ಪು, Aji.pu, VII, 3 ವ, Pr. 10th cent.).

ಪಳ್ಳಿ; Paḷḷi: ಹಳ್ಳಿ, ಗ್ರಾಮ; Village; (ಕ.ಕಾ; Ka.Kā 19, 13th cent.)

ಪ್ರಧಾನ ರಾಜಧಾನಿ; Pradhāna-rājadhāni: ರಾಜ್ಯದ ಮುಖ್ಯ ಪಟ್ಟಣ, ಮುಖ್ಯ ರಾಜಧಾನಿ; Principal capital of a kingdom (EC. VIII(O), Sb.375, 14th Cent.).

ಪ್ರಾಂತ Prānta: ಪ್ರದೇಶ, ಆಡಳಿತ ವಿಭಾಗ; Administrative division, region, (EC. VIII(O), Sa.165, 1487).

ಪುರ; Pura: ಪಟ್ಟಣ, ನಗರ; City; (EC. VII(O), Sk.62, 1070; SII. XV, 104, 1165).

ಪುರಭೇದ; Purabhēda: ಪುರಗಳ ಪ್ರಕಾರಗಳು; Types of cities; (ಪಂ.ಭಾ, Paṁ.Bhā, II, 34, ವ Pr. 10th cent.).

ಪೆರ್ವೊಳಲು; Pervoḷalu: ದೊಡ್ಡ ಪಟ್ಟಣ; A big city; (EC. IV(O), Yd.60, 890).

ಪೊಱವೊೞಲ್; Poṟavoḻal: ಪಟ್ಟಣದ ಹೊರಗಿನ ಭಾಗ; Suburb, Extension; (ಪಂ.ಭಾ, Paṁ.Bhā, III, 36, ವ Pr. 10th cent.).

ಪೊೞಲ್; Poḻal: ಹೊಳಲು; Hoḷalu; ಪಟ್ಟಣ; Town; (ಪಂ.ಭಾ. Paṁ.Bhā, I, 57, ವ Pr. 10th cent.).

ಬಾಡ; Bāḍa: ಹಳ್ಳಿ; Village; (EC. XI(O), Cd.34, 1123); ಹನ್ನೆರಡಱ ಮೊದಲ ಬಾಡ; (EC. XI(O), Dg.11, 1066); ನೂರುಂಬಾಡ; (EC. VII(O), Sk. 102, 1162); ಸಾಸಿರಬಾಡ; (EC. V(O), Ak.127, 1185).

ಭಾಗೆ; Bhāge: ಭಾಗ, ಆಡಳಿತ ವಿಭಾಗ; Administrative division; ಹಾದಿಯ ಕೆರೆ ನಾಗಗೌಡನುಂ ಕಗ್ಗಿಯ ಭಾಗೆಯ ಪ್ರಭು ಗಾವುಂಡುಗಳ್ ಪ್ರಮುಖವಾಗಿ ಆ ಭಾಗೆಯ ಗಂಗಪುರವಂ ಸರ್ವನಮಸ್ಯವಾಗಿ ಬಿಟ್ಟ ದತ್ತಿ; (EC. VI(O), Tk.145, 1196).

ಭುಕ್ತಿ; Bhukti: ಆಡಳಿತ ವಿಭಾಗ; Administrative division in a kingdom; ತತ್-ಕೊಳನೂರ ತದ್ಭುಕ್ತಿ ಮಧ್ಯವರ್ತ್ತಿ; (EI. VI, 4, 860).

ಮಡಂಬ; Maḍamba: ವಿಶಿಷ್ಟ ಪ್ರಕಾರದ ಗ್ರಾಮ; A special type of village; ಖರ್ವ್ವಡ ನಗರ ಮಡಂಬೌಘದಿಂ; (EI. XIX, 38(B), 1179).

ಮಹಾಗ್ರಾಮ; Mahāgrāma: ದೊಡ್ಡ ಹಳ್ಳಿ; Big village; ನಿಡುವಲ್ಲನಾಡಮಧ್ಯಸ್ಥಂ ಮಹಾಗ್ರಾಮಂ ಮಹೋದಯಂ; (EC. VIII(O), Tl.206, 1464).

ಮಹಾರಾಷ್ಟ್ರ; Mahārāshṭra: ದೊಡ್ಡ ಪ್ರದೇಶ; A vast territory; ಮಹಾರಾಷ್ಟ್ರಕತ್ರಯ; (EI. VI, 1, 634-35; ಅಜಿ.ಪು, Aji.Pu. X, 1, ವ Pr. 10th cent.).

ಮಂಡಲ; Maṇḍala: ಆಡಳಿತ ವಿಭಾಗ; An administrative division; Cf. ದೇಶ, ವಿಷಯ, ನಾಡು, ರಾಷ್ಟ್ರ ಇತ್ಯಾದಿ; Vishaya, Dēśa, Nāḍu, Rāshṭra etc. ಚೋಳಮಂಡಲಸಂಬದ್ಧ; (EI. XVIII, 21B, 1528) See HD III, p. 138-39; IEG, p. 194).

ಮಾಗಣಿ; Māgaṇi: ಆಡಳಿತ ವಿಭಾಗ; Administrative unit; (EC. III(R), Nj. 259, 1490; IEG, p. 174).

ಮೇರೆ; Mēre: ಸೀಮಾ ರೇಖೆ; Boundary; (EI. III, 5, 1424).

ರಾಜ್ಯ; Rājya: (1) ಆಡಳಿತ ವಿಭಾಗ; An administrative unit, e.g. ತುಳು ರಾಜ್ಯ, ಬಾರಕೂರು ರಾಜ್ಯ ಇತ್ಯಾದಿ; (SII. IX, II, 655, 1554); (2) ರಾಜ್ಯ; Kingdom; ಅರಸನ ಅಧೀನದಲ್ಲಿರುವ ಸ್ವತಂತ್ರರಾಜ್ಯ; A Kingdom under the control of a king (EC. VIII(O), Ng. 29, 15th cent.).

ರಾಷ್ಟ್ರ; Rāshṭra: s.a. ರಾಜ್ಯ; Rājya; ಕರ್ಮರಾಷ್ಟ್ರೇ; (EI. XVIII, 27, 631).

ವಳನಾಡು; Vaḷanāḍu: ರಾಜ್ಯದಲ್ಲಿಯ ಆಡಳಿತ ವಿಭಾಗ; An administrative unit; (EC. X(O), Kl 106(a) 1019; Cf. IEG. p. 360).

ವಿಷಯ; Vishaya: ನಾಡು, ಮಂಡಲ, ವಿಭಾಗ; Territory, administrative unit; ಕೋರಿಕುನ್ದ ವಿಷಯೇ; (EC. X(O), Mr.72, 370) Cf. ಬೆಳ್ವೊಲ ವಿಷಯ, ಕುಂತಲ ವಿಷಯ, ಇತ್ಯಾದಿ.

ವೇಂಠೆ; Vēṁṭhe: ಆಡಳಿತ ವಿಭಾಗ; Territorial unit, administrative unit; ಆರಗದ ವೇಂಠೆಯದ ಸಾಂತಳಿಗೆ ನಾಡ ಒಳಗಣ; (EC. VI(O), Kp.27, 1403; IEG. 370).

ಸಹಸ್ರಮಂಡಲ; Sahasra-maṇḍala: ಸಾವಿರ ಗ್ರಾಮಗಳ ಒಂದು ಆಡಳಿತ ವಿಭಾಗ; An administrative unit of thousand villages; See ಸಾಸಿರ ನಾಡು; Sāsira-nāḍu below; (IND. 24, 12th cent.).

ಸಾಯಿರನಾಡು; Sāyiranāḍu: s.a. ಸಾಸಿರನಾಡು; Sāsiranāḍu below; ಸಾಯಿರನಾಡ ವಂನೆಯಂ ನಾಗತಿಯರಸನು; (EC. XI(O), Dg.32, 1171).

ಸಾಯಿರಬಾಡ; Sāyirabāḍa: ಸಾವಿರ ಗ್ರಾಮಗಳ ಆಡಳಿತ ವಿಭಾಗ; Administrative unit of thousand villages; ಕುನ್ತಳದೇಶದೊಳೆಸೆವ ಸಾಯಿರಬಾಡ; (IND. 23, 1122), Cf.; ಸಹಸ್ರ ಮಂಡಲ; Sahasra-maṇḍala above.

ಸಾಸಿರನಾಡು; Sāṣira-nāḍu: ಸಾವಿರ ಗ್ರಾಮಗಳನ್ನೊಳಗೊಂಡ ಆಡಳಿತ ವಿಭಾಗ; Administrative unit consisting of thousand villages; ಸಾಸಿರನಾಡ ಮಂನ್ನೆಯಂ ಅಣ್ಣಮರಸನಂ; (EC. XI(O), Dg. 134, 1108); ಆಡಳಿತ ವಿಭಾಗಗಳ ಹೆಸರಿನ ಮುಂದೆ ಸಂಖ್ಯೆಯನ್ನು ಜೋಡಿಸುವುದು ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ಒಂದು ವೈಶಿಷ್ಟ್ಯ. ಉದಾ: ಬೆಳ್ವೊಲ ಮುನ್ನೂರು, ಬನವಾಸಿ ಪನ್ನಿರ್ಚ್ಛಾಸಿರ, ಕರಹಡ ಚತುಃಸಹಸ್ರ ಇತ್ಯಾದಿ. ಈ ಸಂಖ್ಯೆಯು ಏನನ್ನು ಸೂಚಿಸುತ್ತದೆಂಬ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಇದು ಜನ ಸಂಖ್ಯೆಯನ್ನು ಸೂಚಿಸುತ್ತದೆ ಎಂದು ಒಂದು ಅಭಿಪ್ರಾಯವಾದರೆ, ಆದಾಯವನ್ನು ಸೂಚಿಸುತ್ತದೆ ಎಂಬುದು ಇನ್ನೊಂದು ಅಭಿಪ್ರಾಯವಾಗಿದೆ. ಆದರೆ ಇಂಥ ಸಂಖ್ಯೆಗಳ ಜೊತೆಗೆ ಹಲವಾರು ಸಲ ಬಾಡ, ಗ್ರಾಮ ಮುಂತಾದ ಪದಗಳು ಸೇರಿಸಲ್ಪಟ್ಟಿರುತ್ತವೆ. ಉದಾ: ನವನವತಿಸಹಸ್ರಾಣಾಂ ಗ್ರಾಮಭಾಜಾಂ, ಮುವತ್ತಾರುಂ ಬಾಡದ ಮೊದಲ ಗ್ರಾಮ ಇತ್ಯಾದಿ. ಕೊಣ್ಣೂರು ಎಂಬಲ್ಲಿಯ ಒಂದು ಶಾಸನದಲ್ಲಿ (EI. VI, 4, 860; ೧೨ನೇ ಶತಮಾನದ ಅಕ್ಷರದಲ್ಲಿದೆ). ಕೊಳನೂರು ೩೦ ಎಂಬ ವಿಭಾಗದ ಉಲ್ಲೇಖವಿದ್ದು ಎಲ್ಲ ೩೦ ಹಳ್ಳಿಗಳನ್ನು ಹೆಸರಿಸಲಾಗಿದೆ. ಇದರಿಂದ ಈ ಸಂಖ್ಯೆಯು ಆಯಾ ವಿಭಾಗಗಳಲ್ಲಿರುವ ಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಒಮ್ಮೊಮ್ಮೆ ಬಹು ದೊಡ್ಡ ಸಂಖ್ಯೆಯು ಬರುವುದನ್ನು ಗಮನಿಸಿ (ಉದಾ: ತೊಂಬತ್ತಾರು ಸಾವಿರ, ಸಪಾದಲಕ್ಷ, ಸಪ್ತಾರ್ಧಲಕ್ಷ ಇತ್ಯಾದಿ), ಸಂಖ್ಯೆಯು ಚಿಕ್ಕದಿದ್ದಾಗ ಅದು ಆಯಾ ವಿಭಾಗಗಳಲ್ಲಿ ಖಚಿತವಾಗಿ ಇದ್ದ ಹಳ್ಳಿಗಳ ಸಂಖ್ಯೆಯನ್ನು ಸೂಚಿಸುತ್ತದೆಂದೂ, ಸಂಖ್ಯೆ ಬಹಳ ದೊಡ್ಡದಿದ್ದಾಗ ನಿಜವಾದ ಗ್ರಾಮಗಳ ಸಂಖ್ಯೆಯನ್ನು ಸೂಚಿಸದೆ ಬಹಳ ಎಂಬ ಅರ್ಥವನ್ನು ಸೂಚಿಸುತ್ತದೆಂದೂ ಒಂದು ಅಭಿಪ್ರಾಯವಿದೆ. ಆದರೆ ಈ ವಿಷಯವನ್ನು ಕೂಲಂಕಷವಾಗಿ ಅಭ್ಯಸಿಸಿದಾಗ ಈ ಸಂಖ್ಯೆಯು ಆಯಾ ವಿಭಾಗಗಳಲ್ಲಿಯ ಗ್ರಾಮಗಳ ನಿಜವಾದ ಸಂಖ್ಯೆಯನ್ನೇ ಸೂಚಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. A Special feature noticed in the Kannada inscriptions is suffixing numerical figures to the names of the administrative divisions, e.g. Beḷvola-300, Banavāśi-12000, Karahaḍa-4000 etc., Different opinions are expressed regarding the significance of such figures. According to one opinion, they indicate the population while according to another, they indicate the income. But it can be noticed that in good number of cases the words Bāḍa, grāma, i.e., village are associated with such figures, e.g., Navanavati-Sahasrāṇāṁ grāma-bhājāṁ, Muvattāruṁ-bāḍada modala grāma etc. In an inscription from Koṇṇūr (EI. VI, 4, 860; written in characters of 12th cent.) mention is made of Koḷanūr 30 and all the 30 villages are enumerated. It is clear from such references that the figures indicate the number of villages included in such administrative divisions. But sometimes when the figure is unusually big such as 96000, a lakh and a quarter, seven and a half lakh, a suggestion is made that small figures indicate the exact number of villages in a division while the big figures figuratively stand for a large number. But a close study of this subject makes it clear the figures small or big, indicate the number of villages alone, in a division.

ಹಳ್ಳಿ; Haḷḷi: s.a. ಪಳ್ಳಿ; Paḷḷi; ಗ್ರಾಮ; village above; (EC. VI(O), Cm.67, 1284).

೨. ಅಧಿಕಾರಿ, ಅಧಿಕಾರವಾಚಕ ಪದಗಳು

2. OFFICERS AND OFFICES

ಅಕ್ಷಪಟಲಾಧಿಕರಣಾಧಿಕೃತ; Akshapaṭalādhikaraṇādhikṛita: ರಾಜಶಾಸನಗಳ ಲೇಖಕ;

ಶಾಸನಾಧಿಕಾರಿ, ದಾಖಲೆಗಳ ಕಾರ್ಯಾಲಯದ ಅಧಿಕಾರಿ; Officer in charge of drafting official documents, keeper of records; ಲಿಖಿತಮಿದಂ .... ಅಕ್ಷಪಟಲಾಧಿಕರಣಾಧಿಕೃತ ನಿರವದ್ಯಪರಮೇಶ್ವರಭಟ್ಟ ಶ್ರೀ ರುದ್ರನಾಗೇನ.... (EI. XXVIII, 3, 669-70).

ಅಕ್ಷಪಟಲಾಧಿಪತಿ; Akshapaṭal-ādhipati: s.a. ಅಕ್ಷಪಟಲಾಧಿಕರಣಾಧಿಕೃತ; Akshapaṭalādhikaraṇādhikṛita; (EI. XXII, 12, 884).

ಅಕ್ಷಪಟಲಿಕ; Akshapaṭalika: s.a. ಅಕ್ಷಪಟಲಾಧಿಕರಣಾಧಿಕೃತ; Akshapaṭalādhikaraṇādhikṛita; ಶಾಸನಾಧಿಕಾರಿಕಾಕ್ಷಪಟಲಿಕ ಮಹಾಪ್ರಚಂಡ ದಂಡನಾಯಕ ಕಾಲಿದಾಸಸುತ ವಿಕ್ರಮಾದಿತ್ಯ; (EI. XII, 19, 1087, 1123).

ಅಗ್ಗದಧಿಕಾರಿ; Aggad-adhikāri: ಮೇಲಿನ ಅಧಿಕಾರಿ; (ಅಗ್ಗ>ಅಗ್ರ), Head, Chief, Superior Officer, Senior Officer, Head of Office; ಕರಣಂಗಳಗ್ಗದಧಿಕಾರಿ ಚಮೂಪತಿ ತೇಜಿರಾಜ; (APGAS, III, Rc.12, 1178).

ಅಟ್ಟಟ್ಟಿ; Aṭṭaṭṭi: ದೂತ; Messenger; (ಪಂ.ರಾ. Paṁ.Rā., XI, 23, 12th cent.).

ಅಡಿಕಾರ; Aḍikāra: ಗ್ರಾಮದ ಮುಖ್ಯಾಧಿಕಾರಿ; The headman of a village; (ಕಾ.ಲೋ. Kā.lō; I, 325, 1150).

ಅಧ್ಯಕ್ಷ; Adhyaksha: ಅಧ್ಯಕ್ಷಪದವಿ, ನೇತೃತ್ವ, ಮುಖ್ಯಾಧಿಕಾರ; Headship, Presidentship; ಮಹಾಜನದಧ್ಯಕ್ಷದೊಳ್; (EI. XVI, 7, 1010), ಸಿರಾಲಿಯ ಗ್ರಾಮದ ಅಧ್ಯಕ್ಷದಲಿ ಬರೆದ ಶಾಸನ; (KI. III, I, 3, 1336).

ಅಧ್ಯಕ್ಷದ ಕರಣ; Adhyakshada Karaṇa: ಅಧ್ಯಕ್ಷದ ಅಧೀನ ಅಧಿಕಾರಿ; Officer or Secretary in the office of the Chief or President; (ಶಾಂ. ಪು. Śāṁ. Pu. II, 73, 10th cent.).

ಅಧಿಕಾರ್ತಿ; Adhikārti: ಅಧಿಕಾರಿ ಶಬ್ದದ ಸ್ತ್ರೀಲಿಂಗರೂಪ; ಅಧಿಕಾರ ನಡೆಸುತ್ತಿದ್ದ ಸ್ತ್ರೀ; Feminine form of the word Adhikāri; A female Officer; ಬೊಮ್ಮರಸ ಅಧಿಕಾರಿಗಳ ಮದವಳಿಗೆ ನಾಗರಸಿ ಅಧಿಕಾರ್ತಿ; (KI. III, I, 14, 1545).

ಅಧಿಕಾರ, ಅಧಿಕಾರಂಗೈ; ಅಧಿಕಾರಮಾಡು; Adhikāra, Adhikāraṁgai; Adhikaramāḍu: ಅಧಿಕಾರ; ಆಧಿಪತ್ಯ, ಆಡಳಿತ ನಡೆಸುವುದು; Authority to govern; to exercise authority; ಕವಿರಾಜಯ್ಯಂಗಳ ಅಧಿಕಾರವಾಗಿ; (EC. VI(O), Kd.49, 1291). ಲಿಖಿತಮಿದಂ ವಲ್ಲಭ ದುರ್ಜಯರಧಿಕಾರದಿಂ; (EI. III, 48, 8th cent.; SII. XX, 224, 1225; Ibid., IX, II, 411, 1366; ಬನವಸೆ ಪನ್ನಿಚ್ಛಾಸಿರದಧಿಕಾರಂ ಗೆಯ್ಯುತ್ತಿರೆ (EC. VII(O), Hl.20, 1222); ಅಧಿಕಾರಂ ಮಾಡುತ್ತಿರ್ಪ್ಪಂದಾತನ ಸನ್ನಿಧಾನದಲು (EC. III(R), Gu.3, 1196).

ಅಧಿಕಾರಿ; Adhikāri: ಅಧಿಕಾರವುಳ್ಳವ; ಅಧಿಕಾರ ನಡೆಸುವವ; Officer, Authority; ಕಿಳ್ಳುಂ ನಾಗಣ್ಣನಧಿಕಾರಿಗಳಾಗೆ (EC. VI(O), Kp. 37, 7th cent.); ಇಂತೀ ಧರ್ಮ್ಮಂಗಳಂ ಅಧಿಕಾರಿ ಕರಣಂ ಪ್ರಭು ಮಹಾಜನಂಗಳುಂ.... ಪ್ರತಿಪಾಲಿಸುವರು; (EI. V, 3C, 1178); ಕಯ್ಯರನಾಡ ಪಕಟೆನಾಡ ಅಧಿಕಾರಿ; (EC. IV(R), Ch.131, 1273); ಅದಿಗಾರಿ (EI. XI, 22E, 905) ಮತ್ತು ಅತಿಕಾರಿ (KI. III, I, 9, 1538); ಇವು ಅಧಿಕಾರಿ ಶಬ್ದದ ವಿಕೃತರೂಪಗಳು.

ಅಧಿಪ, ಅಧಿಪತಿ; Adhipa, Adhipati: ಪ್ರದೇಶದ, ಗ್ರಾಮದ ಅಥವಾ ಧಾರ್ಮಿಕ ಸಂಸ್ಥೆಯ ಪ್ರಮುಖ ಅಥವಾ ಮುಖ್ಯಸ್ಥ; Chief or head of an administrative division, a town or a religious institution; ಕಳಂಬೂರು ನಗರಾಧಿಪತಿ; (EC. VII(O), Sh.57, 1118); ಘೈಸಾಸಗೇರಿಗಧಿಪರು; (SII. V, 48, 1098); ವರ ಶಂಖಜಿನಾಲಯಾಧಿಪತಿ; (KI. V, 38, 1174); ಎಡೆನಾಡಧಿಪತಿ; (EI. VI, 19, 1057); ಮಠಕ್ಕೆ ಅಧಿಪತಿಯಾಗಿದ್ದವರು; (EC. VIII(O), Tl.2, 1424) ಪಾನುಂಗಂಟಸ್ಥಲಮುನಕಧಿಪತಿಯೈನ; (HAS. XIII, 34, 1267) ಅತಿಪತಿ; (EC. III(R), Nj.169, 1114); ಅಧಿಪತಿಯ ವಿಕೃತ ರೂಪ.

ಅಧಿರಾಜ; Adhirāja: ಅಧಿಪತಿ; Overlord; ಅರಸ; King; ಅಧಿರಾಜನಾಗೆ ಬಲ್ಲಾಳಧರಾಧಿಪ; (EC. V(O), Ca.243, 1210); ಗಂಗಮಂಡಲಾಧಿರಾಜ ಶ್ರೀ ಚಾಕಿರಾಜ (EI. IV, 49, 813).

ಅಧಿಷ್ಠಾಯಕ; Adhisṭhāyaka: ಒಂದು ಪ್ರದೇಶದ, ಊರಿನ ಅಥವಾ ಖಾತೆಯ ಪ್ರಮುಖ, ಮುಖ್ಯಸ್ಥ; Chief or head of a region, a place or a Department; ಕುಪ್ಪಟೂರ

ಟ್ಠಾಣೆಯದ ಅಧಿಷ್ಠಾಯಕಂ ನಾಗವರ್ಮಯ್ಯನುಂ (SII. XX, 34, 1053) Cf. ಅಚ್ಚುಪನ್ನಾಯದಧಿಷ್ಠಾಯಕ below.

ಅಪ್ಪಣೆಕಾರ; Appaṇekāra: ರಾಜಾಜ್ಞೆಗಳಿಗೆ ಸಂಬಂಧಿಸಿದ ಅಧಿಕಾರಿ; An officer dealing with royal or State orders; ಬಲ್ಲಾಳುಗಳಯ್ವವರು ಹೊರಹಿನವರು ಥಳದ ಸೇನುಬೋವನು ಅಪ್ಪಣೆಕಾಱನೆಂಬವರು ಕೂಡಿ; (SII. VII, 211, 1407).

ಅಮಾತ್ಯ; Amātya: ರಾಜ್ಯದ ಪ್ರಮುಖ ಅಧಿಕಾರಿ, ಮಂತ್ರಿ; ರಾಜ್ಯದ ಸಪ್ತಾಂಗಗಳಲ್ಲಿ ಒಬ್ಬ; A high officer of the State; Minister; One of seven constituents of the State; (EI. XVI, 26, 871); ಪ್ರಾಚೀನ ಕಾಲದಿಂದ ನಂತರದ ಕಾಲದವರೆಗಿನ ಅನೇಕ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಈ ಶಬ್ದದ ಉಲ್ಲೇಖ ಬರುತ್ತದೆ. Figures in numerous inscriptions and in literature from quite early times to a late period. Cf. Artha. also; ಪ್ರಾ.ಅಮಚ, ಅಮಚ್ಚಕ; ತ.ಅಮೈಚ್ಚ. ಮಂಗರಾಜನಿಘಂಟುವಿನಲ್ಲಿ ಅಮಾತ್ಯ ಪದಕ್ಕೆ ಸಂವಾದಿಯಾಗಿ ಪೆರ್ಗ್ಗಡೆ ಪದವನ್ನು ಉಪಯೋಗಿಸಲಾಗಿದೆ.

ಅರಸಾಳು; Arasāḷu: ಅರಸನ ಅಧಿಕಾರಿ; ರಾಜ್ಯದ ಅಧಿಕಾರಿ; An officer of the king; a government servant; ಮತ್ತಂ ವನವಾಸಿದ್ವಾದಶಸಹಸ್ರಾಧಿಕಾರಿಗಳ ಸನ್ಧಿವಿಗ್ರಹಿಗಳು ವರ್ಷಂಪ್ರತಿ ಕುಡುವ ಗದ್ಯಾನ ೧ ಭಟ್ಟಗುತ್ತರು ಪ ೧ ಅರಸಾಳುಗಳು ವಿ.೧೦. (EC. VII(O), Sk.131, 1104).

ಅಂಕಕಾಱ; Ankakāṟa: ನೆಚ್ಚಿನ ಸೇವಕ; ಸಹಾಯಕ, ಬಂಟ; Favourite servant; Assistant; ಎಂಟುನಾಡ ಪದಿನರುವರು... ಸೆಟ್ಟಿಗುತ್ತರುಂ ಅಂಕಕಾಱರುಂ ಬೀರರುಂ ಬೀರವಣಿಗರುಂ; (EC. VII(O), Sk.118, 1150; also Ibid. IX(O), DB.9, 918); Cf. ಅಣ್ಣನಂಕಕಾರ ಇತ್ಯಾದಿ.

ಆಜ್ಞಾಪರಿಪಾಲಕ; Ājnāparipālaka: ಅರಸನ ಅಥವಾ ಹಿರಿಯ ಅಧಿಕಾರಿಗಳ ಅಪ್ಪಣೆಗಳನ್ನು ಕಾರ್ಯಗತ ಮಾಡುವ ಅಧಿಕಾರಿ; Officer executing the orders of the king or other high officers; (EC. V(R), Tn.55, 1426).

ಆದಿಪ್ರಭು; Ādiprabhu: ಹಿರಿಯ ಅಧಿಕಾರಿ, ಮೇಲಧಿಕಾರಿ; Officer; Head; ಮತ್ತಮೀ ಪುರದಾದಿಪ್ರಭುಗಳು ಮಹಾಜನಮುಂ; (SII. XV, 104, 1165).

ಆದಿಪಾಲಕ; Ādipālaka: s.a. ಆದಿಪ್ರಭು; Ādiprabhu; ಯೀ ಧರ್ಮಕ್ಕೆ ಆದಿಪಾಲಕರು ಮೂಱುಕೇರಿಯ ಹಲರು; (SII. VII, 316, 1379).

ಆಧಿಕಾರಿಕ; Ādhikārika: s.a. ಅಧಿಕಾರಿ; Adhikāri above; (EI. XVIII, 26, 871; Ibid. XXV, 4, 742; Ibid. IX, 26, 793).

ಆಪ್ತಸಚಿವ; Āptasachiva: ವಿಶ್ವಾಸಪಾತ್ರನಾದ ಅಧಿಕಾರಿ; ಅಂತರಂಗದ ಅಧಿಕಾರಿ; Confidential Secretary; a trusted officer; (ಅ.ಪು. A.Pu, XI, 72, 13th cent.).

ಆಯುಕ್ತ, ಆಯುಕ್ತಕ; Āyukta, Āyuktaka: ಅಧಿಕಾರಿ; An officer especially in-charge of an administrative division; ವಿಷಯಪತಿ ರಾಷ್ಟ್ರಕೂಟ ಗ್ರಾಮಕೂಟಕಾಯುಕ್ತಕಾದೀನ್; (EI. XXVIII, 9, 632; Ibid. XXXV, 37, 819; Ibid. XXII, 13, 12th cent.).

ಉಪಪ್ರಧಾನಿ; Upapradhāni: ಪ್ರಧಾನಿ ಹುದ್ದೆಯ ಕೆಳಗಿನ ದರ್ಜೆಯ ಹುದ್ದೆ; ಉಪಸಚಿವ; Officer lower in rank than Pradhāni, Deputy minister; (SII. VI, 146, 16th cent.; Vij.Adm. I, p.137).

ಉಪಯುಕ್ತಕ; Upayuktaka: ಅಧಿಕಾರಿ; Officer; ಗ್ರಾಮಕೂಟ ಮಹತ್ತರಾಯುಕ್ತ ಕೋಪಯುಕ್ತಕಾಧಿಕಾರಿಕಾನ್; (EI. XXIII, 17A. 929).

ಉಪರಿಕ; Uparika: ಆಡಳಿತ ವಿಭಾಗದ ಮುಖ್ಯ ಅಧಿಕಾರಿ; Governor of a province; (EI. VI, 13(B), 13th cent.).

ಉಪಸಚಿವ; Upasachiva: ಕಿರಿಯ ಮಂತ್ರಿ, ಕಿರಿಯ ಅಧಿಕಾರಿ; Junior Minister, Dy.Minister, Junior Officer; (ಖಗೇ.ಮ., Khagē.ma., I, 29, 14th cent.)

ಉಭಯಪ್ರಧಾನಿ; Ubhayapradhāni: s.a., ಪ್ರಧಾನಿ; Pradhāni; (SII. VII, 447, 1328-29; Vij.Adm. I, p.37).

ಊರ್ಗ್ಗಾಮುಣ್ಡು; Ūrggāmuṇḍu: ಊರ ಗೌಡಿಕೆ, ಅಧಿಕಾರ; Headmanship of a village - ಕಲ್ಲಮನೂರ್ಗ್ಗಾಮುಂಡುಗೆಯ್ಯೆ; (KI. I, 14, 866).

ಊರ್ಗ್ಗವುಂಡ; ಊರ್ಗ್ಗಾವುಂಡ; Ūrggavuṇḍa; Ūrggāvuṇḍa: ಊರಿನ ಪ್ರಭು; ಊರಿನ ಗೌಡ; Headman of a village; (EC. XI(O), Dg.71, 1034).

ಊರ್ಗ್ಗಾವುಣ್ಡು; Ūrggāvuṇḍu: s.a. ಊರ್ಗ್ಗಾಮುಣ್ಡು; Ūrggāmuṇḍu above; (SII. XVIII, 15, 901-02; Ibid. 78, 1054; KI. I, 19, 1108).

ಊರಪ್ರಭು; Ūra-prabhu: ಊರಿನ ಮುಖ್ಯ ಅಧಿಕಾರಿ; Headman of the village; (SII. XX, 51, 1077).

ಊರಾಳ್ವ; Ūrāḷva: ಊರನ್ನು ಆಳುವವ; Administrator of a town; s.a. ಊರಪ್ರಭು; Ūra prabhu; ಊರೊಡೆಯರಕ್ಕೆ ಮೆಂನೆಯರೂರಾಳ್ವರಕ್ಕೆ; (SII. XX, 175, 1190) ತ. ಊರಾಳರ್.

ಊರಾಳಿ; Ūrāḷi: s.a. ಊರಾಳ್ವ; Ūrāḷva; ಮಹಾಜನಮುಂ ಎಣ್ಬುನ್ನಗರಮುಂ ನೂಱು ಇರ್ಪ್ಪದಿನ್ವರು ಊರಾಳಿಗಳು; (SII. XV, 463, 8th cent.; EC. V(O), Cn. 251, 925).

ಊರೊಡೆತನ; Ūroḍetana: ಊರ ಗೌಡಿಕೆ; Headmanship of a village; (HAS. XVIII, 11, 973).

ಊರೊಡೆಯ; Ūroḍeya: s.a. ಊರಪ್ರಭು; Ūra Prabhu; (SII. IX, I, I, 104, 1046; EI. XVII, 2, 1004); ಲೊಕ್ಕಿಗುಂಡಿಯೂರೊಡೆಯಪ್ರಮುಖ ಸಾಸಿರ್ವ್ವರು; (KI. V, 106, 12th cent.).

ಎಂಟುನಾಡ ಪದಿನಱುವರು; Eṇṭu-nāḍa padinaṟuvaru: ಎಂಟು ಆಡಳಿತ ವಿಭಾಗಗಳ ಗ್ರಾಮಸಭೆಗಳ ಸದಸ್ಯರು; Members of the village assemblies of eight administrative divisions; (SII. XX, 299, 12th cent.).

ಒಡೆಯ; Oḍeya: ಅಧಿಕಾರಿ, ಪ್ರಭು; Chief, Headman; ಬೆಟ್ಗೆರೆಯೊಡೆಯ; (EI. IV, 49, 812); ಚಕ್ರಗೊಟ್ಟದೊಡೆಯಂ ಸೋಮೇಶ್ವರ; (EC. VI(O), Mg. 22, 1129; EI. XVI, 8, C.1147).

ಓಲೆಯಕಾರ; Ōleyakāra: ಪತ್ರವಾಹಕ; ಸಂದೇಶವಾಹಕ; A messenger carrying a letter of authority; a messenger; (ಕು.ವ್ಯಾ.ಭಾ.ಅರಣ್ಯ ಪ. Ku.vyā.bha. Araṇya pa. X, 26, c.1400); Cf. ಓಲೆಯ ಚೆಟ್ಟಿಸೆಟ್ಟಿ; (SII. XX, 78, 1118).

ಓವು; Ōvu: ರಕ್ಷಣಾಧಿಕಾರಿ, Security Officer, Policeman; ನಾಲ್ವತ್ತೊರ್ವ್ವ ಓವುಗಳುಮುಱುವತ್ತು ಕೊತ್ತಳಿಗಳು; (EC. VII, Sk.94, 1094).

ಕಡಿತವೆರ್ಗ್ಗಡೆ; Kaḍitaverggaḍe: ದಾಖಲೆಗಳ ಅಧಿಕಾರಿ; Record Keeper; s.a. ಅಕ್ಷಪಟಲಿಕ; Akshapaṭalika; (SII. XX, 283, 1017-18; Ibid, 75, 1117; Ibid. XV, 22, 1142; Ibid. XVIII, 156, 1151).

ಕಡಿತಾಮಾತ್ಯ; Kaḍitāmātya: ದಾಖಲೆಗಳ ಪ್ರಧಾನ ಅಧಿಕಾರಿ; Head of the records Department; ಮಹಾಪ್ರಧಾನೇನ ಕಡಿತಾಮಾತ್ಯ ಮೈಲ್ಲಪಯ್ಯೇನ; (EI. XXIII, 5, 1126).

ಕಡಿಪತ್ಥಳೆ ದಣ್ಡಾಯದ ಹೆಗ್ಗಡೆ; Kaḍipatthaḷe daṇḍāyada heggaḍe: (ಕಡಿ ಎಂಬುದು ಕಡಿತ ಎಂದಿರಬೇಕೆಂದು ತೋರುತ್ತದೆ. ಮತ್ತು ದಣ್ಡಾಯ ಪದವು ದಣ್ಡನಾಯಕ ಎಂದಿರಬೇಕೆಂದು ತೋರುತ್ತದೆ.) ದಾಖಲೆಗಳ ಮತ್ತು ರಾಜಶಾಸನಗಳ ಹಿರಿಯ ಅಧಿಕಾರಿಯ ಅಧೀನ ಅಧಿಕಾರಿ; (Kaḍi and daṇḍāya seem to be mistakes for Kaḍita and daṇḍanāyaka respectively). A subordinate official under an officer related to records and official documents (EC. XII(O), Tp.66, 1163); Cf. ಪತ್ಥಳೆಕರಣ below.

ಕರ್ತ; Karta: ಕಾರ್ಯನಿರ್ವಾಹಕ; ಅಧಿಕಾರ ನಡೆಸುವವ; Manager; (SII. IX, II, 470, 1482; EC. VI(O), Sg. 18, 1529 A.D.), Cf. ಕಾರ್ಯಕರ್ತ; ಕರ್ಯಕೆ ಕರ್ತ below.

ಕರಣ; Karaṇa: ಲೆಕ್ಕಪತ್ರಗಳ ಅಧಿಕಾರಿ, ಶಾನುಭೋಗ, ಲೇಖಕ; Officer incharge of records; An accountant, A scribe; (SII. XX, 35, 1055).

ಆಡಳಿತ ಖಾತೆ; Administrative department; ಲೇಖ ಪದ್ಧತಿ ಎಂಬ ಗ್ರಂಥದಲ್ಲಿ ಇಂಥ ಮೂವತ್ತೆರಡು ಖಾತೆಗಳ ಉಲ್ಲೇಖವಿದೆ; In Lēkhāpaddhati there is a mention of such 32 departments;

1.	ಶ್ರೀಕರಣ	Śrīkaraṇa
2.	ವ್ಯಯಕರಣ	Vyayakaraṇa
3.	ಧರ್ಮಾಧಿಕರಣ	Dharmādhikaraṇa
4.	ಮಂಡಪಿಕಾಕರಣ	Maṇḍapikākaraṇa
5.	ವೇಲಾಕುಲಕರಣ	Vēlākulakaraṇa
6.	ಜಲಕರಣ	Jalakaraṇa
7.	[ಸ್ಥಲ]ಪಥಕರಣ	[Sthala]pathakaraṇa
8.	ಘಟಿಕಾಗ್ರಹಕರಣ	Ghaṭikāgṛihakaraṇa
9.	ಟಂಕಶಾಲಾಕರಣ	Tankaśālākaraṇa
10.	ದ್ರವ್ಯಭಂಡಾರಕರಣ	Dravyabhandārakaraṇa
11.	ಅಂಕುಶಭಂಡಾರಕರಣ	Ankuśabhaṇḍārakaraṇa
12.	ವಾರಿಗೃಹಕರಣ	Vārigṛihakaraṇa
13.	ದೇವವೇಶ್ಮಕರಣ	Dēvavēśmakaraṇa
14.	ಗಣಿಕಾಕರಣ	Gaṇikākaraṇa
15.	ಹಸ್ತಿಶಾಲಾಕರಣ	Hastiśālākaraṇa
16.	ಅಶ್ವಶಾಲಾಕರಣ	Aśvaśālākaraṇa
17.	ಕಲಭಶಾಲಾಕರಣ	Kalabhaśālākaraṇa
18.	ಶ್ರೇಣಿಕರಣ	Śrēṇikaraṇa
19.	ವ್ಯಾಪಾರಕರಣ	Vyāpārakaraṇa
20.	ತಂತ್ರಕರಣ	Tantrakaraṇa
21.	ಕೋಷ್ಠಾಗಾರಕರಣ	Kōsṭhāgārakaraṇa
22.	ಉಪಕ್ರಮಕರಣ	Upakramakaraṇa
23.	ಕರಾಕರಕರಣ	Karākarakaraṇa
24.	ಸ್ಥಾನಕರಣ	Sthānakaraṇa
25.	ದೇವಕರಣ	Dēvakaraṇa
26.	ಸಂಧಿವಿಗ್ರಹಕರಣ	Sandhivigrahakaraṇa
27.	ಮಹಾಕ್ಷಪಾಲಕರಣ	Mahākshapālakaraṇa
28.	ಮಹಾರಸಕರಣ	Mahārasakaraṇa
29.	ಜಯನಶಾಲಾಕರಣ	Jayanaśālākaraṇa
30.	ಸತ್ರಾಗಾರಕರಣ	Satrāgārakaraṇa
31.	ಅಂತಃಪುರಕರಣ	Antaḥpurakaraṇa
32.	ಕೋಷ್ಠಿಕಾಕರಣ	Kōshṭhikākaraṇa

IEG., p. 146f.

2. ದಾಖಲೆ; Dākhale: ಕಾಗದ ಪತ್ರ; document.

ಸೋಮದೇವಸೂರಿಯ ನೀತಿವಾಕ್ಯಾಮೃತದಲ್ಲಿ (೧೦ನೇ ಶತಮಾನ) ಈ ಐದು ಅಧಿಕಾರಿಗಳನ್ನು ಕರಣಗಳೆಂದು ಹೆಸರಿಸಲಾಗಿದೆ: ಆದಾಯಕ (ಆದಾಯವನ್ನು ಸಂಗ್ರಹಿಸುವವ) ನಿಬಂಧಕ (ಲೆಕ್ಕವನ್ನು ಬರೆದಿಡುವವ) ಪ್ರತಿಕಂಟಕ (ಲೆಕ್ಕತಪಾಸಿಸುವವ) ನಿಧಿಗ್ರಾಹಕ (ಭಂಡಾರದ ಅಧಿಕಾರಿ) ಮತ್ತು ರಾಜಾಧ್ಯಕ್ಷ (ರಾಜ್ಯದ ಮುಖ್ಯಾಧಿಕಾರಿ).

ಇದಕ್ಕೆ ಕನ್ನಡ ಟೀಕೆಯನ್ನು ಬರೆದ ನೇಮಿನಾಥನು (ಸು. ೧೨ನೇ ಶತಮಾನ) ಇವುಗಳಿಗೆ ಸಮಾನಾಂತರವಾಗಿ ಈ ಕನ್ನಡ ಪದಗಳನ್ನು ಕೊಟ್ಟಿದ್ದಾನೆ. ಆದಾಯಕ= ಹೊನ್ನೆತ್ತುವವ; ನಿಭಂಧಕ=ಕಂಟಕ; ಪ್ರತಿಕಂಟಕ= ಮೇಲುಗರಣ; ನಿಧಿಗ್ರಾಹಕ=ಭಂಡಾರಿ; ರಾಜಾಧ್ಯಕ್ಷ= ಅರಸರಧ್ಯಕ್ಷ. (ನೀ.ವಾ., ಕ.ವ್ಯಾಖ್ಯಾನ ೧೮, ೫೦).

Sōmadēvasūri, the author of Nītivākyāmṛita (10th cent. A.D.) names the following five officers as Karaṇas: Ādāyaka, (Collector of incomes), Nibandhaka (Keeper of accounts), Pratikaṇṭaka (Supervisor of accounts), Nidhigrāhaka (Treasurer) and Rājādhyaksha (Chief Secretary of the government). Nēminātha, the author of Kannada commentary on this work (12th cent. A.D.) gives the following equivalents: Ādāyaka (Honnettuvava), Nibandhaka (Kaṇṭaka), Pratikaṇṭaka (Mēlugaraṇa), Nidhigrāhaka (Bhaṇḍāri), Rājādhyaksha (Arasaradhyaksha), (Nī.Vā., Kan. Comm. 18, 50).

ಕಾಜಗಾರ; Kājagāra: ಕಾರ್ಯಕಾರ, ಕಾರ್ಯಕರ್ತ; Secretary; ಮಯಿಸಿಗೆಯ ಕಾಜಗಾರಂ ಚೌಧೋರೆ ಗೊರವಿಶೆಟ್ಟಿಯುಂ; (EI, XIX, 4, 1135).

ಕಾರ್ಯ್ಯಕ; Kāryyaka: s.a. ಕಾರ್ಯಕರ್ತ; Kāryakarta below; ಶ್ರೀಮಂತು ಕಾದವ್ವು ತೈಲಪದೇವನ ಮಗ ರೇಚದೇವನ ಕಾರ್ಯ್ಯಕನು; (EC. VIII(O), Sb.356, 1307).

ಕಾರ್ಯಕರ್ತ; Kāryakarta: ಕಾರ್ಯದರ್ಶಿ, ಪಾರುಪತ್ಯಗಾರ; Secretary, Manager; ಕೃಷ್ಣರಾಜ ಮಹಾರಾಜರಿಗೆ ಕಾರ್ಯಕರ್ತರಾದ ಪೆರುಮಾಳ ಅತಿಕಾರಿ ಚಲ್ಲಯ್ಯನವರಿಗೆ; (EC. IV(R), Ch.89, 1529); ಕೃಷ್ಣರಾಯ

ಮಹಾರಾಯರ ಕಾರ್ಯಕರ್ತುಗಳಾದ... ತಿಮ್ಮರಸರು; (SII. IX, II, 501, 1516; EC. X(O), Kl.147, 1553).

ಕಾರ್ಯಕೆ ಕರ್ತ; Kāryake karta: s.a. ಕಾರ್ಯಕರ್ತ; Kāryakarta; ರಾಮಚಂದ್ರದೇವರ ಕಾರ್ಯಕೆ ಕರ್ತ; (SII. IV, 250, 1521) ನಾರಣಪ್ಪನವರ ಕಾರ್ಯಕೆ ಕರ್ತರಾದ ನಾಗರಸಯ್ಯ; (SII. IX, II, 1527; EC. VI(O), Tk.13, 1545); ಶ್ರೀ ಸದಾಸಿವದೇವ ಮಹಾರಾಯರ ಕಾರ್ಯಕೆ ಕರ್ತರಾದ ಅಳಿಯ ರಾಮರಾಜಯದೇವ (APGAS. IX, 12, 1547).

ಕಾರ್ಯನಿರ್ವಾಹಕ; Kārya-nirvāhaka: s.a. ಕಾರ್ಯಕರ್ತ; Kāryakarta; (SII. IX, II, 507, 1517).

ಕಿಲಾರಿ; Kilāri: ಕ್ಷೀರಾಗಾರಿ; Kshīrāgari; ಹಾಲಿನ ಪೂರೈಕೆಯ ಮೇಲ್ವಿಚಾರಕ; Officer incharge of supply of milk; Diary Officer; ಶ್ರೀ ವೀರ ಹರಿಹರರಾಯಮಹಾರಾಯರ ಕಿಲಾರಿ ಸಾಯಿನಾಯ್ಕನ ಮಗ ದೇವನಾಯ್ಕ; (SII. XVIII, 276, 1407).

ಕೀಲಾಳ್; Kīlāḷ: ಅಡಿಯಾಳು; Aḍiyāḷu; ಕೆಳದರ್ಜೆಯ ಸೇವಕ; Inferior servant; ಓರ್ವ ಕೀಲಾಳ್ ಪಿಡಿಯಿಸಿಕೊಂಡು ಬಂದು; (ಪಂ.ಭಾ. Paṁ.Bhā, VIII,15 ವ, Pr. 10th cent.).

ಕುಳವಾಡಿ; Kuḷavāḍi: ಸೇವಕ; Servant; ಹರಊರ ಗ್ರಾಮದ ಕುಳವಾಡಿ; (EC. VIII(O), Sb.167, 1445).

ಕ್ಷೇತ್ರಪಾಲಕ; Kshētrapālaka: ಪ್ರಾಂತೀಯ ಅಧಿಕಾರಿ; Regional Officer; (EC. VIII(R), V, Hn.132, 12th cent.).

ಕೊಟ್ಟಿಗೆಯವ; Koṭṭigeyava: ಧಾನ್ಯ ಸಂಗ್ರಹಾಲಯದ ಅಧಿಕಾರಿ; Officer incharge of ware house; ಅಯ್ಯ ಕೇಳ್ ಬಳ್ಳೇಶ್ವರನ ಮಲ್ಲಯ್ಯ ಕೊಟ್ಟಿಗೆಯವನು; (ಬ.ಪು. Ba.Pu. II, 8, 46, 14th cent.) Cf. ಕೊಟ್ಟಾರಿ Kittel, S.V., Granery, Store room; ತ. ಕೊಟ್ಟಕಾರ; ತೆ. ಕೊಟ್ಟರಿ, ಕೊಟ್ಟ.

ಕೋಲ್ಗಾಱ; Kōlgāṟa: s.a. ಕೋಲುಕಾರ; Kōlukāra below; ಚೆಣ್ಣಪಯ್ಯನು ಅವರ ಕೋಲ್ಗಾಱ ಗಣಪತಿಯು (EC. XI(O), Dg.141, 1065).

ಕೋಲುಕಾರ; Kōlukāra: ಕಾವಲುಗಾರ, ಸೇವಕ; Watchman, Servant; ನಾಲ್ಕುಂ ಹೆಬ್ಬಾಗಿಲಲುಂ ತಳಭೋಗದ ದೆಸೆಯಿಂ ನಡೆವ ಕೋಲುಕಾಱರು (SII. XV, 60, 1184); ತೆ. ಕೋಲವಾಡ.

ಗವುಡ; Gavuḍa: ಗೌಡ; ಗ್ರಾಮಾಧಿಕಾರಿ; Village Headman; Village Officer; (SII. XX, 224, 1295). Some times written as ಗಉಡ; Gaüḍa; (EC. VII(R), Ng.83, 1270; SII. IX, II, 428, 1405).

ಗವುಡಿ, ಗವುಂಡಿ; Gavuḍi, Gavuṇḍi: ಗವುಂಡ ಶಬ್ದದ ಸ್ತ್ರೀಲಿಂಗ ರೂಪ; ಗೌಡಿಕೆಯನ್ನು ಮಾಡುತ್ತಿದ್ದ ಮಹಿಳೆ; Feminine form of Gavuḍa; Female village officer; ಗೌಡನ ಹೆಂಡತಿ; Wife of a Gauḍa; (SII. XV, 52, 1155; Ibid. 53, 1156).

ಗವುಡಿಕೆ; Gavuḍike: ಗೌಡಿಕೆ; ಗ್ರಾಮದ ಆಡಳಿತಾಧಿಕಾರ; Village Headmanship; (EC. VII(O), Sk.315, 1198; SII. XV, 263, 1553).

ಗವುಂಡ; Gavuṇḍa: s.a. ಗವುಡ; Gavuḍa; ಗೌಡ, Gauḍa; Village Headman; (SII. XI, I, 35, 933; Ibid. XX, 107, 1138; Ibid. XV, 53, 1156; EC. III, Gu.3, 1196).

ಗಾಮುಂಡ, Gāmuṇḍa: s.a. ಗವುಡ; Gavuḍa; (SII. XX, 9, 7th cent.; EC. II, 38, 8th cent.; SII. IX, I, 18, 883-84; Ibid. XX, 15, 904-05).

ಗಾಮುಂಡಿಗ; Gāmuṇḍiga: s.a. ಗಾಮುಂಡ; Gāmuṇḍa; ಗಾಮುಂಡಿಗನೆಡವೊಟಲ್ಲಾಟ್ಕೆ; (EI. XVI, 21, 2B, 2C, 2D, 945-46).

ಗಾಮುಂಡು; Gāmuṇḍu: s.a. ಗವುಡಿಕೆ; Gavuḍike; (EC. X(O), Mb.209, 10th cent.).

ಗಾವುಂಡ; Gāvuṇḍa: s.a. ಗಾಮುಂಡ; Gāmuṇḍa; (SII. XI, I, 43, 970; Ibid. 50, 1138; Ibid. IX, II, 417, 1377).

ಗಾವುಂಡಸಾವಿ; Gāvuṇḍasāvi: s.a. ಗಾವುಂಡಸ್ವಾಮಿ; Gāvuṇḍasvāmi below; ಸುಂಕದ ಗಾವುಂಡ ಸಾವಿಯುಂ; (SII. XVIII, 294, 1177).

ಗಾವುಂಡಸ್ವಾಮಿ; Gāvuṇḍasvāmi: ಗೌಡರ ವರ್ಗದಲ್ಲಿ ಹಿರಿಯ ಅಧಿಕಾರಿ; Officer of higher rank in the category of village headmen; (SII. IX, I, 118, 1057; SII. XV, 65, 1185).

ಗಾವುಂಡಿ; Gāvuṇḍi: s.a. ಗವುಡಿ; Gavuḍi above; (ವಡ್ಡಾ Vaḍḍā, p. 110, l. 23, 10th cent; ಜೀ.ಸಂ. Jī.Saṁ, XI, 39 ವ Pr, 13th cent.).

ಗಾವುಣ್ಡಿಕೆ; Gāvuṇḍike: s.a. ಗವುಡಿಕೆ; Gavuḍike; above; (EC. VII, Hl.14, 1076; SII. XV, 36, 1148).

ಗಾವುಂಡು; Gāvuṇḍu: s.a. ಗೌಡಿಕೆ; Gauḍike below; (EI. XVI, 11A, 1007-08; Ibid. XIX, 29C, 1079; KI. VI, 33, 1195).

ಗ್ರಾಮಕೂಟ, ಗ್ರಾಮಕೂಟಕ; Grāmakūṭa, Grāmakūṭaka: s.a. ಗಾವುಂಡ; Gāvuṇḍa; (EI. IX, 26, 793; Ibid. XVIII, 26, 873; ಆದಿ.ಪು. Ādi.Pu. III, 38ವ Pr. 10th cent.; EC. XI(O), Dg.1, 1123). ಈ ಪದವು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುತ್ತದೆ. This term figures in Kautilya's *Arthaśāstra* (IV, 79, 4).

ಗ್ರಾಮಣಿ; Grāmaṇi: s.a. ಗಾವುಂಡ; Gāvuṇḍa; (SII. XVIII, 159, 1157; ಕು.ವ್ಯಾ.ಭಾ.ಅರಣ್ಯ.ಪ. Ku.Vyā. Bhā.Araṇya Pa, IV, 26, c.1400); Wrongly written as ಗ್ರಾಮಿಣಿ; Grāmiṇi; (SII. IX, II, 655, 1554). ತೆ. ಗ್ರಾಮಣಿ.

ಗ್ರಾಮಪತ್ಥಳಾಧಿಕೃತಲೇಖಾಕರಣ; Grāmapatthaḷādhikṛita-lēkhākaraṇa: ಗ್ರಾಮಂಗಳ ದಾಖಲೆಗಳನ್ನು ಸಿದ್ಧಪಡಿಸುವ ಅಧಿಕಾರಿ; Officer for drafting village documents; (EI. VI, 4, 860).

ಗ್ರಾಮಪತಿ; Grāmapati: s.a. ಗಾವುಂಡ; Gāvuṇḍa above; (EI. VI, 6A, 745).

ಗ್ರಾಮಪಾಳಕ; Grāmapāḷaka: s.a. ಗಾವುಂಡ; Gāvuṇḍa above; (KI. V, 26, 1147).

ಗ್ರಾಮಭೋಗಿಕ; Grāmabhōgika: s.a. ಗಾವುಂಡ; Gāvuṇḍa above; ಗ್ರಾಮಾಧಿಕಾರಿಯೆಂದು ದತ್ತಿಗಳನ್ನು ಅನುಭವಿಸುವ ಅಧಿಕಾರಿ; A person who enjoys the grant as a village officer; (EI. XXIX, 14, 693); Cf. ಗ್ರಾಮಾಧಿಕಾರಿ; Grāmadhikāri below.

ಗ್ರಾಮಮುಖ್ಯ; Grāmamukhya: ಗ್ರಾಮದ ಮುಖ್ಯಸ್ಥರು, ಮಹಾಜನರು; The chief men of the village, the mahājanas; ಗ್ರಾಮ ಮುಖ್ಯರ್ಪ್ರಭುಗಳು ನಖರಂ ನಾಡುಗಳು; (SII. XX, 174, 1187).

ಗ್ರಾಮರಕ್ಷಾಪಾಲಕ; Grāmarakshāpālaka: ಗ್ರಾಮದ ರಕ್ಷಣೆಯ ಅಧಿಕಾರಿ; Police Officer of the village; (SII. XV, 137, 1180).

ಗ್ರಾಮಸಮಯ; Grāmasamaya: ಗ್ರಾಮದ ಪ್ರಮುಖರು; Prominent men in the village; (SII. IX, I, 344, 1278).

ಗ್ರಾಮಾಧಿಕಾರಿ; Grāmādhikāri: s.a. ಗಾವುಂಡ; Gāvuṇḍa above; ಸುವರ್ಣ್ಣನಾಡ ಗ್ರಾಮಾಧಿಕಾರಿ; (KI. II, 24, 1167).

ಗ್ರಾಮಾಧಿನಾಯಕ; Grāmādhināyaka: s.a. ಗ್ರಾಮಾಧಿಕಾರಿ; Grāmādhikāri; ಶ್ರೀಮಂತು ಗ್ರಾಮಾಧಿನಾಯಕಂ ಪ್ರಭುಶಕ್ತಿಗುಣಸಂಪನ್ನನಪ್ಪ ಏಗಗವುಂಡಂಗಂ; (EC. V(O), Ak.142, 1162; SII. XVIII, 68, 1062).

ಗ್ರಾಮಾಧಿಪ; Grāmādhipa: s.a. ಗ್ರಾಮಾಧಿಕಾರಿ; Grāmādhikāri; (SII. XVIII, 68, 1062; EC. XI(O), Dg.3, 1121).

ಗ್ರಾಮಾಧಿಪತಿ; Grāmādhipati: s.a. ಗ್ರಾಮಾಧಿಕಾರಿ; Grāmādhikāri; ಆ ಗ್ರಾಮಾಧಿಪತಿಗಳ ಪ್ರಭಾವ ಮೆಂತೆಂದಡೆ; (EC. VIII(O), Sb.325, 12th cent.; Ibid. III(R), Hg.22, 1253).

ಗುಪ್ತಚರ, ಗುಪ್ತಚಾರ; Guptachara, Guptachāra: ಗೂಢಚಾರ; Spy; (ಮ.ಪು. Ma.Pu.VII, 2, 12th cent; ಕು.ವ್ಯಾ.ಭಾ.ಆದಿ.ಪ. Ku.Vyā.Bhā.Ādi.Pa., XVII, 13, c.1400).

ಗೌಡ; Gauḍa: s.a. ಗವುಡ; Gavuḍa; ಇ ಗೌಡ ಮುಖ್ಯ ಸಮಸ್ತ ಪ್ರಜೆಗಳು; (SII. XX, 226, 1306; Ibid. XV, 257, 1547; Ibid. IX, II, 672, 1561).

ಗೌಡಕಿ, ಗೌಡಿಕೆ, ಗೌಂಡಿಕೆ; Gauḍaki, Gauḍike, Gauṇḍike: ಗೌಡನ ಅಧಿಕಾರ, ಗ್ರಾಮಾಧಿಕಾರ; Village

headmanship; (EC. VII(O), Sh.64, 1132; Ibid, VII(R), Ng. 61, 1138; EC. X(O), Sd.15, 1528).

ಗೌಡು; Gauḍu: s.a. ಗವುಡ; Gavuḍa above; ಬಿರುದರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಗೌಡುಗಳುಂ ಗಾವುಂಡುಸ್ವಾಮಿಗಳುಂ; (SII. XX, 112, 1144); ಪಿರಿಸಿಂಗಿಯ ಗೌಡುಗಳು. (KĪ. I, 24, 1148).

ಗೌಂಡ, ಗೌಂಡು; Gauṇḍa, Gauṇḍu: s.a. ಗವುಡ, ಗಾಮುಂಡ; Gavuḍa, Gāmuṇḍa above; (SII. XX, 32, 1045; Ibid. XV, 33, 1147; Ibid. XX, 135, 1157).

ಗೌಂಡಿ; Gauṇḍi: s.a. ಗವುಂಡಿ, ಗಾಮುಂಡಿ; Gavuṇḍi, Gāmuṇḍi above; ಶ್ರೀಮತು ಕಣಿಯಹಳ್ಳ ಗೌಂಡಿ ಮುಖ್ಯವಾಗಿ; (SII. XV, 121, 1173).

ಚರಮಹತ್ತರ; Charamahattara: (1) ಪ್ರವಾಸದ ಮುಖ್ಯ ಅಧಿಕಾರಿ; Officer of Tourism; (2) ಚರ ಆಸ್ತಿಗೆ ಸಂಬಂಧಿಸಿದ ಅಧಿಕಾರಿ; Officer concerning movable property; (ವ.ಪು. Va.Pu., VII, 21, ವ, Pr. 12th cent.).

ಚಾವಟೆಯರು; Chāvaṭeyaru: ಚಾಟಿ ಹಿಡಿದವರು; ಸುವ್ಯವಸ್ಥೆ ಕಾಯ್ದುಕೊಳ್ಳುವವರು; Men with whips to maintain law and order; (ಕು.ವ್ಯಾ.ಭಾ.ಅರಣ್ಯ.ಪ. Ku.Vyā.Bhā.Araṇya.Pa. XX, 34, C. 1400).

ಚಿಕ್ಕ ಪಾರುಪತ್ಯಗಾರ; Chikka pārupatyagāra: ಆಡಳಿತದ ಕಿರಿಯ ಅಧಿಕಾರಿ; Junior officer of the management; Assistant Manager; (EC. III(R), Gu.119, 1521).

ಚೌಧರಿ, ಚೌಧರೆ, ಚೌಧೊರೆ; Chaudhari, Chaudhare, Chaudhore: ಆಡಳಿತ ವಿಭಾಗದ ಅಧಿಕಾರಿ; Officer of an administrative division; ಆಲಂದೆ ಸಾಸಿರದ ಚೌಧರೆ ರಕ್ಕಸಯ್ಯ ನಾಯಕ; (SII, XVIII, 232, 1249).

ಛತ್ರದ ಪಾರುಪತ್ಯ; Chhatrada pārupatya: ಅನ್ನ ಛತ್ರದ, ಧರ್ಮ್ಮಛತ್ರದ ಆಡಳಿತ; Management of a free feeding house, a free rest house; (EC. VIII(O), Tl.174, 1442).

ಜಲಸೂತ್ರ; Jalasūtra: ನೀರಾವರಿ ತಂತ್ರವಿದ್ಯೆ; Irrigation engineering; ಎಲ್ಲಾ ಪ್ರಜೆಗಳು ಸುಖದಲ್ಲಿ ಇರಬೇಕಾಗಿ ಜೀವಂಗಳಿಗೆಲ್ಲಾ ಉದಕವೆ ಪ್ರಾಣವಾಗಿ ಪೆನುಗೊಂಡೆಗೆ ಹಂನೆಯ ನದಿಯನೂ ತರಬೇಕೆಂದು ಶ್ರೀ ವೀರಪ್ರತಾಪ ಬುಕ್ಕರಾಯ.... ದಶವಿದ್ಯಾಚಕ್ರವರ್ತಿ ಜಲಸೂತ್ರದ ಸಿಂಗಾಯಭಟ್ಟಗೆ ನಿರೂಪವ ಕೊಟ್ಟು ಆ ಸಿಂಗಾಯ ಭಟ್ಟನು ಆ ಕಾಲುವೆಯನು ಸಿರುವೆರೆದ ಕೆರೆಗೆ ತಂದು; (EC. X(O), Gd.6, 1388).

ತಱವಾಳಿಕೆ; Taṟavāḷike: ತಳವಾರಿಕೆಯ ಅಶುದ್ಧ ರೂಪ; Mistake for Taḷawārike below; (EC. XII(O), Ck.2, 1261; Ibid. VII(O), Hl.6, 1390).

ತಳ, ತಳದವರು, Taḷa, Taḷadavaru: ಸ್ಥಳದವರು, ಸ್ಥಳೀಯ ಮುಖ್ಯಸ್ಥರು; Prominent men of a locality; (SII. XX, 78, 1118); ತಳಸಮಸ್ತಮುಂ (SII. XX, 107, 1138).

ತಳಕ್ಕಧಿಪತಿ; Taḷakk-adhipati: ಸ್ಥಳದ ಅಧಿಪತಿ, ಗ್ರಾಮದ ಅಥವಾ ಊರಿನ ಮುಖ್ಯಸ್ಥ; Chief of a town or village; ಎಡದೊರೆನಾಡು ಸಾಯಿರದ ಸೆಟ್ಟಿಕಾರ ಪುರದ ತಳಕ್ಕಧಿಪತಿ; (EC. III(R), Nj.178, 1054).

ತಳಮುಖ್ಯ; Taḷamukhya: ಸ್ಥಳದ ಮುಖ್ಯಸ್ಥ; Chief of a town or locality; (SII. XX, 100, 1129).

ತಳಱ, ತಳವಱ, ತಳಿಱ; Taḷaṟa, Taḷavaṟa, Taḷiṟa: ಗ್ರಾಮದಲ್ಲಿಯ ರಕ್ಷಣಾಧಿಕಾರಿ; Village policeman; ತಳರಂ ಗೊಜ್ಜಿಗ; (EI. XVI, 11A, 1007-08; SII. XX, 55, 1082; EC. XII(O), Si.33, 12th cent. ನೇ.ಪು, Nē.Pu., III, 87, 12th cent.); ತೆ. ತೆಲಾರಿ; Telāri.

ತಳರ ಹೆಗ್ಗಡೆ; Taḷara Heggaḍe: ತಳವಾರರ ಮೇಲಿನ ಅಧಿಕಾರಿ; Head of the Taḷavāra; (SII. XX, 136, 1158).

ತಳಱಿಕೆ; Taḷaṟike: s.a. Taḷavārike below; ತಳವಾರಿಕೆ; Office of the Taḷavāra; ಶ್ರೀ ರಮಣಂ ಮಾಚಯ್ಯಂ ಧೀರಂ ತಳಱಿಕೆಯ ಸುಂಕದಧಿಕಾರಂ.... (EC. VII(O), Sk.242, 1163).

ತಳವಱ; Taḷavaṟa: s.a. ತಳಱ, ತಳವಾಱ; Talaṟa, Taḷavāṟa; (ಅಜಿ.ಪು., Aji.Pu., X, 2 ವ, Pr. 10th

cent. ಶಾಂತೀ ಪು. Śāṁtī Pu. XV, 90, 13th cent.); ಪ್ರಾ. Prā, ತಲವರ, Talavara; ತೆ. ತಳವಾರ, Taḷavāra, ತೆ. ತಲೈವಾರಿ, Talaivāri.

ತಳವಾಱ; ತಳವಾರ; Taḷavāṟa, Taḷavāra: s.a. ತಳಱ; Taḷaṟa; (ಜೀ.ಚ. Jī.Cha., XI, 5, 15th cent.; SII. IX, II, 429; 1405; Ibid. XVIII, 279, 1412).

ತಳವಾರ ನಾಯಕ; Talavāra nāyaka: ತಳವಾರರ ಮುಖ್ಯಸ್ಥ; Chief of the Taḷavāras; (SII. XV, 73, 1189).

ತಳವಾಱಿಕೆ, ತಳವಾರಿಕೆ, Taḷavāṟike, Taḷavārike: ತಳವಾರನ ಹುದ್ದೆ; Office of Taḷavāra; (EC. XII(O), Ck.2, 1261; SII. IX, II, 663, 1537).

ತಳಸಮಸ್ತರು; Taḷa-samastaru: ಊರ ಪ್ರಮುಖರು; Local leaders; (SII. XX, 107, 1138).

ತಳಾಱ; Taḷāṟa: s.a. ತಳವಾರ; Taḷavāra; (ವಡ್ಡಾ, Vaḍḍā, p. 14, l. 1, 10th cent.; ಧರ್ಮಾ, Dharmmā; II, 85; ತಳಾಱನಂ ಕಂಡ ದ್ರೋಹನಂತೆ; Ibid. V, 125, 12th cent.; EC. VI(O), Tk.63, 12th cent.; ನೇ.ಪು., Nē.Pu. III, 81, 12th cent.; SII. XV, 17, 1138); ತಳಾಱ ಮಲ್ಲೆಯನಾಯಕಂ; (SII. XV, 135, 1179; EC. XII(O), Tp.32, 1193; ಯ.ಚ. Ya.Cha. l, 41, 13th cent.).

ತಳಾಱ ನಾಯಕ; Taḷāṟa Nāyaka: ತಳವಾರರ ಮುಖ್ಯಸ್ಥ; Head of the Taḷavāras; ತಳಾಱ ನಾಯಕಂ ಗಂಗರ ಬೋಸಿ; (EI. XVIII, 22G, 1107; ಧರ್ಮಾ; Dharmā. VI, 110 etc. 12th cent., ಯ.ಚ. Ya.Cha. IV, 18, 13th cent.).

ತಳಾಱಿ; Taḷāṟi: s.a. ತಳಾರ; Taḷāra; ಶ್ರೀ ಬ್ರಹ್ಮೇಸ್ವರ ದೇವರ ತಳಾಱಿ ಬಮ್ಮೆಯ ನಾಯಕ; (APGAS. III, A1.34, c.11th cent.).

ತಳಾಱಿಕೆ; Talāṟike: s.a. ತಳವಾರಿಕೆ; Taḷavārike above; (EC. VII(O), Sk.146, 1160; SII. XV, 122, 1173; Ibid. 159, 1213).

ತಂತ್ರಪಾಳ; ತಂತ್ರಪಾಲ; Tantrapāḷa, Tantrapāla: ಆಡಳಿತದ ಅಧಿಕಾರಿ; Officer in charge of administration; administrative officer; (SII. XV, 527, 1022); ಶ್ರೀಮತ್ ತಂತ್ರಪಾಳ ಗಂಗರ ಚಾವುಂಡಮಯ್ಯನಾಯಕ; (HAS. 18, 5, 1052; EC. VII(O), Hl.47, 1130; ಧರ್ಮಾ Dharmā, V, 99, 12th cent; SII. IX, I, 270, 1169).

ಸೋಮದೇವಸೂರಿಯ ನೀತಿವಾಕ್ಯಾಮೃತದಲ್ಲಿ (೧೦ನೇ ಶತಮಾನ) ತಂತ್ರವೆಂದರೆ, ಹಸ್ತಿದಳ, ಅಶ್ವದಳ, ಕಾಲಾಳು ಹಾಗೂ ರಥಗಳನ್ನೊಳಗೊಂಡ ಚದುರಂಗಬಲವೆಂಬ ವ್ಯಾಖ್ಯೆಯಿದೆ. ತಂತ್ರಂ ಚತುರಂಗಬಲಂ, (೧೮, ೧೨) ಇದರ ಪ್ರಕಾರ ತಂತ್ರಪಾಳನೆಂದರೆ ಸಮಸ್ತ ಸೈನ್ಯಾಧಿಕಾರಿ ಎಂದಾಗುತ್ತದೆ.

In Sōmadēvasūri's Nītivākyāmṛita (10th cent. A.D.) tantra is defined as tantraṁ caturangabalaṁ (18., 12) i.e. tantra consists of four wings of the military force *viz.*, elephant squad, cavalry, foot soldiers and charriots. According to this work, tantrapāla means the head of the whole military force or a Chief Commander of the army.

ತಂತ್ರಹಾಳ; Tantrahāḷa: s.a. ತಂತ್ರಪಾಳ; Tantrapāḷa above; (SII. XVIII, 164, 11th cent; Ibid. XV, 45, 12th cent.).

ತಂತ್ರಾಧಿಕಾರಿ; Tantrādhikāri: s.a. ತಂತ್ರಪಾಳ; Tantrapāḷa; (EC. V(O), Ak.172, 1163).

ತಂತ್ರಾಧಿಷ್ಠಾಯಕ; Tantrādhishṭhāyaka: ಆಡಳಿತದ ಮುಖ್ಯ ಅಧಿಕಾರಿ; ಬಹುಶಃ ತಂತ್ರಪಾಲನ ಮೇಲಿನ ಹುದ್ದೆ; Chief of the administration, probably higher in cadre than Tantrapāḷa; Chief administrative officer; ಶ್ರೀಮನ್ ಮಹಾಪ್ರಧಾನಂ ಸರ್ವಾಧಿಕಾರಿ ತಂತ್ರಾಧಿಷ್ಠಾಯಕಂ ಕಮ್ಮಟದ ಮಾಚಯ್ಯ; (EC. II(R), 572, 12th cent.; Ibid. V(O), Ak.157, 1154; Ibid. VIII(R), Hn.61, 1218).

ತಂತ್ರಾಧ್ಯಕ್ಷ; Tantrādhyaksha: s.a. ತಂತ್ರಾಧಿಷ್ಠಾಯಕ; Tantrādhisṭhāyaka; ಚಂ.ಪು. Chaṁ.Pu, X, 1, ವ Pr. 12th cent.).

ತಂತ್ರಾಳಿಪಾಳ; Tantrāḷipāḷa: s.a. ತಂತ್ರಪಾಳ; Tantrapāḷa; (ಶಾಂತೀ ಪು. Śāṁtī Pu., XV, 90, 13th cent.).

ತಂತ್ರಾಳುವ; Tantrāḷuva: s.a. ತಂತ್ರ+ಆಳುವ, Tantra+āḷuva, s.a. ತಂತ್ರಪಾಳ; Tantrapāḷa; (SII. VII, 346, 1475).

ತಂತಿರಪಾಲನ್; Tantirapālan: ತಂತ್ರಪಾಲ ಎಂಬ ಪದದ ತಮಿಳು ರೂಪ; Tamil form of the word Tantrapāla; (EC. X, Mb.53, 1225).

ತ್ರಿವರ್ಗ; Trivarga: ಮೂರು ಅಧಿಕಾರ ವರ್ಗಗಳು (1) ಗಾವುಂಡ (2) ಕ್ಷಿತಿದೇವ(ಅರಸ) (3) ಪುರವರ್ಗ (ಜನರು); The three authorities viz., the Gāvuṇḍa, the king and the people; ಗಾವುಂಡವರ್ಗ್ಗಂ, ಕ್ಷಿತಿದೇವವರ್ಗ್ಗಂ ದೇವ ಬ್ರಜೋದ್ಯತ್ಪುರವರ್ಗವೆಂದಿಂತಾವಿಖ್ಯಾತ ಶ್ರೀವಿಳಸತ್ರಿವರ್ಗ್ಗಂ ಭೂವಂದ್ಯಂ; (SII. XV, 102, 1162).

ದಳಱ, ದಳಾಱ; Daḷaṟa, Daḷāṟa: s.a. ತಳರ, ತಳಾರ; Taḷara, Taḷāra above; ಚಟ್ಟನಹಳ್ಳಿಯ ಮಲ್ಲದಳಾಱ; (EC. VII(O), Sk.289, 1412).

ದಂಡಧರ; Daṇḍadhara: ನಿಯಂತ್ರಣಾಧಿಕಾರಿ; Controlling authority, Governor; (ಅಜಿ.ಪು. Aji.Pu. VIII, 74 ವ, Pr. 10th cent.; Ya.Cha. IV, 22, 13th cent.).

ದಾನಾಧಿಕಾರಿ; Dānādhikāri: ದಾನದತ್ತಿಗಳ ನಿರ್ವಹಣೆಯ ಅಧಿಕಾರಿ; Officer in charge of grants and endowments, Chairty Commissioner; ಮಲ್ಲಿಯ ಪಂಡಿತೇನ ದಾನಾಧಿಕಾರಣಾ ಲಿಖಿತಮಿದಂ ಇತಿ; (EI. XII, 19, 1087).

ದಿವಿರಪತಿ; Divirapati: ದಾಖಲೆಗಳಿಗೆ ಸಂಬಂಧಿಸಿದ ಸಿಬ್ಬಂದಿಯ ಮುಖ್ಯಾಧಿಕಾರಿ; Superintendent of the records office; (EI. XXVIII, 3, 669-70).

ದ್ವಿಸಪ್ತತಿನಿಯೋಗ; Dvisaptatiniyōga: s.a. ಬಾಹತ್ತರ ನಿಯೋಗ; Bāhattaraniyōga below; (APGAS. III, Gb.2, 1058).

ದ್ವೀಪಪಾಲಕ; Dvīpapālaka: ದ್ವೀಪದ ಮುಖ್ಯಾಧಿಕಾರಿ; Officer in charge of an island; (ಕು.ವ್ಯಾ.ಭಾ.ಸಭಾ. ಪ; Ku.Vyā.Bhā.Sabhā.Pa, IV, 12, c.1400).

ದೂತ; Dūta: ವಿಶ್ವಾಸಿಕ; ಸುದ್ದಿಗಳನ್ನು ಮುಟ್ಟಿಸುವವ; Confidential assistant, Messenger; (EI. XXI, 12, 7th cent.).

ದೂತಕ; Dūtaka: ದಾನದತ್ತಿಗಳಿಗೆ ಸಂಬಂಧಿಸಿದ ರಾಜಶಾಸನಗಳನ್ನು ಸಿದ್ಧಪಡಿಸುವ ಅಧಿಕಾರಿ; Officer in charge of drafting royal charters pertaining to the grants; ಲಿಖಿತಮಿದಂ ಚೈತನ್ಯಯಾ ಪರಮೇಶ್ವರಾಜ್ಞಯಾ ಶ್ರೀ ಮಹಾದೇವ್ಯಾನುಮತೇನ ಶ್ರೀ ಜಾಕ್ಕಿರಾಜ ದೂತಕಂ ..... (EI. XXIII, 33A, 807); ದೂತಕೋತ್ರ ಶ್ರೀ ದುರ್ಗರಾಜ: (Ibid. XXII, 13, 824).

ದೂದ; Dūda: s.a. ದೂತ; Dūta above; (ಕ.ಕಾ. Ka.Kā; 131.ವ, Pr. 13th cent).

ದೇಶಾಧಿಕಾರಿ; Dēśadhikāri: ಆಡಳಿತ ವಿಭಾಗದ ಮುಖ್ಯ ಅಧಿಕಾರಿ; Officer in charge of an administrative division; Divisional Commissioner; (SII. XV, 96, 1157; EC. VIII(O), Sb.346, 12th cent.); ದೇಶಾಧಿಕಾರಿಯಪ್ಪ ಪ್ರತಾಪ ಮಲ್ಲುಗಿ ದಂಡನಾಯಕಂ; (SII. XVIII, 296, 1188; KI. I, 30, 1222).

ದೇಶಾಧಿಪತಿ; Dēśādhipati: s.a. ದೇಶಾಧಿಕಾರಿ; Dēśādhikāri; (EI. XIV, 14, 8th cent.; EC. VIII(O), Na.35, 1077; EI. XIX, 29(F), 13th cent.).

ದೇಶಾಧೀಶ; ದೇಶಾಧೀಶ್ವರ; Dēśādhīśa, Dēśādhīśvara: s.a. ದೇಶಾಧಿಕಾರಿ; Dēśādhikāri; (EC. XI(O), Dg.13, 1271; KI. V, 20, 1125).

ದೇಶಾಯಿ, ದೇಸಯಿ, ದೇಸಾಯಿ; Dēśāyi, Dēsayi, Dēsāyi: ಹಲವು ಗ್ರಾಮಗಳ ಉಂಬಳಿಯನ್ನು ಪಡೆದು ನಿರ್ದಿಷ್ಟ ಹಣವನ್ನು ಕರರೂಪವಾಗಿ ಸರಕಾರಕ್ಕೆ ಕೊಡುತ್ತಿದ್ದ ಭೂಮಾಲಿಕ; Land lord holding a fief of a number of villages and giving a specified sum of money by way of tax to the government; ಮಾಯಿಕೊಲ್ಲಾಪುರಂ ದೇಶಾಯಿ; (EC. XII(O), Tm. 51, 1516; SII. XV, 674, 15th cent); ಕುಕನೂರ ಸೀಮೆಯ ದೇಸಾಯಿ ದೇವರಾಯಗೌಡನು; (APGAS. IX, 7, 1561).

ದೇಹರಕ್ಷಕ; Dēharakshaka: ಅಂಗರಕ್ಷಕ; Body guard; (ಕು.ವ್ಯಾ.ಭಾ.ಸಭಾ ಪ. Ku.Vyā.Bhā. Sabhā.Pa, I, 58, c.1400).

ಧರ್ಮಕಶ; Dharmakaśa: ಧಾರ್ಮಿಕ ವಿಷಯಗಳ ಅಧಿಕಾರಿ; Officer in charge of religious affairs; ಧರ್ಮಕಶ ಗೋವಿಂದ ಮಹಾಸಂಧಿವಿಗ್ರಹಿ ನರಸಿಂಗ (EI. XI, 27, 633).

ಧರ್ಮಾಧಿಕರಣ; ಧರ್ಮಾಧಿಕಾರಿ; Dharmādhikaraṇa, Dharmādhikari: ಧಾರ್ಮಿಕ ದಾನ ದತ್ತಿಗಳ ಅಧಿಕಾರಿ, ಧಾರ್ಮಿಕ ದತ್ತಿಗಳ ಶಾಸನಗಳನ್ನು ಬರೆಯುವ ಅಧಿಕಾರಿ; Officer of the religious endowments; officer in charge of writing drafts of religious donations; (EI. X, 19, 775; SII. XI, I, 64, 1028; Ibid. XVIII, 232, 1249; EI. XXX, 15, 1107; KI. V, 63, 1169).

ನಾರ್ಗ್ಗಾವಮುಂಡ, ನಾರ್ಗ್ಗಾವುಂಡ; Nārggāmuṇḍa, Nārggāvuṇḍa: s.a. ನಾಡಗವುಡ; Nāḍagavuḍa below; (SII. XVIII, 45, 1025; Ibid. IX, I, 65, 1028; Ibid. 78, 1045; EI. XXVII, 32, 1115).

ನಾರ್ಗ್ಗಾವುಂಡು; Nārggāvuṇḍu: s.a. ನಾಡಗವುಡಿಕೆ; Nāḍagavuḍike below; (EC. VII(O), Sk.81, 1030; EI. XVI, 24, 1077; EC. VII(O), 204, 1090).

ನಾಡಕರಣ; Nāḍakaraṇa: ಆಡಳಿತ ವಿಭಾಗವೊಂದರ ಲೆಕ್ಕ ಪತ್ರಗಳನ್ನಿಡುವ ಅಧಿಕಾರಿ, Officer in charge of keeping the accounts of an administrative division, Divisional Accountant; (SII. XVIII, 48, 1033; Ibid. XV, 96, 1157).

ನಾಡಕಾರ; Nāḍakāra: ಬಹುಶಃ ನಾಡಕರಣ ಶಬ್ದದ ಸಮಾನಾರ್ಥ ಪದ; Probably a synonym of Nāḍakaraṇa; (EC. III(R), Nj.359, 12-13th cent).

ನಾಡಕೊಂಡೆಯ; Nāḍakoṇḍeya: ಬಹುಶಃ ನಾಡಿನಲ್ಲಿಯ ಪ್ರಮುಖ ವ್ಯಕ್ತಿ; Probably, prominent man in the region; ಮನ್ನೆಯರೂರಾಳ್ವರಸರಕ್ಕು ನಾಡಕೊಣ್ಡೆಯರ ಕ್ಕಿನ್ನಾರಾದೊಡಮೀ ಧರ್ಮ್ಮಮನಱಿದು ..... (APGAS. IX, 22, 1123).

ನಾಡಗಉಡ, ನಾಡಗವುಡ, ನಾಡಗವುಂಡ; Nāḍagauḍa, Nāḍagavuḍa; Nāḍagavuṇḍa: ಆಡಳಿತ ವಿಭಾಗದ ಅಧಿಕಾರಿ; Officer in charge of an administrative division; Divisional Commissioner; (SII. XX, 226, 1306; EC. IX(O), Ma.59, 1317; SII. XVIII, 421, 1500; EC. X(O), Sd.79, 1523; SII. XX, 238, 1547).

ನಾಡಗವುಡಿಕೆ; Nāḍagavuḍike: ಆಡಳಿತ ವಿಭಾಗದ ಅಧಿಕಾರ; Headship of an administrative division; (APGAS. IX, 7, 1561).

ನಾಡಗಾವುಂಡ; Nāḍagāvunda: s.a. ನಾಡಗವುಡ; Nāḍagavuḍa; (EC. III(R), Nj.241, 1027-28).

ನಾಡಚೌಧೊರೆ; Nāḍa-chaudhore: s.a. ನಾಡಗವುಡ; Nāḍagavuḍa; (SII. XVIII, 232, 1249); Cf. ಚೌಧರೆ above.

ನಾಡ ತಳವಾಱಿಕೆ; Nāḍa-taḷavāṛike: ಆಡಳಿತ ಪ್ರದೇಶದ ತಳವಾರನ ಅಥವಾ ರಕ್ಷಣಾ ಅಧಿಕಾರಿಯ ಹುದ್ದೆ; Office of the Taḷavara or Security officer of an administrative division; (SII. IV, 255, 1513).

ನಾಡಧ್ಯಕ್ಷ; Nāḍadhyaksha: ನಾಡಿನ ಪ್ರಮುಖರ ಸಭೆಯ ಅಧ್ಯಕ್ಷತೆ; Headship of the assembly of prominent men in a region; ಅಯ್ಚಣನ ಪುದ್ಧನ ನಾಡಧ್ಯಕ್ಷದೆ ಮಾಡಿದ ಶಾಸನ; (SII. IX, I, 60, 931).

ನಾಡಧಿಕಾರ; Nāḍadhikāra: s.a. ನಾಡಗವುಡಿಕೆ; Nāḍagavuḍike; ತೈಲಪದೇವರು ಕಾರುಣ್ಯಂಗೈದು ಬನವಾಸಿನಾಡಧಿಕಾರಮಂ ಕುಡೆ; (SII. XVIII, 133, 1127).

ನಾಡಧಿಕಾರಿ; Nāḍādhikāri: ಆಡಳಿತ ಪ್ರದೇಶದ ಮುಖ್ಯ ಅಧಿಕಾರಿ; Head of an administrative unit; (SII. XV, 9, 1125); ಬೆಳ್ವೊಲ ನಾಡಧಿಕಾರಿ ಶ್ರೀ ಕರಣಂ.... ತೇಜಿರಾಜಂ; (APGAS. III, Rc.12, 1170); ತಱಿಕಾಡ ನಾಡಧಿಕಾರಿ ಮೈದುನರ ವಳಿಯ; (EI. XV, 20, 1172; SII. XV, 102, 1162; Ibid. 134, 1178; Ibid. 143, 1181; Ibid. XX, 175, 1190). Cf. ನಾಡಗವುಡ above.

ನಾಡಪ್ರಭು; Nāḍa-prabhu: s.a. ನಾಡಗವುಡ; Nāḍagavuḍa; (SII. XX, 100, 1129; Ibid. XVIII, 246, 1263; EC. VIII(O), Tl.28, 1376); ನಾಡಪ್ರಭು ಹಳಿಗೆಜೆಯ ಮಲ್ಲಪ್ಪಗಳು; (SII. XV, 651, 14th cent.).

ನಾಡವೆಗ್ಗಡೆ; ನಾಡಪೆರ್ಗ್ಗಡೆ; Nāḍaveggaḍe, Nāḍaperggade: s.a. ನಾಡಗವುಡ; Nāḍagavuḍa;

ಕರಹಾಡನಾಡವೆಗ್ಗಡೆ ದಂಡನಾಯಕ ಚಾವುಂಡಯ್ಯ; (KI. II, 13, 1115); ನಾಡಪೆರ್ಗ್ಗಡೆ ಹೆಮ್ಮಿಶೆಟ್ಟಿ (EI. XIX, 48, 1143; SII. XV, 12, 1120).

ನಾಡ ಮೇಲಾಳ್ಕೆಯರಸು; Nāḍa-mēlāḷkeyarasu: ಆಡಳಿತ ವಿಭಾಗದ ಮೇಲಧಿಕಾರಿ; Superintending Officer of an administrative division; (SII. XVIII, 180, 1168).

ನಾಡರಾಜ್ಯಾಧ್ಯಕ್ಷ; Nāḍa-rājyādhyaksha: ಆಡಳಿತ ವಿಭಾಗದ ಶ್ರೇಷ್ಠ ಅಧಿಕಾರಿ; Chief Officer of an administrative division; (EC. VIII(O), Sb.109, 1079).

ನಾಡಸರ್ವ್ವಾಧಿಕಾರಿ; Nāḍa-sarvvādhikāri: ಆಡಳಿತ ವಿಭಾಗವೊಂದರ ಆಡಳಿತದ ಸರ್ವೋಚ್ಚ ಅಧಿಕಾರಿ; Highiest officer in charge of the administrative division; Chief Secretary, (EC. IX(O), Nl.63, 12th cent.).

ನಾಡಸೌದರೆ; Nāḍa-saudare: s.a. ನಾಡಚೌಧೊರೆ; Nāḍachaudhore above; ಆಡಳಿತ ವಿಭಾಗದ ಚೌದೊರೆ; Chaudhore of an administrative division; (SII. XX, 175, 1190); See ಚೌಧೊರೆ; Chaudhore above.

ನಾಡಹೆಗ್ಗಡೆ; Nāḍa-heggaḍe: s.a. ನಾಡವೆರ್ಗ್ಗಡೆ; Nāḍaverggaḍe; ಕೇತಗಲುಡ ನಾಡಹೆಗ್ಗಡೆಗುಂ; (EC. XI(O), Cd.6, 1338).

ನಾಡಹೆಗ್ಗಡೆತನ; Nāḍa-heggaḍetana: s.a. ನಾಡಗೌಡಿಕೆ; Nāḍagauḍike; ಹೊನ್ನೆಯಕೆರೆಯ ಮಾರಗವುಡಂಗೆ ನಾಡಹೆಗ್ಗಡೆತನವಂ ಕೊಟ್ಟವು; (EC. XI(O), Hk.137, 1307).

ನಾಡಸೇನಬೋವ; Nāḍā-sēnabōva: ಒಂದು ಆಡಳಿತ ಪ್ರದೇಶದ ಲೆಕ್ಕಪತ್ರಗಳ ಅಧಿಕಾರಿ; Accounts officer of an administrative division; (SII. XI(O), Cd.6, 1338).

ನಾಯಕವಾಡಿ; Nāyakavāḍi: ಗ್ರಾಮದ ಮುಖ್ಯಾಧಿಕಾರಿ; Headman of a village; ತಳವಾರಿಕೆಗೆ ಸಲುವ ಅಂಬಲಿ ವುಡುಗೊರೆ ಗೌಡುಂಬಳಿ ಸಹವಾಗಿ ಆ ನಾಯಕವಾಡಿಗಳು ಕೊಡುವ ಹುಟ್ಟುವಳಿ ಪ್ರಾಕು ಪ್ರಮಾಣ ವರಹ ಗ. (EC. VII(O), Sh.71, 1431; ಕು.ವ್ಯಾ.ಭಾ.ಸಭಾ ಪ, Ku.Vyā.Bhā.Sabhā.Pa. XVI, 73, c.1400).

ನಾಯಕಿತಿ; Nāyakiti: ನಾಯಕನ ಹೆಂಡತಿಯ ಬಿರುದು; Title of the wife of a Nāyaka; ಸರ್ಬ್ಬಾಧಿಕಾರಿ ಪುರುಸೋತಮನಾಯಕನ ನಾಯಕಿತಿ ಹಿರುಬಾಯಿ ಮಾಡಿದ ಧರ್ಮ್ಮ; (SII. XV, 168, 1223; SII. XX, 94, 12th cent.)

ನಾಳ್ಪ್ರಭು; Nāḷprabhu: s.a. ನಾಡಪ್ರಭು; Nāḍaprabhu; (EC. VIII, Sb.170, 1126; SII. XV, 36, 1148; Ibid. XVIII, 163, 1186); ಮೇಘಚಂದ್ರ ಭಟ್ಟಾರಕದೇವರ ಗುಡ್ಡ ನಾಳ್ಪ್ರಭು ಕಸಪಗಾವುಂಡನ ನಿಶಧಿ; (KI. V, 47, 1205; ಯ.ಚ. Ya.Cha. IV, 87, 13th cent.; ಪು.ಪು. Pu.Pu. I, 76, 13th cent.; Sometimes written as ನಾಳಪ್ರಭು, ನಾಳುಪ್ರಭು; Nāḷaprabhu, Nāḷuprabhu; KI. V, 54, 1148; EC. IV(R), Hn. 137, 1162).

ನಾಳ್ಪ್ರಭುತನ, ನಾಳ್ಪ್ರಭುತ್ವ; Nāḷprabhutana, Nāḷprabhutva: s.a. ನಾಡಗೌಡಿಕೆ; Nāḍagauḍike; ಕೇಶವಗೌವುಂಡಂ ನಾಳ್ಪ್ರಭುತ್ವದಿಂ; (EI. XVI, 11C, 1066; EC. VIII(O), Sb.399, 12th cent.).

ನಾೞ್ಗಾಮುಂಡ; ನಾೞ್ಗಾವುಂಡ, ನಾಳ್ಗಾಮುಂಡ, ನಾಳ್ಗಾವುಂಡ; Nāḻgāmuṇḍa, Nāḻgāvuṇḍa; Nāḷgāmuṇḍa, Nāḷgāvuṇḍa: s.a. ನಾಡಗವುಡ; Nāḍagavuḍa above; (EI. XIV, 14, 8th cent.; EC. II, 38, 8th cent.; KI. I, 14, 866; SII. XX, 15, 904; Ibid. XX, 35, 1055; EC. VI, Kd.22, 1096).

ನಾೞ್ಗಾಮುಂಡು; ನಾಳ್ಗಾವುಂಡು; Nāḻgāmuṇḍu, Nālgāvuṇḍu: s.a. ನಾಡಗವುಡಿಕೆ; Nāḍagavuḍike; ಶ್ರೀಮತ್ಪಾನುಂಗಲ್ಲಣ್ಣಿಗನ ನೂಱಕ್ಕೆ ನಾೞ್ಗಾಮುಂಡುಗಯೆ (EI. XVI, 21(I), 895; Ibid. 11A, 1107-08).

ನಿಧಿನಿಧಾನನಿಕ್ಷೇಪಸಹಸ್ರದಂಡಗ್ರಾಹಕ; Nidhi-Nidhāna-Nikshēpa-Sahasra-daṇḍagrāhaka: ಭೂಗತ ನಿಧಿಯ ಅಧಿಕಾರಿ; Officer of hidden treasure and property under ground; Treasuretrove officer; (EC. XI(O), Cd. 29, 970). Cf. SII. XVIII, 133, line 22, 1127.

ನಿಯುಕ್ತ, ನಿಯಕ್ತಕ; Niyukta, Niyuktaka: ರಾಜ್ಯದ ಪ್ರಮುಖ ಅಧಿಕಾರಿ; Important officer of the State; (EI. XXII, 17, 786; Ibid. XXXIV, 19, 805; XXXVI, 29, 915; ಆದಿ.ಪು. Ādi.Pu, V, 2 ವ Pr. 10th cent.; EC. XI(O), Dg.1, 1123).

ನಿಯೋಗ; Niyōga: (1) ರಾಜಕಾರ್ಯ; ಆಡಳಿತದ ಒಂದು ಖಾತೆ; A Department of the Government; ಹೆಗ್ಗಡಿಕೆ ಬಂಡಾರಿಕೆ ನಿಯೋಗವೆರಡಕ್ಕಂ; (EC. XII(O), Ck.2, 1261; KI. V, 44, 1263; ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā Pa. VII, 15, c.1400); (2) ರಾಜಾಜ್ಞೆ; Royal Order; (ಆದಿ.ಪು. Ādi.Pu. VIII, 63, ವ. Pr. 10th cent.). Cf. ಬಾಹತ್ತರ ನಿಯೋಗ, Bāhattaraniyōga, below.

ನಿಯೋಗಿ; Niyōgi: ಅಧಿಕಾರಿ, ಆಡಳಿತ ಖಾತೆಯ ಮುಖ್ಯಸ್ಥ; An officer, Head of a Department; (ವಡ್ಡಾ; Vaḍḍā, p.12, l.21, 10th cent.; ಅಜಿ.ಪು. Aji.Pu.VI, 7, 10th cent.); ಮಹಾವಿಭವದ ಕಾರ್ಯಸಿದ್ಧಿಗೆ ಧುರಂಧರನಾದ ನಿಯೋಗಿ ಮಾಧವ; (KI. V, 14, 1099); ಪ್ರಧಾನ ಖಂನುವಪಂಡಿತ ಶ್ರೀಕರಣ ನಾಗರಸನುಂ ಸುಂಕಾಧಿಕಾರಿ ಮೈಳುಗಿದೇವನು ಸಮಸ್ತ ನಿಯೋಗಿಗಳು; (SII. XVIII, 223, 1244; ಕು.ವ್ಯಾ.ಭಾ.ಸಭಾ ಪ. Ku.Vyā.Bhā Sabhā Pa. I, 49, c.1400).

ನಿಯೋಗಿವರ್ಗ; ನಿಯೋಗಿಜನ; Niyōgivarga; Niyōgijana: ಅಧಿಕಾರಿಗಳು, ಅಧಿಕಾರವರ್ಗ; Officers of the State; (ಪಂ.ರಾ. Paṁ.Rā, VI, 74, 12th cent.; ಕು.ವ್ಯಾ.ಭಾ.ಅರಣ್ಯ.ಪ. Ku.Vyā.Bhā.Araṇya Pa., IX, 32, c.1400).

ಪಟ್ಟಣಪತಿ; Paṭṭaṇapati: ನಗರದ ಆಡಳಿತದ ಮುಖ್ಯಾಧಿಕಾರಿ; Chief officer of a town; Mayor; (APGAS. III, Gb.3, 1062); ತ್ರೈಲೋಕ್ಯ ಸತ್ಪ್ಪಟ್ಟಣಪತಿಪದವಂ ಮಾಧವಂಗಿತ್ತರೊಳ್ಪಿಂ; (EC. V(O), Ak.79, 1184).

ಪಟ್ಟಣಪ್ರಭು; Paṭṭaṇaprabhu: s.a. ಪಟ್ಟಣಪತಿ; Paṭṭaṇapati; ಪಟ್ಟಣಪ್ರಭು ಮಹಾಪಸಾಯಿತಂ . . . . ಮೂಕಯ್ಯಗಾವುಂಡನಾತನ . . . (SII. XV, 122, 1173); Cf. ನಾಳ್ಪ್ರಭು.

ಪಟ್ಟಣವೆರ್ಗ್ಗಡೆ; Paṭṭaṇaverggaḍe: s.a. ಪಟ್ಟಣಪತಿ; Paṭṭaṇapati; ಪಟ್ಟಣವೆರ್ಗಡೆ ಕೇಶಿರಾಜನುದ್ಧತೇಜಂ; (SII. XV, 102, 1162).

ಪಟ್ಟಣಸಾವಿ; Paṭṭaṇasāvi: s.a. ಪಟ್ಟಣಸ್ವಾಮಿ; Paṭṭaṇasvāmi below; ಪಟ್ಟಣಸಾವಿ ಹನುಮಂತ ಸೆಟ್ಟಿಯುಂ; (EC. VII(O), Sk.106, 1048).

ಪಟ್ಟಣಸಾವಿತನ; Paṭṭaṇasāvitana: ಪಟ್ಟನಸ್ವಾಮಿಯ ಹುದ್ದೆ; Office of the Paṭṭaṇasvāmi; (EC. VII(O), Sk.106, 1048).

ಪಟ್ಟಣಸ್ವಾಮಿ; Paṭṭaṇasvāmi: ಪಟ್ಟಣದ ಮುಖ್ಯಾಧಿಕಾರಿ; Chief of a town; (SII. XVIII, 279, 1412).

ಪಟ್ಟಣಸೇನಬೋವ; Paṭṭaṇasēnabōva: ನಗರದಲ್ಲಿಯ ಲೆಕ್ಕಪತ್ರಗಳ ಅಧಿಕಾರಿ; Accounts officer of a town; Municipal accounts officer; (EC. XI, Cd.6, 1338).

ಪಟ್ಟಣಾಧಿಪತಿ; Paṭṭaṇādhipati: s.a. ಪಟ್ಟಣಪತಿ; Paṭṭaṇapati above; ಪಟ್ಟಣಾಧಿಪತಿ ಹಡವಳ ಬಸವಯ್ಯಂ; (SII. XV, 72, 1187-88).

ಪತ್ತಳೆಕರಣ, ಪತ್ಥಳೆಕರಣ; Pattaḷekaraṇa, Patthaḷekaraṇa: ದಾಖಲೆಗಳ ಮತ್ತು ರಾಜಶಾಸನಗಳ ಅಧಿಕಾರಿ; Officer in charge of documents and royal orders; ಶ್ರೀಮನ್ಮಹಾಪ್ರಧಾನಂ ಸಾವಾಸಿಗಳಧಿಷ್ಠಾಯಕಂ ಮನೆವೆರ್ಗ್ಗಡೆ ಪತ್ತಳೆಕರಣ ದಂಡನಾಯಕ ಭೀವಣಯ್ಯಂಗಳು; (SII. XI, II, 139, 1095; EI. XVI, 8A, 1102; SII. XX, 74, 1127). ಪತ್ಥಳೆ > ಪತ್ರಿಕಾ; Patthaḷe > Patrikā (Sk).

ಪತ್ಥಳೆವೆರ್ಗ್ಗಡೆ, Pathaḷeverggaḍe: s.a. ಪತ್ಥಳೆಕರಣ; Pathaḷekaraṇa; ಪತ್ಥಳೆವೆರ್ಗ್ಗಡೆ ಭೋಗವಾರಯ್ಯನುಂ; (EI. XXXVI, 28, 1048).

ಪತ್ರಹಸ್ತ; Patrahasta: ಅಧಿಕಾರ ಪಡೆದವ; Person holding a letter of authority; ಅಚ್ಚಿನ ಕೇಣಿಯಲು ಪತ್ರಹಸ್ತರಾದಲ್ಲಿ; (SII. XV, 61, 1184).

ಪಂಚಪ್ರಧಾನ; Pañchapradhāna: ರಾಜ್ಯದ ಪ್ರಮುಖ ಅಧಿಕಾರಿಗಳು; ಸಾಂಪ್ರದಾಯಿಕವಾಗಿ ಅವರ ಸಂಖ್ಯೆ ಐದು ಎಂದು ಪರಿಗಣಿಸಲ್ಪಡುತ್ತಿದ್ದಿತು. High officers of the State, conventionally held to be five in number; (EC. VIII(O), Sg.96, 1300).

ಪಂಚಪ್ರಧಾನನಾಯಕ; Pañchapradhānanāyaka: ಪಂಚಪ್ರಧಾನರಲ್ಲಿ ಪ್ರಮುಖ, ಮುಖ್ಯಸ್ಥ; Chief among the Pañchapradhānas; (EC. VIII, Sg.96, 1300).

ಪಂಚಲೋಹಾಧಿಪತಿ; Pañchalōhādhipati: ಲೋಹಗಳ ಸಂಬಂಧದ ಅಧಿಕಾರಿ; Officer relating to metals;

ಪಂಚಲೋಹಾಧಿಪತಿಗಳುಂ ತತ್ಸುಂಕಪರಿರಕ್ಷಿತರುಮಪ್ಪ ಶ್ರೀಮತ್ಕಟಕದ ಮಹಾನಗರದೊಳಗಣ ಗುಣವರ್ಮ್ಮಶೆಟ್ಟಿ; (EC. VII(O), Sk.133, 1331).

ಪ್ರತಿನಿಧಿ; Pratinidhi: ಕಾರ್ಯದರ್ಶಿ, ದೂತ; Representative, Secretary, Agent, Ambassador; (EI. XVIII, 22M, 1162).

ಪ್ರಧಾನ; Pradhāna: ರಾಜ್ಯದ ಪ್ರಮುಖ ಅಧಿಕಾರಿ, ಸಾಮಾನ್ಯವಾಗಿ ಮಂತ್ರಿ ಅಥವಾ ಪ್ರಧಾನ ಮಂತ್ರಿಯೆಂದು ಪರಿಗಣಿಸಲಾಗುತ್ತದೆ; High officer in the State generally translated as Minister or Prime Minister; (EI. IV, 6A, 945; HAS. XVIII, 3, 1027; EI. XXXVI, 28, 1048; SII. VII, 230, 1433).

ಪ್ರಧಾನ ವರ್ಗ್ಗ; Pradhāna-vargga: ಪ್ರಮುಖ ಅಧಿಕಾರಿಗಳ ಮಂಡಳ, ಮಂತ್ರಿಮಂಡಳ; Council of officers, Council of Ministers; (ನೇ.ಪು. Nē.Pu. II, 196, 4, 11th cent.).

ಪ್ರಧಾನಾಮಾತ್ಯ; Pradhānāmātya: ರಾಜ್ಯದ ಸರ್ವೋಚ್ಚ ಅಧಿಕಾರಿ, ಸಾಮಾನ್ಯವಾಗಿ ಪ್ರಧಾನ ಮಂತ್ರಿ ಎಂದು ಪರಿಗಣಿಸಲಾಗುತ್ತದೆ. Highiest officer of the State, generally translated as Prime Minister; (EI. III, 40, 1008).

ಪ್ರಧಾನಿ; Pradhāni: s.a. ಪ್ರಧಾನ; Pradhāna above; (EI. III, 45, 1210).

ಪ್ರಧಾನಿಕೆ; Pradhānike: ರಾಜ್ಯದ ಪ್ರಮುಖ ಅಧಿಕಾರಿಯ ಹುದ್ದೆ; Office of the high officer of the State; ಕರಿಸೆಟ್ಟಿಯರ ಪ್ರಧಾನಿಕೆಯಲ್ಲಿ; (EC. VIII(O), Sb.446, 15th cent.); ವೈಜಪಸಾಹಣಿಯ ಪ್ರಧಾನಿಕೆಯಲು; (KI. III, I, 2, 1331; SII. VII, 312, 1336; Ibid. 211, 1407).

ಪ್ರಭು; Prabhu: ಮುಖ್ಯಾಧಿಕಾರಿ - ಊರ ಪ್ರಭು - ನಾಡಪ್ರಭು ಇತ್ಯಾದಿ; Chief of village or town or a division such as Ūraprabhu, Nāḍaprabhu etc.; ಯೆರಡು ಹನ್ನೆರಡಱ ಪ್ರಭುಗಳು; (SII. IX, I, 338, 1221); ತೊರಂಟಿಗೆಯ ಪ್ರಭು ಕನ್ನಪಯ್ಯ ಸೆಟ್ಟಿ; (EI. XIX, 4A, 1136; SII. XX, 134, 1129; SII. XV, 58, 1184; Ibid. XX, 215, 1248). Cf. ನಾಳ್ಪ್ರಭು, Nāḷprabhu above.

ಪ್ರಭುತನ, ಪ್ರಭುತ್ವ; Prabhutana, Prabhutva: ಪ್ರಭುವಿನ ಅಧಿಕಾರ; Office of the Prabhu; ಅಂನ್ತಪಾನುಂಗಲಯ್ಯೂಱಕ್ಕಂ ಪ್ರಭುತನಂ ಗೆಯ್ವುತ್ತಮಿರೆ; (EI. XVI, 11B, 1037); ಸಿಂನಿಖೇಡದ ಪ್ರಭುತ್ವ; (KI. II, 16, 1122; APGAS. IX, 23, 1134; EC. VII(R), Ng.72, 1183).

ಪಾತ್ರ; Pātra: ಉಚ್ಚ ಅಧಿಕಾರಿ; A high officer; ಶ್ರೀನಾಥರಾಜನ ಲಕ್ಷ್ಮೀಪತಿರಾಜ ಪಶ್ಚಿಮಬಾಲಚಂದ್ರ ಮಹಾಪಾತ್ರ ಇವರು ಮೊದಲಾದ ಪಾತ್ರ ಸಾಮಂತರನು; (SII. IX, II, 500, 1515).

ಪಾರುಪತ್ಯ; Pārupatya: ಆಡಳಿತ ನಿರ್ವಹಣೆ; ವ್ಯವಹಾರಗಳನ್ನು ನೋಡಿಕೊಳ್ಳುವುದು; Looking after administrative affairs, Management; (KI. I, 58, 1446); ನಾಗರಸಯನವರು ಕೋಟೂರಸೀಮೆಯನು ಪಾರುಪತ್ಯವನು ಮಾಡುವಾಗ; (SII. IX, 522, 1527; Ibid. 586, 1538; EC. VI(O), Mg.40, 1512).

ಪಾರುಪತ್ಯಗಾರ; Pārupatyagāra: ಆಡಳಿತಗಾರ; ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿ; Administrator, Manager; (EC. IV(R), Ch.161, 1549).

ಪ್ರಾಣಾಧಿಕಾರಿ; Prāṇādhikāri: ವೈದ್ಯಾಧಿಕಾರಿ; Physician, Medical Officer; ವಿಷ್ಣುವರ್ಧನದೇವನನ್ವಯ ಮರಿಯಾನೆದಂಡನಾಯಕನುಂ ಭರತಣದಂಡನಾಯಕನುಂ ಸರ್ಬ್ಬಾಧಿಕಾರಿಗಳುಂ ಮಾಣಿಕಭಂಡಾರಿಗಳುಂ ಪ್ರಾಣಾಧಿಕಾರಿಗಳುಮಾಗಿ ಸುಖದಿಂ ಸಲುತ್ತಮಿರೆ; (EC. VII(R), Ng.72, 1184) Cf. ಪ್ರಾಣಾಚಾರ್ಯ; Prāṇāchārya (EI. VIII, 14, 1130; HD. III, p.992).

ಪಿರಿಯ ಸೇನಬೋವ; Piriya Sēnabōva: ಹಿರಿಯ ಸೇನಬೋವ; Senior Sēnabōva; ಪಿರಿಯ ಸೇನಬೋವಂ . . . ಕೇಶವದೇವಣ್ಣಂಗಳು; (KI. II, 10, 1080); For ಸೇನಬೋವ; Sēnabōva see below.

ಪುರಜನ; Purajana: ನಾಗರಿಕ, ನಗರದ ಜನ; Citizens; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā Pa, I, 9, c.1400).

ಪುರದ ಪೆರ್ಗ್ಗಡೆ; Purada perggaḍe: ನಗರದ ಮುಖ್ಯಾಧಿಕಾರಿ; Headman of a town; Mayor; ಪುರದ ಪೆರ್ಗ್ಗಡೆಗೆ ಮತ್ತರಾರು; (EI. XIII, 14, 1055).

ಪುರಪತಿ; Purapati: s.a. ಪುರವೆರ್ಗ್ಗಡೆ; Puraverggaḍe below; (EC. IX(O), Ma.78, 1219).

ಪುರಪರಮೇಶ್ವರ; Puraparamēśvara: ನಗರದಲ್ಲಿಯ ಪ್ರತಿನಿಧಿ ಮಂಡಳದ ಸದಸ್ಯರು; Members of the representative assembly in a town; ಅಯ್ಯಾವೊಳೆಯ ಪುರಪರಮೇಶ್ವರರುಮಪ್ಪ; (SII. IX, I, 118, 1057, 13th cent.).

ಪುರಪ್ರಧಾನ; Purapradhāna: s.a. ಪುರಪತಿ; Purapati; (ಜೀ.ಸಂ. Jī.Saṁ, XI, ವ. Pr. 13th cent.).

ಪುರವಲ್ಲಭ; Puravallabha: s.a. ಪುರಪತಿ; Purapati; (KI. II, 26, 1174).

ಪುರವೆರ್ಗ್ಗಡೆ; Puraverggaḍe: s.a. ಪುರಪತಿ; Purapati; (KI. VI, 15, 1100-01).

ಪುರೋಹಿತ; Purōhita: ಅರಮನೆಯಲ್ಲಿ ವಿದ್ವತ್ತಿನಿಂದ ಗೌರವಾನ್ವಿತ ವ್ಯಕ್ತಿ; ಧಾರ್ಮಿಕ ವಿಷಯಗಳಲ್ಲಿ ಸಲಹೆಗಾರ; Highly respected person in the palace for his learning; Advisor in religious matters; (EI. XXXVI, 28, 1048; Ibid. XXX, 15, 1107; KI. V, 63, 1169; SII. IX, II, 465, 1472; Ibid. 504, 1516).

ಪುರೋಹಿತತ್ವ; Purōhitatva: ಪೌರೋಹಿತ್ಯ; ಪುರೋಹಿತಪದ, ಪುರೋಹಿತ ಹುದ್ದೆ; Paurōhitya, Office of Purohita; (EC. V(O), Ak.127, 1185).

ಪೆರ್ಗ್ಗಡೆ; Perggaḍe: ಗ್ರಾಮದ, ನಗರದ ಅಥವಾ ಪ್ರದೇಶದ ಮುಖ್ಯಸ್ಥ, ಮುಖ್ಯ ಅಧಿಕಾರಿ; Head of a village, town or territory; Cf. ಪುರವೆರ್ಗ್ಗಡೆ, ನಾಡವೆರ್ಗ್ಗಡೆ, Puravergaḍe, Nāḍaverggaḍe ಇತ್ಯಾದಿ; (EC. III(R), Hg.31, 8th cent.; SII. IX, I, 21, 9th cent.; Ibid. VIII, 41, 996; ಶಾಂ.ಪು. Śāṁ.Pu. II, 74, ವ Pr. 10th cent; SII. XX, 111, 1140). ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. Mentioned in numerous inscriptions.

ಪೆರ್ಗ್ಗಡೆಕಾರಿ; Perggaḍekāri: ಬಹುಶಃ ಪೆರ್ಗ್ಗಡೆಕಾರ, ಪೆಗ್ಗಡೆತನವನ್ನು ಮಾಡುವವ; Probably perggaḍekāra; A person holding the office of perggaḍe; (EC. XI(O), Dg.20, 1045).

ಪೆರ್ಗ್ಗಡೆತನ; Perggaḍetana: ಪೆರ್ಗ್ಗಡೆಯ ಅಧಿಕಾರ; Office of perggaḍe; (EC. VIII(O), Sb.570, 952); ಮಾರಮಯ್ಯಂ ಪೆರ್ಗ್ಗಡೆತನಂಗೆಯ್ಯೆ; (EI. XVI, 21, 895; SII. XX, 35, 1055; EC. XI(O), Jl.12, 1108; Ibid. VIII, Sb.300, 1252).

ಪೆರ್ಗ್ಗಾವುಂಡ; Perggāvunḍa: ಹಿರಿಯ ಗಾವುಂಡ; Senior gāvunḍa; (EI. XXVI, 4, 906); See ಗಾವುಂಡ, Gāvunḍa above.

ಪೊತ್ಥಗ್ರಾಹಕ; Pothagrāhaka: ದಾಖಲೆಗಳ ಅಧಿಕಾರಿ; Officer of in charge of records or Record Keeper; ಕುಂಮಟದ ಪೊತ್ಥಗ್ರಾಹಕ ಪಾಂಡವರ ಬಿಟ್ಟರಸ; (SII. XV, 62, 1184).

ಪೌರಜನ; Paurajana: s.a., ಪುರಜನ; Purajana above; (ಕು.ವ್ಯಾ.ಭಾ.ಸಭಾ ಪ. Ku.Vyā.Bhā. Sabha Pa., I, 9, c.1400).

ಬಾರಿಕ; Bārika: ಸರತಿಯ ಮೇಲೆ ಕೆಲಸವಮಾಡುವ ಕಾವಲುಗಾರ; Watchman who works by turns (KI. II, 8, 1072; Ibid. V, 37, 1174); Cf. ತೆ. ಬಾರಿಕಾಪು; Te. Bārikāpu.

ಬಾಹತ್ತರನಿಯೋಗ; Bāhattaraniyōga: ಸಾಂಪ್ರದಾಯಿಕವಾಗಿ ಬರುವ ರಾಜ್ಯಾಡಳಿತದ ಎಪ್ಪತ್ತೆರಡು ವಿಭಾಗಗಳು ಅಥವಾ ಅಧಿಕಾರಿಗಳು; Seventy-two conventional departments of administration or officers in a State. (ಕು.ವ್ಯಾ.ಭಾ.ಉದ್ಯೋಗ ಪ. Ku.Vyā.Bhā. Udyōga Pa., II, 47, c.1400). They were generally:

1. **ಗುರು; Guru:** ಗುರು; Preceptor
2. **ಮಹಾಪ್ರಧಾನ; Mahāpradhāna:** ಹಿರಿಯ ಅಧಿಕಾರಿ; ಪ್ರಧಾನ ಮಂತ್ರಿ; Chief Minister
3. **ಸಾಮಂತ; Sāmanta:** ಅಧೀನ ಆಡಳಿತಗಾರ; Feudatory
4. **ಸೇನಾಪತಿ; Sēnāpati:** ಸೈನ್ಯದ ಮುಖ್ಯಸ್ಥ; Commander of the army
5. **ದ್ವಾರಪಾಲಕ; Dvārapālaka:** ಬಾಗಿಲು ಕಾಯುವವ; Doorkeeper
6. **ಅವಸಾರಿಕ; Avasārika:** ವಿಶ್ವಾಸಿಕ ಅಧಿಕಾರಿ; Confidant

7. **ಘಟಿಕಾನಿರ್ಧಾರಕ** Ghaṭikānirdhāraka: ವೇಳೆಯನ್ನಳೆಯುವವ; Time-keeper.

8. **ಗಣಕ; Gaṇaka:** ಲೆಕ್ಕಪತ್ರ ಅಧಿಕಾರಿ; Accountant

9. **ಪೌರಾಣಿಕ; Paurāṇika:** ಪುರಾಣ ಹೇಳುವ ಬ್ರಾಹ್ಮಣ; Brāhmaṇa reciting the purāṇas

10. **ಲೇಖಕ; Lēkhaka:** ಅಧಿಕೃತ ದಾಖಲೆಗಳನ್ನು ಬರೆಯುವವ; Writer of records

11. **ಪುರೋಹಿತ; Purōhita:** ಹಿರಿಯ ವಿದ್ವಾಂಸ, ಧಾರ್ಮಿಕ ವಿಷಯಗಳ ಸಲಹೆಗಾರ; Senior learned person; Advisor in religious matters

12. **ಜ್ಯೋತಿಷ್ಕ; Jyōtishka:** ಜ್ಯೋತಿಷ ಶಾಸ್ತ್ರ ಬಲ್ಲವ; Astrologer

13. **ಕಾವ್ಯಜ್ಞ; Kāvyajña:** ಸಾಹಿತ್ಯದಲ್ಲಿ ಬಲ್ಲಿದ; Literatuer

14. **ವಿದ್ವಜ್ಜನ; Vidvajjana:** ಆಸ್ಥಾನ ಪಂಡಿತರು; Learned men in the Court

15. **ದೇವತಾರ್ಚಕ; Dēvatārchaka:** ದೇವಸ್ಥಾನದಲ್ಲಿಯ ಪೂಜಾರಿ; Priest offering worship in temple.

16. **ಮಾಲ್ಯಕಾರಕ; Mālyakāraka:** ಮಾಲೆಗಳನ್ನು ಪೂರೈಸುವವ; Supplier of garlands.

17. **ಪರಿಮಳಕಾರಕ; Parimaḷakāraka:** ಸುಗಂಧ ದ್ರವ್ಯಗಳನ್ನು ಒದಗಿಸುವವ; Supplier of perfumes

18. **ಗೋಷ್ಠಾಧಿಕಾರ; Gōsṭhādhikāra:** ಗೋಶಾಲೆಗಳ ಅಧಿಕಾರಿ; Superintendent of Cowpens.

19. **ಗಜಾಧಿಕಾರಿ; Gajādhikāri:** ಆನೆಯ ಲಾಯಗಳ ಅಧಿಕಾರಿ; Superintendent of Elephants.

20. **ಅಶ್ವಾಧಿಕಾರಿ; Aśvādhikāri:** ಕುದುರೆಯ ಲಾಯಗಳ ಅಧಿಕಾರಿ; Superintendent of Stables.

21. **ಭಾಂಡಾಧಿಕಾರ; Bhāṇḍādhikāra:** ಖಜಾನೆಯ ಅಧಿಕಾರಿ; Treasury officer.

22. **ಧಾನ್ಯಾಧಿಕಾರ; Dhānyādhikāra:** ಆಹಾರ ಧಾನ್ಯಗಳ ಸಂಗ್ರಹಗಳ ಅಧಿಕಾರಿ; Superintendent of Granaries or ware house..

23. **ಅಂಗರಕ್ಷಕ; Angarakshaka:** ಮೈಗಾವಲು; Bodyguard

24. **ಸೂತ; Sūta:** ರಥ ನಡೆಸುವವ; Charioteer

25. **ಸೂದ; Sūda:** ಅಡಿಗೆ ಮನೆಯ ಮೇಲ್ವಿಚಾರಕ; Officer in charge of kitchen.

26. **ಬೇತಾಳ; Bētāḷa:** ಜಾಲ ಬಲ್ಲವ; Magician.

27. **ಮಲ್ಲ; Malla:** ಕುಸ್ತಿಪಟು; Wrestler

28. **ತಾಂಬೂಲಿಕ; Tāmbūlika:** ವೀಳ್ಯದ ಕರಂಡಕವನ್ನು ಒಯ್ಯುವವ; Person who carried box of betal leaves.

29. **ತಾಳವೃಂತಕ; Tāḷavrantaka:** ಚಾಮರಧಾರಿ; Bearer of fans.

30. **ನರವಾಹಕ; Naravāhaka:** ಮನುಷ್ಯನನ್ನು ಹೊರುವವ; Human carrier.

31. **ಛತ್ರಿಕ; Chatrika:** ಛತ್ರಿಯನ್ನು ಹಿಡಿಯುವವ; Umbrella bearer

32. **ಚಾಮರಿಕ; Chāmarika:** ಚಾಮರಗಳನ್ನು ಬೀಸುವವ; Fly whisk bearer.

33. **ಕಾಲಚಿಕ; Kālachika:** ಕಹಳೆಯನ್ನೂದುವವ; Person who blew Kāhaḷa or musical pipe.

34. **ಕರಸಾರಿಕ; Karasārika:** Pigeon holder

35. **ಕರದೀಪಿಕಾಕಾರ; Karadīpikākāra:** ದೀಪಧಾರಿ; Holder of torch

36. **ಪಾದುಕದಾರ; Pādukadāra:** ಪಾದರಕ್ಷೆಗಳ ವಾಹಕ; Person who carries sandals.

37. **ನರ್ತಕ; Nartaka:** ನಟನಕಾರ; Dancer.

38. **ಗಾಯಕ; Gāyaka:** ಸಂಗೀತಗಾರ; Musician

39. **ವೈಣಿಕ; Vaiṇika:** ವೀಣಾವಾದಕ; Player of Vīṇā

40. **ಶಕುಣಿಕ; Śakuṇika:** ಪಕ್ಷಿಗಳ ವಾಹಕ; Fowler

41. **ಮಾಗಧ; Māgadha:** ಸ್ತುತಿಕಾರ; Panegyrist

42. **ವೈತಾಳಿಕ; Vaitāḷika:** ಸ್ತುತಿಕಾರ, ಬೆಳಗಿನ ವೇಳೆಯಲ್ಲಿ ರಾಜಕುಮಾರರನ್ನು ವಾದ್ಯ, ಗೀತಗಳಿಂದ ಎಬ್ಬಿಸುವವ; Ministrel, A person who awakens the princes in the morning by music and songs.

43. **ಪರಿಹಾಸಕ; Parihāsaka:** ವಿದೂಷಕ; Jester

44. **ಕಂಚುಕ; Kanchuka:** ಅಂತಃಪುರದ ಅಧಿಕಾರಿ; Chamberlian

45. **ಕ್ಷೌರಿಕ; Kshaurika:** ನಾಪಿತ; Barbar

46. **ರಜಕ; Rajaka:** ಅಗಸ; Washerman

47. **ಸೈಚಕ; Saichaka:** ಹೊಲಿಯುವವ; Tailor

48. **ಚರ್ಮಕಾರಕ; Charmakāraka:** ಪಾದರಕ್ಷೆಗಳ ತಯಾರಕ; Cobler

49. **ಮುದ್ರಾಧಿಕಾರ; Mudrādhikāra:** ರಾಜಮುದ್ರೆಯ ಅಧಿಕಾರಿ; Bearer of the royal seal.

50. **ಪುರಪಾಲಕ; Purapālaka:** ನಗರದ ಮೇಲಧಿಕಾರಿ; Commissioner of the town.

51. **ವನಪಾಲಕ; Vanapālaka:** ಅರಣ್ಯಾಧಿಕಾರಿ; Forest officer

52. **ನರವೈದ್ಯ; Naravaidya:** ಮನುಷ್ಯ ಚಿಕಿತ್ಸಕ, ವೈದ್ಯ, Physician

53. **ಗಜವೈದ್ಯ; Gajavaidya:** ಪಶುವೈದ್ಯ, ಆನೆಯ ಚಿಕಿತ್ಸಕ; Physician in charge of elphants

54. **ಅಶ್ವವೈದ್ಯ; Aśvavaidya:** ಪಶುವೈದ್ಯ, ಕುದುರೆಯ ಪರೀಕ್ಷಕ; Physician in charge of horses.

55. **ಭೇರಿವಾದಕ; Bhērivādaka:** ನಗಾರಿ ಹೊಡೆಯುವವ; Carrier and beater of drum.

56. **ಪಶುವೈದ್ಯ; Paśuvaidya:** ಪಶುವೈದ್ಯ; Physician in charge of cattle.

57. **ಮುರಜವಾಜಕ; Murajavājaka:** ವಾದ್ಯಗಾರ; Player on large drum.

58. **ರೌಮಕ; Raumaka:** ಉಪ್ಪಿನ ಮಾಳಗಳ ಮೇಲಧಿಕಾರಿ; Superintendent of salt pans.

59. **ಶಿಲಾಛೇದಕ; Śilachhēdaka:** ಕಲ್ಲುಕುಟಿಗ; Stone cutter.

60. **ಕಾಂಸ್ಯಕಾರಕ; Kāmśyakāraka:** ಲೋಹ ಕೆಲಸಗಾರ; Brazier.

61. **ಕುಂಭಕಾರಕ; Kumbhakāraka:** ಕುಂಬಾರ; Potter.

62. **ಚಿತ್ರಕಾರಕ; Chitrakāraka:** ಚಿತ್ರಗಾರ; Painter

63. **ವ್ಯವಹಾರಿಕ; Vyavahārika:** ವ್ಯಾಪಾರಸ್ಥ; Businessman

64. **ಮೃಗಯಾತ್ರಿಕ; Mṛigayātrika:** ಬೇಟೆಗಾರ; Hunter

65. **ಪಕ್ಷಿಪೋಷಕ; Pakshipōshaka:** ಪಕ್ಷಿಗಳ ಮೇಲ್ವಿಚಾರಕ; Keeper of the birds

66. **ಫಣಿಹಾರಕ; Phaṇihāraka:** ಗಧಾಧಾರಿ; Mace bearer.

67. **ರಾಯಭಾರಕ; Rāyabhāraka:** ದೂತ; Ambassador

68. **ಉಗ್ರಾಣಾಧಿಕಾರ; Ugrāṇādhikāra:** ಉಗ್ರಾಣದ ಅಧಿಕಾರಿ; Store-keeper.

69. **ವೇಶ್ಯಾಜನ; Vēsyājana:** ವೇಶ್ಯಯರ ಮೇಲ್ವಿಚಾರಕ; Officer for the welfare of dancing girls.

70. **ಬಂಟ; Banṭa:** ಸೈನಿಕ; Foot soldier.

71. **ಸ್ವರ್ಣಕಾರಕ; Svarṇakāraka:** ಅಕ್ಕಸಾಲಿಗ; Goldsmith

72. **ಕಠಾರಿಕ; Kaṭhārika:** ಶಸ್ತ್ರಧಾರಿ; Sword bearer.

ಬಾಹತ್ತರ ನಿಯೋಗಾಧಿಪತಿ; Bāhattara-niyōgādhipati: ಬಾಹತ್ತರ ನಿಯೋಗದ ಮುಖ್ಯಸ್ಥ; Head of Bahāttara-niyōga; ಎಪ್ಪತ್ತೆರಡು ಸಾಂಪ್ರದಾಯಿಕ ಅಧಿಕಾರ ಅಥವಾ ಹುದ್ದೆಗಳ ಮುಖ್ಯಸ್ಥ; ರಾಜ್ಯದ ಆಡಳಿತೆಯ ವಿವಿಧ ವಿಭಾಗಗಳ ಮುಖ್ಯಸ್ಥ; ಮುಖ್ಯ ಕಾರ್ಯದರ್ಶಿ; Officer who was the head of seventy-two conventional offices i.e., a high officer of the State in charge of different Departments; Chief Secretary; (SII. IX, I, 317, 1163).

ಬಾಹತ್ತರನಿಯೋಗಾಧಿಷ್ಠಾಯಕ; Bāhattaraniyōgā-dhishṭāyaka: s.a. ಬಾಹತ್ತರನಿಯೋಗಾಧಿಪತಿ; Bāhattaraniyōgādhipati; (EC. VII(O), Sk.96, 1179).

ಬಾಹತ್ತರನಿಯೋಗಿ; Bāhattaraniyōgi: s.a. ಸಾಂಪ್ರದಾಯಿಕ ಎಪ್ಪತ್ತೆರಡು ಅಧಿಕಾರಿಗಳಲ್ಲೊಬ್ಬ; One of the seventy two conventional officers; (EI. XIX, 38, B 1179)

ಬೆಸಕಾರ; Besakāra: ಅರಸರ ಅಪ್ಪಣೆಯನ್ನು ನಿರ್ವಹಿಸುವ ಅಧಿಕಾರಿ; Officer for executing the orders of the king; (EC. IV(R), Ch.302, 1536).

ಬೇಹಮಂತ್ರಿ; Bēhamaṁtri: ಗುಪ್ತಚಾರಿಕೆಯ ಅಧಿಕಾರಿ; ಬೇಹುಗಾರಿಕೆಗೆ ಸಂಬಂಧಿಸಿದ ಅಧಿಕಾರಿ; An officer connected with espionage, Intelligence officer; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā Pa, I, 58. c.1400).

ಬೋವ; Bōva: ಮೇಲ್ವಿಚಾರಕ; Superintendent, Foreman; ಕೊಟ್ಟಾರದ ಬೋವಕ್ಕಳ್; (EC. VI(O), Cm.137, 1130).

ಮಣಿಗಾಱ; Maṇigāṟa: ದೂತ, ಗ್ರಾಮಾಧಿಕಾರಿ; Messenger, village officer; (EC. VII(O), Sk.106, 1098).

ಮಹತ್ತರ; Mahattara: ರಾಜ್ಯದ ಹಿರಿಯ ಅಧಿಕಾರಿ; A high officer of the State; (EI. XXXI, 39, 6th cent.).

ಮಹತ್ತರ ಪರಿವಾರ; Mahattara Parivāra: ಮಹತ್ತರ ಎಂಬ ಅಧಿಕಾರಿಯ ಸಿಬ್ಬಂದಿ; Establishment of the Mahattara; (ವಡ್ಡಾ, Vaḍḍā, p.31, l.18, 10th cent.).

ಮಹತ್ತರಿ; Mahattari: ಮಹತ್ತರ ಶಬ್ದದ ಸ್ತ್ರೀಲಿಂಗ ರೂಪ, ಹಿರಿಯ ಮಹಿಳಾ ಅಧಿಕಾರಿ; A Feminine form of Mahattara, A female high officer; (ಪು.ಪು. Pu.Pu., XIII, 91 ಪ್ರ. Pr. 13th cent.).

ಮಹಾಜನ; Mahājana: ಶ್ರೇಷ್ಠರು, ಪೂಜ್ಯರು, ಗ್ರಾಮಗಳಲ್ಲಿಯ ಸಭೆಗಳ ಪ್ರತಿನಿಧಿಗಳು; Great men, the revered; representatives of village assemblies; ಒಂದೊಂದು ಗ್ರಾಮದಲ್ಲಿ, ವಿಶೇಷವಾಗಿ ಅಗ್ರಹಾರಗಳಲ್ಲಿ, ಅಲ್ಲಿಯ ವಿದ್ವಾಂಸರು ಪ್ರತಿನಿಧಿಗಳಾಗಿ ಆಯಾ ಗ್ರಾಮಗಳ ಅಥವಾ ಅಗ್ರಹಾರಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರೇ ಮಹಾಜನರು. ಗ್ರಾಮಕ್ಕೆ ಸಂಬಂಧಿಸಿದ ಆಡಳಿತ, ವ್ಯವಹಾರ, ನ್ಯಾಯದಾನ, ಸಾಮಾಜಿಕ, ಧಾರ್ಮಿಕ ಆಚರಣೆ ಮುಂತಾದ ಎಲ್ಲ ಅಂಗಗಳಲ್ಲಿಯೂ ಈ ಮಹಾಜನರು ಮಹತ್ವದ ಪಾತ್ರವಹಿಸುತ್ತಿದ್ದರು. ಮಹಾಜನರು ಪ್ರತಿನಿಧಿಸುತ್ತಿದ್ದ ಸಭೆಗಳು ಗ್ರಾಮಪಂಚಾಯತಿಗಳಂತೆ ಕೆಲಸ ಮಾಡುತ್ತಿದ್ದವು. ಆಯಾ ಗ್ರಾಮಗಳ ಜನಸಂಖ್ಯೆಗೆ ತಕ್ಕಂತೆ ಮಹಾಜನರ ಸಂಖ್ಯೆಯೂ ನಿರ್ಧರಿಸಲ್ಪಡುತ್ತಿತ್ತು. ಉದಾ: ಲೊಕ್ಕಿಗುಂಡಿಯಲ್ಲಿ ಒಂದು ಸಾವಿರ ಮಹಾಜನರು ಇರುತ್ತಿದ್ದರು. ಹಾವೇರಿಯಲ್ಲಿ ನಾಲ್ಕುನೂರು ಮಹಾಜನರು ಇರುತ್ತಿದ್ದರು. ಕರ್ನಾಟಕದಲ್ಲಿ ಆರನೆಯ ಶತಮಾನದಿಂದ 14ನೇ ಶತಮಾನಗಳ ವರೆಗಿನ ಅಸಂಖ್ಯ ಶಾಸನಗಳಲ್ಲಿ ಈ ಮಹಾಜನರ ಉಲ್ಲೇಖ ದೊರೆಯುತ್ತದೆ. ಉದಾ: ಮಹಾಜನ ಸಾಸಿರ್ವರು. ಮಹಾಜನ ನಾಲ್ನೂರ್ವರು, ಮಹಾಜನಮಯ್ವದಿಂಬರು, ಮಹಾಜನಂಗಳಿನ್ನೂರ್ವರು ಇತ್ಯಾದಿ. ಈ ಪದ ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. In every village, especially in the Agrahāra villages, the administration was looked after by the learned men as the representatives of the place. They were called Mahājanas. In all matters relating to the village, such as administration, transactions, judiciary, social and religious activities and the like, the Mahājanas played a prominent role. The assemblies represented by the Mahājanas functioned like the Grāmapanchāyats of the present day. The number of Mahājanas in each village was decided in relation to the size of the village. For e.g. there were 1000 Mahājanas in Lokkiguṇḍi. There were 400 at Hāveri. We get copious references to the mahājanas in numerous inscriptions in Karnataka from about 6th cent. to the 14th century. For e.g. Mahājana-sāsirvaru, Mahājana-nālnūrvaru, Mahājanam-aivadiṁbaru, Mahājanamgaḷ-innūrvar etc. This term is found in numerous inscriptions.

ಮಹಾನಾಳ್ಪ್ರಭು; Mahānāḷprabhu: ಹಿರಿಯ ನಾಳ್ಪ್ರಭು; A Senior Nāḷprabhu; See ನಾಳ್ಪ್ರಭು, Nāḷprabhu above; (SII. IX, I, 335, 1218).

ಮಹಾಪ್ರಧಾನ; Mahāpradhāna: ರಾಜ್ಯದ ಮುಖ್ಯ ಅಧಿಕಾರಿ, ಪ್ರಧಾನಮಂತ್ರಿ; Highiest officer in the State; Prime Minister; (SII. IX, I, 118, 1057); ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. Mentioned in numerous inscriptions.

ಮಹಾಪ್ರಭು; Mahāprabhu: ಗ್ರಾಮದ ಅಥವಾ ನಾಡಿನ ಮುಖ್ಯ ಅಧಿಕಾರಿ; A high officer in charge of village, or an administrative division; (EI. VI, 4, 860); Cf. ಪ್ರಭು, ನಾಳ್ಪ್ರಭು; Prabhu, Nāḷprabhu.

ಮಹಾಪ್ರಭುವಿಣಿ; Mahāprabhuviṇi: ಮಹಾಪ್ರಭು ಎಂಬ ಪದದ ಸ್ತ್ರೀಲಿಂಗ ರೂಪ, ಮಹಾಪ್ರಭುವಿನ ಹುದ್ದೆಯನ್ನು ವಹಿಸಿದ ಮಹಿಳೆ; Female form of Mahāprabhu, A Female officer holding the office of Mahāprabhu; ಶ್ರೀಮನುಮಹಾಪ್ರಭುವಿಣಿ ಲಕ್ಮಾದೇವಿಯರು; (SII. XV, 39, 1148).

ಮಹಾಪಾತ್ರ; Mahāpatra: ಹಿರಿಯ ಮಂತ್ರಿ; A minister higher in rank than the pātra; ಶ್ರೀ ನಾಥರಾಜನ ಲಕ್ಷ್ಮೀಪತಿರಾಜ ಪಶ್ಚಿಮಬಾಲಚಂದ್ರ ಮಹಾಪಾತ್ರ; (SII. IX, II, 500, 1515; See also IEG. p.182).

ಮಹಾಮಂಡಳೇಶ್ವರ; Mahāmaṇḍaḷēśvara: ಅರಸನ ಅಧೀನ ಆಡಳಿತಗಾರ; ಸಾಮಂತ; Subordinate of the ruler; (SII. XVIII, 43, 1077); ಅಸಂಖ್ಯ ಶಾಸನಗಳಲ್ಲಿ ದೊರೆಯುತ್ತದೆ. Found in numerous inscriptions.

ಮಹಾಮಂಡಳಪತಿ; Mahāmaṇḍaḷapati: s.a. ಮಹಾಮಂಡಲೇಶ್ವರ; Mahāmaṇḍalēśvara; (ಶಾಂ.ಪು. Śāṁ.Pu. X, 105, 10th cent.). See ಮಂಡಲಾಧಿಪತಿ, Manḍalādhipati below.

ಮಹಾಮಂತ್ರಾಕ್ಷಪಟಲಾಧಿಪತಿ; Mahāmantrāksha-paṭālādhipati: ರಾಜ್ಯದ ಮುಖ್ಯಾಧಿಕಾರಿಯ ಅಥವಾ ಮುಖ್ಯ ಮಂತ್ರಿಯ ಕಚೇರಿಯ ಕಾಗದ ಪತ್ರಗಳ ಅಧಿಕಾರಿ; Record keeper in the office of the Chief administrator or Chief Minister: (SII. XI, II, 52-53, 1007). Cf. ಅಕ್ಷಪಟಲಾಧಿಕರಣಾಧಿಕೃತ, Akshapaṭalādhikaraṇādhikṛita above.

ಮಹಾಮಾತ್ಯ; Mahāmātya: ಹಿರಿಯ ಅಧಿಕಾರಿ, ಮುಖ್ಯಮಂತ್ರಿ; A high officer, Chief Minister; (EI. XIX, 29B, 1075) Cf. ಮಹಾಪ್ರಧಾನ.

ಮಹಾಮಾತ್ಯಪದವಿ; Mahāmātyapadavi: ಮಹಾಮಾತ್ಯನ ಹುದ್ದೆ; Office of Mahāmātya; ಸಮಸ್ತ ರಾಜ್ಯಭರನಿರೂಪಿತ ಮಹಾಮಾತ್ಯಪದವೀವಿರಾಜಮಾನ (EI. XIX, 29B, 1075).

ಮಹಾಮಾತ್ರ; Mahāmātra: ರಾಜ್ಯದ ಹಿರಿಯ ಅಧಿಕಾರಿ; A high officer of State; ಶಿಲಾ ಶಾಸನವಂ ಬರೆದಂ ಮಹಾಮಾತ್ರನಜವಮ್ಮಯ್ಯನ ಮಗಂ (EC. IX(O), Nl.1, 1029); ಪ್ರಾ. ಮಹಾಮಾತಾ; Prā. Mahāmātā.

ಮಹಾಸರ್ವ್ವಾಧಿಕಾರಿ; Mahāsarvvādhikāri: ಆಡಳಿತದ ಮುಖ್ಯಾಧಿಕಾರಿ; Chief of the administration or Chief Secretary; (EC. X(O), Bouringpet, 1147); See ಸರ್ವಾಧಿಕಾರಿ, Sarvvādhikāri below.

ಮಹಾಸರ್ವ್ವಾಧಿಕೃತ; Mahāsarvvādhikṛita: s.a. ಮಹಾಸರ್ವ್ವಾಧಿಕಾರಿ; Mahāsarvvādhikāri; (EI. XII, 18, 11th cent.)

ಮಹಾಸಾಮನ್ತ; Mahāsāmanta: ಅಧೀನ ಅರಸು; A feudatory chief; (SII. XV, 276, 7th cent.) See ಸಾಮನ್ತ, Sāmanta below. ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. Found in numerous inscriptions.

ಮಹಾಸಾಮನ್ತಾಧಿಪತಿ; Mahāsāmantādhipati: s.a. ಮಹಾಸಾಮನ್ತ; Mahāsāmanta; ಅನೇಕ ಶಾಸನಗಳಲ್ಲಿ ಸಿಗುತ್ತದೆ; Found in many inscriptions.

ಮಹಾಸಾವನ್ತ; Mahāsāvanta: s.a. ಮಹಾಸಾಮನ್ತ; Mahāsāmanta; (EC. X(O), Kl.170, 1180).

ಮಂಡಲಸ್ವಾಮಿ; Manḍalasvāmi: s.a. ಮಂಡಲಾಧಿಪತಿ; Maṇḍalādhipati; ನಿಟ್ಟೂರ ಮಂಡಲಸ್ವಾಮಿಯರ ಮಗ ಸೋವಣ್ಣ (EC. IX(O), Kn.76, 1299);

ಮಂಡಲಾಧಿಪತಿ; Mandālādhipati: ಆಡಳಿತ ವಿಭಾಗದ ಮುಖ್ಯಸ್ಥ; Head of an administrative division, Governor; ಕೇರಳ ಮಂಡಲಾಧಿಪತಿಯಪ್ಪೊಡೆ; (ಧರ್ಮಾ, Dharmā, 4, 202, 1112).

ಮಂಡಲೇಶ, ಮಂಡಲೇಶ್ವರ; Maṇḍalēśa, Maṇḍalēśvara: s.a. ಮಂಡಲಾಧಿಪತಿ; Mandaḷādhipati; (SII. XVIII, 44, 1019, 10th cent.).

ಮಂಡಳಪತಿ; Mandaḷapati: s.a. ಮಂಡಲಾಧಿಪತಿ; Maṇḍalādhipati; (ಶಾಂ.ಪು. Śāṁ.Pu. X, 117, 10th cent.).

ಮಂಡಳಿಕ, ಮಂಡಲಿಕ, Manḍaḷika, Manḍalika: ಅರಸನ ಅಧೀನನಾಗಿ ವಂಶಪರಂಪರೆಯಾಗಿ ಯಾವದೊಂದು ಪ್ರದೇಶವನ್ನು ಆಳುವ ಸಾಮಂತ ಅರಸ; Subordinate ruler or a feudatory chief. ಅನೇಕ ಶಾಸನಗಳಲ್ಲಿ ಸಿಗುತ್ತದೆ. Figures in numerous inscriptions.

ಮಂತ್ರಪಾಳ; Mantrapāḷa: ಮಂತ್ರಾಲೋಚಕ; ಸಲಹೆಗಾರ; Councellor, Officer like a private Secretary, advisor; (ನೇ.ಪು. Nē.Pu. 5, 69, 12th cent.; Cf. ತಂತ್ರಪಾಳ above; also see ಕು.ವ್ಯಾ.ಭಾ. ಸಭಾ ಪ. Ku.Vya.Bha Sabha Pa. I, 49, c.1400).

ಮಂತ್ರಿ; Mantri: ರಾಜ್ಯದ ಪ್ರಮುಖ ಅಧಿಕಾರಿ ಅಥವಾ ಮಂತ್ರಿ; A high officer of the State or minister; (ವಡ್ಡಾ, Vaḍḍā, p.22, l.12, 10th cent.).

ಮಂತ್ರಿಕೂಟ; Mantrikūṭa: ಮಂತ್ರಿಮಂಡಲ; Council of Ministers or officers; ಜಗನುತ್ತಮಂತ್ರಿಕೂಟಮಂ. (EC. VI(O), Kd.95, 1224).

ಮಂತ್ರಿಮಹತ್ತರ; Mantri-mahattara: ಪ್ರಮುಖ ಮಂತ್ರಿ, ಹಿರಿಯ ಅಧಿಕಾರಿ, A Senior officer or minister; (ವಡ್ಡಾ, Vaḍḍā, p.123, l.10, 10th cent. See also HD. III, p.994-95; ಅ.ಪು. A.Pu. X, 53, 13th cent.).

ಮಂತ್ರಿಮಂಡಳ; Mantrimanḍaḷa: ಮಂತ್ರಿ ಅಥವಾ ಅಧಿಕಾರಿಗಳ ಮಂಡಲ; ಮಂತ್ರಿಗಳ ಮಂಡಲ; Cabinet, Council of ministers or high officers; (EC. VI(O), Tk.45, 1196).

ಮಂತ್ರಿಮುಖ್ಯ; Mantri-mukhya: ಪ್ರಧಾನ ಮಂತ್ರಿ ಅಥವಾ ಅಧಿಕಾರಿ; High officer, Chief Minister; (EC. VII(O), Sk.102, 1162).

ಮಂತ್ರಿವರ್ಗ; Mantrivarga: s.a. ಮಂತ್ರಿಮಂಡಳ; Mantrimanḍaḷa; (EI. XVIII, 26, 871).

ಮಾಗಣಿಕಾಱ; Māgaṇikāṟa: ಮಾಗಣೆಯ ಅಥವಾ ಆಡಳಿತ ವಿಭಾಗದ ಅಧಿಕಾರಿ; Officer of a Māgaṇi or administrative division; ಸಾಳುವ ಗೋವಿಂದರಾಜವಡೆಯರ ಮಾಗಣಿಕಾಱರು; (EC. IV(R), Ch.99, 1523).

ಮಾಸವೆರ್ಗ್ಗಡೆ; Māsaverggaḍe: ತಿಂಗಳಿಗೆ ಬದಲಾಗುವ ತಾತ್ಕಾಲಿಕ ಅಧಿಕಾರಿ; Temporary Officer changing every month; (EC. XII(O), Ck.2, 1261; SII. XV, 665, 1404).

ಮಾಸವೆರ್ಗ್ಗಡೆತನ; Māsaverggaḍetana: ಮಾಸವೆರ್ಗ್ಗಡೆಯ ಹುದ್ದೆ; Office of the māsaverggaḍe; ಕಂಟೇಣುಪಾಧ್ಯಾಯರ್ವಿಶಣ್ಣಂಗಳ ಮಾಸವೆರ್ಗ್ಗಡೆತನದಲ್ಲಿ; (EC. XII(O), Tp.2, 1263).

ಮಾಸಾವಂತ; Māsāvanta: s.a. ಮಹಾಸಾಮಂತ; Mahāsāmanta; (ಕ.ಕಾ. Ka.Kā, 37, ವ, Pr. 13th cent.).

ಮುಖ್ಯಪ್ರಧಾನ; Mukhya-pradhāna: ಮುಖ್ಯಮಂತ್ರಿ, ಉಚ್ಚ ಅಧಿಕಾರಿ; Chief Minister, A high officer; (SII. XV, 216, 1202).

ಮುತಾಲಿಕ; Mutālika: ಸಾಮಂತನ ಅಥವಾ ಅಧಿಕಾರಿಯ ಪ್ರತಿನಿಧಿ; Agent of a feudatory chief or an officer; ಹಂದಿಗನೂರ ಸಿದೆನಾಯಕರ ಮುತಾಲಿಕನ ಗಬ್ಬಿನಾಯಕನು. (SII. XV, 649, 1256).

ಮುದ್ರಹಸ್ತ; Mudrahasta: ದಾಖಲೆಗಳಿಗೆ ಅಧಿಕಾರ ಮುದ್ರೆಯೊತ್ತುವ ಅಧಿಕಾರಿ, Officer in charge of the royal seal; the authority sanctioning and approving the royal documents and putting the royal seal; Registrar of records; (SII. XX, 178, 1192; Ibid. 226, 1306).

ಮುದ್ರಾಧಿಕಾರಿ; Mudrādhikāri: ರಾಜಶಾಸನಗಳಿಗೆ ಒಪ್ಪಿಗೆ ನೀಡಿ ರಾಜಮುದ್ರೆಯನೊತ್ತುವ ಅಧಿಕಾರಿ; Authority approving the royal documents and putting the royal seal; Regestrar of records; (SII. IX, I, 293, 1162) ಸಂ. ಮುದ್ರಾಧ್ಯಕ್ಷ, ಮುದ್ರಾಧಿಕೃತ; Saṁ.Mudradhyāksha, Mudrādhikrita (See IEG. p.204).

ಮುದ್ರಾಪ್ರಭು; ಮುದ್ರೆಪ್ರಭು; Mudrāprabhu, Mudreprabhu: s.a. ಮುದ್ರಾಧಿಕಾರಿ; Mudrādhikāri; (KI. II, 42, 1306, SII. XX, 226, 1306).

ಮುದ್ರೆ ಮನುಷ್ಯ; Mudre-manushya: s.a. ಮುದ್ರಾಧಿಕಾರಿ; Mudradhikāri; (EC. XII(O), Si.31, 1556; Ibid. IV(R), Yl.67, 1532).

ಮುದ್ರೆಸಾವಂತಿಕೆ; Mudresāvantike: ರಾಜನ ಮುದ್ರೆಯನ್ನು ಉಪಯೋಗಿಸುವವನ ಹುದ್ದೆ, ಅಧಿಕಾರ; Office of the person in charge of the royal seal; (EC. VIII, Sb.181, 1392).

ಮೇಲ್ವಟ್ಟೆಯ ಪೆರ್ಗ್ಗಡೆ; Mēlvaṭṭeya perggaḍe: ಹೆದ್ದಾರಿಗಳ ಮೇಲಧಿಕಾರಿ; Superitendent of highways; ಮೇಲ್ವಟ್ಟೆಯ ಪೆರ್ಗ್ಗಡೆ ದಣ್ಡನಾಯಕನಪ್ಪಚ ರಾಜನ ಬೆಸದಿಂ; (KI. II, 8, 1072).

ಮೇಲಾಳ್ಕೆ, ಮೇಲಾಳಿಕೆ; Mēlāḷke, Mēlāḷike: ಆಡಳಿತದ ಮೇಲ್ವಿಚಾರಣೆಯ ಅಧಿಕಾರ; Supervisory authority, Supervision of administration; ಹಗರಿಟೆನಾಡ ಮೇಲಾಳ್ಕೆಯಂ; (SII. XX, 26, 1040).

ಮೇಲಾಳ್ಕೆಯ ಹೆರ್ಗ್ಗಡೆ; Mēlāḷkeya herggaḍe: ಯಾವುದೊಂದು ಪ್ರದೇಶದ ಆಡಳಿತದ ಮೇಲ್ವಿಚಾರಣೆಯ ಅಧಿಕಾರಿ; Supervising officer of the administration of a specified area; ಮೇಲಾಳ್ಕೆಯ ಹೆರ್ಗ್ಗಡೆ ನಾಗರಸನುಮಿರ್ದ್ದು; (SII. XX, 115, 1146).

ಮೇಲಾಳ್ಕೆ ಮಂನೆಯ; Mēlāḷke manneya: ಮೇಲ್ವಿಚಾರಣೆಯ ಅಧಿಕಾರಿ; A Superintending officer; (SII. XX, 127, 1186).

ಮೇಲಾಳ್ಕೆಯರಸು; Mēlāḷkeyarasu: ಮೇಲ್ವಿಚಾರಣೆಯ ಹಿರಿಯ ಅಧಿಕಾರಿ; Senior supervisory authority; (SII. XX, 144, 1166).

ಮೈಗಾಹಿ; Maigāhi: s.a. ದೇಹರಕ್ಷಕ; Dēharakashaka above, (ಕು.ವ್ಯಾಭಾ. ಸಭಾ ಪ. Ku.Vyā.Bhā, Sabhā Pa., I, 58, c.1400).

ಮೊಗ್ಗದ ಕರಣ; Moggada karaṇa: ಮಗ್ಗದ ಕರಣ; ಮಗ್ಗಗಳ ಮೇಲಿನ ಅಧಿಕಾರಿ; Inspector of Looms; (SII. XX, 44, 1069).

ಮೊದಲ ಪ್ರಭು; Modala prabhu: ಗ್ರಾಮದ ಅಥವಾ ಆಡಳಿತ ಹಿರಿಯ ಅಥವಾ ಶ್ರೇಷ್ಠ ಅಧಿಕಾರಿ; Chief or Senior most officer of a village or an administrative division; (SII. XV, 169, 1223).

ಮೊದಲೂರೊಡೆಯ; Modalūroḍeya: ರಾಜ್ಯದ ಅಥವಾ ಆಡಳಿತ ವಿಭಾಗದ ಮುಖ್ಯ ಪಟ್ಟಣದ ಅಧಿಕಾರಿ; Chief of the capital of the State or an administrative division, Mayor of the capital city; (SII. XV, 46, 12th cent.).

ಯುಕ್ತ, ಯುಕ್ತಕ; Yukta, Yuktaka: ಅಧಿಕಾರಿ, ಬಹುಶ: ಆಡಳಿತದ ವಿಭಾಗದ ಮುಖ್ಯಾಧಿಕಾರಿ; Officer, probably head of an administrative division; (EI. XVIII, 26, 871). (Also see IEG. p.386, HD. p.1001).

ಯುವರಾಜ; Yuvarāja: ಯುವರಾಜಪದವಿಯನ್ನು ಹೊಂದಿದ ಅರಸನ ಮಗ; Crown prince, the king designate; (EC. V(O), Cn.243, 1210).

ಯುವರಾಜ್ಯ, ಯೌವರಾಜ್ಯ; Yuvarājya, Yauvarājya: ಯುವರಾಜನ ಪದವಿ; Position of Yuvarāja; (SII. IX, I, 193, 1115-16).

ರಕ್ಷಾಪಾಳ; ರಕ್ಷಾಪಾಳಕ; Rakshāpāḷa, Rakshāpāḷaka: ನಗರದ ರಕ್ಷಣಾಧಿಕಾರಿ, ಪೋಲೀಸ ಅಧಿಕಾರಿ; Security officer of a town, Police officer; ಉತ್ತುಂಗಗಿರಿ ರಕ್ಷಾಪಾಳಕ; (SII. VI, 571, 1070); ನಿಡಗುಂದಿಯ ರಕ್ಷಾಪಾಳಕನಪ್ಪ; (SII. XV, 180, 1244).

ರಾಜಪುರುಷ; Rājapurusha: ರಾಜ್ಯದ ನಿಯುಕ್ತ ಅಧಿಕಾರಿ; An officer of the State, Government officer; (EI. III, 8, 809; Ibid. XXVII, 23, 741).

ರಾಜವಿಜ್ಞಾನಿ; Rājavijnāni: ರಾಜಶಿಲ್ಪಿ, ತಂತ್ರಜ್ಞ; Royal artisan, Technician; ಉತ್ಕೀರ್ಣಂ ರಾಜವಿಜ್ಞಾನಿನಾ ಪಂದಯೇನ; (HAS. 18, 14, 1183).

ರಾಜಾಧ್ಯಕ್ಷ; Rājādhyaksha: ರಾಜ್ಯದ ಅತ್ಯುಚ್ಚ ಆಡಳಿತಾಧಿಕಾರಿ, ರಾಜ್ಯದ ಮುಖ್ಯ ಕಾರ್ಯದರ್ಶಿ; The highest administrative officer of the State; Chief Secretary to the Government; (SII. XVIII, 194, 1197).

ರಾಜಾಧ್ಯಕ್ಷದ ಕರಣ; Rājādhyakshada karaṇa: ರಾಜಾಧ್ಯಕ್ಷನ ಸಿಬ್ಬಂದಿಯ ಅಧಿಕಾರಿ; An officer in the office of Rājādhyaksha; (EC. VII(O), Sk.123, 185, 1157-58).

ರಾಜಾಧ್ಯಕ್ಷದ ಹೆಗ್ಗಡೆ; Rājādhyakshada Heggaḍe: ರಾಜಾಧ್ಯಕ್ಷನ ಸಿಬ್ಬಂದಿಯ ಅಧಿಕಾರಿ; An officer in the office of Rājādhyaksha; (EC. V(O), Ak.71, 1175).

ರಾಯಪ್ರಧಾನಿ; Rāyapradhāni: s.a. ಪ್ರಧಾನಿ; Pradhāni; ಅರಸನ ಪ್ರಧಾನಿ; Pradhāni of the king; ರಾಯಪ್ರಧಾನಿ ಮಲ್ಲನುಂ; (SII. XX, 202, 1244).

ರಾಯಭಾರತನ; Rāyabhāratana: ರಾಜ್ಯದ ಅಥವಾ ರಾಜನ ಪ್ರತಿನಿಧಿಯ ಹುದ್ದೆ; Office of the envoy of the king or the State; (ಕಾ.ಲೋ. Kā.lō., V, 852, 12th cent.).

ರಾಯಭಾರಿ; Rāyabhāri: ರಾಜದೂತ; ರಾಜನ ಅಥವಾ ಸರಕಾರದ ಪ್ರತಿನಿಧಿ; The royal messenger; an envoy of the State or king; ರಾಯಭಾರಿ ಈಸರಮಯ್ಯಂ; (SII. XVIII, 89, 1080).

ರಾಯಸಕೂಸು; Rāyasa-kūsu: ರಾಜಾಜ್ಞೆಯನ್ನು ಒಯ್ದು ಮುಟ್ಟಿಸುವ ಆಪ್ತ ಅಧಿಕಾರಿ; ದೂತ; Favourite officer to deliver royal communications and messages; messanger; ದೇವರಸರು ತಮ್ಮ ರಾಯಸಕೂಸುಗಳು ಮುಂತಾಗಿ ಬಂದು ಆ ಮಾವನೂರಲು ನಂದಿಯ ಕಂಬವಂ ಪ್ರತಿಷ್ಠೆಯಂ ಮಾಡಿ; (EC. VIII(O), Ag.44, 1252).

ರಾಷ್ಟ್ರಕೂಟ, ರಾಷ್ಟ್ರಕೂಟಕ; Rāshṭrakūṭa, Rāshṭrakūṭaka: ಆಡಳಿತ ವಿಭಾಗದ ಮುಖ್ಯಾಧಿಕಾರಿ; Head of an administrative division; ಶ್ರೀಮನ್ಮಹಾಸಾಮನ್ತಂ ಜಯಕೇಶಿಯರಸರ್ ಪುರಿಗೆರೆ ಮೂನೂಱರ್ಕ್ಕಂ ರಾಷ್ಟ್ರಕೂಟಕನಾಗಿ ಸುಖದಿಂ ರಾಜ್ಯಂಗೆಯೆ; (SII. XX, 47, 1074); ರಾಷ್ಟ್ರಕೂಟಕವರನಾ ತ್ರಿಶತಕೆ ನೆಗಟ್ದ ಜಯಕೇಶಿನೃಪಂ; (Ibid. 55, 1082).

ರಾಷ್ಟ್ರಪತಿ; Rāshṭrapati: s.a. ರಾಷ್ಟ್ರಕೂಟ; Rāsṭrakūṭa; ರಾಷ್ಟ್ರಪತಿ ವಿಷಯಪತಿ ಗ್ರಾಮಕೂಟಾಯುಕ್ತ; (EI. X, 19, 775).

ಲೇಖಕ; Lēkhaka: ಶಾಸನಗಳನ್ನು ಬರೆಯುವವ, ಲಿಪಿಕಾರ; Composer of the drafts of the inscriptions, scribe; ಲೇಖಕ ಮಾಯಿಪೈಯೇನ ಲಿಖಿತಂ; (EI. XII, 34, 1024).

ವನಮಹತ್ತರ; Vana-mahattara: ತೋಟಗಳ ಅಧಿಕಾರಿ; ಅರಣ್ಯಾಧಿಕಾರಿ; Officer of gardens; Conservator of forests; (ಮ.ಪು. Ma.Pu.4, 24, ವ. Pr. 12th cent.).

ವಾರಿಕಾಱ; Vārikāṟa: s.a. ಬಾರಿಕ; Bārika above; ಸಮಸ್ತವಾರಿಕಾಱರುಂ ವರುಷಂಪ್ರತಿ ಆರಯ್ದು ನಡಸುವರು; (SII. XVIII, 235, 1254).

ವಿಷಯಪತಿ; Vishayapati: ಆಡಳಿತ ವಿಭಾಗದ ಅಧಿಕಾರಿ; Governor of an administrative division; (EI. VI, 23, 808).

ವಿಷಯಿಕ ಮಹತ್ತರ; Vishayika-mahattara: ಆಡಳಿತ ವಿಭಾಗದ ಮುಖ್ಯಾಧಿಕಾರಿ; An officer of an administrative division; Divisional Commissioner; (EI. I, 8, 910).

ವೂರೊಡೆಯ; Vūroḍeya: s.a. ಊರೊಡೆಯ; Ūroḍeya above; (EC. VI(O), Cm.20, 1249).

ವೊಡೆಯ; Voḍeya: s.a. ಒಡೆಯ; Oḍeya above; (EC. IV(O), Ng.31, 1560).

ವೋಲೆಯಕಾರ; Vōleyakāra: s.a. ಓಲೆಯಕಾರ; Ōleyakāra above; (EC. III(R), Gu.34, 1283).

ಶಾನುಬಾಗ; Śānubāga: s.a. ಸೇನಬೋವ; Sēnabōva below; (EC. X(O), Sd.55, c.14th cent.).

ಶಾನಬೋವ; Śānabōva: s.a. ಸೇನಬೋವ; Sēnabōva below; (EC. IX(O), Kn.41, 1324).

ಶಾಸನಾಚಾರ್ಯ; Śasanāchārya: s.a. ಶಾಸನಾಧಿಕಾರಿ; Śāsanādhikāri below; (EC. XI(O), Dg.18, c.14th cent.).

ಶಾಸನಾಧಿಕಾರಿ; Śāsanādhikāri: ರಾಜಶಾಸನಗಳನ್ನು ರೂಪಿಸುವ ಅಧಿಕಾರಿ; Officer for drafting government documents; ಶಾಸನಾಧಿಕಾರಿ ಮಹಾಪ್ರಚಂಡ ದಂಡನಾಯಕ ಶ್ರೀಮತ್ತೋಲಾಚಾರ್ಯ ಪ್ರತಿಬದ್ಧ ಲೇಖಕ ಮಾಯಿಪೈಯೇನ ಲಿಖಿತಂ; (EI. XII, 34, 1024).

ಶಾಸನಾಧಿಕಾರಿಕ; Śāsanādhikārika: s.a. ಶಾಸನಾಧಿಕಾರಿ; Śāsanādhikāri; ಶಾಸನಾಧಿಕಾರಿಕಾಕ್ಷಪಟಲಿಕ ಕಾಲಿದಾಸ ಸುತ ವಿಕ್ರಮಾದಿತ್ಯಾನುಮತ್ಯಾ; (EI. XII, 19, 1087).

ಶಾಸನಿಗ; Śāsaniga: (1) ಆಡಳಿತಾಧಿಕಾರಿ; Administrator; ಕೂಂಡಿಪಟ್ಟಣದಾದಿತ್ಯಗ್ರಹದ ಶಾಸನಿಗ ಹೆಗ್ಗಡೆ (EI. XIX, 4, 1135); (2) ಶಾಸನಗಳ ಲೇಖಕ; Writer of inscriptions (IKD. 1, 1012).

ಶ್ರೀಕರಣ; Śrīkaraṇa: ದಾಖಲೆಗಳ ಲೇಖಕ; ದಾಖಲೆಗಳ ಮುಖ್ಯಾಧಿಕಾರಿ; Writer of official documents; Head of the office dealing with documents; Keeper of records; ಸರ್ಬ್ಬಾಧಿಕಾರಿ ಶ್ರೀಕರಣಂ ಸೇನಾಧಿಪತಿ (SII. XVIII, 191, 1183); ಶ್ರೀಕರಣ ನಾಗರಸನುಂ; (Ibid. 223, 1244). Cf. ಕರಣ; Karaṇa above.

ಶ್ರೀಕರಣದಧಿಷ್ಠಾಯಕ; Śrīkaraṇad-adhishṭhāyaka: ದಾಖಲೆಗಳ ಕಾರ್ಯಾಲಯದ ಮುಖ್ಯಾಧಿಕಾರಿ; Officer in charge of the record office; (SII. XV, 22, 1142).

ಶ್ರೀಕರಣದ ಹೆಗ್ಗಡೆ; Śrīkaraṇada heggaḍe: ದಾಖಲೆಗಳ ಕಾರ್ಯಾಲಯದ ಅಧಿಕಾರಿ; Officer in the Record Office; ಶ್ರೀಕರಣದ ಹೆಗ್ಗಡೆಯೆಱೆಯಣ್ಣನುಂ; (EC. X(O), Gb.41, 1180).

ಶ್ರೀಕರಣಾಧಿಕಾರಿ; Śrīkaraṇādhikāri: ದಾಖಲೆಗಳಿಗೆ ಸಂಬಂಧಿಸಿದ ಅಧಿಕಾರಿ; Officer in the Record Office; (EI. XII, 19, 1087).

ಶ್ರೀಕರಣಾಧಿಪತಿ; Śrīkaraṇādhipati: s.a. ಶ್ರೀಕರಣದಧಿಷ್ಠಾಯಕ; Śrīkaraṇad-adhisṭhāyaka above; (SII. XX, 364, 1307; ಸೂ.ಸು. Sū.Su, XVII, 34, 13th cent.).

ಸಚಿವ; Sachiva: ಉಚ್ಚ ಅಧಿಕಾರಿ, ಮಂತ್ರಿ, ಅಮಾತ್ಯ; High officer of the State; Minister; (EI. XXXIII, 4, 1288; Cf. HD. III, p.105, note 150. ನೀ.ವಾ. ದ ಕನ್ನಡ ವ್ಯಾಖ್ಯಾನದಲ್ಲಿ ಸಚಿವ ಪದಕ್ಕೆ ಪೆರ್ಗಡೆ ಎಂಬ ಪದವನ್ನು ಬಳಸಲಾಗಿದೆ. In Nī.Vā. Kannada Commentary, the word pergaḍe is used for sachiva. (ನೀ.ವಾ. ಕ. ವ್ಯಾಖ್ಯಾನ; Nī.Vā K.Comm., X, 9.) ಮಂಗರಾಜ ನಿಘಂಟುವಿನಲ್ಲಿಯೂ ಅಮಾತ್ಯ ಪದಕ್ಕೆ ಪೆರ್ಗಡೆ ಪದವನ್ನು ಬಳಸಲಾಗಿದೆ. In Mangarāja Nighaṇṭu also the word pergaḍe is used for Amātya.

ಸತ್ರಪಾಲಕ; Satrapālaka: ಧರ್ಮಛತ್ರಗಳ ಮೇಲ್ವಿಚಾರಕ; Superintendent of rest houses; (EI. XXVII, 40, 1251).

ಸದಸ್ಯ; Sadasya: ಗ್ರಾಮಸಭೆಯ ಸದಸ್ಯ,; Member of the village assembly; (SII. IV, 234, 1513).

ಸರ್ಬಾಮಾತ್ಯ; Sarbāmātya: ಸರ್ವಾಮಾತ್ಯ; ಸರ್ವಾಧಿಕಾರಿ; ಆಡಳಿದ ಶಾಖೆಗಳ ಮೇಲಿನ ಮುಖ್ಯ ಅಧಿಕಾರಿ; Sarvāmātya; sarvadhikāri; Chief officer in the over all charge of all the departments of administration; Chief Secretary; (SII. X, 115, 1170).

ಸಮಸ್ತಾಧಿಕಾರಿ; Samastādhikāri: ಸರ್ವಾಧಿಕಾರಿ; Savādhikāri; ಆಡಳಿತದ ಮುಖ್ಯ ಅಧಿಕಾರಿ; Officer in the over all charge of administration; ಸಕಲ ಸಮಸ್ತಾಧಿಕಾರಿಯುಂ ಮಹಾಪ್ರಧಾನನುವೆನಿಸಿದ ಹೆಗ್ಗಡೆ ಚಾವುಂಡಮಯ್ಯ; (EC. V(O), Ak 144, 1137).

ಸರ್ವಪ್ರಧಾನ; Sarvapradhāna: s.a. ಸರ್ಬಾಮಾತ್ಯ; Sarbāmātya; ಸರ್ವಪ್ರಧಾನ ತಿಪ್ಪರಸರು; (SII. XVIII, 302, 1187).

ಸರ್ವ್ವಾಧಿಕಾರಿ; Sarvvādhikāri: ಆಡಳಿತದ ಪೂರ್ಣ ನಿರ್ವಹಣೆಕಾರ; An officer in charge of the over all administration; Chief Secretary, Chief Administrator; (SII. IX, I, 18, 883-84); ಸರ್ವ್ವಾಧಿಕಾರಿ ಮದುವಣನಾಯಕರುಂ; (SII. XVIII, 178, 1163; Ibid. XX, 220, 1270). ಸರ್ವಾಧಿಕಾರಿ ಭಾಗುಬಾಯಿಗಳು (SII. XVIII, 377, 1241) Cf. ಸಮಸ್ತಾಧಿಕಾರಿ; Samasth-ādhikāri above.

ಸರ್ವ್ವಾಧ್ಯಕ್ಷ; Sarvvādhyaksha: s.a. ಸರ್ವ್ವಾಧಿಕಾರಿ; Sarvvādhikāri; (EI. XII, 19, 1087).

ಸ್ಥಳವೊಡೆಯ; Sthaḷavoḍeya: ಯಾವದೊಂದು ಸ್ಥಳದ ಅಥವಾ ಪ್ರದೇಶದ ಮುಖ್ಯಾಧಿಕಾರಿ; Head of a region or locality; (EC. VIII(O), Sg.137, 1320).

ಸಾಮಂತ; Sāmanta: ಮಂಡಲಿಕ; Feudatory chief; ಸಾಮಂತರ ಮಂಡಳಿಕ ಸಕಲ ಚಕ್ರವರ್ತಿಗಳ ಸಭಾಮಂಡಳದೊಳು; (ಅಜಿ.ಪು. Aji.Pu. 1, 81, 10th cent).

ಸಾಮಂತಾಧಿಕಾರಿ; Sāmantādhikāri: ಸಾಮಂತನ ಸ್ಥಾನಮಾನದ ಅಧಿಕಾರಿ; An officer of the status of a sāmanta; ಅನೇಕ ಶಾಸನಗಳಲ್ಲಿ ಸಿಗುತ್ತದೆ. Found in various inscriptions.

ಸಾವನ್ತ; Sāvanta: s.a. ಸಾಮಂತ; Sāmanta; (EC. IX(R), Bl.434, 1284).

ಸ್ಥಾನಾನ್ತರಿಕ; Sthānāntarika: ಯಾವದೊಂದು ಸ್ಥಳದ ಅಥವಾ ಪ್ರದೇಶದ ಅಧಿಕಾರಿ; Officer of a region or locality; (EI. VI, 13 B. 13th cent.).

ಸಿ(ಶಿ)ರಪ್ರಧಾನ; Si(Śi)rapradhāna: s.a. ಮಹಾಪ್ರಧಾನ; Mahāpradhāna; ರಾಯಮಹಾರಾಯರಸರ ಪ್ರಧಾನನಾದ ಮಹಾಪ್ರಧಾನಂ ನಾಗಂಣದಣ್ಣಾಯ್ಕ ಒಡೆಯರು; (EC. IX(O), Dv.29, 1312; EC. III(R), Nj.377, 1502).

ಸಿರಿಕರಣ; Sirikaraṇa: s.a. ಶ್ರೀಕರಣ; Śrīkaraṇa above; (KI. II, 26, 1174; ಕು.ವ್ಯಾ.ಭಾ. ಉದ್ಯೋಗ ಪ. Ku.Vyā.Bhā.Udyōga Pa, VIII, 40, c.1400).

ಸುದ್ದಿಕಾರ; Suddikāra: ವರದಿಗಾರ, ವಿವಿಧ ಪ್ರದೇಶಗಳಿಂದ ಸುದ್ದಿಯನ್ನು ತರುವ ಅಧಿಕಾರಿ; Reporter, person bringing news from different regions; ಅನ್ತು ಪೊಕ್ಕು ನಿಜರಾಜಮಂದಿರದ ಸ್ಥಾನಮಂಟಪದೊಳೋಲಗಂಗೊಟ್ಟು ವೀರನೊಳಂಬಂ ವೀರಮೇಳಾಪಕದೊಳಿರ್ದ್ದು ವಾರ್ತಾಪ್ರಪಂಚಮಂ ತಂತಮ್ಮ ಸುದ್ದಿಕಾಱರಿಂ ಕೇಳ್ದು; (SII. XX, 49, 1076). Cf. Praṭivēdakā in Aśokan Edicts.

ಸುರಿತಾಳ; Suritāḷa: s.a. ಸುರತಾಣ; Suratāṇa; ಸುರಿತಾಳನ ವಜೀರ ಗೋವೆಯ ರಾಜೆಯವ ಆಳುತಂ; (KI. I, 67, 1494).

ಸೂಳಾಯತರಧಿಷ್ಠಾಯಕ; Sūḷāyatarar-adhishṭhāyaka: ದೂತರ ಮುಖ್ಯಸ್ಥ; Chief of messengers; (EI. XXVII, 15, 1114).

ಸೂಳಾಯಿತ, ಸೂಳಾಯ್ತ; Sūḷāyita, Sūḷayta: ದೂತ, ಓಲೆಯಕಾರ, ಹರಿಕಾರ; Messenger; (EC. XII(O), Ti.39, 1291; ಕ.ಕಾ. Ka.Kā, X, II, 106, Va, ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā.Pa, XV, 21, c. 1400).

ಸೇನಬೋವ, ಸೇನುಬೋವ; Sēnabōva, Sēnubōva: (1) ಗ್ರಾಮದ ಲೆಕ್ಕಾಧಿಕಾರಿ; Village Accountant; (2) ಶಾಸನಗಳ ಕರಡನ್ನು ತಯಾರಿಸುವ ಅಧಿಕಾರಿ; Officer drafting the texts of inscriptions; (SII. XVIII, 61, 1048); ಈ ಶಬ್ದವು ಸೇನುಬೋಗ, ಸೇನುಬೋಗಿಕ, ಸೇನಭಾಗ ಇತ್ಯಾದಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಅಸಂಖ್ಯ ಶಾಸನಗಳಲ್ಲಿ ಬರುತ್ತದೆ. This term figures in large number of inscriptions in different forms like Sēnubōga, Sēnubōgika, Sēnabhāga etc.

ಸೇ(ಶೇ)ನಬೋವಿಕೆ; Sē(Śē)nabōvike: ಸೇನಬೋವನ ಅಧಿಕಾರ; Office of Sēnabōva; (SII. XVIII, 437, 1682).

ಸೌಧರೆ; Saudhare: s.a. ಚೌಧೊರೆ; Chaudhore above; (APGAS. 3, Mn.60, 1166).

ಹರಿಕಾರ; Harikāra: ದೂತ, ಸುದ್ದಿತರುವವ; Messenger; Courier; (SII. XV, 50, 1156).

ಹಿರಿಯ ಸೇನಬೋವ; Hiriya Sēnabōva: ಗ್ರಾಮದ ಹಿರಿಯ ಲೆಕ್ಕಾಧಿಕಾರಿ; Senior Accountant of a village; (SII. XV, 135, 1179). See Sēnabōva above.

ಹಿರಿಯ ಹೆಗ್ಗಡೆ; Hiriya Heggaḍe: ಗ್ರಾಮದ ಹಿರಿಯ ಅಧಿಕಾರಿ; Senior Headman of village; (SII. XV, 30, 1145).

ಹೆಗ್ಗಡಿಕೆ; Heggaḍike: ಹೆಗ್ಗಡೆತನ; Office of Heggade; ಅರ್ಘ್ಯದ ಹರಿಹರ ಪಟ್ಟವರ್ದ್ಧನರ ಹೆಗ್ಗಡಿಕೆಯಲು; (EC. V(O), Cn.269, 1276).

ಹೆಗ್ಗಡಿತಿ; Heggaḍiti: ಹೆಗ್ಗಡೆ ಶಬ್ದದ ಸ್ತ್ರೀಲಿಂಗ ರೂಪ; ಹೆಗ್ಗಡೆಯ ಹೆಂಡತಿ; ಹೆಗ್ಗಡೆತನ ವಹಿಸಿದ ಸ್ತ್ರೀ ಅಧಿಕಾರಿ; Feminine form of Heggaḍe; Wife of a Heggaḍe; A female village officer; ಆತನ ಕುಲವಧು ಭುವನಖ್ಯಾತೆಯೆನಲ್ ನೆಗಳ್ದ ಹೆಗ್ಗಡಿತಿ ಮಾಚಲೆ; (SII. IX, I, 298, 1196).

ಹೆರ್ಗ್ಗಡೆ, ಹೆಗ್ಗಡೆ; Herggaḍe, Heggaḍe: s.a. ಪೆರ್ಗ್ಗಡೆ; Perggaḍe above; (SII. IX, I, 56, 908-09).

೩. ಸಾಮಾನ್ಯ ಆಡಳಿತೆಗೆ ಸಂಬಂಧಿಸಿದ ಇತರ ಪದಗಳು

3. OTHER TERMS RELATING TO GENERAL ADMINISTRAION

ಅಚಾಟಭಟಪ್ರವೇಶ್ಯ; Achāṭa-bhaṭa-pravēśya: ಪೋಲಿಸ ಮತ್ತು ಸೈನಿಕರ ಪ್ರವೇಶಕ್ಕೆ ನಿರ್ಬಂಧ; Prohibitting the entry of the police and soldiers; (EI. IX, 45, 595).

ಅಧಿಕಾರ ಮುದ್ರೆ; Adhikāra-mudre: ಅಧಿಕಾರವನ್ನು ಸೂಚಿಸುವ ಮುದ್ರೆ; Seal of office; (ಹ.ಕಾ. Ha.Kā, 11, 38, 13th cent.).

ಅನಂಗುಲೀಪ್ರೇಕ್ಷಣೀಯ; Anangulī-prēkshaṇīya: ಅಧಿಕಾರಿಗಳು ಕೈ ಹಾಕದಿರುವದು; Prohibitting officers from interfering; ರಾಜಕೀಯಾಣಾಂ ಅನಂಗುಲೀಪ್ರೇಕ್ಷಣೀಯಂ; (EI. III, 30, 1191).

ಆಚಾರವ್ಯವಸ್ಥೆ; Āchāra-vyavasthe: ಸಾರ್ವಜನಿಕರ ರೀತಿ-ನೀತಿಗಳ ವ್ಯವಸ್ಥೆ, ನಡವಳಿಕೆಯ ನಿಯಮು; Regulating of social behaviour; Code of conduct; ಪೊರಿಗೆಜೆಯ ಮಹಾಜನಕ್ಕುಂ ನಗರಕ್ಕುಂ ...... ಕೊಟ್ಟ ಆಚಾರವ್ಯವಸ್ಥೆ; (EI. XIV, 14, 725).

ಆಜ್ಞಾಮುದ್ರಿತ; Ājnāmudrita: ಆಜ್ಞೆಗೊಳಗಾದ, ಆಜ್ಞೆಯಿಂದ ನಿರ್ಬಂಧಿತ; Given under seal, issued

under order; (ಪಂ.ರಾ. Paṁ.Rā, I, 69, 13th cent.).

ಆಣೆ; Āṇe: ಆಜ್ಞೆ, ಅಪ್ಪಣೆ; Order; ಆಣೆಯಂ ಮಿಕ್ಕರೆ ಪಣ; (SII. XV, 522, 10th cent.).

ಏಕಾಂತಭವನ; Ēkānta-bhavana: ಆಪ್ತಾಲೋಚನೆಯ ಗೃಹ; Confidential Room; (ಕು.ವ್ಯಾ.ಭಾ.ಸಭಾ ಪ., Ku.Vyā.Bhā.Sabhā Pa., XI, 12, c.1400).

ಓಲಗಶಾಲೆ; Ōlagaśāle: ರಾಜನ ಆಸ್ಥಾನ, ಸಭಾಗೃಹ; Royal audiance hall, Assembly hall; (SII. XX, 179, 12th cent.).

ಚತುರುಪಧಾಶುದ್ಧಿ; Chaturūpadhāśuddhi: ನಾಲ್ಕು ವಿದಧ ಆಮಿಷಗಳಿಂದ ದೂರವಿರುವದು; (1) ಧರ್ಮೋಪಧಾ; ಧರ್ಮವಂಚನೆ; Religious allurement; (2) ಅರ್ಥೋಪಧಾ; ದ್ರವ್ಯವಂಚನೆ; Monetary allurement; (3) ಭಯೋಪಧಾ; ಭಯ ತೋರಿಸಿ ವಂಚಿಸುವದು; Allurement under the pressure of fear (4) ಕಾಮೋಪಧಾ; ಕಾಮದ ಹೆಸರಿನಲ್ಲಿ ವಂಚನೆ; Love allurement; (Apte, p.449); ದಂಢಾಧೀಶ್ವರಂ ತಾನೆನೆ ಚತುರುಪಧಾಶುದ್ಧಿಯಂ ತಾಳ್ದಿದಂ; (SII. XI, II 116, 1075; ಅ.ಪು. A.P., XIII, 58, 13th cent.). See Artha, I, 6, X, Upadhā.

ಚಾವಡಿ; Chāvaḍi: (1) ಆಸ್ಥಾನ, ಕಚೇರಿ; The court, Office; ವೀರಪ್ರತಾಪ ಬುಕ್ಕರಾಯ ಚಾವಡಿ ಒಳಗೆ; (EC. X(O), Gb.1388; ಸೋ.ಚಾ. Sō.Chā. I, 107, 13th cent.). (2) ಗ್ರಾಮದ ಮುಖ್ಯಾಧಿಕಾರಿಯ ಕಚೇರಿ; Office of the village headman. ಮುಳುವಾಯಿ ಚಾವಡಿಗೆ ಸಲ್ಲುವ; (EC. X(O), Mb. 18, 1234).

ಜಗತ್ತು; Jagattu: ಜನಸಮೂಹ; Congregation of people, Assembly; ಊರಜಗತ್ತು ...... ಕುಂದಾಪುರದೊಳಗಣ ಗ್ರಾಮಜಗತ್ತು; (SII. IX, II, 441, 1425).

ಜನವೇದಿ; Janavēdi: ಜನರು ನೆರೆಯುವ ಸಾರ್ವಜನಿಕ ಭವನ; Public Hall; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā.Pa, VI, 24, c.1400).

ಧ್ರುವವುಂಡಿಗೆ; Dhruva-vuṇḍige: ಶಾಶ್ವತ ನಿರ್ಣಯ; Irrevocable decision; ಅಶೇಷ ಮಹಾಜನಂಗಳು ಸಭಾತಳಕೆ ಬಿಜಯಂಗೆಯ್ದು ತಂಮೊಳು ಸರ್ಬೈಕಮತ್ಯವಾಗಿ ಹಳ್ಳಿಗಳನು ಧ್ರುವ ವುಂಡಿಗೆಯಾಗಿ ಹಚ್ಚಿಕೊಂಡ ಕ್ರಮ (EC. VI(O), Tk.53, 1290).

ನಯಶಾಸ್ತ್ರ; Nayaśāstra: s.a. ನೀತಿಶಾಸ್ತ್ರ; ರಾಜನೀತಿ; Nītiśāstra; Rājanīti; (ಮ.ಪು. Ma.Pu. IX, 63, 12th cent.).

ನಾಡು; Nāḍu: ಆಡಳಿತ ಪ್ರದೇಶದ ಪ್ರಮುಖರ ಸಭೆ; Assembly of representatives of an administrative division; ನಾಡುಗಳುಂ ಸಮಸ್ತ ಪ್ರಜೆಗಳುಂ; (SII. XXI, 111, 1140).

ನೀತಿಶಾಸ್ತ್ರ; Nītiśāstra: s.a. ರಾಜನೀತಿ; Rājanīti; (EC. X(O), Mb.263, 5th cent.; ಕು.ವ್ಯಾ.ಭಾ.ಅರಣ್ಯ.ಪ. Ku.Vyā.Bhā. Araṇya Pa. XX, 11, c.1400).

ನೃಪನೀತಿ; Nṛipanīti: s.a. ರಾಜನೀತಿ; Rājanīti; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā Sabhā Pa, I, 47, c.1400).

ನೃಪಶಾಸ್ತ್ರ; Nṛipaśāstra: s.a. ರಾಜನೀತಿ; Rājanīti; (ಅಜಿ.ಪು. Aji.Pu. I, 27, 10th cent.).

ನೆಲೆವನೆ; Nelevane: ಸ್ಥಿರವಾಗಿ ನೆಲೆಸುವ ಮನೆ; ರಾಜಧಾನಿ; Permanent residence; Capital city; (ಕ.ಕಾ, Ka.Kā, 26, 13th cent.).

ನೆಲೆವೀಡು; Nelevīḍu: ರಾಜಧಾನಿ; ಮುಖ್ಯಸ್ಥಳ; Capital; Head quarters; (SII. XX, 21, 1019).

ಪ್ರಭುಶಕ್ತಿ; Prabhu-śakti: ಆಡಳಿತೆಯ ಯೋಗ್ಯತೆ, ಆಡಳಿತ ನಡೆಸುವ ಶಕ್ತಿ; ಆಡಳಿತಗಾರನಲ್ಲಿ ಅಗತ್ಯವಾಗಿ ಇರಬೇಕಾದ ಪ್ರಭು, ಮಂತ್ರ, ಉತ್ಸಾಹ ಶಕ್ತಿಗಳಲ್ಲಿ ಒಂದು; Capacity to rule; Qualities of a ruler; One of the three essential qualities of a ruler or administrator, viz., Prabhu (rulership), Mantra (councelling) and Utsāha (energy); ಮಹಾಮಾತ್ಯಪದವೀ ವಿರಾಜಮಾನ ಮಾನೋನ್ನತ ಪ್ರಭು ಮಂತ್ರೋತ್ಸಾಹ ಶಕ್ತಿತ್ರಯಸಂಪನ್ನ; (EI. XVI, 8A, 1102).

ಪೃಥ್ವೀನಾಡು; Pṛithvīnāḍu: ಆಡಳಿತ ಪ್ರದೇಶವೊಂದರ ಪ್ರತಿನಿಧಿಗಳ ಅಥವಾ ಹಿರಿಯರ ಸಭೆ; An assembly of representatives of elders of an administrative division; ನಗರಖಂಡನಾಡೊಳಗೆ ಪ್ರಿಥ್ವೀನಾಡು ನೆರೆದು; (SII. XVIII, 257, 1280).

ಪುರಪಟ್ಟಣ; Pura-paṭṭaṇa: ನಾಗರಿಕರ ಸಭೆ; Assembly of the citizens; ಪುರ ಪಟ್ಟಣದ ಸನ್ನಿಧಾನದಲು; (SII. XV, 122, 1173).

ಬಯಿಸಣಿಗೆ; Bayisaṇige: ಸಭೆ ಸೇರುವುದು; ಕಾಲುಮಡಿಚಿ ಕುಳಿತುಕೊಳ್ಳುವುದು; To meet, to assemble for a meeting; squatling with cross-legs; ಸಮಸ್ತ ನಖರಂಗಳುಂ ಹಿರಿಸಿಂಗಿಯಲು ಶ್ರೀಮತು ಹೆಬ್ಬೇಶ್ವರ ದೇವರ ದೇವಾಯತನದೊಳಶೇಷಂ ಬಯಸಣಿಗೆಯಾಗಿರ್ದ್ದು; (KI. I, 25, 1186).

ಮತ್ಸ್ಯನ್ಯಾಯ; ಮಾತ್ಸ್ಯನ್ಯಾಯ; Matsyanyāya; Mātsyanyāya: ದೊಡ್ಡ ಮೀನು, ಚಿಕ್ಕ ಮೀನನ್ನು ತಿನ್ನುವುದು; ಅರಾಜಕತೆ; Big fish eating the small fish; Anarchy (ಆದಿ.ಪು. Ādi.Pu. VIII, 74ವ, Pr., 10th cent.).

ಮಹಾನಾಡು; Mahānāḍu: ಯಾವದೊಂದು ಆಡಳಿತ ವಿಭಾಗದ ಪ್ರತಿನಿಧಿಗಳ ಸಭೆ. ಇವರು ಅಂಥ ಆಡಳಿತ ವಿಭಾಗಗಳ ಆಡಳಿತ ಮತ್ತು ಇತರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು; Assembly of representatives of an administrative division looking after the administration and other affairs of such a division; ಮಣಿಂಗವಳ್ಳಿಯಲ್ ಮಹಾನಾಡಾಗಿ ನೆರೆದೇಕಸ್ಥರಾಗಿರ್ದ್ದು; (EI. V, 3A, 1161; KI. I, 25, 1186).

ಮಹಾಸಭೆ. Mahāsabhe: ಗ್ರಾಮದ ಪ್ರತಿನಿಧಿಗಳ ಸಭೆ, ಮಹಾಜನರ ಸಭೆ; Assembly of representatives of the village; Assembly of Mahājanas; ಹಾರುವನಹಳ್ಳಿಯ ಅಶೇಷ ಮಹಾಜನಂಗಳು ಸಭಾಮಂಟಪದಲು ಮಹಾಸಭೆಯಾಗಿ ನೆರೆದಿದ್ದಲ್ಲಿ; (EC. V(O), Ak.123, 1234; SII. XX, 212, 13th cent.).

ಮಂತ್ರಶಕ್ತಿ; Mantra-śakti: ಆಲೋಚನಾಸಾಮರ್ಥ್ಯ ಆಡಳಿತಗಾರನಲ್ಲಿ ಇರಬೇಕಾದ ಮೂರುಶಕ್ತಿಗಳಲ್ಲಿ ಒಂದು; Councelling capacity; one of the three qualities of an administrator; (EI. XVI, 8A, 1102). Cf. ಪ್ರಭುಶಕ್ತಿ; Prabhu-śakti above.

ಮಂತ್ರಶಾಲೆ; Mantraśāle: ಆಪ್ತಾಲೋಚನೆಯ ಸಭಾಗೃಹ; Meeting hall of the ministers or officers; (ಪಂ.ಭಾ. Paṁ.Bhā. XII, 46 ವ., Pr. 10th cent.; ಶಾಂ.ಪು. Śāṁ.Pu. II, 70 ವ., Pr. 10th cent.; ನೇ.ಪು. Nē.Pu. 11.48, ಪ, 13th cent.; ಮ.ಪು. Ma.Pu., IX, 59 ವ., Pr. 12th cent.).

ಮಂತ್ರಾಗಾರ; Mantrāgāra: s.a. ಮಂತ್ರಶಾಲೆ; Mantraśāle above; (ಚಂ.ಪು. Cham.Pu., 9, 130).

ಮಂತ್ರಾಲೋಚನೆ; Mantrālōchane: ರಾಜತಂತ್ರದ ವಿಷಯಗಳ ಆಪ್ತಾಲೋಚನೆ, ಚರ್ಚೆ; Councelling, Confidential discussions, consultation in political matters; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā.Pa, 1, 40, c.1400).

ರಾಜಕಾರ್ಯ; Rājakārya: ರಾಜ್ಯದಾಡಳಿತ; ಸರಕಾರದ ಕಾರ್ಯಕಲಾಪ; Administration of the State; Governmental transactions; (KI. III, I, 13, 1542; ಕು.ವ್ಯಾ.ಭಾ.ಆದಿ.ಪ. Ku.Vyā.Bhā.Ādi.Pa, III, 14, c.1400).

ರಾಜಕೀಯ; Rājakīya: ಸರಕಾರದ ಅಧಿಕಾರಿ; Government Officer; ಸಮಸ್ತ ರಾಜಕೀಯಾನಾಂ ಅಹಸ್ತಪ್ರಕ್ಷೇಪಣೀಯೋ; (EI. XXIII, 2, 810).

ರಾಜಧನ; Rājadhna: ರಾಜನ ಅಥವಾ ಸರಕಾರದ ಆಸ್ತಿ; Royal or Government property; (EC. VII(O), Hn.125, 1458-59).

ರಾಜಧರ್ಮ; Rājadharma: (1)ರಾಜನ ಕರ್ತವ್ಯ ಮತ್ತು ಅವನ ಹೊಣೆ; King's duties and responsibilities; (2) ರಾಜನೀತಿ; Science of administration; (EC. X(O), Mb.157, 1338).

ರಾಜಧಾನಿ; ರಾಜಧಾನಿಪಟ್ಟಣ; Rājadhāni; Rājadhāni-paṭṭaṇa: ರಾಜ್ಯದ ನೆಲೆವೀಡು; Capital of the State; (SII. XV, 100, 1161; Ibid. XVIII, 133, 1127).

ರಾಜನಿಯಮ; Rājaniyama: ಸರಕಾರದ ನಿಯಮಗಳು; Rules of the Government; (EI. II, 15, 1000).

ರಾಜವಿದ್ಯಾ; Rājavidyā: ರಾಜನೀತಿ; Science of administration; (EI. XIX, 29A, 1045).

ರಾಜಶ್ರಾವಿತ; Rājaśrāvita: ಅರಸನ ಘೋಷಣೆ; ಸರಕಾರದ ಪ್ರಕಟಣೆ; Royal decree; (SII. XI, I, 13, 869).

ರಾಜ್ಯಸ್ಥಿತಿ; Rājyasthiti: ರಾಜ್ಯದ ಸ್ಥಿತಿಗತಿ; Conditions of the State; (ಕು.ವ್ಯಾ.ಭಾ.ಆದಿ.ಪ. Ku.Vyā.Bhā. Ādi.Pa, IV, 28, c.1400).

ವಜ್ರಬೈಸಣಿಗೆ; Vajrabaisaṇige: ಸಭೆ ಸೇರುವಧು; ಸಭೆಯಲ್ಲಿ ಕುಳ್ಳಿರುವದು; ಕಾಲು ಮಡಿಚಿ ಕುಳಿತುಕೊಳ್ಳುವುದು; An Assembly for a meeting; Sitting in an assembly; Squatting with cross-legs; ವಜ್ರಬೈಸಣಿಗೆಯಾಗಿ ಕುಳ್ಳಿರ್ದ್ದು; (EI. XIX, 3, 1246).

ವಾರ್ತಾಪ್ರಪಂಚ; Vārtāprapañcha: ಬೇರೆ ಬೇರೆ ಕಡೆಗಳಿಂದ ಬರುವ ಸುದ್ದಿಗಳ ವಿವರ; Information from different sources; ವೀರಮೇಳಾಪಕದೊಳಿರ್ದು ವಾರ್ತಾಪ್ರಪಂಚಮಂ ತಂತಮ್ಮ ಸುದ್ದಿಕಾರರಿಂ ಕೇಳ್ದು; (SII. XX, 49, 1076).

ಶಕ್ತಿತ್ರಯ; Śakti-traya; ಆಡಳಿತಕ್ಕೆ ಅತ್ಯವಶ್ಯಕವಾದ ಪ್ರಭು, ಮಂತ್ರ, ಉತ್ಸಾಹ ಎಂಬ ಮೂರು ಶಕ್ತಿಗಳು; Three essential qualities-quality of governing, planning and activity (ಅ.ಪು. A.Pu. XIII, 58, 13th cent.).

ಶಾಸನವರ್ತಿ; Śāsanavarti: ಶಾಸನದ ವಿಷಯಕ್ಕೆ ಒಳಪಟ್ಟು; As per the contents of the document; (SII. XX, 49, 1076).

ಸಪ್ತವ್ಯಸನ; Sapta-vyasana: ಏಳು ವ್ಯಸನಗಳು; ಸ್ತ್ರೀ, ಅಕ್ಷ, ಮೃಗಯಾ, ಪಾನ, ವಾಕ್ಪಾರುಷ್ಯ, ದಂಡಮಾರುಷ್ಯ ಮತ್ತು ಅರ್ಥದೂಷಣೆ ಎಂಬ ಏಳು ವ್ಯಸನಗಳು; The seven vices; sex, gambling, hunting, wine, rude language, cruel punishment and corruption; (ಪಂ.ಭಾ. Paṁ.bhā., VI, 67 ವ, Pr. 10th cent.).

ಸಪ್ತಾಂಗ; Saptānga: ರಾಜ್ಯದ ಏಳು ಅಂಗಗಳು; ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ದುರ್ಗ, ಬಲ, ಜನಪದ ಎಂಬ ಏಳು ಅಂಗಗಳು. Seven constituents or elements of a State such as the king, minister, ally, treasury, fort, army and country; 1. ಸ್ವಾಮ್ಯಮಾತ್ಯ ಸುಹೃತ್ಕೋಶ ರಾಷ್ಟ್ರದುರ್ಗ ಬಲಾನ್ವಿತ (ಅಮರಕೋಶ) 2. ಅರಸು- ಪೆರ್ಗ್ಗಡೆ, ಜನಪದಂ, ದುರ್ಗಂ ಭಂಡಾರಂ ಸೈನ್ಯ ನಿಜಪ್ರಿಯ ಕೂಡೆ ಸಪ್ತಾಂಗಸಂಪನ್ನವೆನಿಸುವ ರಾಜ್ಯಮಕ್ಕು (ಮಂಗರಾಜ ನಿಘಂಟು).

ಸಪ್ತಾಂಗರಾಜ್ಯ; Saptānga-rājya: ಸ್ವಾಮಿ, ಅಮಾತ್ಯ, ಜನಪದ, ಕೋಶ, ಬಲ, ದುರ್ಗ, ಮಿತ್ರ ಎಂಬ ಏಳು ಅಂಗಗಳಿಂದ ಕೂಡಿದ ರಾಜ್ಯ; State with seven constituents like King, Ministers, Treasury, Army, Country, Fort and Ally; (EC. VIII(O), Tl.192, 1103).

ಸರ್ಬ್ಬೈಕಮತ್ಯ; Sarbbaikamatya: ಸಭೆಯಲ್ಲಿ ಒಂದೇ ಅಭಿಪ್ರಾಯ ಹೊಂದುವುದು; Unanimity of opinion in the assembly; ಅಶೇಷ ಮಹಾಜನಂಗಳು ಸಭಾಸ್ಥಳಕೆ ಬಿಜಯಂ ಗೆಯ್ದು ತಮ್ಮೊಳು ಸರ್ಬ್ಬೈಕಮತ್ಯವಾಗಿ; (EC. VI(O), Tk.53, 1290).

ಸಭಾಮಂಟಪ; Sabhā-manṭapa: ಸಭೆ ನೆರೆಯುವ ಮಂಟಪ; Assembly hall; (ಪಂ.ಭಾ. Paṁ.Bhā, VI, 5ವ. Pr. 10th cent.).

ಸಭಾಸದ; Sabhāsada: ಸಭಿಕ; A member of the assembly; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā. Sabhā.Pa., XIV, 80, c.1400).

ಸಭಾಸ್ಥಳ; Sabhāsthaḷa: ಸಭೆ ಕೂಡುವ ಸ್ಥಳ; Place where the assembly meets; (EC. V(O), Ak.158, 1324).

ಸಭೆ; Sabhe: ಓಲಗ, ಪರಿಷತ್ತು; The assembly; ವಿಜಯಪುರಾಶ್ವಸಭೌಘೋಯಂ ವೇದನಾದಮನೋಹರಃ; (SII. XVIII, 271, 1304; ಕು.ವ್ಯಾ.ಭಾ.ಸಭಾ.ಪ. Ku.Vyā.Bhā.Sabhā.Pa., XIV, 81, c.1400).

ಸವಕಟ್ಟು, ಸಮಕಟ್ಟು; Savakaṭṭu, Samakaṭṭu: ವ್ಯವಸ್ಥೆ; Arrangement; regulation; (SII. XX, 111, 1140).

ಸ್ಥಾನನಿಯಮ; Sthāna-niyama: ಆಯಾ ಸ್ಥಳಕ್ಕೆ ಅನುಗುಣವಾಗಿ ಆದ ನಿಯಮಗಳು; Local rules and regulations; (EI. II, 15, 1000).

ಸ್ಥಿರಶಿಬಿರ; Sthira-śibira: ಶಾಶ್ವತ ನೆಲೆ, ರಾಜಧಾನಿ; permanent headquarters, capital; (IKD. 10, 1043).

ಹಸ್ತಪ್ರಕ್ಷೇಪ; Hastaprakshēpa: ಕೈ ಹಾಕುವಿಕೆ; ಅಡ್ಡಿಯನ್ನುಂಟುಮಾಡುವುದು; Interference; ಸಮಸ್ತ ರಾಜಕೀಯಾನಾಮಹಸ್ತಪ್ರಕ್ಷೇಪಣೀಯೇ; (EI. XXIII, 2, 810).

ಹುಟ್ಟುಕಟ್ಟಳೆ; Huṭṭukaṭṭale: ಮೊದಲಿನಿಂದ ಬಂದ ಪದ್ಧತಿ; ಪರಂಪರೆ; Tradition; ಗಡಿನಿಡಿ ಹುಟ್ಟುಕಟ್ಟಳೆಯ ವಿವರ; (SII. IX, II, 457, 1455).

ಅಧ್ಯಾಯ ೨ CHAPTER II

ಅರ್ಥ ವ್ಯವಸ್ಥೆ
FINANCE

೧. ಅಧಿಕಾರಿ, ಅಧಿಕಾರವಾಚಕ ಪದಗಳು

1. TERMS DENOTING OFFICERS AND OFFICES

ಅಚ್ಚುಪನ್ನಾಯದಧಿಷ್ಠಾಯಕ; Achchupannāyad-adhishṭhāyaka: ಅಚ್ಚು ಪನ್ನಾಯ ಕರಕ್ಕೆ ಸಂಬಂಧಿಸಿದ ಅಧಿಕಾರಿ; An officer incharge of Achchupannāya tax; (EI. XVI, 8(A) 1102; SII. XVIII, 146, 1142); See ಅಚ್ಚುಪನ್ನಾಯ; Achchupannāya, below. ಶ್ರೀಮತಚ್ಚುಪನ್ನಾಯದ ಧಿಷ್ಠಾಯಕ ಶ್ರೀಮತು ಬಮ್ಮರಸರು (EC. XI(O), Dg. 12, 1197; SII. IX, I, 198, 1119; Ibid. XVIII, 146, 1142).

ಅರ್ತ್ಥಾಧಿಕಾರಿ; Arthādhikāri: ಹಣಕಾಸು ವ್ಯವಹಾರಗಳ ಅಧಿಕಾರಿ; Finance Officer, ಬನವಾಸಿ ಪನ್ನಿಚ್ಛಾಸಿರಕ್ಕಮರ್ತ್ಥಾಧಿಕಾರಿಯುಂ; (EC. VII(O), Sk.130, 1068).

ಆಣಿಕಾಱ; Āṇikāṟa: ಸ್ವರ್ಣ ಮತ್ತು ರತ್ನ ಪರೀಕ್ಷಕ; Examiner of gold and Jewels; ಆಣಿಕಾಱ ನಾಗಿಸೆಟ್ಟಿಯರು; (SII. XV, 119, 1173; Ibid. 62, 1184).

ಆಯದಾಚಾರ್ಯ್ಯ; Āyadāchārya: ರಾಜ್ಯದ ಆದಾಯದ ಮುಖ್ಯ ಅಧಿಕಾರಿ; Officer in charge of the State revenue; Revenue Officer; (EC. VII(O), Sk.120, 1048).

ಕಣಕ; Kaṇaka: ಗಣಕ, ಕರಣಿಕ, ಲೆಕ್ಕಿಗ; Accountant; (EI. XXXVIII, 3, 9th cent); ಕಣಕ ಪಿರಿಯಾಡ ಪೆರ್ಗ್ಗಡೆಯ ಮನೋವಲ್ಲಭೆ; (SII. IX, I, 145, 1079).

ಕರಣ; Karaṇa: ಸೇನಬೋವ; ಗ್ರಾಮದ ಲೆಕ್ಕಪತ್ರಗಳ ಅಧಿಕಾರಿ; Village Accountant; (APGAS. III, Rc.1, 8th cent.; SII. XVIII, 41, 996; Ibid. XX, 175, 1190; KI. VI, 42, 1237); ತೆ. ಕರಣಮು; Karaṇamu; ತ. ಕರಣಂ; Karaṇaṁ.

ಸೋಮದೇವ ಸೂರಿಯ ನೀತಿವಾಕ್ಯಾಮೃತದಲ್ಲಿ (೧೦ನೇ ಶತಮಾನ) ಐದು ವಿಧ ಕರಣರ ಉಲ್ಲೇಖವಿದೆ. (೧) ಆದಾಯಕ, (೨) ನಿಬಂಧಕ, (೩) ಪ್ರತಿಕಂಟಕ, (೪) ನಿಧಿ ಗ್ರಾಹಕ ಮತ್ತು (೫) ರಾಜಾಧ್ಯಕ್ಷ. ಇದಕ್ಕೆ ಕನ್ನಡ ಟೀಕೆಯನ್ನು ಬರೆದ ನೇಮಿನಾಥನು (೧೨ನೇ ಶತಮಾನ) ಹೀಗೆ ಅರ್ಥಗಳನ್ನು ಕೊಟ್ಟಿದ್ದಾನೆ. (೧) ಹೊನ್ನೆತ್ತುವವ (ಆದಾಯವನ್ನು ಸಂಗ್ರಹಿಸುವವ), (೨) ಕಂಟಕ (ಲೆಕ್ಕ ಪತ್ರಗಳನ್ನಿಡುವವ), (೩) ಮೇಲುಗರಣ (ಕರಣನ

ಮೇಲಾಧಿಕಾರಿ), (೪) ಭಂಡಾರಿ (ಕೋಶಾಧಿಕಾರಿ) ಮತ್ತು (೫) ಅರಸರಧ್ಯಕ್ಷ (ಹಿರಿಯ ಆಡಳಿತಾಧಿಕಾರಿ); (ನೀ.ವಾ. ಕ.ವ್ಯಾಖ್ಯಾನ, ೧೮, ೫೦).

In Sōmadēvasūri's Nītivākyāmṛta (10th cent.) five types of Karaṇas are mentioned. (1) Ādāyaka, (2) Nibandhaka, (3) Pratikanṭaka, (4) Nidhigrāhaka and (5) Rājādhyaksha. In his Kannada commentary on this work, Nēminātha (12th cent.) gives the following equivalents. (1) Collector of Income, (2) Keeper of accounts, (3) Officer above Karaṇa, (4) Treasury officer and (5) Senior administrative officer; (Nī.Vā. Kan.comm.18, 50).

ಕರಣ; Karaṇa: ಗ್ರಾಮದ ಲೆಕ್ಕಪತ್ರಗಳ ಖಾತೆ; Office of the village accountant; ದೀವಳಿಗೆಯ ಪರ್ವ್ವದಂದು ಕರಣಕ್ಕೆ ಇಪ್ಪತ್ತನಾಲ್ಕು ದ್ರಮ್ಮ; (APGAS. III, Wg.18, 932-33); ಕರಣದ ಅಯ್ಚಪಯ್ಯನಾಯಕ; (SII. XI, I, 113, 1074); ಕರಣದ ಲೋಕಣನುಂ; (APGAS. III, Gb.4, 1093); ಕರಣದ ಕಲ್ಲ; (KI. VI, 43, 1238).

ಕರಣವೃತ್ತಿ; Karaṇa-vṛitti: ಗ್ರಾಮದ ಲೆಕ್ಕಪತ್ರಗಳ ಅಧಿಕಾರಿಯ ಹುದ್ದೆ; Office of the village accountant; ನಿನ್ನಯ ಕರಣವೃತ್ತಿಗೆ ಕಠಿಣವಹವೆ ನಮ್ಮ ಮಾತುಗಳು (ಕು.ವ್ಯಾ.ಭಾ.ಸಭಾ.ಪ. Ku.Vuā.Bhā. Sabhā.Pa., XII, 80, c.1400).

ಕರಣಾಧಿಕಾರಿ; Karaṇādhikāri: ಲೆಕ್ಕಪತ್ರಗಳ ಖಾತೆಯ ಅಧಿಕಾರಿ; Officer in charge of the accounts and records; (SII. IX, I, 294, 1164; KI. II, 26, 1174).

ಕರಣಾಧಿಷ್ಠಾಧಿನಾಯಕ; Karaṇādhishṭhādhināyaka: ಲೆಕ್ಕಪತ್ರಗಳ ಖಾತೆಯ ಮುಖ್ಯಾಧಿಕಾರಿ; Head of the Department of account and records; (SII. XV, 122, 1173).

ಕರಣಿಕ; Karaṇika: s.a. ಕರಣ; Karaṇa, ಗ್ರಾಮದ ಲೆಕ್ಕಪತ್ರಗಳ ಅಧಿಕಾರಿ; Village accountant; (ಕು.ವ್ಯಾ.ಭಾ. ಉದ್ಯೋಗ ಪ. Ku.Vyā.Bhā. Udyōga.Pa., II, 26, c.1400); ಚಾವಡಿಯ ಕರಣಿಕರು; (EC. IV(R), Ch.161, 1549; SII. VII, 344, 1392; Ibid. VII, 364, 1499; ಜೈ.ಭಾ. Jai.Bhā, XVII, 14, 16th cent.). Cf. ಕರಣಿಗ; Karaṇiga; (EC. X(O), Mb.124, 9th cent.).

ಕರಣಿಕೆ; Karaṇike: ಕರಣಿಕನ ಹುದ್ದೆ; Office of Karaṇika; (APGAS. IX, 6, 1379).

ಕರಣೀಕ; Karaṇīka: s.a. ಕರಣಿಕ; Karaṇika; (EC. IV(R), Ch.185, 1482; Ibid. XI(O), Hk.120, 1523). Cf. ಕರ್ಣೀಕ; Karṇīka; (EC. VIII(O), Sb.243, 1075).

ಕರವಡದ ಕೇಣಿಕಾರ; Karavaḍada Kēṇikāra: ಸುಂಕದ ಗುತ್ತಿಗೆಗಾರ; Holder of monopoly of tolls; Toll contractor; (SII. XV, 135, 1179).

ಕುಳಕರಣ; Kuḷakaraṇa: ಕುಲಕರಣಿಕೆ; ಅನುವಂಶಿಕವಾಗಿ ಬಂದ ಕರಣದ ಹುದ್ದೆ; Heriditary office of Karaṇa; ಕುಳಕರಣದ ನಾಗದೇವಂ ಬರೆದ; (SII. XVIII, 336, 1073).

ಕುಳಕರಣಿ, ಕುಲ್ಕರಣಿಕ; Kuḷakaraṇi, Kulkarṇika: ಅನುವಂಶಿಕವಾದ ಗ್ರಾಮದ ಲೆಕ್ಕಪತ್ರಗಳ ಅಧಿಕಾರಿ; ಕರಣ; ಸೇನಬೋವ; Village accountant; (SII. XX, 19, 1015; Ibid. XI, I, 75, 1042); ಕುಳಕರಣಿ ಮಾಬಲಾರ್ಯಂ ಬರೆದಂ; (Ibid. XI, II, 128, 1082; EC. VII(O), Sk. 158, 1180; APGAS. IX, 22, 1123; EC. XI, Dg.107, 1516).

ಕೇಣಿಕಾಱರಧಿಷ್ಠಾಯಕ; Kēṇikārar-adhishṭhāyaka: ಗುತ್ತಿಗೆದಾರರ ಮೇಲ್ವಿಚಾರಕ; Supervisor of contractors; .....ಪ್ಪಟೂರ ಟ್ಠಾಣಾಂತರದ ಪಾನುಂಗಲ್ಲುಯ್ಯೂರ ಟ್ಠಾಣಾಂತರದ ಕೇಣಿಕಾಱರಧಿಷ್ಠಾಯಕ ನಾಗವರ್ಮ್ಮರಯ್ಯ; (EI. XVI, 26, 1052).

ಕೊಳಕರಣ; Koḷakaraṇa: s.a. ಕುಳಕರಣ; Kuḷakaraṇa above; (SII. XX, 37, 1075).

ಕೊಳಕರಣಿ; Koḷakaraṇi: s.a. ಕುಳಕರಣಿ; Kuḷakarani above; (SII. IX, I, 177, 1108).

ಕೋಲಕೇಣಿಕಾರ; Kōla-kēṇikāra: ತೆರಿಗೆ ವಸೂಲು ಮಾಡುವ ಹಕ್ಕನ್ನು ಗುತ್ತಿಗೆಯಿಂದ ಪಡೆದ ಅಧಿಕಾರಿ; Official holding the monopoly of collection

of taxes; ಕೋೞಲಕೇಣಿಕಾಱ ಆಚಯ್ಯಂ ಕೋೞಲಕೇಣಿಯಲು ಬಿಟ್ಟು ಮ ೧; (SII. XV, 60, 1184).

ಕೋೞುಕಾಱ; Kōlukāra: ಸೇವಕ, ತೆರಿಗೆಯನ್ನು ವಸೂಲುಮಾಡುವ ಸಹಾಯಕ; An Assistant or servant helping in the collection of taxes; ನಾಲ್ಕುಂ ಹೆಬ್ಬಾಗಿಲಲುಂ ತಳಭೋಗದ ದೆಸೆಯಿಂ ನಡೆವ ಕೋೞುಕಾಱರು; (SII. XV, 60, 1184); ಆ ಹೆಜ್ಜುಂಕಕ್ಕೆ ನಡೆವ ಕೋೞುಕಾಱರು ವರುಷಂಪ್ರತಿ ನಿಬಂಧಿಯಾಗಿ ಮೂಱು ಹಣವ ಕೊಡುತ್ತ ಬಹರು; (EC. VI(O), Tk.80, 1278; Ibid. IX(R), Bl.288, 1231). ತೆ. ಕೋಲವಾಡ; Te. Kōlavāḍa.

ಕೋಶಾಧಿಪ, ಕೋಶಾಧ್ಯಕ್ಷ; Kōśādhīpa, Kōśādhyaksha: ಬೊಕ್ಕಸದ ಮೇಲಧಿಕಾರಿ, ಭಂಡಾರಿಗ; Treasury officer; (ಆದಿ. ಪು. Ādi.Pu. XIV, 45, ವ, Pr. 10th cent. ಶಾಂತೀ. ಪು. Shāṁtī Pu., XV, 90, 13th cent.; EC. V(O), Cn.203, 1123).

ಜಲಗಿನ ಅಧಿಕಾರಿ (ಜರಗಿನ ಅಧಿಕಾರಿ); Jalagina-adhikāri (Jaragina-adhikāri): ಉಸುಕು ಮುಂತಾದವುಗಳಿಂದ ಬೇರ್ಪಡಿಸಲಾದ ಬಂಗಾರದ ಮೇಲಿನ ಸುಂಕಗಳಿಗೆ ಸಂಬಂಧಿಸಿದ ಅಧಿಕಾರಿ; Officer in change of taxes on gold gathered from sand etc.; (EC. VII(O), Sk.164, 1149).

ಜರಗಿನ ತೆರೆ ಸರ್ವ್ವಾಧಿಕಾರಿ; Jaragina tere sarvādhikāri: ಜರಗಿನ ಅಂದರೆ ಉಸುಕು ಮುಂತಾದವುಗಳಿಂದ ಬೇರ್ಪಡಿಸಿದ ಬಂಗಾರದ ಮೇಲಿನ ಸುಂಕಗಳಿಗೆ ಸಂಬಂಧಿಸಿದ ಮುಖ್ಯ ಅಧಿಕಾರಿ; Officer in charge of tax on Jaragu, or gathering gold from sand etc.; (SII. II, 200, 1126).

ತೆಱಕಾಱ; Teṟakāṟa: ಕರ ಸಂಗ್ರಹಿಸುವ ಅಧಿಕಾರಿ; Officer in charge of collection of tax; (ಹ.ಕಾ. Ha.Kā, VIII, 56, 13th cent.).

ತೆಱೆದಾರ; Teṟedāra: s.a. ತೆಱಕಾಱ; Teṟakāṟa; (EC. IX(O), Dv.43, 10th cent.).

ದವಸಾಯದ ಹೆರ್ಗ್ಗಡೆ; Davasāyada Herggaḍe: ಧಾನ್ಯಗಳ ಮೇಲಿನ ಸುಂಕದ ಅಧಿಕಾರಿ; Officer in charge of the tax on grains; (EC. VIII(O), Sb.170, 1128; Ibid. VIII(O), Sb.170, 1126).

ದಂಡಾಯದ ಹೆರ್ಗ್ಗಡೆ; Daṁḍāyada Herggaḍe: ದಂಡಗಳಿಂದ ಬರುವ ಆದಾಯದ ಅಧಿಕಾರಿ; Officer in charge of the income from fines; (SII. XI, I, 50, 1138; EC. XII(O), Tp.66, 1163).

ದ್ರವ್ಯಾಧಿಕಾರ; Dravyādhikāra: ಹಣಕಾಸಿನ ವ್ಯವಸ್ಥೆಗೆ ಸಂಬಂಧಿಸಿದ ಹುದ್ದೆ; Office pertaining to the financial matters; (SII. XVIII, 111, 1115).

ನಾಡ ಸುಂಕವೆರ್ಗ್ಗಡೆ; Nāḍa-sunkaverggaḍe: ಆಡಳಿತ ವಿಭಾಗವೊಂದರ ತೆರಿಗೆಗಳ ಅಧಿಕಾರಿ; Officer in charge of the taxes of an administrative division; Divisional tax commissioner; (SII. XV, 40, 12th cent.; APGAS. III, Mn.49, 1134).

ನಾಡಸೇನಬೋವ; Nāḍasēnabōva: ಆಡಳಿತ ವಿಭಾಗವೊಂದರ ಲೆಕ್ಕಪತ್ರ ಮತ್ತು ದಾಖಲೆಗಳ ಅಧಿಕಾರಿ; An officer in charge of the accounts and records of an administrative division; (EC. VI(O), Cm.89, 1265; Ibid. IX(O), Bn.21, 1342); ನಾಡಸೇನಬೋವ ದೇವಪ್ಪನ ಬರಹ; (EC. VIII(O), Tl. 114, 1379; SII. IX, II, 433, 1408); ಸಾಂತಳಿಗೆಯ ನಾಡಸೇನಬೋವ ನರಹರಿ ಸೇನಬೋವನ ಬರಹ; (EC. VIII(O), Tl.144, 1421).

ನಾಡ ಸೇನಬೋವಿಕೆ; Nāḍasēnabōvike: ಆಡಳಿತ ವಿಭಾಗದ ಸೇನಬೋವನ ಹುದ್ದೆ; Office of the Sēnabōva of an administrative division; (SII. IX, II, 433, 1408).

ಪನ್ನಾಯದಧಿಕಾರಿ; Pannāyad-adhikāri: ಪನ್ನಾಯ ಎಂಬ ಸುಂಕದ ಖಾತೆಯ ಅಧಿಕಾರಿ; Officer in charge of the Pannāya tax; ಪನ್ನಾಯದಧಿಕಾರಿ ಕಲಿದೇವನಾಯಕಂ; (SII. XV, 36, 1148). See ಪನ್ನಾಯ, Pannāya below.

ಪನ್ನಾಯದಧಿಷ್ಠಾಯಕ; Pannāyad-adhisṭhāyaka: ಪನ್ನಾಯ ಸುಂಕದ ಖಾತೆಯ ಮುಖ್ಯಸ್ಥ; Head of the Department of Pannāya tax; (SII. IX, I, 153, 1083; Ibid. IX, I, 181, 1110).

ಪನ್ನಾಯದ ಪೆರ್ಗ್ಗಡೆ; ಪನ್ನಾಯದ ಹೆಗ್ಗಡೆ; Pnnāyada peggaḍe; Pannāyada heggaḍe: ಪನ್ನಾಯ ಸುಂಕವನ್ನು ಸಂಗ್ರಹಿಸುವ ಅಧಿಕಾರಿ; Officer in charge of the collection of Pannāya tax; ಪನ್ನಾಯದ

ಹೆಗ್ಗಡೆ ಲಕ್ಕರಸ; (EC. VII(O), Ci.61, 1125; SII. XV, 120, 1173).

ಪೆರ್ಜುಂಕದ ಕೇಣಿಕಾಱ; Perjjunkada kēṇikāṟa: ಪೆರ್ಜುಂಕರ ಎಂಬ ಸುಂಕದ ಗುತ್ತಿಗೆದಾರ; Lease holder of the tax called Perjunka; ಪೆರ್ಜುಂಕದ ಕೇಣಿಕಾಱ ರಕ್ಕಸಗಂಗನುಂ; (EC. XI(O), Dg.141, 1065). See ಪೆರ್ಜುಂಕ, Perjunka below.

ಪೆರ್ಜುಂಕದ ದಂಡನಾಯಕ; Perjunkada daṇḍanāyaka: ಪೆರ್ಜುಂಕವೆಂಬ ಸುಂಕದ ನಿಯಂತ್ರಕ ಅಧಿಕಾರಿ ; An officer controlling the perjjunka tax; (SII. XVIII, 111, 1115).

ಪೆರ್ಜುಂಕದ ಪೆರ್ಗ್ಗಡೆ; Perjunkada perggaḍe: ಪೆರ್ಜುಂಕವೆಂಬ ಸುಂಕವನ್ನು ವಸೂಲು ಮಾಡುವ ಅಧಿಕಾರಿ; Officer in charge of collection of Perjjunka tax; ಶ್ರೀಮತ್ ಪೆರ್ಜುಂಕದ ಪೆರ್ಗ್ಗಡೆ ಚಟ್ಟಮಯ್ಯ; (EI. XVI, 26, 1052-53; SII. XX, 34, 1053; Ibid. XVIII, 76, 1072).

ಪೆರ್ಜುಂಕದವರು; Perjunkadavaru: ಪೆರ್ಜುಂಕವನ್ನು ಸಂಗ್ರಹಿಸುವವರು; Collectors of Perjunka; ಎರಡಱುನೂಱಱ ಪೆರ್ಜುಂಕದವರು; (EI. XVI, 11B, 1037; EC. VIII(O), Sb. 170. 1126).

ಪೆರ್ಜುಂಕದೊಡೆಯ; Perjunkadoḍeya: s.a. ಪೆರ್ಜುಂಕದ ಪೆರ್ಗ್ಗಡೆ; Perjjunkada perggaḍe; (SII. IX, I, 165, 1099).

ಪೆರ್ಜುಂಕವಡ್ಡರಾವುಳದಧಿಕಾರಿ; Perjjunka-Vaḍḍarāvuḷad-adhikāri: ಪೆರ್ಜುಂಕ ಮತ್ತು ವಡ್ಡರಾವುಳ ಸುಂಕಗಳ ಅಧಿಕಾರಿ; Officer in charge of Perjjunka and Vaḍḍarāvuḷa taxes; (SII. XVIII, 145, 1141). See ವಡ್ಡಾರಾವುಳ, Vaḍḍarāvuḷa below.

ಪೊತ್ಥಗ್ರಾಹಕ; Pottha-grāhaka: ಭಾಂಡಾರಿಗ; ಬೊಕ್ಕಸದ ಅಧಿಕಾರಿ; Treasurer; Treasury officer; (EC. VII(O), Sk.48, 1076).

ಪೊನ್ನಧ್ಯಕ್ಷ; Ponn-adhyaksha: ಭಂಡಾರಿಗ; ಖಜಾನೆಯ ಅಧಿಕಾರಿ; Treasury Officer; (ಧರ್ಮಾ. Dharmā, V, 131, 13th cent.).

ಬಾರಾಸುಂಕದ ಖೇಣಿಕಾರ; Bārāsunkada Khēṇikāra: ಹನ್ನೆರಡು ವಿದಧ ಸುಂಕಗಳ ಗುತ್ತಿಗೆಗಾರ; Person holding the monopoly of 12 kinds of taxes; (APGAS. III, Mn.49, 1134).

ಭಂಡಾರಕ; Bhaṇḍāraka: s.a. ಭಂಡಾರಿಗ; Bhaṇḍāriga below; (EC. VII(R), Ng.143, 1529).

ಭಂಡಾರದ ಸೇನಬೋವ; Bhaṇḍārada sēnabōva: ರಾಜ್ಯದ ಬೊಕ್ಕಸದ ಲೆಕ್ಕ ಪತ್ರಗಳ ಅಧಿಕಾರಿ; Accountant in the treasury office; (ಧರ್ಮಾ. Dharmā, 5, 131, 13th cent.).

ಭಂಡಾರಾಧಿಪತ್ಯ; Bhaṇḍar-ādhipatya: ಭಂಡಾರದ ಮುಖ್ಯಾಧಿಕಾರ; ರಾಜ್ಯದ ಬೊಕ್ಕಸದ ಮುಖ್ಯಾಧಿಕಾರಿಯ ಹುದ್ದೆ; Office of Chief of the Treasury; (ಬ.ಪು. Ba.Pu. II, V, 19, 14th cent.).

ಭಂಡಾರಿ; Bhaṇḍāri: s.a. ಭಂಡಾರಿಗ; Bhaṇḍāriga below; (EC. VII(O), Sk.170, 1064).

ಭಂಡಾರಿಕೆ; Bhaṇḍarike: ಬೊಕ್ಕಸದ ಅಧಿಕಾರಿಯ ಹುದ್ದೆ; Office of the Chief of Treasury; ಹೆಗ್ಗಡಿಕೆ ಭಂಡಾರಿಕೆ ನಿಯೋಗವೆರಡಕ್ಕಂ; (EC. XII(O), Ck.2, 1261).

ಭಂಡಾರಿಗ; Bhaṇḍāriga: ಭಂಡಾರಿ, ಕೋಶಾಧಿಕಾರಿ, ಬೊಕ್ಕಸದ ಅಧಿಕಾರಿ; Treasury officer; ಧನದಂ ಭಂಡಾರಿಗನಾಗೆ; (SII. XX, 112, 1144).

ಮಂಡಲ ಭಂಡಾರಿ; Maṇḍala-bhaṇḍāri: ಮಂಡಲದ ಅಥವಾ ಆಡಳಿತ ವಿಭಾಗವೊಂದರ ಕೋಶಾಧಿಕಾರಿ; Treassury Officer of a Maṇḍala or administrative division; Divisional treasury officer; (SII. VII, 324, 1402).

ಮಾಣಿಕ್ಯ ಭಂಡಾರಿಗ; Māṇikya-bhaṇḍāriga: ಮುತ್ತು ರತ್ನಗಳ ಭಂಡಾರದ ಅಧಿಕಾರಿ; Officer in charge of the treasury of precious stones; (ಶಾಂ.ಪು. Śāṁ.Pu, X, 173 Va. Pr. 10th cent.).

ಮುದ್ರಾವಣದ ಪೆರ್ಗ್ಗಡೆ; Mudrāvaṇda perggaḍe: ಮುದ್ರಾಪಣದ ಅಥವಾ ಧನದ ಬೊಕ್ಕಸದ ಅಧಿಕಾರಿ; Officer in charge of treasury; (EI. XXXVI, 28, 1048); See ಮುದ್ರಾಪಣ, Mudrāpaṇa below.

ಲೆಕ್ಕಿಗ; Lekkiga: ಲೆಕ್ಕಪತ್ರಗಳ ಅಧಿಕಾರಿ; Accountant; ಅಳದಿತ್ತಂ ಬಲಿ ಭಾನುಜಾತನೆಣಿಸಿತ್ತಂ ತೂಕದನ್ದಿತ್ತನ್ತಳಿಪಿಂದಂ ಶಿಬಿಯೆಂದಿವಂ ಪಳಿದು ತಂನಂ ಬೇಳ್ಪುದುಂ ಬೇಳ್ಪವರ್ಗ್ಗಳೆಯಂ ಲೆಕ್ಕಿಗನೊಲುದು ತೂಗನನಿವಾರ್ಯ್ಯಂ ಕೊಟ್ಟಪಂ ನೋಡದಾಗಳನರ್ತ್ಥಾರ್ತ್ಥಿಗೆ ಕೂರ್ತು ಬೊಪ್ಪಣ ಚಮೂಪಂಗಾಸ್ರ್ವಮಂ ದಾನಿಗಳು; (SII. XX, 179, 12th cent.; ಕ.ಕಾ. Ka.Kā, 9, 13th cent.).

ಲೆಖದವ; Lekhadava: ಲೆಕ್ಕದವ, ಲೆಕ್ಕಪತ್ರಗಳ ಅಧಿಕಾರಿ; Accountant; ಮೂಲ ಪತ್ರ ಸಾಧನವ ಬರೆದಾತ ಲೆಖದ ಸಿಂಗಯ್ಯ; (SII. IX, II, 582, 1537).

ಸಮಸ್ತಸುಂಕಸರ್ಬ್ಬಾಧಿಕಾರಿ; Samasta-sunka-sarbbādhikāri: ಎಲ್ಲ ಬಗೆಯ ಸುಂಕಗಳ ಮುಖ್ಯಾಧಿಕಾರಿ; Officer in charge of all kinds of taxes; Chief Tax Officer; (EC. XI(O), Dg.129, 1236).

ಸಾದವೆರ್ಗ್ಗಡೆ; Sādaverggaḍe: ಸಾದವೆಂಬ ಕರಕ್ಕೆ ಸಂಬಂಧಿಸಿದ ಅಧಿಕಾರಿ; Officer in charge of tax called Sāda; (SII. XX, 78, 1118); See ಸಾದ; Sāda below.

ಸುಂಕದಧಿಕಾರಿ; Sunkad-adhikāri: s.a. ಸುಂಕಾಧಿಕಾರಿ; Sunkādhikāri below; ಹಾನುಂಗಲ್ಲಯ್ನೂಱಱ ಸುಂಕದಧಿಕಾರಿ ಕೇಶವದಂಡನಾಯಕರ....; (SII. XX, 142, 1165).

ಸುಂಕದವ; Sunkadava: s.a. ಸುಂಕಿಗ; Sunkiga below (EI. XV, 20, 1172).

ಸುಂಕದ ಹೆಗಡೆ; Sunkada hegaḍe: s.a. ಸುಂಕವೆರ್ಗ್ಗಡೆ; Sunkaverggaḍe below; (SII. XX, 196, 1224).

ಸುಂಕದಾಧಿಪತ್ಯ; Sunkad-ādhipatya: ಸುಂಕಗಳಿಗೆ ಸಂಬಂಧಿಸಿದ ಅಧಿಕಾರ, ಹುದ್ದೆ; Office relating to tolls; ಕಲ್ಲಮಯ್ಯಂ....ನೊಳಂಬವಾಡಿಯೊಳನುನಯದಿ ಸುಂಕದಾಧಿಪತ್ಯದೊಳಿರ್ದ್ದು; (SII. IX, I, 293, 1162).

ಸುಂಕವೆರ್ಗ್ಗಡೆ; Sunkaverggaḍe: ಸುಂಕವನ್ನು ಎತ್ತುವ ಅಧಿಕಾರಿ; Officer for collection of tolls; (EI. XVI, 11B, 1037)

ಸುಂಕಾಧಿಕಾರ, ಸುಂಕದಧಿಕಾರ; Sunkādhikāra, Sunkad-adhikāra: ಸುಂಕಕ್ಕೆ ಸಂಬಂಧಿಸಿದ ಅಧಿಕಾರ, ಹುದ್ದೆ; Office relating to the tolls; ಆವಂಗೆ ಸುಂಕಾಧಿಕಾರವಾದಡಂ; (EC. XI(O), Dg.129, 1236); ತಳಱಿಕೆಯ ಸುಂಕದಧಿಕಾರಂ ವಿಸ್ತಾರಿಸಿ; (EC. VII(O), Sk.242, 1162).

ಸುಂಕಾಧಿಕಾರಿ; Sunkādhikāri: ಯಾವದೊಂದು ಪ್ರದೇಶದ ಸುಂಕವನ್ನೆತ್ತುವ ಅಧಿಕಾರಿ; Officer in charge of tolls of a region; (EI. XV, 20, 1172). Sk. ಶುಲ್ಕಾಧ್ಯಕ್ಷ Śulkādhyaksha.

ಸುಂಕಿಗ; Sunkiga: ಸುಂಕವನ್ನೆತ್ತುವ ಕಿರಿಯ ಅಧಿಕಾರಿ; A junior officer for collecting tolls; (KI. II, 121, 1092; EI. XIX, 4B, 1144).

ಹಿರಿಯ ಭಂಡಾರಿ; Hiriya Bhaṇḍāri: ಬೊಕ್ಕಸದ ಹಿರಿಯ ಅಧಿಕಾರಿ; Senior Treasury Officer; ಹಿರಿಯ ಭಣ್ಡಾರಿ ಹುಳ್ಳಯ್ಯನು (EC. VI(O), Tk. 19, 1158).

ಹಿರಿಯ ಮಾಣಿಕ್ಯ ಭಂಡಾರದಧ್ಯಕ್ಷ; Hiriya-māṇikya-Baṇḍārad-adhyaksha: ಮುತ್ತು ರತ್ನಗಳ ಭಂಡಾರದ ಮುಖ್ಯ ಅಧಿಕಾರಿ; Chief officer of the treasury of precious stones: (EC. V(O), Ak.123, 1237; Ibid. Cn.203, 1224).

ಹಿರಿಯ ಮಾಣಿಕ್ಯ ಭಂಡಾರಿ; Hiriya-māṇikya-bhaṇḍāri: ಮುತ್ತು ರತ್ನಗಳ ಬೊಕ್ಕಸದ ಹಿರಿಯ ಅಧಿಕಾರಿ; Senior officer of the treasury of precious stones; ಹಿರಿಯ ಮಾಣಿಕ್ಯ ಭಂಡಾರಿ ಸಿಂಗಯ್ಯನುಂ; (SII. IX, I, 329, 1209).

ಹೆಜ್ಜುಂಕದ ಅಧಿಕಾರಿ; Hejjunkada adhikāri: ಹೆಜ್ಜುಂಕವೆಂಬ ಸುಂಕದ ಅಧಿಕಾರಿ; Officer in charge of the tax called Hejjunka; (SII. XV, 207, 1192). See ಹೆಜ್ಜುಂಕ > ಪೆರ್ಜ್ಜುಂಕ; Hejjunka > Perjjunka below.

ಹೆಜ್ಜುಂಕದಧಿಷ್ಠಾಯಕ; Hejjunkad-adhishṭhāyaka: ಹೆಜ್ಜುಂಕದ ವರಿಷ್ಠ ಅಧಿಕಾರಿ; High officer in charge of Hejjunka; (SII. IX, I, 215, 1126).

ಹೆಜ್ಜುಂಕದವ; Hejjunkadava: ಹೆಜ್ಜುಂಕವೆಂಬ ಸುಂಕವನ್ನು ವಸೂಲು ಮಾಡುವವ; Collector of Hejjunka tax; (EC. VI(O), Tk.59, 1158).

ಹೆಜ್ಜುಂಕದ ಹೆರ್ಗ್ಗಡೆ; Hejjunkada herggaḍe: ಹೆಜ್ಜುಂಕಕ್ಕೆ ಸಂಬಂಧಿಸಿದ ಸ್ಥಾನಿಕ ಅಧಿಕಾರಿ; Local officer relating to Hejjunka taxes; ಬನವಾಸಿನಾಡ ಹೆಜ್ಜುಂಕದ ಹೆರ್ಗ್ಗಡೆ; (EC. VIII(O), Sb.170, 1126).

೨. ಸಾಮಾನ್ಯವಾಗಿ ಕರ, ತೆರಿಗೆ, ಸುಂಕ, ಆದಾಯ ಇತ್ಯಾದಿಗಳನ್ನು ಸೂಚಿಸುವ ಪದಗಳು

2. TERMS DENOTING TAX, CESS, TOLLS, INCOME ETC., IN GENERAL

ಅಟ್ಟದೆಱೆ; Aṭṭadeṟe: ಹಿರಿಯ ಸುಂಕ; Major tax; s.a. ಪೆರ್ಜ್ಜುಂಕ; Perjjunka below; (EC. IV(O), Ml.100, 909).

ಅನುಪು; Anupu: ಸುಂಕ; Tolls, Octoroi; (EC. IX, Ma.49, 1370).

ಅಪ್ಪಣೆ; Appaṇe: ಕರ; Tax; ಕಾಣಿಕೆ ದೆಸೆ ಅಪ್ಪಣೆ ಪದದಲ್ಲಿ ಯತ್ತಸಲ್ಲದು; (EI. XX, 8, 1557).

ಅವಾಂತರದೆರೆ; Avāntara dere: ಮುಖ್ಯವಲ್ಲದ ಕರ; Minor tax; ದೋಣಿಯ ತೆಱೆಯುಮಂ ಸೇಸೆಯುಮಂ ಅವಾಂತರದೆಱೆಯುಮಂ; (SII. XI, II, 200, 1126).

ಅಭ್ಯಂತರ; Abhyantara: ಸರಕಾರಕ್ಕೆ ಕೊಡಬೇಕಾದ ಕರ, ಸುಂಕ ಅಥವಾ ಇನ್ನಾವದೇ ಹಣ; Tax, toll, or any other due to be paid to the government; (SII. IX, I, 101, 1045). See IEG. p.3.

ಅರುಹೊಂನು; Aru-honnu: ಹಣದ ರೂಪದ ಕರ, ಬಹುಶಃ ಅರ್ಧ ಹೊನ್ನಿನಷ್ಟು; Tax in cash, probably half the honnu; ಹೊನ್ನು ಎಂಬುದು ಒಂದು ಚಿನ್ನದ ನಾಣ್ಯವಾಗಿದ್ದಿತು; Honnu was a gold coin; (EC. III(R), Gu.135, 1492).

ಆಗಾಂತುಕ; Āgāntuka (ಆಗಂತುಕ; Āgantuka): ಅನಿರೀಕ್ಷಿತ ಕರ; Unforeseen tax; (EC. VI(O), Tk.20, 1185).

ಉಪಕರ; Upakara: ಚಿಲ್ಲರೆ ತೆರಿಗೆ; Minor tax; (EI. XXXIV, 16, 1262; See Ibid. p.106).

ಕರ; Kara: ಸುಂಕ, ತೆರಿಗೆ, Tax, Tolls, etc.; ಈ ಶಬ್ದವು ಅಸಂಖ್ಯ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಬರುತ್ತದೆ; Figures in numerous inscriptions and literary works.

ಕಡ್ಡಾಯ; Kaḍḍāya: ಅವಶ್ಯವಾಗಿ ಕೊಡಬೇಕಾದ ಕರ; Compulsory tax; (EC. X, Mb., 1468; EI. XVIII, 17, 1434). ತೆ. ಕಡ್ಡಾಯಮು, Te. Kaḍḍāyamu; ತ. ಕಟ್ಟಾಯ, Ta. Kaṭṭāya.

ಕಡ್ಡಾಯ ಸುಂಕ; Kḍḍāya suṁka: s.a. ಕಡ್ಡಾಯ; Kaḍḍāya; (EC. IX(R), Kn.30, 1332).

ಕಂದಾಯ; Kandāya: ತೆರಿಗೆ; ಕರಗಳಿಂದ ಬರುವ ಉತ್ಪನ್ನ; Tax; Income from the taxes; ಗ ೩೦ ವಂ ಕಂದಾಯವಾಗಿ ನಡಸಿಕೊಡುತ ಬಹೆವು; (EC. III(R), Gu.12, 1372); ಅಗಸಾಲ್ಯೆಯರು ಗ ೪ ಕಂಮಾರರು ಗ ೮ ನಾಯಿಂದರು ಗ ೮ ಯಿ ಹೊರಸ್ಥಳಗಳ ಗ ೧ ವಂ ಕಂದಾಯವಾಗಿ ತ್ಯರುವರು; (EC. IV(R), Yl.134, 14th cent.).

ಕಾಣಿಕೆ; Kāṇike: ಕರ; ಮೂಲತಃ ಸ್ವಯಂ ಪ್ರೇರಣೆಯಿಂದ ಕೊಡುತ್ತಲಿದ್ದ ಹಣ; Tax; Originally voluntary payment; ಕಾಣಿಕೆಯಂ ತಳಾಱಗಾಣಿಕೆಯಂ ಬಣ್ಣಿಗೆಯಂ; (SII. XVIII, 198, 1196; KI. II, 12, 1114).

ಕಿಱುಕುಳ; Kiṟukuḷa: ಚಿಲ್ಲರೆ ತೆರಿಗೆಗಳು; Minor taxes; (SII. XX, 91, 12th cent.).

ಕಿಱುಕುಳ ಸುಂಕ; Kiṟukuḷa suṁka: s.a. ಕಿಱುಕುಳ; Kiṟukuḷa; ವೊಕ್ಕಲುದೆಱೆ ಕಿಱುಕುಳ ಸುಂಕ ವೊಳಗಾಗಿ; (EC. VII(O), Sk.95, 1215).

ಕಿಱುಕುಳಾಯದಾಯ; Kiṟukuḷāyadāya: ಕಿಱುಕುಳ ಸುಂಕದಿಂದ ಬರುವ ಆದಾಯ; ಚಿಲ್ಲರೆ ಕರಗಳಿಂದ ಬರುವ ಆದಾಯ; Income from Kiṟukuḷa tax; Income from minor taxes; (SII. XX, 151, 1168).

ಕಿಱುದೆಱೆ; Kiṟudeṟe: ಚಿಲ್ಲರೆ ತೆರಿಗೆ; Minor tax; ಕಿಱುದೆಱೆಯುಮಿಲ್ಲ; (EC. XI(O), Cd.74, 968); ಅಲ್ಲಿ ಮನ್ನೆಯ ನಿಬಂಧದ ಕಿಱುದೆಱೆಗಳವಾವುವೆಂದಡೆ ಮನೆವಣಂ ಪಿರಿಯರವಣಂ ಧನಬಳಂ, ಕಾಳಕೊಲ್ಪು ಮೇಂಟಿಗಣ್ಣುವಂಗಡಿಯ ತಿಂಗಳಿನ ಬೇಳೆಯೊಂದಿನ್ತೀ ನಡೆವ ತೆಱೆಗಳ್ಗಂ; (SII. XX, 47, 1074).

ಕಿರುಸುಂಕ; Kirusuṁka: s.a. ಕಿಱುದೆಱೆ; Kiṟudeṟe; (SII. XX, 85, 1124).

ಕುಱುದೆಱೆ; Kuṟudeṟe: s.a. ಕಿಱುದೆಱೆ; Kiṟudeṟe; (EC. VII(R), Ml.100, 909).

ಕುಳ; Kuḷa: ಒಂದು ವಿಧವಾದ ಸುಂಕ; ಕರ; A kind of Tax; toll; (EI. XVII, 8, 1412).

ಕೊಳ್ಳಿ; Koḷḷi: ಒಂದು ವಿಧವಾದ ಕರ; A kind of tax; ಧರ್ಮದೊಳರಸರ ಕಾಣಿಕೆ ಕೊಳ್ಳಿಯರುವಣಂ; (KI. II, 12, 1114).

ಖಡ್ಡಾಯ; Khaḍḍāya: s.a. ಕಡ್ಡಾಯ; Kaḍḍāya above; ಸಿದ್ಧಾಯ ಕಾಣಿಕೆ ಖಡ್ಡಾಯ; (EC. XII(O), Si.10, 1341; SII. XV, 247, 1433).

ಚಿಲುವಾನ ಹದಿಕೆ; Chiluvāna-hadike: ಚಿಲ್ಲರೆ ಕರ; Minor tax; ಆ ಶಿವಪುರದಲ್ಲಿದ್ದಂತಹ ಕಬ್ಬಿಲದ ಹದಿಕೆ ವೊಳಗಾದ ಚಿಲುವಾನ ಹದಿಕೆಯನು; (EC. V(O), Cn.268, 12th cent.).

ತೆಱ, ತೆಱು, ತೆರೆ; Teṟa, Teṟu, Tere: ತೆರಿಗೆ; ಸುಂಕ; Tax; tolls; (KI. III, I, 3, 1331).

ತೆಱಿಗೆ; Teṟige: ಕರ, ಸುಂಕ ಇತ್ಯಾದಿ; Tax, toll or any other impost; (EC. VII(O), Ci.5, 1263).

ತೆಱೆ; Teṟe: ತೆರಿಗೆ, ಸುಂಕ (ತೆರು=ಕೊಡು); Tax or toll (from the term Teru=give); ಮಠದ ವಿದ್ಯಾದಾನಕ್ಕೆ ತವಗೆ ನಡೆವ ಅಡಿಗಚ್ಚುರ್ಗ ಕಾಣಿಕೆಯವೆರಡು ಗದ್ಯಾಣವ ತೆಱೆಯಂ ತತ್ಕಾಲದೊಳ್ಬಿಟ್ಟರು; (EI. XVI, 11C, 1067; Ibid. VI, 24A, c.800).

ದವಸಾಯ; Davasāya: ಧಾನ್ಯಗಳ ವ್ಯಾಪಾರದಿಂದ ಬರುವ ಆದಾಯ; ಧಾನ್ಯರೂಪದ ಕರ; Income from selling grains; tax in kind; (EC. XI(O), Dg. 139, 1186).

ದಸವಂದ; ದಶವಂಧ; Dasavanda; Daśavandha: ನೂರಕ್ಕೆ ಹತ್ತರ ದರದಂತೆ ಕೊಡುವ ತೆರಿಗೆ; Tax to be paid at the rate of 10%; ಕಂಡ ಭೂಮಿಗೆ ನೂಱಕ್ಕೆ ಹತ್ತಱೋಪಾದಿಯ ದಶವಂಧ; (EI. XVI, 8C, 1147); ಎಲೆಯ ಪೇಱಿಂಗೆ ದಸವಂದಮುಮಂ; (EC. VII(O), Sk.13, 1098); ಊರಲ್ಲುಟ್ಟಿದ ಸುಂಕಕೆಲ್ಲಂ ದಶವನ್ದಮಂ ಬಿಟ್ಟು; (EC. XI(O), Jl.9, 1111); ಚಂದ್ರಗಿರಿ ಮೇಳರಸರ ಮಗ ಸೋವಾರ್ಯರಿಗೆ ದಸವಂದವಾಗಿ ಕೊಟ್ಟ ಗದ್ದೆ; (EI. IV, 38, 1513).

ದುಃಖ; Duhkha: ಒತ್ತಾಯದಿಂದ ಕೊಡುವ ಕರ, ತೆರಿಗೆ; Tax or toll money given with reluctance; ಕಡ್ಡಾಯ ದುಃಖ ವೊಸಗೆ; (SII. V, II, 408, 1364).

ಧಾನ್ಯಾಯ; ಧಾನ್ಯಾದಾಯ; Dhānyāya, Dhānyādāya: ಧಾನ್ಯ ರೂಪದಿಂದ ಎತ್ತುವ ತೆರಿಗೆಯಿಂದ ಬರುವ ಆದಾಯ; Income from tax in kind; ಗ್ರಾಮದಲುಂಟಾದ ಕಾಡಾರಂಭ ನೀರಾರಂಭ ವೊಳಗಾದ ಸಕಲ ಧಾನ್ಯಾದಾಯಗಳನು ಸಿದ್ಧಾಯ ಸೇನಾಯ ವೊದಲಾದ ಸಕಲ ಸುವರ್ಣಾದಾಯಗಳನು; (EC. IX(R), Bl. 233-34, 1250; Ibid. XII(O), Ti 50, 1522).

ಪಗುಡಿ; Paguḍi: ಕರ, ಸುಂಕ; Tax or toll; (KI. V, 33, 1176). ತ. ಪಗುದಿ, ಪನ್ನು; Ta. Pagudi, pannu.

ಪಿರಿಯ ತೆಱೆ; Piriya teṟe: ಹೆಚ್ಚಿನ ಆದಾಯ ಬರುವ ಕರ; Tax yielding considerable amount; Major tax; (EC. VII(O), Sk.48, 1076). Cf. ಪೆರ್ಜುಂಕ; Perjjunka, ಕಿಱುಕುಳ, ಕಿಱುದೆಱೆ; Kiṟukuḷa, Kiṟudeṟe.

ಪಿಂಡಳಿಗೆ; Piṇḍaḷige: ಒಟ್ಟು ಹಣ; Total amount of collection of tax; Lump Sum; ಸ್ಥಳಂಗಳು ಸುಂಕಕ್ಕೆ ಪ್ರತಿ ವರುಷವು ಪಿಂಡಳಿಗೆಯಾಗಿ ತಿಱುವ ಅರ್ಥವನು; (SII. XVIII, 249, 1265; Ibid. 253, 1269).

ಪಿಂಡಾದಾನ; Piṇḍādāna: ಒಟ್ಟು ಮೊತ್ತ; Lump Sum; (EI. XXI, 29, 735) ಶ್ರೀ ಕಾರ್ಯ ಸತತಂ ವರ್ತಿಸುವಂತಾಗಿ ಗದ್ಯಾಣ ... ನಿಯತಿ ಪಿಂಡಾದಾನ ಕ್ರಮದಿಂ (SII, XX, 205, 1247).

ಪೂರ್ವಸಿದ್ಧಾಯ; Pūrva-siddhāya: ಮೊದಲಿನಿಂದ ನಡೆದು ಬಂದ ನಿಶ್ಚಿತವಾದ ತೆರಿಗೆ; Fixed amount of tax in force since long; (SII. XI, I, 35, 993); ಪೂರ್ವ ಸಿದ್ಧಾಯದೊಳಯ್ವತ್ತು ಪೊಂನಂ ನಿಯಮಿಸಿದ ಪುರಾಣಕ್ಕೆ; (SII. XVIII, 141, 1138; Ibid. 253, 1269).

ಪೂರ್ವ್ವಾಯ; ಪೂರ್ಬ್ಬಾಯ; Pūrvvāya, Pūrbbāya: ನಿರೀಕ್ಷಿತ ಆದಾಯ; Expected income; Cf. ಚಿಕ್ಕಕೂಡಲಿಯ ಹಲಸವಾಡಿಯ ಪೂರ್ವ್ವಾಯ; (EC. VII(O), Sh.68, 1313; Ibid. VI(O), Sg.1, 1346).

ಪೆರ್ಜುಂಕ; Perjjunkka: ಹಿರಿಯ ಸುಂಕ, ಹೆಚ್ಚು ಆದಾಯ ತರುವ ಸುಂಕ; ಯಾವದೊಂದು ಊರಿನ ಅಥವಾ ಪ್ರದೇಶದ ಒಟ್ಟು ಸುಂಕ; Major taxes; Taxes

yielding major income; Total tax income of a particular place or region; (SII. XVIII, 145, 1141); ಪೆಜ್ಜುಂಕದ ನಬಿಯಣಂ ತಮ್ಮ ದೆಸೆಯ ಸುಂಕಮಂ ಬಿಟ್ಟ; (EC. XI(O), Cd.78, 1060); ಶ್ರೀ ಮದನನ್ತಪಾಳದಣ್ಡನಾಯಕನೆರಡಱುನೂಱುಮಂ ಬನವಸೆ ಪನ್ನಿಚ್ಛಾಸಿರವುಮಂ ವಡ್ಡರಾವುಳವುಂ ಪೆಜ್ಜುಂಕಮುಮಂ ಪಡೆದು; (EC. VII(O), Sk.98, 1103); ಶ್ರೀ ಮನ್ಮಹಾಸಾಮನ್ತಂ ಮಲ್ಲರಸರು ನೊಳಂಬವಾಡಿ ಮೂವತ್ತಿಚ್ಛಾಸಿರದ ಪೆಜ್ಜುಂಕವ ನಾಳುತ್ತಮಿರೆ; (EC. XI(O), Jl.9, 1111).

ಪೇಱಾಯ; Pēṟāya: ಹಿರಿಯ ಆಯ; ಪೆಜ್ಜುಂಕಕ್ಕೆ ಸಮಾನಾರ್ಥ ಪದವಿರಬಹುದು; Big income; Seems to be same as ಪೆಜ್ಜುಂಕ; Perjjunka; (EC. III(R), Gu.48, 1013).

ಪೊತ್ಥ; Pottha: ಸರಕಾರಕ್ಕೆ ಕೊಡಬೇಕಾದ ಒಟ್ಟು ಹಣ; (ಇರಸಾಲು; Irasālu); Total amount to be remitted to the government; (EC. VII(O), Sk.105, 1193).

ಪೊನ್ನತೆಱೆ; Ponnateṟe: ಹಣದ ರೂಪದ ತೆರಿಗೆ; Tax in cash; ಮಹಾಜನಕ್ಕೆ ಪೊನ್ನತೆಱೆಯ ಬಿಟ್ಟು; (EI. XXXVIII, 21, c.800). Cf. ಸುವರ್ಣಾಯ; Suvarṇāya below. (ಪೊನ್; Pon = ಸುವರ್ಣ; Suvarṇa)

ಫಳದಾಯ; Phaḷadāya: s.a. ಧಾನ್ಯಾಯ; Dhānyāya; ಸುವರ್ಣಾದಾಯ ಫಳದಾಯ; (EC. III(R), Gu.49, 1548).

ಬಲಿ; Bali: ಕರ; Tax; ಶುಲ್ಕ ಸಮಸ್ತ ಬಲಿ ಸಂಯುತಂ; (EC. VIII(O), Na.64, 1507). Cf. ಉಬಲಿಕೆ ಕಟೆ; Ubalike kaṭe in Ruminde Edict of Aśōka; (CII. I, p.64).

ಬಳಿ; Baḷi: s.a. ಬಲಿ; Bali; ಸೇನಬೋವರಿಗೆ .... ಸಮಸ್ತ ಬಳಿ ಸಹಿತ ವ್ರಿತ್ತಿ ೨ ಸಲುವುದು; (EC. IV(R), Ch.183, 1295; SII. IX, II, 497, 1514).

ಬಾಧೆ; ಬಾಧಾ; Bādhe; Badhā: ಕರ ರೂಪದಲ್ಲಿ ಎತ್ತುವ ಹಣ; Impost; Amount to be collected as tax; ಶುಲ್ಕ ಕರಬಾಧೆ ಪರಿಹಾರ; (EI. III, 30, 1192; EC. IV(R), Ng.38, 1284); The expression ಸರ್ವಬಾಧಾಪರಿಹಾರ; Sarvabādhāparihāra occurs in numerous inscriptions.

ಬಾರಾಸುಂಕ; Bārasuṁka: ಹನ್ನೆರಡು ಬಗೆಯ ಸುಂಕಗಳು; Twelve kinds of taxes; (APGAS. III, Mn.49, 1134). (ರೂಢಿಯಿಂದ ಬಹಳ ಎಂಬರ್ಥದಲ್ಲಿ; Conventionally in the sense of 'many').

ಬಿರಾಡ; Birāḍa: ಸುಂಕ, ಕರ; Tax, toll; (EC. XII(O), Ck.37, 1528).

ಬೇಡಿಗೆ; Bēḍige: ಬಾಡಿಗೆ, ತೆರೆ, ಕರ; Tax, Rent; ಗ್ರಾಮಗಳ ಬೇಡಿಗೆ; (EC. III(R), Gu.150, 1521; Ibid. X(O), Bangarpet 70, 1591); ತೆ. ಬೇಡಿಗ, Te. Bēḍiga.

ಭಕ್ತಾದಾಯ; Bhaktādāya: ಭತ್ತದ ಅಥವಾ ಧಾನ್ಯದ ರೂಪದ ಕರ; Tax in the form of paddy or grains; Tax in kind; (ಭಕ್ತ=ಭತ್ತ); (EC. III(R), Nj.389, 1502).

ಭತ್ತಾದಾಯ; Bhattādāya: s.a. ಭಕ್ತಾದಾಯ; ಭತ್ತದ ರೂಪದಲ್ಲಿ ಕೊಡುವ ತೆರಿಗೆ; Tax to be paid in kind through paddy; ಧಾನ್ಯ ರೂಪದ ಕರವೆಂಬ ಸಾಮಾನ್ಯ ಅರ್ಥವನ್ನು ಪಡೆಯಿತು. The word acquired the meaning of tax in the form of grain in general; ಸಕಲಸುವರ್ನಾದಾಯ ಭತ್ತಾದಾಯ; (EC. IX(R), Bl.37, 1548). Cf. ಧಾನ್ಯಾದಾಯ Dhānyādāya above.

ಭತ್ತಾಯ; Bhattāya: s.a. ಭತ್ತಾದಾಯ; Bhatādāya; ಸುವರ್ಣ್ನಾಯ ಭತ್ತಾಯ; (EC. VI(O), Kd.132, 1215).

ಭರಣ; Bharaṇa: ಕರ; Tax; ತಾವು ಮುಂದಿಟ್ಟು ಕೊಟ್ಟ ನಾಡ ಸಿವಾಲ್ಯಂಗಳಿಗೆ ಆ ಅಭ್ಯಾಗತ ಅಂನ್ಯಾಯ ತಪ್ಪು ತವುಡಿ ದಂಡ ವುಂಡಿಗೆ ವೊಡದ ತಲೆ ವೊಕ್ಕ ಭರಣ ಯಿಂತಿವು ಇಲ್ಲೆಂದು; (EC. VI(O), Cm.89, 1264).

ಮುದ್ರಾವಣದ ಸುಂಕ; Mudrāvaṇada sunka: ಹಣರೂಪದ ಕರ; Tax in cash; ದೇವರ ನಂದಾ ದೀವಿಗೆಗಲಂದೆಯ ಮುದ್ರಾವಣದ ಸುಂಕದೊಳಗೆ

ತಿಂಗಳ್ದಿಂಗಳ್ಗೆ ಹತ್ತು ಹತ್ತು ದ್ರವ್ಯಮಂ ಬಿಟ್ಟಂ; (APGAS. III, App.1, Aland, 1082).

ಮೇಲಾಯ; Mēlāya: ಹೆಚ್ಚಿನ ಆದಾಯ; Additional income; ಮೇಲಾಯದಿಂ ಗ ೪೩; (SII. VII, 349, 1406).

ಮೇಲುಗಾಣಿಕೆ; Mēlu-gāṇike: ಹೆಚ್ಚಿನ ಕರ; Additional tax; super tax; surcharge; (SII. IX, II, 576, 1536).

ಮೇಲುವಣ; Mēluvaṇa: ಹೆಚ್ಚಿನ ಹಣ; ಹೆಚ್ಚಿನ ತೆರಿಗೆ; Super tax; surcharge; (EC. VI(O), Sg.10, 1547).

ಮೇಲುವದಿಕೆ; Mēlu-vadike: ಹೆಚ್ಚಿನ ಕರ; Surcharge; Super tax; (EC. VIII(O), Tl.126, 1406; Ibid. 190, 1405). See ಹದಿಕೆ; Hadike below.

ಮೇಲುಹೊನ್ನು; Mēlu-honnu: s.a. ಮೇಲುವಣ; Mēlu-vaṇa; ಅರುಹೊಂನು ಮೇಲುಹೊಂನು ಸುಂಕ ಚರಾದಾಯ; (EC. III(R), Gu.135, 1492).

ರಾಜದ್ರವ್ಯ; Rājadravya: ಸರಕಾರಕ್ಕೆ ಸಲ್ಲಿಸಬೇಕಾದ ಹಣ; Income due to the Government; ಬಾಬನ್ದಿಯ ಸಂಬಂಧದ ರಾಜದ್ರವ್ಯಮಾದುದೆಲ್ಲವಂ ಬಿಟ್ಟರ್; (SII. IX, I, 66, 956).

ರಾಜಪಾಲು; Rājapālu: ಕರ; ಸರಕಾರಕ್ಕೆ ಸಲ್ಲಿಸಬೇಕಾದ ಹಣ; Tax; Money due to the government; (SII. IX, II, 642, 1551).

ರಾಜಾರ್ಥ; Rājārtha: s.a. ರಾಜಪಾಲು; Rājapālu; ವ್ರಿತ್ತಿಕ್ಷೇತ್ರಂಗಳೆಲ್ಲವನು ಇಕುಳಂಗಳ ಮೇಲೆ ಕೈಯೆದರಾಗಿ ಕಟ್ಟಿಕೊಂಡ ರಾಜಾರ್ಥವ ತೆಗೆದು ಮೇಲುವಳಿದ ಆದಾಯ ವಿಲ್ಲವು; (EC. VIII(O), Sa.165, 1490).

ವರ್ತನೆಯ ಸುಂಕ; Vartanēya-sunka: ನಿಯಮಿತವಾಗಿ ಕೊಡುವ ಸುಂಕ; Tolls to be paid regularly; ಯೀ ಪುರಗಳು ನಾಲ್ಕಾಱ ವರ್ತ್ತನೆಯ ಸುಂಕವನು; (EC. IV(R), Pp.32, 1453).

ವರಣ; Varaṇa: ಕಂತು; Instalment; ವಡ್ಡಾರಾವುಳದಲೂ ಹೆಜ್ಜುಂಕದಲೂ ತಿಂಗಳಿಂಗೆ ಸಲ್ವ ವರಣಮಂ ಕೊಟ್ಟರು; (APGAS. III, Mn.49, 1134).

ವರಿ; Vari: ಸುಂಕ; Tax; ಹೊಸವರಿ ಹಳೆವರಿ ಮುಂತಾದ ಸುವರ್ನಾದಾಯ; (EI. XVII, 8, 1427).

ವಸ್ತುದಾಯ; Vastudāya: ವಸ್ತುರೂಪದಲ್ಲಿ ಕೊಡುವ ಕರದ ಆದಾಯ; Income from the tax paid in kind; ಮನೆದೆರಿಗೆ ಮಗ್ಗದೆರಿಗೆ .... ಸಕಲ ಸುವರ್ನಾದಾಯ ಸಕಲ ವಸ್ತುದಾಯವನ್ನೂ; (EC. IX(O), DB.50, 1531).

ವಾಸಿ; Vāsi: ಸುಂಕ; Tax; ಅಲ್ಲಿಯ ತೆರು ಸಿದ್ಧಾಯ ಬಡ್ಡಿ ವಾಸಿ ಹೊನ್ನು ಭತ್ತವನು ಕಾಲ ಕಾಲಕೆ; (SII. IX, II, 460, 1465).

ವಿಶೇಷ ಆದಾಯ; Viśēsha ādāya: ನಿಯಮಿತವಾಗಿ ಬರುವ ಆದಾಯವನ್ನು ಬಿಟ್ಟು ವಿಶೇಷ ಪ್ರಸಂಗಗಳಲ್ಲಿ ಬರುವ ಆದಾಯ; Income on special occasion, not being a regular source of income; (EC. IX(O), Ma.6, 1524).

ವಿಶೇಷ ಬಿರಾಡ; Viśēsha birāḍa: ಹೆಚ್ಚಿನ ಬಿರಾಡ ಸುಂಕ; Birāḍa tax, levied on special occasions; (SII. IV, 265, 16th cent.) See ಬಿರಾಡ, Birāḍa above.

ವಿಶಿಷ್ಟಾದಾಯ; Viśishṭādāya: s.a. ವಿಶೇಷ ಆದಾಯ; Viśēsha-ādāya; (EC. IX(R), Bl.159, 1524).

ಶಿಧಾಯ; Śidhāya: s.a. ಸಿದ್ಧಾಯ; Siddhāya below; (EC. VI, Kp.49, 1393).

ಶುದ್ಧಾದಾಯ; Śuddhādāya: ನಿವ್ವಳ ಆದಾಯ; Net income; (SII. IX, II, 675, 1562).

ಶುಲ್ಕ; Śulka: ಸುಂಕ; Toll; ಸಶುಲ್ಕಂ ಕರಬಾಧಾಪರಿಹಾರಂ ಸಮಸ್ತಾದೇಯಸಹಿತಂ; (EC. XI(O), Dg.1, 1123; SII. XX, 111, 1140; KI. II, 29, 1182; HAS. XVIII, 14, 1183).

ಸರ್ವಾಯ; Sarvāya: ಎಲ್ಲ ಮೂಲಗಳಿಂದ ಬಂದ ಒಟ್ಟು ಉತ್ಪನ್ನ; Total income from all sources; ನೂಲಹದಿಕೆ ಅಡಿಕೆಯ ಸುಂಕ .... ಎಂಣೆಯ ಹಣ .... ಆಗಾನುತವೊಳಗಾಗಿ ಸರ್ವಾಯ; (EC. VI(O), Tk.20, 1185).

ಸ್ಥಳಸುಂಕ; Staḷa-sunka: ಸ್ಥಾನಿಕ ಕರ; Local tax; (SII. IX, II, 616, 1545).

ಸಿದ್ಧಾಯ; Siddhāya: ನಿಯಮಿತವಾಗಿ ಕೊಡಬೇಕಾದ ನಿರ್ದಿಷ್ಟ ಹಣ ಅಥವಾ ಧಾನ್ಯ ರೂಪದ ಕರ; A fixed amount of tax to be paid in cash or kind; ತೋಟಕ್ಕೆ ತೆಱುವ ಸಿದ್ಧಾಯ; ಸಿದ್ಧಾಯದ ಭತ್ತ ಖ ೮೦. (EC. VIII(O), Tl.2, 1424); ಸೋಮದೇವನ ನೀತಿವಾಕ್ಯಾಮೃತದ (೧೦ನೇ ಶ.) ಮೇಲೆ ನೇಮಿನಾಥನು ಬರೆದ ಕನ್ನಡ ಟೀಕೆಯಲ್ಲಿ (ಸು. ೧೨ನೇ. ಶ.). ಸಿದ್ಧಾಯವನ್ನು ಕರ ಎಂಬ ಪದಕ್ಕೆ ಪರ್ಯಾಯವಾಗಿ ಉಪಯೋಗಿಸಲಾಗಿದೆ. In the Kannada Commentary of Nēminātha, (12th cent.) on the Nītivākyāmrita of Sōmadēvasuri, (10th cent.) the term Siddhāya is used for Kara or tax in general; (ನೀ.ವಾ. Nī.Vā. XIX, 15).

ಸಿದ್ಧಾಯವರಿ; Siddhāyavari: s.a. ಸಿದ್ಧಾಯ, Siddhāya; (SII. IX, II, 554, 1533).

ಸುವರ್ಣಾದಾಯ; Suvarṇādāya: s.a. ಸುವರ್ಣಾಯ; Suvarṇāya; ಸಕಲ ಸುವರ್ಣಾದಾಯ ಸಕಲ ಭತ್ತಾದಾಯ; (EI. XVII, 8, 1427).

ಸುವರ್ಣಾಯ; Suvarṇāya: ಹಣರೂಪದ ಆದಾಯ; ರೊಖ ಆದಾಯ; Income in the form of money; Cash income; ಸುವರ್ಣಾಯ ಭತ್ತಾಯ; (EC. VI(O), Kd.132, 1215).

ಸುಂಕ; Sunka: ತೆರಿಗೆ; Tolls; (KI. I, 2, 696; SII. XX, 23, 1029; HAS. XVIII, 14, 1183); ಈ ಪದ ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. The term occurs in numerous inscriptions.

ಸೇಸೆ; Sēse: ಕರ; Tax; (EC. VII(R), Ng.73, 1284).

ಸೋದಿಗೆ; Sōdige: ಕರ, ಸುಂಕ; Tax, toll; ಮನೆವಣ ಸುಂಕ ಸೋದಿಗೆ ಸೋವಣ ಸಂದು ಸಕಲ ಸ್ವಾಮ್ಯವನು; (EC. III(R), Gu.54, 16th cent.).

ಸೋವಣ; Sōvaṇa: ಕರ, ಸುಂಕ; Tax, toll; (EC. III(R), Gu.54, 16th cent.).

ಹಡಿಕೆ; ಹದಿಕೆ; Haḍike, Hadike: ಕರ, ಸುಂಕ, Tax, toll; ಅಲ್ಲಿಯ ಹದಿಕೆಯಷ್ಟನೂ; (EC. VII(O), Sk.313, 1390); ಆ ಶಿವಪುರದಲ್ಲಿದಂತಹ ಕಬ್ಬಿಲದ ಹದಿಕೆ; (EC. V(O), Cn.268, 12th cent.); ಹಡಿಕೆ ಹಾರಣೆಯನಾವದುವಂ; (KI. V, 67, 1216).

ಹರೇಣ್ಯ; Harēṇya: ತೆಗೆದುಕೊಳ್ಳುವ ವಸ್ತು; ಕರ; A thing to be taken away; a tax; ಯೀ ಬಾಳಿಂಗೆ ತೆಱು ಸಿಧಾಯ ಹಡಿಕೆ ಹರೆಣ್ಯ ಅಕರ ಅಂನ್ಯಾಯವಿಲ್ಲದಂತಾಗಿ; (SII. VII, 322, 1360).

ಹಳೆವರಿ; Haḷevari: ಹಳೆಯ ಅಥವಾ ಬಹಳ ದಿನಗಳಿಂದ ರೂಢಿಯಲ್ಲಿದ್ದ ಕರ; Tax in vogue in force since long; ಏನುಳ್ಳಂತಾ ಹೊಸವರಿ ಹಳೆವರಿ ಮುಂತಾದ ಸಕಲ ಸುವರ್ಣಾದಾಯ; (EI. XVII, 8, 1427).

ಹಾರಣೆ; Hāraṇe: ತೆರಿಗೆ; Tax; ಹಡಿಕೆ ಹಾರಣೆಯನಾವದುವಂ; (KI. V, 67, 1216).

ಹೊನ್ನಾಯ; Honnāya: ಹಣ ರೂಪದ ಆದಾಯ; Income in cash; (SII. VII, 190, 1389). Cf. ಸುವರ್ಣಾಯ, ಸುವರ್ಣಾದಾಯ; Suvarṇāya, Suvarṇādāya above.

ಹೊಸವರಿ; Hosavari: ಹೊಸದಾಗಿ ಹಾಕಿದ ಸುಂಕ; New tax; ಏನುಳ್ಳಂತ ಹೊಸವರಿ ಹಳವರಿ ಮುಂತಾದ; (EI. XVIII, 8, 1427).

೩. ಒಕ್ಕಲುತನದ ಕರ, ತೆರಿಗೆಗಳು
3. TAXES ON AGRICULTURE

ಅಯ್ದೊಕ್ಕಲತೆಱೆ; Aydokkalateṟe: ಐದು ಒಕ್ಕಲುತನದ ಮನೆತನಗಳ ಏಕತ್ರ ಕುಟುಂಬದ ಮೇಲಿನ ಕರ; Tax on Agricultural joint family, consisting of five households; (SII. XV, 36, 1184) Cf. ಎರಡೊಕ್ಕಲುದೆಱೆ, Eraḍokkaladeṟe below.

ಅರುವಣ, ಅಱುವಣ; Aruvaṇa, Aṟuvaṇa: ಒಕ್ಕಲುತನದ ಭೂಮಿಯ ಮೇಲಿನ ಕರ; Tax on agricultural land; ಮೂಲತಃ ಅರು-ವಣ ಅಂದರೆ ೬ ಪಣಗಳಿಷ್ಟಿದ್ದ ಕರ, ಸಾಮಾನ್ಯವಾಗಿ ಭೂಕಂದಾಯವನ್ನು ಸೂಚಿಸುವ ಪದವಾಯಿತು. Originally six paṇas; the land tax which was fixed at six paṇas, later came to denote the tax on land in general; ಹಿಟ್ಟುಕಾಱರಿಗೆ ಅಱುವಣ ಮತ್ತರಿಂಗೆ ಹಂನೆರಡು ಹೊಂನು; (EI. XXIII, 30, 1265); ಈ ಶಬ್ದ ಅನೇಕ ಕನ್ನಡ ಶಾಸನಗಳಲ್ಲಿ

ಸಿಗುತ್ತದೆ. Figures in numerous Kannada inscriptions - ತೆ. ಅರುವಣಮು; Te. Aruvaṇamu.

ಅರುಹೊಂನು; Aruhoṁnu: s.a. ಅರುವಣ; Aruvaṇa; (EC. III(R), Gu.135, 1492); ಹೊಂನು ಅಂದರೆ ಚಿನ್ನದ ನಾಣ್ಯ; Honnu stands for a gold coin.

ಅರ್ವ್ವಣ; Arvvaṇa: s.a. ಅರುವಣ; Aruvaṇa; ಕೊಟ್ಟ ವ್ಯವಸ್ಥೆಯಾವುದೆನ್ದೊಡುಟ್ಟಗೆರಡು ವರಿಸಂ ವಟ್ಟಿವರಿಯುರಪತ್ತುವರಿಸಂಬರ(೦)ಮಿಂತರ್ವ್ವಣ ದುಟ್ಟಗೂರ್ವ್ವಱೆಂದು ಮಾಣಲಾಗಂ ತಮ್ಮ; (KI. V, 4, 970).

ಅರುವನ; Aruvana: s.a. ಅರುವಣ; Aruvaṇa; (SII. IX, II, 701, 1512)

ಇಪ್ಪತ್ತೆತ್ತಿನ ಒಕ್ಕಲುದೆಱೆ; Ippatt-ettina okkalu-deṟe: ಇಪ್ಪತ್ತು ಎತ್ತುಗಳ ಕಮತದ ಒಕ್ಕಲುತನ ಕುಟುಂಬದ ಮೇಲಿನ ಕರ; Tax on agricultural family maintaining 20 bullocks; (EC. VII(O), Hl.46, 1189).

ಎರಡೊಕ್ಕಲುದೆಱೆ; Ereḍ-okkalu-deṟe: ಎರಡು ಒಕ್ಕಲುತನದ ಕುಟುಂಬದವರ ಮೇಲಿನ ಕರ; Tax on two joint agricultural families; (SII. XX, 34, 1053).

ಒಕ್ಕಲುದೆರೆ; Okkalu-dere: ಒಕ್ಕಲುತನದ ಕುಟುಂಬದವರ ಮೇಲಿನ ಕರ; ಒಕ್ಕಲುತನವನ್ನು ಮಾಡುವ ಕುಟುಂಬದವರು ಹುಟ್ಟುವಳಿಯ ಆಧಾರದ ಮೇಲೆ ಕೊಡಬೇಕಾದ ಕರ; Tax on agricultlural families; Tax to be paid by the agricultural families on the basis of their produce; ಭತ್ತಹಟ್ಟಗಂ ಒಕ್ಕಲುದೆರೆ ಪರಿಹಾರ; (EI. XIX, 4B, 1154).

ಒಸಗೆ; ವೊಸಗೆ, ವೋಸಗೆ; Osage, Vosage, Vōsage: ಒಕ್ಕಲುತನದ ಭೂಮಿಯ ಮೇಲಿನ ಕರ; ಯಿ ತೋಟಕೆ ವೊಸಗೆ ಕಾಣಿಕೆ ಮರ ಅಡಕೆಯೇನುಯಿಲ್ಲ; (EC. VI(O), Sg.18, 1529).

ಕಟುತೆಱು, ಕಟುದೆಱು, ಕಟುಂದೆಱು; Kaṭuteṟu, Kaṭudeṟu, Kaṭuṁdeṟu: ಭತ್ತದ ಅಥವಾ ಅಕ್ಕಿಯ ಕಟ್ಟಿನ (ಮುಡಿಯ) ಮೇಲಿನ ಕರ; Tax on packages of paddy; (SII. VII, 383, 1316).

ಕಬ್ಬಿನ ಸುಂಕ; Kabbina sunka: ಕಬ್ಬಿನ ಮೇಲಿನ ಕರ; Tax on Sugar Cane; (EC. XI(O), Dg.106, 1528).

ಕಬ್ಬುನದ ಸುಂಕ; Kabbunada sunka: ಕಬ್ಬಿಣ ವಸ್ತುಗಳ, ಬಹುಶಃ ಒಕ್ಕಲುತನದ ಉಪಕರಣಗಳ ಮೇಲಿನ ಕರ; Tax on iron articles, probably agricultural implements; (EC. XII(O), Gb.45, 1233).

ಕವಣಾಯ; Kavaṇāya: ಹುಲ್ಲುಗಾವಲಿನ ಆದಾಯ; ಹುಲ್ಲುಬನ್ನಿ; Income from pasture land; (SII. IX, I, 172, 1106).

ಕವಲಿ; Kavali: ಕಾಲುವೆ ನೀರಿಗೆ ಕೊಡುವ ಸುಂಕ; Tax on water for irrigation; (EC. III(R), Gu.39, 1507).

ಕಳವತ್ತ; Kaḷavatta: ಕಣದಲ್ಲಿ ಭತ್ತದ ರೂಪದಿಂದ ಕೊಡುವ ಸುಂಕ; Share of grain as tax at the threshing floor; ಆ ಊರ ತಿಪ್ಪೆಸುಂಕಮುಮಂ ಕಳವತ್ತಮುಮಂ ಮಲ್ಲಗೌಂಡನೊಳಗಾದ ಸಮಸ್ತ ಪ್ರಜೆಗಳುವಿರ್ದ್ದು; (EC. V(O), Ak.141, 1159).

ಕಳಸುಂಕ; Kaḷa-sunka: ಬಹುಶಃ ಕಣದ ಮೇಲಿನ ಸುಂಕ; Probably tax on thresting floor; (EC. III(R), Nj.273, 1488).

ಕಾಡಾಯ; Kāḍāya: ಕಾಡಿನಿಂದ ಬರುವ ಆದಾಯ; Income from forest; (SII. IX, I, 77, 992; Ibid. XVIII, 285, 1547).

ಕಾಡಾರಂಭ; Kāḍāraṁbha: ನೀರಾವರಿ ಸೌಕರ್ಯವಿಲ್ಲದ ಒಕ್ಕಲುತನದ ಭೂಮಿಯ ಮೇಲಿನ ಕರ; Tax on non-irrigational agricultural land; (EC. IV(R), Ch.292, 1345).

ಕಾಲುವೆದೆಱೆ; Kāluve-deṟe: ನೀರಾವರಿ ಕಾಲುವೆಗಾಗಿ ಕೊಡುವ ತೆರಿಗೆ; Tax on irrigational canal; (EC. VII(R), Ng.74, 1271).

ಕುಳ; Kuḷa: ಭೂಮಿಯ ಮೇಲಿನ ತೆರಿಗೆ; Tax on land; (EC. X, Kl.24, 11th cent.). ಅರಮನೆಗೆ ತೆರುವ ಕುಳದ ಪೊಂನು; (KI. I, 58, 1446).

ಕುಳಿಯ ಸುಂಕ; Kuḷiya sunka: s.a. ಗುಳಿದೆಱೆ; Guḷideṟe below; (SII. IX, I, 170, 1106).

ಕುಳದೆಱಿಗೆ; Kuḷa-deṟige: ಒಕ್ಕಲುತನದ ಮೇಲಿನ ತೆರಿಗೆ; (ಕುಳ = ರಂಟೆಯ ಕುಳ) Tax on agriculture (Kuḷa = the iron piece attached to the tip of the

plough); (EC. III(R), Gu.26, 1506; Ibid. VII(O), Cn.76, 1545).

ಕುಳವರಿ; Kuḷavari: s.a. ಕುಳದೆಱಿಗೆ; Kuḷadeṟige; (EC. III(R), Gu.26, 1506).

ಕುಳಾಗ್ರದ ತೆಱು; Kuḷāgrada teṟu: s.a. ಕುಳದೆಱಿಗೆ; Kuḷadeṟige; (SII. VII, 368, 1453).

ಖಾಣ; Khāṇa: ಒಂದು ವಿಧದ ಕರ; ಬಹುಶಃ ಮೇವಿನ ಮೇಲಿನ ಕರ; A kind of tax, probably on fodder; (EC. X(O), Bowringpet 20, 1465).

ಗದ್ದೆ ಸುಂಕ; Gadde-sunka: ಗದ್ದೆಗಳ ಮೇಲಿನ ಕರ; Tax on wet land; (EC. IV(R), Ch.301, 1555).

ಗುಳಿದೆಱೆ; Guḷi-deṟe: ಗಿಡಗಳನ್ನು ನೆಡುವ ಕುಣಿಗಳ ಮೇಲಿನ ಕರ; ತೋಟದಲ್ಲಿ ತೆಂಗು, ಅಡಿಕೆ ಮುಂತಾದ ಮರಗಳ ಮೇಲಿನ ಕರ; Tax on pits for planting trees; Tax on plantation such as coconut and areca nut; ತಂತ್ರಪಾಳ ಮೈಲಯ್ಯ ಗುಳಿದೆಱೆ .... ಮೇಶ್ವರ ದತ್ತಿಯಾಗಿ; (SII. IX, I, 127, 1064); ಐನೂಱು ಗುಳಿಯ ಪನ್ನಾಯದೆಱೆ; (EC. IV(R), Hs.24, 1162).

ಜೋಡಿ; Jōḍi: ಉಂಬಳಿಯಾಗಿ ಹಾಕಿಕೊಟ್ಟ ಭೂಮಿಯ ಮೇಲೆ ಕೊಡಬೇಕಾದ ಅಲ್ಪಕರ; Small quitrent for the grant land; ಅರಸಿನಗುಂಟೆಯ ಪುರಕ್ಕೆ ನೀಱು ಪ್ರಾಕು ಜೋಡಿಯ ತೆತು ಬರಲಾಗಿ ಕೃಷ್ಣರಾಯಮಹಾರಾಯರಿಗೆ ಧರ್ಮವಾಗಬೇಕೆಂದು ರಾಯರಿಗೆ ನಾವು ಬಿಂನ್ನಹ ಮಾಡಿ ಆ ಜೋಡಿಯ ಬಿಡಿಸಿ ನಿಮಗೆ ಸರಿವ ಮಾನ್ಯವಾಗಿ ಕೊಟ್ಟ; (EC. IX(O), Ma.68, 1516); ಕರಣಿಕೆ ಜೋಡಿ; (EI. XVIII, 17, 1435; EC. IX(O), Nl.81, 1545). Cf. ಜೂಡಿ Jūḍi; ಉತ್ತರ ಕರ್ನಾಟಕದಲ್ಲಿ ಈಗಲೂ ರೂಢಿಯಲ್ಲಿರುವ ಪದ; in current use in northern Karnataka.

ತಿಪ್ಪೆಸುಂಕ; Tippe-sunka: ತಿಪ್ಪೆ ಅಥವಾ ಗೊಬ್ಬರದ ಗುಣಿಗಳ ಮೇಲಿನ ಕರ; Tax on manure pits; (SII. IX, I, 233, 1139); ಬೋವಕ್ಕಳು .... ತಿಪ್ಪೆಸುಂಕವ ಕೊಟ್ಟರು; (SII. XX, 248, 1228; EC. V, Cn.203, 1236).

ತೋಟ ಸುಂಕ; Tōṭa-sunka: ತೆಂಗು, ಅಡಿಕೆ ತೋಟಗಳ ಮೇಲಿನ ಕರ; Tax on coconut and areca nut plantations; (EC. IV(O), Yd.1, 1391).

ದನದ ತೆಱೆ; Danada teṟe: ದನಗಳ ಮೇಲಿನ ಕರ; Tax on cattle; (EC. VIII, Sk.48, 11th cent.).

ನಮಸ್ಯದೆಱೆ; Namasya-deṟe: ದತ್ತಿಯಾಗಿ ಕೊಟ್ಟ ಭೂಮಿಯ ಮೇಲಿನ ಕರ; Tax on gift land; (SII. IX, I, 127, 1064).

ನಲ್ಲಾವು; Nallāvu: ಜಾತಿಯ ಹಸುಗಳನ್ನು ಸಾಕುವ ಸಲುವಾಗಿ ಕೊಡುವ ಕರ; Cess for maintainance of cows of good breed; (EC. VI(O), Tk.20, 1185).

ನಲ್ಲೆತ್ತು; Nallettu: ಬೀಜದ ಹೋರಿಗಳನ್ನು ಸಾಕುವ ಸಲುವಾಗಿ ಕೊಡಬೇಕಾದ ಕರ; Cess for maintaining stud bulls; (EC. VI(O), Tk.20, 1185).

ನೀರ ಬಿರಾಡ; Nīra birāḍa: ನೀರಾವರಿ ಕಾಲುವೆಯ ನೀರಿನ ಸುಂಕ; Cess on irrigation; (SII. IX, II, 493, 1513).

ನೀರಾರಂಭ, ನೀರಾರಂಭ ಸುಂಕ; Nīrāraṁbha, Nīrāraṁbha-sunka: ನೀರಾವರಿ ತೆರಿಗೆ; ನೀರಾವರಿ ಭೂಮಿಯ ಮೇಲಿನ ಕರ; Cess on irrigation; Tax on irrigated land; (EC. IV(R), Ch.292, 1343).

ನೀರುಕೂಲಿ; Nīru-kūli: ನೀರಾವರಿ ಕರ; Cess on irrigation; (EC. IV(R), Ch.3, 4, 1345).

ನೀರುಣಿಸುಂಕ; Nīruṇi-sunka: ನೀರಾವರಿ ತೆರಿಗೆ; Cess on irrigation; (SII. XI, I, 15, 873).

ನೆಲದೆಱೆ; Nela-deṟe: ಒಕ್ಕಲುತನದ ಭೂಮಿಯ ಮೇಲಿನ ಕರ; Tax on agricultural land; (SII. XVIII, 166, 11th cent.).

ನೆಲವಾಱು; Nelavāṟu: s.a. ನೆಲದೆಱೆ; Nela-deṟe; (EC. XI, Hk.23, 969).

ಪಲದೆಱೆ; Paladeṟe: ಬಹುಶಃ ಫಲದೆರೆ; ಹಣ್ಣಿನ ತೋಟಗಳ ಮೇಲಿನ ಕರ; Probably Phala-dere; tax on orchards; (EC. III(R), Nj.338, 1530).

ಪಿಂಡಾದಾನ; Piṇḍadāna: ದಾನವಾಗಿ ಕೊಟ್ಟ ಭೂಮಿಯ ಮೇಲಿನ ಅಲ್ಪಕರ; Tax levied on gift land; quit rent; ತೊಳಚೆಯ ಸಿದ್ಧನಾಥದೇವರಿಗೆ ಅಂಗಭೋಗ ರಂಗಭೋಗ ನಿವೇದ್ಯ ಜೀರ್ಣ್ಣೋದ್ಧಾರಕ್ಕೆ ದೇವಾಲಯದ ಮುಂದಣ ನರುವಲಹಾಳ ಹೊಲದೊಳಗೆ ಸರ್ವ್ವನಮಸ್ಯ ಪಿಂಡಾದಾನವಾಗಿ ಶ್ರೀ ವೀರಬಲ್ಲಾಳದೇವರು; (EC. IV(R), Kr.48, 1131; Ibid. VII(O), Sk.105, 1192; Ibid. VI, Tk.20, 1185; SII. XX, 205, 1247).

ಬಣಂಬೆದೆಱೆ; Banambe-dere: ಬಣವೆ ಮೇಲಿನ ತೆರಿಗೆ; Tax on hay stack; (SII. XVIII, 94, 1083).

ಬನಿ; Bani: ಹುಲ್ಲುಬನ್ನಿ; Hullubanni; ದನಗಳನ್ನು ಮೇಯಿಸುವದಕ್ಕಾಗಿ ಹುಲ್ಲುಗಾವಲಿಗೆ ಕೊಡುವ ಕರ; Tax on grass land used for grazing the cattle; ದೋಣಿಯ ಬನಿಯುಂ ತೆಱೆಯುಮಂ ಸರ್ವಬಾಧಾ ಪರಿಹಾರವಾಗಿ; (SII. XI, II, 158, 1109). ಆ ಪೂರ ಜೀವಧನಕ್ಕಂ ಬಾಳ್ಪುಲ್ಲ ಕೊಯ್ವುಡಂಬುಲಗೆ ಮುಳ್ಳ ಕಡಿವರಂ ..... ಯೆಲ್ಲಿ ಮೇದಡಂ ಬನಿಯಂ ಕೊಳ್ಳದಂತಾಗಿ ..... ಬನಿಯಂ ಬಿಟ್ಟನು; (SII. XX, 156, 1174). ತೆ. ಪುಲ್ಲವರಿ; Pullavari; ತ. ಪುಲ್ಲರಿ, Pullari.

ಬಿರಾಡ; Birāḍa: ಒಕ್ಕಲುತನದ ಹುಟ್ಟುವಳಿಯ ಮೇಲಿನ ಕರ; Tax on agricultural produce; ಭೂಮಿಗಂ ತಱುವ ಮಾನ್ಯ ತೆಱೆ; ..... ಬಿರಾಡ ಬೀಜವರಿ ಮುಂತಾದ ಎಲ್ಲಾ ತೆಱೆಯನೂ; (EC. XII(O), Ck.37, 1528).

ಬೆಟ್ಟದ ಕಾವಲು; Beṭṭada-kāvalu: ಬೆಟ್ಟದ ಮೇಲೆ ಹುಲ್ಲು ಮೇಯಿಸುವದಕ್ಕೆ ಕೊಡಬೇಕಾದ ಕರ; Tax to be paid for grazing the cattle on the hill; (EC. III(R), Gu.134, 150, 156, 1521).

ಮನ್ನೆಯ ಅಱುವಣ; Manneya Aṟuvaṇa: ಮಾನ್ಯದ ಅರುವಣ; ಉಂಬಳಿಯ ಭೂಮಿಯ ಮೇಲಿನ ತೆರಿಗೆ; Tax on grant land; (SII. XX, 138, 1162).

ಮಂಣುದೆರೆ; Maṁṇu-dere: ಒಕ್ಕಲುತನದ ಭೂಮಿಯ ಮೇಲಿನ ಕರ; Tax on agricultural land; (EC. X(O), Kl. 247, 16th cent.).

ಮಾನ್ಯದೆಱೆ; Mānya-deṟe: ಉಂಬಳಿಯ ಭೂಮಿಯ ಮೇಲಿನ ಕರ; Tax on gift land; (SII. XX, 71, 1109).

ಲಾವಣಿಗೆ; Lāvaṇige: ಭೂಮಿಯ ಮೇಲಿನ ಕರ; Tax on land; ಲಾವಣಿಗೆ ವೊಕ್ಕಲ್ದೆಱೆ ದಂಡದೋಷವಿಂತಿನಿತು; (EI. XVI, 8A, 1102).

ವಕ್ಕಲುದೆರೆ; Vakkalu dere: s.a. ಒಕ್ಕಲುದೆರೆ; Okkalu-dere above; (EC. VII, Hl.25, 1205).

ವಾರಕೋರು; Vāra-kōru: ಒಕ್ಕಲುತನದ ಹುಟ್ಟುವಳಿಯ ಮೇಲೆ ಧಾನ್ಯರೂಪದ ಕರ; Tax in kind on agricultural produce; (EC. XII(O), Si.10, 1341-42).

ವೊಕಲ್ದೆಱೆ; ವೊಕ್ಕಲುದೆಱೆ; Vokkal-deṟe; Vokkalu-deṟe: s.a. ಒಕ್ಕಲುದರೆ; Okkalu-dere above; (EI. XVI, 8A, 1102; KI. IV, 1. 1204; EC. VII(O), Sk.95, 1215).

ಸೊಪ್ಪೆಬಿರಾಡ; Soppe-birāḍa: ಮೇವಿನ ಮೇಲಿನ ಕರ; Tax on fodder; (SII. IX, II, 663, 1556).

ಹತ್ತಿಯ ಹೊಲದ ಸುಂಕ; Hattiya holada sunka: ಹತ್ತಿಯ ಹೊಲದ ಮೇಲಿನ ಕರ; Tax on cotton growing land; (EC. IV(O), Hg.151, 1407).

ಹಱವಣ; Haṟavaṇa: s.a. ಹಲವಣ; Hala-vaṇa below; (SII. XVIII, 51, 1033).

ಹಲವಣ; Hala-vaṇa: ನೇಗಿಲುದೆರೆ; ಒಕ್ಕಲುತನದ ಕರ, ಹಲ, Hala = ನೇಗಿಲು, Plough; Tax on plough, tax on agricultural land; ಶಾಮರೆಗೆಱೆಯ ... ಕರಿಯ ನೆಲಂ ಮತ್ತು ೩೦ ಯಾನೆ ಗೋಸನೆ ಸಲ್ವನ್ನೆಗಂ ಹಲವಣವುಂ ಪುರಪ್ರಮ್ಮಮುಂ ಕೊಳ್ಳಸಲ್ಲದು; (APGAS. III, Md.6, 12th cent.).

ಹಲೆದೆಱೆ; Hale-deṟe: s.a. ಹಲವಣ; Hala-vaṇa; (SII. XX, 127, 1186).

ಹುಲುಬನ್ನಿ; Hulu-banni: ದನ ಮೇಯಿಸುವ ಹುಲ್ಲುಗಾವಲು ಮೇಲಿನ ಕರ; Tax on grazing land; ಆ ಗ್ರಾಮದ ಹುಲುಬಂನಿ ರೊಕ್ಕವ; (EC. XI(O), Hr.22, 1554).

ಹೊಲದೆಱೆ; Hola-deṟe: ಹೊಲದ ಮೇಲಿನ ಕರ; Tax on agricultural land; land revenue; (SII. XX, 91, 12th cent.).

೪. ಸುಂಕಗಳು
4. TOLLS

ಅಭ್ಯಾಗತೆ; Abhyāgate: ತಲೆಪಟ್ಟಿ, ಹೊರಗಿನಿಂದ ಬಂದವರು ಕೊಡುವ ಸುಂಕ; Poll tax, Tolls collected from people entering a place; (EC. VII(R), Ng.73, 1284). Cf. ದಂಡಿನಭ್ಯಾಗತೆ; Daṇḍinabhyāgate below.

ಆಗಾನ್ತುಕ (ಆಗಂತುಕ); Agāntuka (Āgantuka): ಹೊರಗಿನಿಂದ ಬರುವವರು ಕೊಡಬೇಕಾದ ತೆರಿಗೆ; ತಲೆಪಟ್ಟಿ; Poll tax; ಆಗಾನ್ತುಕವೊಳಗಾಗಿ ಸರ್ವ್ವಾಯ ಶುದ್ಧಿ; (EC. VI(O), Tk.20, 1185) s.a. ಅಭ್ಯಾಗತೆ; Abhyāgate.

ಉಭಯಮಾರ್ಗಸ್ಥಾನದ ಸುಂಕ; Ubhayamārga-sthānada sunka: ಎರಡು ರಾಜಮಾರ್ಗಗಳು ಕೂಡುವ ಸ್ಥಳದಲ್ಲಿ ಕೊಡಬೇಕಾದ ಸುಂಕ; Customs to be paid at the meeting place of two high ways; (EC. III(R), Nj.259, 1490).

ಒಳವಾಱು; Oḷavāṟu: ಊರೊಳಗೆ ಬಂದ ಸರಕುಗಳ ಮೇಲಿನ ಸುಂಕ; Toll on the commodities brought into the town; ಒಳವಾಱು ಹೊಱವಾಱು ನೆಲವತ್ತಿ ..... (EC. IV(O), Yd.56, 12th cent.). Cf. ಹೊಱವಾಱು; Hoṟavāṟu, below.

ಜಾತ್ರೆ ಸುಂಕ; Jātre-sunka: ಜಾತ್ರೆಗಳಲ್ಲಿ ಹಾಕುವ ತಲೆಪಟ್ಟಿ; Poll tax collected from individuals attending a fair; ಲಿಂಗರಸರು ತೆಂದೆಜೆದೇವಿಗೆ ಜಾತೆ. ಸುಂಕವ ಬಿಟ್ಟನು; (EC. IV(O), Yd.41, 1492).

ಬಾಹಿರ ಸುಂಕ; Bāhira-sunka: 1. ಊರಿನಿಂದ ಹೊರಗೆ ಒಯ್ಯುವ ಸರಕಿನ ಮೇಲಿನ ಸುಂಕ; Tolls on goods taken outside the town; 2. ಸರಕುಗಳ ಕ್ರಯ ವಿಕ್ರಯಗಳ ಮೇಲಿನ ಹೆಚ್ಚಿನ ತೆರಿಗೆ; Additional tax on sale and purchase of goods; (SII. XX, 208, 13th cent.). Cf. ಹೊರವಾಱು; Horavāṟu below.

ಮಂಡೆಗದ್ಯಾಣ; Maṇḍe-gadyāṇa: ತಲೆಪಟ್ಟಿ; Poll tax; (EC. IV(R), Ch.84-85, 1281).

ಮೆಣಸಿನ ಭಾರಸುಂಕ; Meṇasina bhāra-sunka: ಮೆಣಸಿನ ಗಂಟುಗಳ ಮೇಲಿನ ಕರ; Toll on loads of pepper; (EC. VIII(R), Hn.35, 1209).

ಮೊಟ್ಟೆ ಸುಂಕ; Moṭṭe-sunka: ಸರಕುಗಳ ತಲೆ ಹೊರೆಯ ಮೇಲಿನ ಸುಂಕ; Toll on head loads of merchantile goods; (EC. III(R), Nj.259, 1490).

ವೊಳವಾಱು; Voḷavāṟu: s.a. ಒಳವಾಱು; Oḷavāṟu; ಆ ಪೂರ ಮನೆ ಚಿಂನ ವೊಳವಾಱು. ಹೊಱವಾಱು ಗಾಣದೆಱೆ ಕುಂಬಾಱದೆಱೆ; (EC. IV(R), Hs.24, 1162; Ibid. III(R), Gu.39, 1507).

ವೊಳವಾಱೆ; Voḷavāṟe: s.a. ಒಳವಾಱು; Oḷavāṟu; (EC. IV(R), Ch.262, 1533).

ವೊಳಸುಂಕ; Voḷa-sunka: ಸರಕುಗಳು ಊರೊಳಗೆ ಬರುವಾಗ ಕೊಡುವ ಸುಂಕ; Toll on goods brought into a town; ಬೆಳುಗಲಿಯ ವೊಳಸುಂಕ ಹೊಱಸುಂಕ; (EC. VII(O), Sh.78, 1291). Cf. ಒಳವಾರು; Oḷavāru above.

ಸಂತೆಯ ಸುಂಕ; Santeya suṁka: ಸಂತೆಯಲ್ಲಿ ಮಾರಾಟಕ್ಕಾಗಿ ತಂದ ವಸ್ತುಗಳ ಮೇಲಿನ ಸುಂಕ; Toll on goods brought to the market for sale on the market day; (EC. V(O), Hn.66, 12th cent.).

ಸಂತೆಯ ದಾಯ; ಸಂತೆಯಾಯ; Santeya-dāya, Santeyāya: s.a. ಸಂತೆಯ ಸುಂಕ; Santeya sunka; (EC. VII(O), Hl.108, 1203; Ibid. XII(O), Th.48, 1214).

ಸಂತೆಯ ಪನ್ನಾಯ; Santeya Pannāya: ಸಂತೆಯಲ್ಲಿ ಸಂಗ್ರಹಿಸುವ ವೀಳೆಯದೆಲೆಯ ಮೇಲಿನ ಸುಂಕ; Toll on Betel leaves, collected on market day; (SII. XX, 164, 1176).

ಸಂತೆವಣ; Santevaṇa: s.a. ಸಂತೆಯ ಸುಂಕ; Santeya sunka; (SII. XX, 91, 12th cent.).

ಹೊಱವಾಱು; Hoṟavāṟu: ಹೊರಗೆ ಹೋಗುವ ಮಾರಾಟದ ವಸ್ತುಗಳ ಮೇಲಿನ ಸುಂಕ; Toll on mercantile goods going outside; (EC. IV(R), Hs.24, 1162; Ibid. IV(O), Yd.56, 1190; Ibid. III(R), Nj.181, 1467).

ಹೊಱಸಲುವಳಿ; Hoṟa-saluvaḷi: s.a. ಹೊಱವಾಱು; Hoṟavāṟu; (EC. IV(R), Ch.302, 1536).

ಹೊಱಸುಂಕ; Hoṟa-sunka: s.a. ಹೊಱವಾಱು; Hoṟavāṟu; (EC. VII(O), Sh.78, 1291).

ಹೊಳೆಯ ದಂಡೆಯ ಅನುಪು; Hoḷeya daṇḍeya anupu: ಹೊರಗಿನಿಂದ ಹೊಳೆದಾಟಿ ಬರುವವರು ಕೊಡಬೇಕಾದ ಸುಂಕ; Toll to be paid by those entering the town by crossing the river; (SII. IV, 277, 1513).

೫. ವ್ಯಾಪಾರದ ಕರ ತೆರಿಗೆಗಳು
5. COMMERCIAL TAXES

ಅಡಕೆ ಎಲೆಯ ಹೆಜ್ಜುಂಕ; Aḍake eleya hejjunka: ಅಡಕೆ, ವೀಳ್ಯದ ಎಲೆಗಳ ಮಾರಾಟದ ಮೇಲಿನ ಹೆಚ್ಚಿನ ಸುಂಕ; Major tax on sale of betel nuts and betel leaves; ಶ್ರೀ ಬ್ರಹ್ಮೇಶ್ವರದೇವರ ತೋಟದಡಿಕೆ ಎಲೆಯ ಹೆಜ್ಜುಂಕ ವಡ್ಡರಾವುಳ; (SII. XX, 142, 1165).

ಅಡಕೆಯ ಸುಂಕ, ಅಡಿಕೆಯ ಸುಂಕ; Aḍakeya sunka, Aḍikeya sunka: ಅಡಿಕೆಯ ಮೇಲಿನ ಮಾರಾಟದ ಕರ; Tax on betel nut brought for sale; (EC. VIII(R), Hn.41, 1200; Ibid. VII(O), Sh.30, 1413); ಲಕ್ಕದಡಕೆಯ ಸುಂಕಮಂ ಬಿಟ್ಟರು; (KI. IV, 10, 1121).

ಅಡ್ಡದೆಱೆ; Aḍḍadeṟe: (ಅಡ್ಡ=ವ್ಯಾಪಾರಕ್ಕಾಗಿ ಸಾಮಾನು ಸಂಗ್ರಹ ಮಾಡಿದ ಸ್ಥಳ) ಗುದಾಮುಗಳ ಮೇಲಿನ ಕರ; Tax on warehouses; (EC. IX(O), Cn.161, 913).

ಅಡುಗಬ್ಬು; Aḍugabbu: ಉರುವಲದ ಮಾರಾಟದ ಮೇಲಿನ ಕರ; Tax on sale of fuel; ಅಡುಗಬ್ಬು ಹೀಗೆದೆಱೆ ಕಟ್ಟಲದೆಱೆ; (EC. VI(O), Kd.49, 1291).

ಅಂಗಡಿದೆಱೆ; Angaḍi-deṟe: ಅಂಗಡಿಗಳ ಮೇಲಿನ ಕರ; Tax on shops; (EC. VII(R), Ng.73, 1284).

ಅಂಗಡಿಸುಂಕ; Angaḍi-sunṁka: s.a. ಅಂಗಡಿದೆಱೆ; Angaḍideṟe; (IND. 3, 1047).

ಆಯ ಸುಂಕ; Āya-sunka: ಮಾರಾಟದ ಕರ; Sales tax; ಮಾಱಿದ ವಸ್ತುವಿಗೆ ಯಾಯಸುಂಕವಿಲ್ಲ; (SII. XVIII, 381, 1278).

ಉಗ್ರಾಣ; Ugrāṇa: ಮಳಿಗೆಯ (ಗುದಾಮಿನ) ಮೇಲಿನ ತೆರಿಗೆ; Tax on warehouses; (EC. IX(R), Bl.17, 1174).

ಎಣ್ಣೆಯ ಹಣ; Eṇṇeya haṇa: ಮಾರಾಟದ ಎಣ್ಣೆಯ ಮೇಲಿನ ಕರ; Tax on oil kept for sale; (EC. VI(O), Tk.20, 1185).

ಎಲೆ ಒಕ್ಕಲು ಹೆಜ್ಜುಂಕ; Ele Okkalu hejjunka: ವೀಳ್ಯೆದೆಲೆ ವ್ಯಾಪಾರಿಗಳು ಕೂಡಬೇಕಾದ ಹೆಚ್ಚಿನ ಕರ; Additional tax to be paid by betel leaf merchants; (SII. XVIII, 294, 1177).

ಎಲೆಯ ತರುಗು; Eleya tarugu: ವೀಳ್ಯದೆಲೆ ವ್ಯವಹಾರದ ಮೇಲಿನ ಕರ; Tax on dealings in betel leaves; (EC. III(R), Gu.26, 1506).

ಎಲೆಯ ಸುಂಕ; Eleya sunka: ವೀಳ್ಯದೆಲೆಯ ಮಾರಾಟದ ಮೇಲಿನ ಕರ; Tax on sale of betel leaves; (IND. 3, 1047).

ಕಿಱುಕುಳ; Kiṟukuḷa: ಚಿಲ್ಲರೆ ವ್ಯಾಪಾರದ ತೆರಿಗೆ; Tax on retail sale of articles; ಅಲ್ಲ ಬೆಲ್ಲ ಅರಿಸಿನ ಮೊದಲಾಗಿ ಕಿಱುಕುಳವೆಲ್ಲವಂ ಪಸಾರಕ್ಕೊಂದೊಂದ ಕೊಟ್ಟರು; (SII. XX, 248, 1228).

ಕಿಱುಕುಳ ಸುಂಕ; Kiṟukuḷa-sunka: s.a. ಕಿಱುಕುಳ; Kiṟukuḷa; (EC. VII(O), Sk.95, 1215).

ಕೊಟ್ಟಿಗೆದೆಱೆ; Koṭṭige-deṟe: ಉಗ್ರಾಣದ ಮೇಲಿನ ಕರ; Tax on granery; (EC. VIII(R), Hn.41, 1200).

ಕೊಠಾರ ಸುಂಕ; Koṭhāra-sunka: ಗುದಾಮುಗಳ ಮೇಲಿನ ಸುಂಕ; Taxes on warehouses; (EC. III(R), Nj.273, 1488).

ಕೊಡಾರ ಸುಂಕ; Koḍāra-sunka: s.a. ಕೊಠಾರ ಸುಂಕ; Koṭhāra-sunka; (EC. IV(R), Ch.301, 1555).

ಕೊನೆದೆಱೆ; Kone-deṟe: ಬಾಳೆಯ ಗೊನೆಗಳ ಮಾರಾಟದ ಮೇಲಿನ ಕರ; Tax on the sale of bunches of plantains; (EC. VI(O), Kd.49, 1291).

ತುಪ್ಪದ ತೆಱೆ, ತುಪ್ಪದೆಱೆ; Tuppada teṟe, Tuppa-deṟe: ತುಪ್ಪದ ಮಾರಾಟದ ಮೇಲಿನ ಕರ; Tax on sale of ghee; (SII. XI, I, 12, 867-68).

ದವಸದ ಸುಂಕ; Davasada sunka: ಮಾರಾಟದ ಧಾನ್ಯಗಳ ಮೇಲಿನ ಕರ; Tax on sale of grains; (SII. IX, I 165, 1099; EC. VIII(R), Hn.78, 1283).

ದವಸಾಯದ ಸುಂಕ; Davasāyada sunka: ಧಾನ್ಯದ ವ್ಯಾಪಾರದಿಂದ ಬರುವ ಆದಾಯದ ಮೇಲಿನ ಕರ; Tax on the income from sale of grains; ಬನವಾಸಿ ಪನ್ನಿರ್ಚ್ಛಾಸಿರದ ದವಸಾಯದ ಸುಂಕವಂ; (EC. VIII(O), Sb.388, 1089; SII. XX, 60, 1088).

ಪನ್ನವಣ; Pannavaṇa: ವೀಳ್ಯೆದೆಲೆಯ ಮಾರಾಟದ ಮೇಲಿನ ಕರ; Tax on sale of betel leaves; ಗಾತ್ರಿಗರುಂ ಪನ್ನವಣಮುಂ; (SII. XX, 45, 1071).

ಪನ್ನಾಯ; Pannāya: s.a. ಪನ್ನವಣ; Pannavaṇa; ಪನ್ನಾಯದಲುಂ ಪೆರ್ಜ್ಜುಂಕದಲುಂ ಕೂಡಿ; (SII. XVIII, 91, 1083; Ibid. 92, 1087).

ಪನ್ನಾಯದ ಸುಂಕ; Pannāyada sunka: s.a. ಪನ್ನವಣ; Pannavaṇa; ಏಟ್ಟರಸರಾ ಗ್ರಾಮದ ಪನ್ನಾಯ ಸುಂಕ; (EC. VII(O), Sk.13, 1098; SII. XVIII, 108, 1109).

ಪನ್ನಾಯದೆಱೆ; Pannāya-deṟe: s.a. ಪನ್ನಾಯದ ಸುಂಕ; ಅಯ್ನೂಱು ಗುಳಿಯ ಪನ್ನಾಯದೆಱೆ. (EC. IV(R), Hs.24, 1162).

ಪಸಾರದೆಱೆ; Pasāra-deṟe: ಸಂತೆಯಲ್ಲಿ ತಾತ್ಕಾಲಿಕವಾಗಿ ಹಾಕಿದ ಅಂಗಡಿಗಳ ಮೇಲಿನ ಕರ; Tax on the shops erected temporarily in the bazar; (SII. XVIII, 377, 1241).

ಬಿಲುಕೊಡೆ, ಬಿಲ್ಕಡೆ, ಬಿಲ್ಕೊಡೆ; Bilukoḍe, Bilkaḍe, Bilkoḍe: ವ್ಯಾಪಾರದ ಸರಕುಗಳ ಮೇಲಿನ ಕರ, ಮಾರಾಟದ ಕರ; Tax on the salable articles, sales tax: ಬಿಲ್ಕೊಡೆಯ ಸುಂಕವನಿತುಂ; (EC. VII(O), Sk.104, 1156). ಅನೇಕ ಶಾಸನಗಳಲ್ಲಿ ಬರುತ್ತದೆ. Figures in many inscriptions.

ಬಿಲುವಡಿಕೆ, ಬಿಲುವದಿಕೆ; Biluvaḍike, Biluvadike: s.a. ಬಿಲ್ಕೊಡೆ; Bilkoḍe (ಬಿಲ್=ಮಾರು, sell, ಪದಿಕೆ=ಸುಂಕ tax) ನಾಡೊಳಗೆ ಬಿಲುವಡಿಕೆ ಏನು ಬಂದಡಂ; (EC. VII(O), Ci.21, 1268).

ಬೀರವಣ; Bīravaṇa: ಬೀರ+ಪಣ; Bīra+paṇa; ವೀಳ್ಯದೆಲೆಯ ಕಟ್ಟುಗಳ ಮೇಲಿನ ತೆರಿಗೆ; Tax on bundles of betel leaves; ತವಗೆ ನಡೆವ ಬೀರವಣ ವಣವಂ ದೇವರ ತೋಂಟದೆಲೆಯೆನಿತು ಹೇಱಾದಡಂವನಿತಕ್ಕಂ ಹೇಱಿಗೊಂದು ಪಣಪಿನ ಬೀರವಣಮನಾಚಂದ್ರಾರ್ಕ್ಕತಾರಂಬರಂ ಬಿಟ್ಟರು; (SII. XV, 25, 1144). ತೆ. ಬೀರಣ.

ಭತ್ತದ ಸುಂಕ; Bhattada sunka: ಭತ್ತದ ಮಾರಾಟದ ಮೇಲಿನ ಕರ; Tax on sale of paddy; (EC. VII(O), Sk.190, 1158).

ಮೂಲಿಗದೆಱೆ; Mūliga-deṟe: ಸಂಗ್ರಹಕಾರನ, ಸಗಟು ವ್ಯಾಪಾರಸ್ಥನ ಮೇಲಿನ ಕರ; Tax on whole sale dealer; (SII. IX, I, 145, 1079; Ibid. 324, 1197-98).

ಮೂಲೆವೀಸ; Mūlevīsa: ಬಹುಶಃ ಮಾರಾಟ ವಸ್ತುಗಳ ಮೂಟೆಗಳ ಮೇಲಿನ ಸುಂಕ; Probably tax on mercantile goods; ಗುಡಿಗೆ ಸಲುವ ಮೂಲೆವೀಸ (SII. IV, 255, 1513; EI. VI, 22, 1520); ಇಲ್ಲಿ ಇದ್ದ ಮೂಲವೀಸ ಎಂಬ ಪಾಠವು ಮೂಲೆವೀಸ ಎಂದು ಇದ್ದಿರಬೇಕು; Here the reading Mūla-vīsa seems to be a mistake for mūle-vīsa (See IEG. p. 206).

ಮೂಲೆ ಸುಂಕ; Mūle-sunka: ಸರಕಿನ ಸಂಗ್ರಹದ ಮೇಲಿನ ಕರ; Tax on stock of goods; (SII. XVIII, 183, 1172; EC. VII(O), Sk.236, 1174).

ಮೂಳಿಯ ಹಣ; Mūḷiya haṇa: ಬಹುಶಃ ಮೂಲೆಯ ಹಣ ಎಂದಿರಬೇಕು. Seems to be mūleya haṇa, s.a. ಮೂಲೆವೀಸ; Mūlevīsa (SII, IX, III, 456, 1402).

ವಡ್ಡಾರಾವುಳ; Vaḍḍarāvuḷa: ವೃದ್ಧರಾಜಕುಲ ಎಂಬ ಸಂಸ್ಕೃತ ಪದದಿಂದ ಬಂದ ಶಬ್ದವೆಂದೂ, ರಾಜಮನೆತನದ ವೃದ್ಧರ ಪೋಷಣೆಗಾಗಿ ಈ ಕರವನ್ನು ಹಾಕಲಾಗುತ್ತಿತ್ತೆಂದೂ ಹೇಳಲಾಗುತ್ತದೆ. ಆದರೆ ಈ ವಿವರಣೆ ಸಂದರ್ಭಕ್ಕೆ ಹೊಂದುವುದಿಲ್ಲ. ಬಹುಶಃ ನಗದು ವ್ಯಾಪಾರಕ್ಕೆ ಸಂಬಂಧಿಸಿದ ದೊಡ್ಡ ಮೊತ್ತದ ಕರವಿರಬೇಕೆಂದು ತೋರುತ್ತದೆ. It is some times derived from Sanskrit *Vṛiddharājakula* and explained as tax collected for maintaing the old people of the royal family. But this explanation does not suit the context. It seems to stand for a major tax collected on cash transactions; ವಡ್ಡರಾವುಳದ ಪೆರ್ಗ್ಗಡೆ ಶಿವರಾಜನ ಬೆಸದೆ; (SII. XVIII, 63, 1053; EC. VIII(O), Na.30, 1077).

ವಡ್ಡರಾವುಳದ ಹೆಜ್ಜುಂಕ; Vaḍḍarāvuḷada Hejjunka: ವಡ್ಡರಾವುಳದ ಮೇಲಿನ ಹೆಚ್ಚಿನ ಕರ; Surcharge on Vaḍḍaravūḷa tax; (SII. IX, I, 238, 1142).

ವಡ್ಡರಾವುಳ ಪನ್ನಾಯ; Vaḍḍarāvuḷa-pannāya: ವೀಳ್ಯದೆಲೆಯ ಸಗಟು ವ್ಯಾಪಾರದ ಮೇಲಿನ ದೊಡ್ಡ ಮೊತ್ತದ ಕರ; Major tax on the whole sale deal of betel leaves; ವಡ್ಡರಾವುಳದ ಪನ್ನಾಯದ ಪೆರ್ಗ್ಗಡೆ; (EC. XI(O), Cd.78, 1060).

ವಡ್ಡರಾವುಳ ಸುಂಕ; Vaḍḍarāvuḷa-sunka: s.a. ವಡ್ಡರಾವುಳ; Vaḍḍarāvuḷa; (SII. XVIII, 103, 1100; Ibid. XX, 87, 11th cent.).

ಸೀರೆಯ ಸುಂಕ; Sīreya sunka: ಬಟ್ಟೆಯ ಗಂಟಿನ ಮೇಲಿನ ಸುಂಕ; Tax on bundle of cloth; ಸೀರೆಯ ಸುಂಕ ಪೊದಕೆಗೆ ಪಾಗ ೨; (IND. 3, 1047).

ಹತ್ತಿಯ ಸುಂಕ; Hattiya sunka: ಹತ್ತಿಯ ಗಂಟುಗಳ ಮೇಲಿನ ಸುಂಕ; Tax on bundles of cotton; (SII. IX, II, 701, 1512).

೬. ಸಾರಿಗೆ, ಸಾಗಾಣಿಕೆ ವಾಹನಗಳ ಕರಗಳು

6. TAXES ON TRANSPORT AND VEHICLES

ಅನುಪು, ಅನುಪು ಸುಂಕ; Anupu, Anupu-sunka: ಸರಕಿನ ಸಾರಿಗೆ ಸುಂಕ; Toll on commodities brought on any conveyance into the town; ಅನುಪು ಎತ್ತು ೧೦ಕ್ಕೆ ಇಪ್ಪಣವ ಕೊಟ್ಟರು; (SII. IX, I, 384, 1287).

ಆನೆಯ ಸೇಸೆ; Āneya Sēse: ಆನೆಯ ಮೇಲೆ ಸರಕುಗಳನ್ನು (ಮುತ್ತು, ರತ್ನ ಇತ್ಯಾದಿ) ಸಾಗಿಸುವದಕ್ಕಾಗಿ ಕೊಡುವ ಸುಂಕ; Tax to be paid for carrying mercantile articles like pearls and precious stones; (EC. VII(R), Ng.73, 1284).

ಉಭಯ ಸಾಮ್ಯದ ಸುಂಕ; Ubhaya-samyāda sunka: ಸರಕುಗಳ ಆಯಾತ ನಿರ್ಯಾತಗಳ ಮೇಲಿನ ಕರ; Tax on incoming and out going goods; ಸಿಂದವುರದ ನಾಗನೂರ ಕುದುರೆಯ ಉಭಯ ಸಾಮ್ಯದ ಸುಂಕ ಮುಖ್ಯವಾಗಿ; (KI. II, 24, 1167).

ಎತ್ತಿನ ಮೆಯಿದೆಱೆ; Ettina meyidere: s.a. ಎತ್ತಿನ ಸುಂಕ; (SII. XVIII, 270, 1298).

ಎತ್ತಿನ ಸುಂಕ, ಯೆತ್ತಿನ ಸುಂಕ; Ettina sunka, Yettina sunka: ಎತ್ತಿನ ಮೇಲೆ ವ್ಯಾಪಾರದ ಸರಕುಗಳನ್ನು ಸಾಗಿಸುವುದಕ್ಕಾಗಿ ಕೊಡಬೇಕಾದ ಕರ; Tax to be paid for the transportaion of goods on oxen; (EC. VII(O), Sh.30, 1413).

ಎಮ್ಮೆ ಸುಂಕ, ಯೆಂಮೆ ಸುಂಕ; Emme-sunka, Yamme-sunka: ಎಮ್ಮೆಗಳ ಮೇಲೆ ವ್ಯಾಪಾರಿ ಸರಕುಗಳನ್ನು ಸಾಗಿಸುವುದಕ್ಕಾಗಿ ಕೊಡಬೇಕಾದ ಕರ; Tax on mercantile goods carried on the back of buffallos; (EC. VII(O), Sh.30, 1413; SII. IV, 255, 1513).

ಐದೆತ್ತಿನ ಸುಂಕ; Aid-ettina sunka: ಐದು ಎತ್ತುಗಳ ಮೇಲೆ ಹೇರಿಕೊಂಡು ಬರುವ ವ್ಯಾಪಾರದ ಸರಕುಗಳ ಮೇಲಿನ ಸುಂಕ; Toll on the mercantile goods brought on five oxen; (EC. VIII(O), Sb.137, 13th cent.); Cf. ಹತ್ತೆತ್ತಿನ ಸುಂಕ; (SII. XX, 311, 12th cent.); ಹದಿನೈದೆತ್ತಿನ ಸುಂಕ; (EC. VIII(O), Sb.140, 1197).

ಕಿರ್ಬಟ್ಟೆಯ ಸುಂಕ; Kirbaṭṭeya sunka: s.a. ಕೀಳ್ವಟ್ಟೆಯ ಸುಂಕ; Kīḷvaṭṭeya sunka below; (SII. IX, I, 181, 1110).

ಕೀಳ್ವಟ್ಟೆಯ ಸುಂಕ; Kīḷvaṭṭeya sunka: ಗ್ರಾಮಗಳಿಗೆ ಹೋಗುವ ಚಿಕ್ಕ ರಸ್ತೆಗಳ ಮೇಲೆ ಸಾಗಿಸುವ ಮಾರಾಟದ ಸರಕುಗಳ ಮೇಲಿನ ಸುಂಕ; Toll collected on mercantile goods passing through minor roads leading to villages; (EI. XIX, 29c, 1079). Cf. ಮೇಲ್ವಟ್ಟೆಯ ಸುಂಕ; Mēlvaṭṭeya sunka below

ಕುದುರೆಯ ಪೆರ್ಜುಂಕ; Kudureya perjjunka: ಕುದುರೆಯ ಮೇಲೆ ವ್ಯಾಪಾರದ ಸರಕುಗಳನ್ನು ಸಾಗಿಸುವುದಕ್ಕಾಗಿ ಕೊಡಬೇಕಾದ ಹೆಚ್ಚಿನ ಕರ; Major tax on transport of mercantile goods carried on horseback; (SII. XX, 77, 1118).

ಕುದುರೆಯ ಸುಂಕ; Kudureya sunka: ಕುದುರೆಯ ಮೇಲೆ ವ್ಯಾಪಾರದ ಸರಕುಗಳನ್ನು ಸಾಗಿಸಲು ಕೊಡಬೇಕಾದ ಕರ, ಸುಂಕ; Toll on goods carried on horses; (SII. XV, 104, 1165).

ಕುದುರೆಯ ಸೇಸೆ; Kudureya sēse: s.a. ಕುದುರೆಯ ಸುಂಕ; Kudureya sunka; ಆನೆಯ ಸೇಸೆ, ಕುದುರೆಯ ಸೇಸೆ; (EC. VII(R), Ng.73, 1284).

ಕೋಣಸುಂಕ; Kōṇa-sunka: ಕೋಣಗಳ ಮೇಲೆ ವ್ಯಾಪಾರದ ಸರಕುಗಳನ್ನು ಸಾಗಿಸಲು ಕೊಡಬೇಕಾದ ಸುಂಕ; Toll on mercantile goods carried on the back of he-buffallo; (EC. VII(O), Sh.30, 1413).

ತಲೆವೊಱೆ; Talle-vore: ತಲೆಯ ಮೇಲೆ ಹೊತ್ತು ಒಯ್ಯುವ ಸಾಮಾನುಗಳ ಮೇಲಿನ ಸುಂಕ; Tolls on head load of goods; ತಲೆವೊಱೆಯಲು ಬಂದಂಥಾದನೂ ಎರಡು ಕೇರಿಯವರು ಸರಿಯಾಗಿ ಹಾಯಿಕ್ಕಿಕೊಂಡು; (SII. VII, 309, 1431).

ತಳಸಾರಿಗೆ; Taḷa-sārige: ರಸ್ತೆ ಸಾಗಾಣಿಕೆಯ ಮೇಲಿನ ಸುಂಕ; Toll on transport by road; (SII. IX, I, 172, 1106; Ibid. XV, 233, 1203).

ತೆಪ್ಪ ಸುಂಕ; Teppa-sunka: ಸರಕುಗಳನ್ನು ಸಾಗಿಸುವ ತೆಪ್ಪದ ಮೇಲಿನ ಸುಂಕ; Toll on transport of goods through a ferry; ಕರುವತ್ತಿನ ಗ್ರಾಮದಿಂ ಪೊರಮಡುವ ವುಗುವ ಧಾನ್ಯಕ್ಕೆಲ್ಲವೆಡೆವರ್ತಿ ತೆಪ್ಪಸುಂಕಮಂ ಬಿಟ್ಟರ್; (EC. IX(R), B1.560, 1207).

ನೊಗಹಣ; Noga-haṇa: ಬಂಡಿಯ ಮೇಲೆ ಸಾಮಾನುಗಳನ್ನು ಸಾಗಿಸಲು ಕೊಡಬೇಕಾದ ಸುಂಕ; Toll on transporting goods through cart; (KI. I, 53, 1433); (ನೊಗ, Noga = ಬಂಡಿಯ ನೊಗ, Yoke of a cart.).

ಪಸುಂಬೆದೆಱೆ; Pasuṁbe-dere: ಹಸುಬೆಯ ತೆರಿಗೆ; ವ್ಯಾಪಾರಕ್ಕಾಗಿ ಹಸುಬೆಯಲ್ಲಿ ಸಾಗಿಸುತ್ತಿದ್ದ ಸರಕುಗಳ ಮೇಲಿನ ಕರ; Tax on marchandise carried in portmanteau; (HAS. XVIII, 1, 1005).

ಬಟ್ಟೆ ಸುಂಕ; Baṭṭe-sunka: ಹೆದ್ದಾರಿಯ ಮೇಲೆ ಸರಕುಗಳನ್ನು ಸಾಗಾಣಿಕೆಗಾಗಿ ಕೊಡುವ ಸುಂಕ, ರಸ್ತೆಯ ಕರ; Toll on transporting goods on high ways; Road tax; (KI. I, 30, 1222).

ಬಂಡಿಹಣ; Baṇḍi-haṇa: ಸರಕುಗಳನ್ನು ಸಾಗಿಸುವ ಬಂಡಿಗಳ ಮೇಲಿನ ಸುಂಕ; Toll on carts carrying merchandise; (SII. IX, II, 644, 1551).

ಬಾಲದೆಱಿಗೆ; Bāladerige: s.a. ಬಾಲವಣ; Bālavaṇa below; (EC. VI(R), PP. 215, 1724).

ಬಾಲವಣ; Bāla-vaṇa: ಸಾಗಾಣಿಕೆಗಾಗಿ ಬಳಸುವ ಪ್ರಾಣಿಗಳ ಮೇಲಿನ ಕರ; Tax on animals used for transport; (SII. IX, I, 54, 9th cent.; EC. V(O), Ak.54, 1275).

ಬೀರವಣ; Bīravaṇa: ಸಾರಿಗೆ ಸುಂಕ; Toll on transport; ಎತ್ತು ಕೋಣ ಕತ್ತೆಗಳ ಸಾರಿಗೆ ಬೀರವಣವಂ ದೇವರ ಚೈತ್ರಪವಿತ್ರಕ್ಕೆ ಬಿಟ್ಟರು; (SII. XVIII, 238, 1162).

ಭಂಡಿದೆಱೆ; Bhaṇḍi-dere: s.a. ಬಂಡಿಹಣ; Baṇḍi-haṇa above; (EC. IV(R), Hs.24).

ಮಾರ್ಗಾದಾಯ; Mārgādāya: ರಸ್ತೆಗಳ ಉಪಯೋಗಕ್ಕಾಗಿ ಕೊಡುವ ಹಣ; Road tax; (SII. XVIII, 388, 13th cent.).

ಮೇಲ್ವಟ್ಟೆಯ ಸುಂಕ; Mēlvaṭṭeya sunka: ಹೆದ್ದಾರಿಗಳನ್ನು ಬಳಸುವದರ ಮೇಲಿನ ಸುಂಕ; Toll on using highways; (SII. XX, 60, 1088; EC. VIII(O), Sb.388, 1089). ಮೇಲ್ಪಟ್ಟೆಯ ವಡ್ಡರಾವುಳ; (SII. XX, 60, 1088). Cf. ಕೀಳ್ವಟ್ಟೆಯ ಸುಂಕ above.

ಯೆತ್ತಿನ ಹೇಱಿನ ಸುಂಕ; Yettina hērina sunka: s.a. ಎತ್ತಿನ ಸುಂಕ; Ettina sunka above; ಪ್ರತಿವಾರಕ್ಕೆ ಬಂದ ಯೆತ್ತಿನ ಹೇಱಿನ ಸುಂಕ; (EC. VII(O), Sh.30, 1413).

ಹಸುಸುಂಕ; Hasu-sunka: ಹಸುಗಳ ಮೇಲೆ ಸಾಗಿಸುವ ಸರಕುಗಳ ಮೇಲಿನ ಸುಂಕ; Toll on goods carried on cows; (EC. VII(O), Sh.30, 1413).

ಹೊಳೆಯ ಸುಂಕ; Hoḷeya sunka: ಹೊಳೆದಾಟುವ ನಾವೆಯ ಮೇಲಿನ ಕರ; Tax on ferry; (SII. XVIII, 296, 1188).

ಹೊಳೆಯ ಹೊರಸುಂಕ; Hoḷeya hora-suṁka: ನಾವೆಯ ಮೂಲಕ ಹೊರಗೆ ಸಾಗಿಸುವ ಸರಕುಗಳ ಮೇಲಿನ ಸುಂಕ; Toll on outgoing goods through boats; (EC. VII(O), Sb.30, 1413).

೭. ಕೈಗಾರಿಕೆಗಳ ಕರ

7. TAXES ON INDUSTRIES

ಅಚ್ಚು ಪನ್ನಾಯ; Achchu-pannāya: ಟಂಕಸಾಲೆಯ ಉತ್ಪನ್ನದ ಮೇಲಿನ ಒಂದು ಕರ; A kind of tax on the income of the mint; (EI. XVI, 8A, 1102).

ಆಮೆದೆಱೆ; Āme-dere: ಆಮೆಯನ್ನು ಹಿಡಿಯುವದರ ಗುತ್ತಿಗೆಯ ಮೇಲಿನ ಕರ; Tax on the monopoly of catching the tortoise; ಗಾಣದೆಱೆ ಆಮೆದೆಱೆ ಮಗ್ಗಮುದ್ರೆ; (EC. VII(O), Sh.71, 1431).

ಆಲೆದೆಱೆ; Āle-dere: ಕಬ್ಬಿನ ಗಾಣದ ಕರ; Tax on cane crushing; (EC. VI(O), Kd.49, 1291).

ಆಹಳದೆಱೆ; Āhaḷadere: ಕಮ್ಮಾರಿಕೆಯ ಮೇಲಿನ ತೆರಿಗೆ; Tax on blacksmiths; (EC. III(R), Gu.134, 1521).

ಉಪಿಲಿಗ ಕಾವಲಿ ಸುಂಕ; Upiliga-kāvali-sunka: ಉಪ್ಪಿನ ಮಾಳವನ್ನು ನಡೆಯಿಸುವವರ ಮೇಲಿನ ಕರ; Tax on producers of salt; ಕುಂಭಾರ ತೆಱಿಗೆ ಗಾಣದ ಸುಂಕ ಉಪಿಲಿಗೆ ಕಾವಲಿ ಸುಂಕ; (EC. III(R), Gu.136, 1513).

ಉಪ್ಪಿನ ಕಾವಲಿದೆಱೆ; Uppina kāvili-dere: ಉಪ್ಪಿನ ಮಾಳದ ಕರ; Tax on salt-pans; ಉಪ್ಪಿನ ಕಾವಲಿದೆಱೆ ಪ್ರತ್ಯೇಕಂ ಪಣ ೫; (SII. IX, I, 145, 1079).

ಉಪ್ಪಿನ ಕಾವಲಿ ಸುಂಕ; Uppina kāvali-sunka: s.a. ಉಪ್ಪಿನ ಕಾವಲಿದೆಱೆ; Uppina kāvali-deṟe; ಭಂಡಾರಕ್ಕೆ ತೆತ್ತು ಬಹ ಸಮಸ್ತ ಕುಳವರಿ ..... ಮಾದಾಱಿಕೆ ಉಪಿನ ಕಾವಲಿ ಜೀಯರ ತೆಱಿಗೆ ಸುಂಕ ಮೊದಲಾದ ಸಮಸ್ತ ತೆಱಿಗೆ ಹೊಱಿಗೆ; (EC. III(R), Gu.26, 1506; Ibid. Gu.150, 1521; Ibid. IV(R), Ch.302, 1536).

ಉಪ್ಪಿನ ಮೊಳೆಯ ರೊಕ್ಕ; Uppina moḷeya-rokka: ಉಪ್ಪಿನ ಮಾಳದ ಮೇಲಿನ ಕರ; Tax on salt pans; (EC. XI(O), Ja.41, 1526)

ಕಬ್ಬಿಲದೆಱೆ; Kabbila-deṟe: ಮೀನುಗಾರರ ಮೇಲಿನ ಕರ; Tax on the fishermen; ಕಬ್ಬಿಲದೆಱೆ ಮಗ್ಗದೆಱೆ; (EC. VI(O), Kd.49, 1291).

ಕಬ್ಬಿಲರ ಹದಿಕೆ; Kabbilara hadike: s.a. ಕಬ್ಬಿಲದೆಱೆ; Kabbila-deṟe; ಆ ಶಿವಪುರದಲ್ಲಿದಂತಹ ಕಬ್ಬಿಲರ ಹದಿಕೆ; (EC. V(O), Cn.268, 12th cent.).

ಕಬ್ಬಿಲವದಿಕೆ; Kabbilavadike: s.a. ಕಬ್ಬಿಲರ ಹದಿಕೆ; Kabbilara hadike; ಆಲೆದೆಱೆ, ಮಗ್ಗದೆಱೆ .... ಕಬ್ಬಿಲವದಿಕೆ; (EC. IV, Ng.38, 1284).

ಕಾವಲಿದೆರೆ; Kāvali-dere: s.a. ಉಪ್ಪಿನ ಕಾವಲಿದೆರೆ; Uppina kāvali-dere; (EC. III(R), Nj.259, 1490).

ಗಾಣದ ತೆಱೆ; Gāṇada teṟe: s.a. ಗಾಣದೆಱೆ; Gāṇa-deṟe below; (SII. XX, 51, 1077); ಒಂದು ಗಾಣದ ತೆಱೆಯಂ ಬಿಟ್ಟರು; (EC. VII(O), Sk.275, 1086; SII. XV, 36, 1148).

ಗಾಣದೆಱೆ; Gāna-deṟe: ಎಣ್ಣೆಯ ಗಾಣದ ಮೇಲಿನ ಕರ; Tax on oilmill; (EC. IV(R), Hs.24, 1162; Ibid. VII(O), H1.46, 1189; Ibid. Hl.7, 1204; Ibid. V(O), Cn.175, 1399).

ಗಾಣವಾಯಿಲೆ; Gāṇavāyile: s.a. ಗಾಣದೆಱೆ; Gāṇadeṟe; (KI. VI, 39, 1181).

ಗಾಣವಾವಿಲಿಗೆ; Gāṇavāvilige: s.a. ಗಾಣವಾಯಿಲೆ; Gāṇavāyile; (APGAS. III, Md.4, 1152).

ಗಾಣಸಿಧಾಯ; Gāṇa-sidhāya: ಎಣ್ಣೆಯ ಗಾಣದ ಮೇಲಿನ ನಿರ್ದಿಷ್ಟ ಕರ; Fixed tax on oil mill; (SII. IV, 255, 1513).

ಗಾಣಸುಂಕ; ಗಾಣದ ಸುಂಕ; Gāṇa-sunka, Gāṇada sunka: s.a. ಗಾಣದೆಱೆ; Gāṇadeṟe; (EC. V(O), Cn.15, 15th cent.).

ಗಾಣಾಯ; Gāṇāya: ಎಣ್ಣೆಯ ಗಾಣದಿಂದ ಬರುವ ಆದಾಯ; Income from oil mills; ಸ್ಥಾನ ಪೆರ್ಗ್ಗಡೆ ಊರ ತಳಭೋಗದಾಯ ಗಾಣಾಯ ಮಾನೆಣ್ಣೆ; (SII. XV, 159, 1213).

ಘಾಣದೆಱೆ; Ghāṇadeṟe: s.a. ಗಾಣದೆಱೆ; Gāṇadeṟe; (SII. IX, I, 125, 1051).

ನೂಲಕಳುಹು; Nūla-kaḷuhu: s.a. ನೂಲ ಹದಿಕೆ; Nūla-hadike; ದಳ ಮಿಳಿ ನೂಲ ಕಳುಹು ನಲ್ಲೆತ್ತು ನಲ್ಲೆಮ್ಮೆ .... ಎಲ್ಲಾ ಹದಿಕೆಯನು; (EC. VII(R), Ng.73, 1284).

ನೂಲ-ಹದಿಕೆ; Nūla-hadike: 1. ನೇಯುವುದಕ್ಕಾಗಿ ಉಪಯೋಗಿಸುವ ನೂಲಿನ ಮೇಲಿನ ಕರ; Tax on yarn used for weaving; 2. ನೇಯ್ಗೆಯ ಮೇಲಿನ ಕರ; Tax on weaving; ನೂಲ ಹದಿಕೆ ಅಡಕೆಯ ಸುಂಕ ಬೆಳ್ಳಾಯ ಸುಂಕ; (EC. VI(O), Tk.20, 1185).

ಬೆಲ್ಲಸುಂಕ; Bella-sunka: ಬೆಲ್ಲವನ್ನು ತಯಾರಿನುವದರ ಮೇಲಿನ ಕರ; Tax on production of Jaggery; (EC. III(R), Gu.150, 1521).

ಮಗ್ಗದ ಹಣ; Maggada haṇa: s.a. ಮಗ್ಗದೆಱೆ; Magga-deṟe below; ಮೂರು ಮಗ್ಗದ ಹಣವ ದೇವರಿಗೆ ಬಿಟೆವಾಗಿ; (EC. IV(R), Pp.55, 16th cent.).

ಮಗ್ಗದೆಱೆ; Magga-deṟe: ನೇಯ್ಗೆಯ ಮಗ್ಗಗಳ ಮೇಲಿನ ಕರ; Tax on looms; (SII. IX, I, 324, 1197-98).

ಮಗ್ಗಮುದ್ರೆ; Magga-mudre: s.a. ಮಗ್ಗದೆಱೆ; Magga-deṟe; ಸುಂಕ ಕಾರುಕ ಗ್ರಾಮಗದ್ಯಾಣ ಪಂಚಕಾರುಕ ಗಾಣದೆಱೆ ಆಮೆದೆಱೆ ಮಗ್ಗಮುದ್ರೆ ಒಳವಾಱು ಹೊರವಾಱು .... ಮುಂತಾದವನುಳ್ಳ ಸುಂಕ; (EC. VII(O), Sh.71, 1431).

ಮಗ್ಗಸುಂಕ; Magga-sunka: s.a. ಮಗ್ಗದೆಱೆ; Magga-deṟe; (EC. III(R), Gu.134, 1521).

ಯೆಱೆಪಿಂಡಿ ಸುಂಕ; Yeṟepiṇḍi-sunka: ಎಣ್ಣೆಯ ಹಿಂಡಿಯ ಮಾರಾಟದ ಕರ; Tax on sale of oil cake; (EC. VII(O), Sh.30, 1413).

ಲವಣ; Lavaṇa: ಉಪ್ಪಿನ ಕರ; Salt tax; ದೇವರ .... ಮಗ್ಗದೆಜೆ ಹೊಗೆದೆಜೆ ಲವಣ ಪಂಚಕಾರುಕ ..... ಮುಖ್ಯವಾದ ಸರ್ವ್ವ ಆಯವನು ..... (EC. IX(O), Cp.66, 1289).

೮. ವೃತ್ತಿ ತೆರಿಗೆಗಳು
8. PROFESSIONAL TAXES

ಅಕ್ಕಸಾಲೆಯ ನೋಟದ ಹಣ; Akkasāleya nōṭada haṇa: ನಾಣ್ಯ ಪರೀಕ್ಷೆಗಾಗಿ ಅಕ್ಕಸಾಲನಿಗೆ ಸಲ್ಲಬೇಕಾದ ಹಣ; Money to be paid to the goldsmith for examination of coins; (EC. XII(O), Ck.5, 1536).

ಅಸಗದೆಜೆ; Asaga-deṟe: ಅಗಸರ ಮೇಲಿನ ಕರ; Tax on washermen; (EC. IV(R), Hs.137, 1162).

ಅಸಗರ ತೆಱಿಗೆ; Asagara teṟige: s.a. ಅಸಗದೆಜೆ; Asaga-deṟe; (EC. III(R), Gu.134, 1521).

ಅಸಗಸುಂಕ; Asaga-sunka: s.a. ಅಸಗದೆಜೆ; Asaga-deṟe; (EC. III(R), Nj.381, 16th cent.).

ಕನ್ನಡಿವಣ; Kannaḍivaṇa: ದೇವಾಲಯಗಳಲ್ಲಿಯ ನೃತ್ಯಗಾರ್ತಿಯರ ಮೇಲಿನ ಕರ; Tax on dancing girls in the temples; ಕಂಭದ ನಾಲ್ವರ ಸೂಳೆಯರ ಮನೆವಣಮುಂ ಕನ್ನಡಿವಣಮುಮಂ; (SII. IX, i, 113, 1054).

ಕಮ್ಮಾರದೆಱಿಗೆ; Kammāra-deṟige: ಕಮ್ಮಾರರ ಮೇಲಿನ ಕರ; Taxes on blacksmiths; (EC. III(R), Gu.26, 1506).

ಕಲುದೆಱಿಗೆ; Kalu-deṟige: ಕಲ್ಲು ಎಬ್ಬಿಸುವವರ ಮೇಲಿನ ಕರ; Tax on stone cutters; (SII. XVIII, 149, 1144).

ಕಂಠವಣ; Kanṭha-vaṇa: ಕಂಟದ (ಬರೆಯುವ ಸಾಧನ) ಮೇಲೆ ವಿಧಿಸುವ ತೆರಿಗೆ, ಲಿಪಿಕಾರನ ಮೇಲೆ ವಿಧಿಸುವ ತೆರಿಗೆ; A kind of tax levied on the stylus; A tax levied on the scribe or writer; ಭೂಮಿಗಳು ಮನೆಗಳು ಆಯ ಹಾರಕ ಕಂಠವಣ ವಳೆ ಬುಟ್ಟಿ ಮೊರ ಸಹಿತಾ ಕೊಟ್ಟು; (My.Arch.Rep., 1928, 64, 1533).

ಕಾರುಕದೆಜೆ; Kāruka-deṟe: ಕಸುಬುಗಾರರು ಕೊಡಬೇಕಾದ ತೆರಿಗೆ; Tax on artisans, Profession tax; (KI. IV, 13, 1165; EC. VII(O), H1.46, 1189). Cf. ಕಾರುದೆಜೆ.

ಕಾಱುದೆರೆ; Kāṟudere: ಕಸುಬುಗಳ ಮೇಲೆ ಹಾಕುವ ಕರ; Tax levied on industries; (EC. IX(O), Cp.161, 913).

ಕುಲುಮೆದೆಜೆ; Kulume-deṟe: ಕಮ್ಮಾರರ ಕುಲುಮೆಯ ಮೇಲಿನ ಕರ; Tax on the furnance of the blacksmiths; (EC. VII(O), Hl.71, 1396).

ಕುಂಬಾರತೆಱಿಗೆ; Kumbāra-teṟige: s.a. ಕುಂಬಾರದೆಜೆ; Kumbāra-deṟe; (EC. III(R), Gu.134, 1521).

ಕುಂಬಾಱದೆಜೆ; Kumbāṟadeṟe: ಕುಂಬಾರರು ಕೊಡಬೇಕಾದ ಕರ; Tax to be paid by the potters; (EC. IV(R), Hs.24, 1162).

ಕುಂಭಾರರುಕಾಣಿ; Kumbhārarukāṇi: s.a. ಕುಂಬಾರದೆಜೆ; Kumbāradeṟe; (EC. III(R), Gu.150, 1521).

ಕೊಡತಿವಣ; Koḍati-vaṇa: ಬಡಿಗ ವೃತ್ತಿಯ ಮೇಲಿನ ಕರ; Tax on carpentery; (EC. VIII(R), Hn.160, 1215; Ibid. IX(O), Bn.6, 1253) (ಕೊಡತಿ = a wooden hammer used by a carpenter).

ಗಣಾಕಾರತೆಱಿಗೆ; Gaṇākāra-teṟige: ಒಂದು ಉದ್ಯೋಗದ ಮೇಲಿನ ಕರ; Tax on a profession; (EC. III(R), Gu.134, 1521). Traslated as 'tax on boatmen'; (Ibid. p.610).

ಚಕ್ರಕಾಣಿಕೆ; Chakra-kāṇike: ಬಹಶಃ ಕುಂಬಾರರ ತಿಗರಿಯ ಮೇಲಿನ ಕರ; Probably tax on the potter's wheel; s.a. ಕುಂಬಾರದೆಜೆ; Kumbāra-deṟe; (SII. XX, 239, 1547). ತ. ಚಕ್ರಕಾಣಿಕ್ಕೈ; ತಿರಿಗೈಆಯಂ. Ta. Chakrakanikai; Tirigai-āyam.

ಜಟ್ಟಿದೆರೆ; Jāṭṭi-dere: ಜಟ್ಟಿಗಳು ಕೊಡಬೇಕಾದ ಕರ; ಗರಡಿ ಸುಂಕ; Tax on wrestlers; Tax on gymnasium; (EC. VI(O), Kd.49, 1291).

ಜಾತಿತೆರಿಗೆ; Jāti-terige: ಉದ್ಯೋಗದ ಆಧಾರದ ಮೇಲೆ ಭಿನ್ನ ಜಾತಿಯವರು ಕೊಡುವ ಕರ; Tax on different communities depending on their professions;

ನಾನಾ ಜಾತಿ ತೆಱುವ ಜಾತಿ ತೆಱಿಗೆ; (EC. III(R), Gu.26, 1506; Ibid. Gu.202, 1656).

ತಳಱ ಸುಂಕ; Taḷar̤a-sunka: ತಳವಾರ ಸುಂಕ, ತಳವಾರರ ಉಂಬಳಿಯ ಹೊಲಗಳ ಮೇಲಿನ ಕರ; Tax on grant land of the Taḷavāras; (EC. VII(O), Sk.137, 1114).

ತಳಾಱಗಾಣಿಕೆ; Taḷār̤a-gāṇike: s.a. ತಳಱ ಸುಂಕ; Taḷar̤a-sunka; ಹೆಗ್ಗಡೆಯ ಕಾಣಿಕೆಯಂ ತಳಾಱಗಾಣಿಕೆಯಂ ಬಣ್ಣಗೆಯಂ; (SII. XVIII, 198, 1196).

ತೊತ್ತುದೆಱೆ; Tottuder̤e: ದೇವಾಲಯಗಳಲ್ಲಿಯ ನೃತ್ಯಗಾತಿಯರ ಮೇಲಿನ ಕರ; Tax on dancing girls in the temple; (EC. IV(R), Hs.24, 1162).

ದಬ್ಬಣಿಗದೆಱೆ; Dabbaṇiga-der̤e: ಚೀಲ ಹೊಲಿಯುವವರ ಮೇಲಿನ ಕರ; Tax on professionals using pack needles; ಮೇದರಲ್ಲಿ ದಬ್ಬಣಿಗದೆಱೆಯ ನೋಡಿ ಕೊಂಬರು; (SII. IX, I, 170, 1106).

ದಾಸುಗಳ ತೆಱಿಗೆ; Dāsugaḷa ter̤ige: ಮೀನುಗಾರರ ಮೇಲಿನ ಕರ; Tax on fishermen; (EC. III, Gu.134, 1521). Sk. ದಾಸ = ಮೀನುಗಾರ.

ದೊಂಬದೆರಿಗೆ; Doṁba-derige: ದೊಂಬ(ಡೊಂಬ)ರ ಮೇಲಿನ ಕರ; Tax on Doṁbas (Rope-dancers), a class of people who exhibit feats on rope; (SII. XV, 261, 1553).

ನಾಯಿಂದರ ತೆಱಿಗೆ; Nāyindara-ter̤ige: ಕ್ಷೌರಿಕರ ಮೇಲಿನ ಕರ; Tax on barbers; (EC. III(R), 134, 1521).

ನಾವಿಂದತೆಱಿಗೆ, ನಾವಿಂದರ ತೆಱಿಗೆ; Nāviṁda-ter̤ige, Nāvindara-ter̤ige: s.a. ನಾಯಿಂದರ ತೆಱಿಗೆ; Nāyindara ter̤ige; (SII. XV, 257, 1547).

ನಾವಿಲರ ತೆಱಿಗೆ, ನಾಯಿಂದನ ವರಿ; Nāvilara-ter̤ige, Nāyindana-vari: s.a. ನಾವಿಂದ ತೆಱಿಗೆ; Nāviṁda-ter̤ige; (EC. III(R), Gu.150, 1521; Ibid. XI(O), Hk.110, 1546; SII. XVIII, 285, 1547).

ನೋಟವಣ; Nōṭavaṇa: ನಾಣ್ಯ ಪರೀಕ್ಷಕನು ಕೊಡಬೇಕಾದ ಕರ; Tax on examiner of coins; (EC. VI(O), Kd.49, 1291; Ibid. 158, 1542).

ಪಾಸೆವಾಱು; Pāsevār̤u: ಹಗ್ಗ ಹೊಸೆಯುವವರು ಕೊಡಬೇಕಾದ ಕರ; Tax on rope makers; ವೊಳವಾಱು ಹೊಱವಾಱು ಸುಂಕ ಬಡಗಣ ಹಿರಿಯಕೆಱೆಯ ಪಾಸೆವಾಱುಮೇನುಂಟಾದ ಸರ್ವಸ್ವಾಮ್ಯ; (EC. IV(R), Ch.274, 1485).

ಬಡಗೆ ಸಿದ್ಧಾಯ; Baḍage-siddhāya: ಬಡಿಗ ವೃತ್ತಿಯ ಮೇಲಿನ ನಿಶ್ಚಿತಪಡಿಸಿದ ಕರ; Fixed tax on carpenters; ವರಿಷಕ್ಕೆ ಗ ೧ ಱ ಬಡಗೆ ಸಿದ್ಧಾಯ ಗ ೧ ತೆಱುವರು; (EC. III(R), Nj.329, 1292).

ಬಣಜಮಗ ಸುಂಕ; Baṇajamaga-sunka: ಬಣಜಿಗ ವರ್ಗದವರ ಮೇಲಿನ ಕರ; Tax on the community of Baṇajiga or merchant community (EC. III(R), Nj.338, 1530).

ಬಣ್ಣಿಗೆದೆಱೆ; Baṇṇige-der̤e: ಬಣ್ಣಿಗೆ ಸುಂಕ; Baṇṇige-sunka; 1. ಬಣ್ಣದ ಮೇಲಿನ ಕರ; ಗುಡಿ ಕೈಗಾರಿಕೆಯ ಮೇಲಿನ ಕರ, ಚಿತ್ರಗಾರ ಇತ್ಯಾದಿ ಉದ್ಯೋಗಗಳ ಮೇಲಿನ ಕರ; Tax on the profession of artists like makers of toys, dolls, using dyes; (SII. XV, 18, 13th cent.; Ibid. XX, 180, 1192). Cf. Sk. ವರ್ಣಕ; Varṇaka; 2. ಸಾಮಾನ್ಯವಾಗಿ ವೃತ್ತಿ ತೆರಿಗೆ; Tax on profession in general; ಬಡಗಿ ೧ ಕಮ್ಮಾಱ ೧ ಸಂಮಗಾಱ ೧ ಅಸಗ ೧ ದೇಡಮಗ್ಗ ..... ಇನ್ತಿನಿತಱ ಬಣ್ಣಿಗೆಸುಂಕಮಂ; (SII. XX, 178, 1192).

ಬಱಗಾರ ಸುಂಕ; Baḷagāra-sunka: ಬಳೆಗಾರರ ಮೇಲಿನ ಸುಂಕ; Tax on bangle sellers; (KI. V, 9, 1072).

ಬೋಗಾರದೆಱೆ; Bōgāra-der̤e: ಕಂಚು, ತಾಮ್ರ ಮೊದಲಾದ ಲೋಹಗಳ ಕೆಲಸ ಮಾಡುವವರ ಮೇಲಿನ ತೆರಿಗೆ; Tax on metal workers, artisans (EC. III(R), Gu.134, 1521).

ಮಾದಾಱಿಕೆ; ಮಾದಾಱತೆರೆ; Mādār̤ike, Mādār̤a-tere: s.a. ಮಾದೆಗ ಸುಂಕ; Mādega-sunka below; (EC. III(R), Gu.134, 1521; Ibid. Hg.91, 1423).

ಮಾದೆಗ ಸುಂಕ; Mādega-sunka: ಚರ್ಮದ ಕೆಲಸ ಮಾಡುವವರ ಮೇಲಿನ ಕರ; Tax on leather workers; (EC. III(R), Nj.381, 16th cent.).

ಮೇದದೆಱೆ; Mēda-der̤e: ಬಿದಿರಿನ ಕೆಲಸದವರ ಮೇಲಿನ ಕರ; Tax on basket makers; (EC. IV(R), Hs.24, 1162).

ಮೊತ್ತಕಾಱದೆಱೆ; Mottakāṟa-deṟe: ಗುತ್ತಿಗೆಗಾರರ ಮೇಲಿನ ಕರ; Tax on contractors; (KI. VI, 39, 1181).

ವೊಡ್ಡದೆಱೆ; Voḍḍa-deṟe: ಒಡ್ಡರು ಕೊಡುವ ತೆರಿಗೆ; Tax on stone cutters; ವೊಳವಾಱು ಹೊರವಾಱು ಗಾಣದೆಱೆ ಕುಂಬಾರದೆಱೆ ಅಸಗದೆಱೆ ಭಂಡಿದೆಱೆ ವೊಡ್ಡದೆಱೆ ಮೇದದೆಱೆ ಸಾದದೆಱೆ; (EC. IV(R), Hs.24, 1162).

ವೋಜನ ವರಿ; Vōjana vari: ಕಲ್ಕುಟಿಗನ ಉದ್ಯೋಗದ ಮೇಲಿನ ಕರ; Tax on the profession of sculptors; (EC. III(R), Gu.150, 1521)

ವೋಜುಗಳ ತೆಱಿಗೆ; Vōjugaḷa teṟige: s.a. ವೋಜನ ವರಿ; Vōjana vari; (EC. III(R), Gu.134, 1521).

ಸಮಯದೆಱಿಗೆ; Samaya-deṟige: ಉದ್ಯೋಗ ಸಂಘಗಳ ಮೇಲಿನ ಕರ; Tax on guilds; ನಾನಾ ಸಮಯದೆಱಿಗೆ ಎಲವನು; (EC. III(R), Gu.26, 1506).

ಸಾದ, ಸಾದದೆಱೆ; Sāda, Sāda-deṟe: ಉದ್ಯೋಗದ ಮೇಲಿನ ಕರ; A tax on profession; (EC. IV(R). Hs.124, 1162).

ಸಾಲಿಗದೆರೆ; Sāliga-dere: ನೇಕಾರರ ಮೇಲಿನ ಕರ; Tax on weavers; (SII. XV, 129, 1176).

ಸೂಳೆದೆಱೆ; Sūḷe-deṟe: ದೇವಾಲಯಗಳ ನೃತ್ಯಗಾತಿಯ ಮೇಲಿನ ಕರ; Tax on dancing girls in temples; (SII. IX, I, 125, 1061).

ಸೆಟ್ಟಿದೆಱೆ; Seṭṭe-deṟe: ವ್ಯಾಪಾರಿಗಳ ಮೇಲಿನ ಕರ; Tax on merchants; ತಮ್ಮ ಯಾಗರಗೇರಿಯ ಸೆಟ್ಟಿದೆಱೆಯಿಂ ವರ್ಷಂ ಪ್ರತಿ ಬಹ ಗದ್ಯಾಣವೆರಡು; (SII. XV, 129, 1176).

ಹಿಟ್ಟುದೆಱೆ; Hiṭṭu-deṟe: ಉದ್ಯೋಗದ ಮೇಲಿನ ಕರ; Tax on profession; (SII. XX, 151, 1168).

ಹೊಗೆದೆರೆ; Hoge-dere: ಬಹುಶಃ ಕಮ್ಮಾರನ ಕುಲುಮೆಯ ಮೇಲಿನ ಕರ; ಕಮ್ಮಾರಿಕೆಯ ಕರ; Seems to be a tax on the furnace of the blacksmith i.e. tax on the profession of the blacksmith; (EC. IX(O), Cp.65-66, 1289).

೯. ಆಸ್ತಿಯ ಕರಗಳು

9. PROPERTY TAXES

ಆಕಳದೆಱೆ; Ākaḷa-deṟe: ಆಕಳುಗಳ ಮೇಲಿನ ಕರ; Tax on cows; (Summaries 4/54-55, 14th cent.).

ಆಡುದೆಱೆ; Āḍu-deṟe: ಬಹುಶಃ ಆಡುಗಳ ಮೇಲಿನ ಕರ; Probably tax on goat; (EC. VI(R), PP. 220, 14th cent.).

ಆಡುಮನೆವಣ; Āḍumane-vaṇa: ಆಡುಗಳನ್ನು ಕಟ್ಟುವ ಮನೆಯ ಮೇಲಿನ ಕರ; Tax levied on the sheds for goats; (EC. IV(R), Ch.287, c.15th cent.).

ಎಮ್ಮೆದೆಱೆ; Emme-deṟe: ಎಮ್ಮೆಗಳ ಮೇಲಿನ ಕರ; Tax on buffallow; (Summaries 4/54-55, 14th cent.).

ಕುರಿ ತೆರಿಗೆ; Kuri-terige: ಕುರಿಗಳ ಮೇಲಿನ ತೆರಿಗೆ; Tax on sheep; (EC. III(R), Gu.150, 1521).

ಕುಱಿದೆಱೆ; Kuṟi-deṟe: s.a. ಕುರಿ ತೆರಿಗೆ; Kuri-terige; (SII. XX, 91, 12th cent.; Ibid. XV, 581, 12th cent.).

ಚರಾದಾಯ, ಚಳಾಯ; ಚಳಾದಾಯ; Charādāya, Chaḷāya; Chaḷādāya: ಜಂಗಮ ಆಸ್ತಿಯ ಮೇಲಿನ ಕರ; Tax on moveable property; (EC. III(R), Nj.273, 1488); ಚಳಾಯ ದಾಯದೆಱೆ; (EC. IX(R), B1.17, 1174); ಉಳಿದಶೇಷವುಮಂ ಚಳಾಯವುಮಂ ಬಿಟ್ಟ; (EC. VI(O), Tk.20, 1185).

ದಾಯದೆಱೆ; Dāya-deṟe: ದತ್ತಿಗಳ ಮೇಲಿನ ಕರ; Tax on gifts and presents; (EC. IX(R), B1.17, 1174).

ನೆಲದೆಱೆ; Nela-deṟe: (ಮನೆಗಳ) ನಿವೇಶನದ ಮೇಲಿನ ಕರ; Tax on (house) site; (SII. XX, 112, 1144). Cf. ಭೂಭಾಡೆ, Bhūbhāḍe.

ಬಾಗಿಲ ಹಣ; Bāgila-haṇa: ಮನೆಪಟ್ಟಿ, ಮನೆಗಳ ಮೇಲಿನ ಕರ; House tax; ಶ್ರೀ ಕಾರ್ಯಕ್ಕೆ ಬಿಟ್ಟ ಮಂಣು ಗುಳಿ ಅಸಂದೆ ಸೊಡರಿಂಗೆ ಬಾಗಿಲ ಹಣ (EC. III(R), Nj.327, 1164 A.D.).

ಬೀಳ್ಸಿದ್ಧಾಯ; Bīḷsiddhāya: ಉಪಯೋಗಿಸದಿದ್ದ ಮನೆಯ ಮೇಲಿನ ಕರ; Tax on house not put to use; ಮನೆ

ಸಾಮ್ಯದವರ್ತ್ತಾವು ಮಾಡದೆಯಂ ಪೆಱರ ಮಾಡಲೀಯ್ಯದೆಯುಮಿರ್ದ್ದರಪ್ಪಡಂಗಡಿಯಕ್ಕೆ ಮನೆಯಕ್ಕೆ ಬೀಳ್ವಿಧಾಯಮಂ ತಿಱುವರು; (SII. XX, 102, 1132).

ಮನೆದೆಱೆ; ಮನೆದೆಱಿಗೆ; Mane-deṟe, Mane-deṟige: ಮನೆಪಟ್ಟಿ; Taxes on houses; ಶ್ರೀ ಪ್ರಸಂನ್ನ ಮಾಧವದೇವರಿಂ ತೆಂಕಲು ಇಕ್ಕಿದ ಹನ್ನೆರಡಕ್ಕಂ ಮನೆದೆಱೆ ಮ್ಣಾನ್ಯ; (EC. VII(R), Ng.74, 1271).

ಮನೆವಣ; Mane-vaṇa: s.a. ಮನೆದೆಱೆ; Mane-deṟe; ಪಿರಿಯ ಕೆರೆಗೆ ಮನೆವಣಮುಮನಲ್ಲಿಯ ಕಲಿದೇವರಿಗೆ; (EI. XVI, 10, 1052); ಕಂಭದ ನಾಲ್ವರ್ ಸೂಳೆಯರ ಮನೆವಣಮುಂ; (SII. IX, I, 113, 1054).

ಮನೆಸುಂಕ; Mane-sunka: s.a. ಮನೆದೆಱೆ; Mane-deṟe; (EC. III(R), Nj.181, 1467).

ಮನೆಹಣ; Mane-haṇa: s.a. ಮನೆವಣ, Mane-vaṇa (KI. I, 53, 1433).

ಸ್ತಳಸುಂಕ, ಸ್ಥಳಸುಂಕ; Staḷa-sunka, Sthaḷa-sunka: ಸ್ಥಾನಿಕ ಕರ; Local tax; (SII. IX. II, 616, 1545).

ಹೊಸತಿಲುವಣ; Hosatiluvaṇa: ಮನೆಪಟ್ಟಿ, ಬಾಗಿಲು ಹಣ; Door tax, Tax on houses; (SII. XV, 108, 1167).

೧೦. ಶಿಕ್ಷಣ ಶುಲ್ಕಗಳು*

10. EDUCATION CESS*

ನ್ಯಾಸದೆರೆ; Nyāsa-dere: ನ್ಯಾಸವನ್ನು ಕಲಿಸುವುದಕ್ಕಾಗಿ ಸಂಗ್ರಹಿಸುವ ಹಣ; Money collected for arranging the teaching of Nyāsa; (SII. XX, 300, 12th cent.). (ನ್ಯಾಸ=ವ್ಯಾಖ್ಯಾನ).

ಪ್ರಭಾಕರದೆರೆ; Prabhākara-dere: ಪ್ರಾಭಾಕರ ಮೀಮಾಂಸಾ ಶಾಸ್ತ್ರವನ್ನು ಕಲಿಸುವದಕ್ಕಾಗಿ ಸಂಗ್ರಹಿಸುವ ಹಣ; Cess collected for arranging for teaching Prābhākara Mīnāmsā; (SII. XX, 300 12th cent.).

ಪುರಾಣದೆರೆ; Purāṇa-dere: ದೇವಾಲಯಗಳಲ್ಲಿ ಪುರಾಣ ಹೇಳುವ ವ್ಯವಸ್ಥೆಗಾಗಿ ಸಂಗ್ರಹಿಸುವ ಕರ; Cess collected for arranging for recitation of Purāṇas in the temples; (SII. XX, 300, 12th cent.).

ರು(ಋ)ಗ್ವೇದದೆರೆ; Ru(Ṛi)gvēda-dere: ಋಗ್ವೇದವನ್ನು ಕಲಿಸುವ ವ್ಯವಸ್ಥೆಗಾಗಿ ಸಂಗ್ರಹಿಸುವ ಹಣ; Cess collected for arranging the teaching of Ṛigvēda; (SII. XX, 300, 12th cent.).

ವೇದಾನ್ತದೆರೆ; Vēdānta-dere: ವೇದಾಂತವನ್ನು ಕಲಿಸುವದಕ್ಕಾಗಿ ಸಂಗ್ರಹಿಸುವ ಹಣ; Cess collected for arranging the teaching of Vēdānta; (SII. XX, 300, 12th cent.).

೧೧. ಧಾರ್ಮಿಕ ಶುಲ್ಕಗಳು**

11. RELIGIOUS CESS**

ಅಡಿಗರ್ಚು ಕಾಣಿಕೆ; Aḍigarchu-kāṇike: ಪಾದಪೂಜೆಯ ಕಾಣಿಕೆ; ಧರ್ಮ ಗುರುಗಳ ಪಾದ ಪೂಜೆಗೆ ಸಲ್ಲುವ ಹಣ; Contribution for worshipping the feet of ascetics; (SII. XVIII, 66, 1052).

ಗಣವಾರಿಕೆ; Gaṇavārike: s.a. ಗಣಾಚಾರದೆರೆ; Gaṇāchāra-dere below; ವೊಳವಾಱು ಹೊರವಾಱು ಕಂಮಾಱದೆಱೆ ಕಂಬಾರದೆಱೆ ಗಣವಾರಿಕೆ ಕಾವಲಿ ಬೋಗಾಱಿಕೆ ಮಾದಱಿಕೆ; (EC. III(R), Gu.39, 1507).

---

* ಇವು ಸಾಮಾನ್ಯ ಅರ್ಥದಲ್ಲಿ ಕರಗಳಾಗಿರಲಿಲ್ಲ; ವಿವಿಧ ವಿಷಯಗಳ ಶಿಕ್ಷಣಕ್ಕಾಗಿ ಅವಶ್ಯಕವಾದ ಹಣ ದೊರೆಯುವಂತೆ ಮಾಡಲು ಕೊಟ್ಟ ಸ್ವಯಂ ಪ್ರೇರಿತ ದಾನಗಳು; ಸ್ಥೂಲವಾಗಿ ಕರದ ಸ್ವರೂಪವನ್ನು ಪಡೆದಿರಬೇಕು.

* These were not the taxes in the usual sense of the term. They were voluntary contributions made for providing money for imparting education in different subjects. They seem to have assumed the nature of tax in general.

** ಇವೆಲ್ಲವೂ ಸ್ವಯಂಪ್ರೇರಣೆಯಿಂದ ಕೊಡುತ್ತಿದ್ದ ಕಾಣಿಕೆಗಳಾಗಿದ್ದು ಕಾಲಾಂತರದಲ್ಲಿ ಕಡ್ಡಾಯವಾಗಿ ವಸೂಲು ಮಾಡುವ ಕರಗಳ ಸ್ವರೂಪವನ್ನು ಪಡೆದಿರಬೇಕೆಂದು ತೋರುತ್ತದೆ.

** These appear to be originally voluntary contributions, but later assumed the nature of cess collected compulsorily.

ಗಣಾಚಾರದೆಱೆ; Gaṇāchāra-deṟe: ಒಂದು ವಿಧವಾದ ಧಾರ್ಮಿಕ ವಿಧಿಯ ಮೇಲಿನ ತೆರಿಗೆ; Tax on a type of religious rite; (EC. III(R), Gu.26, 1506).

ಗಣಾಚಾರ ಹೊನ್ನು; Gaṇāchāra-honnu: s.a. ಗಣಾಚಾರದೆಱೆ; Gaṇāchāra-deṟe; (EC. XI, J1.48, 1574).

ಜೀಯರ ತೆಱಿಗೆ; Jīyara teṟige: ಧರ್ಮಗುರುಗಳಿಗೆ ಕೊಡುವ ಕಾಣಿಕೆ; Contributions to be paid to the head of a religious institution; (EC. III(R), Gu.26, 1506).

ತಪೋಧನರ ಹದಿಕೆ; Tapōdhanara hadike: ತಪಸ್ವಿಗಳ ನಿರ್ವಹಣೆಗಾಗಿ ಕೊಡಬೇಕಾದ ಕರ; Tax collected for maintenance of ascetics; (EC. VII(O), Ci.64, 1214).

ತಿರುನಾಳ ಕಾಣಿಕೆ; Tirunāḷa-kāṇike: ಹಬ್ಬದ ಪ್ರಸಂಗಗಳಲ್ಲಿ ಎತ್ತುವ ಕಾಣಿಕೆ; Festival cess; (EC. X(O), Mb.172, 1496).

ದೇವಾಸ; Dēvāsa: ಧಾರ್ಮಿಕ ತೆರಿಗೆ; Religious Tax; ಆ ಕೆಲನಾಡ ಮೊದಲ ಸಿದ್ಧಾಯ ನೂಱಱಿಇವತ್ತಕ್ಕೆ ವುಂಬಳಿ ದೇವಾಸ ಖಂಡಿಕೆ; (EC. VI(O), Sg.1, 1346).

ಧೂಪದ ಕಾಣಿಕೆ; Dhūpada kāṇike: ದೇವಾಲಯಗಳಲ್ಲಿ ಧೂಪದ ಸೇವೆಗಾಗಿ ಎತ್ತುವ ಹಣ; Contributions collected for the purpose of offering service of insence to the god in the temples; ಚಿಬಿಲಂಗಡಿಯವರು ಕೊಡುವ ಧೂಪದ ಕಾಣಿಕೆ; (SII. IV, 255, 1513).

ಮಠದೆಱೆ; Maṭha-deṟe: ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗಾಗಿ ಕೊಡುವ ಕರ; Tax levied for maintaining the religious institutions; ಸೋವಯ್ಯ ದೇವರ ಪುರದ ಮಠದೆಱೆ ಗದ್ಯಾಣಂ ನಾಲ್ವತ್ತು ಹೊಂನು; (EC. VI(O), Tk.4, 13th cent.).

ರಥವಣ; Ratha-vaṇa: ರಥೋತ್ಸವದ ಕಾಲಕ್ಕೆ ಪ್ರವಾಸಿಗರು ಕೊಡಬೇಕಾದ ಕರ; Tax on pilgrims collected on the occasion of car festivals. Poll tax on festive occasions; (SII. IX, I, 335, 1218).

ಲಿಂಗದೆಱೆ; Linga-deṟe: ಲಿಂಗಪೂಜೆಗಾಗಿ ಎತ್ತುವ ಕರ; Cess levied for offering worship of Linga; ನಾಡಸಮಯದ ಹದಿಕೆ. ಲಿಂಗದೆಱೆ ತಪೋಧನರ ಹದಿಕೆ; (EC. VII(O), Ci.64, 1214).

ವಿಭೂತಿಗಾಣಿಕೆ; Vibhūti-gāṇike: ದೇವರ ಪ್ರಸಾದವನ್ನು ಸ್ವೀಕರಿಸಲು ಕೊಡುವ ಕಾಣಿಕೆ; Contributions offered at the time of receiving of Prasāda; (EC. X(O), Bangarpet 20, 1465; Ibid. Mb.253, 1470). ತ. ವಿಭೂತಿಕಾಣಿಕ್ಕೈ; Ta. Vibhūtikāṇikai; See IEG. p.370.

ಸತ್ರಗಾಣಿಕೆ; Satra-gāṇike: ಸತ್ರವನ್ನು ನಡೆಸುವದಕ್ಕೆ ಕೊಡಬೇಕಾದ ಕಾಣಿಕೆ; Contributions to be paid for maintenance of the charity houses; (SII. XX, 85, 1124).

ಹಬ್ಬಗಾಣಿಕೆ; Habba-gāṇike: ಹಬ್ಬ ಹುಣ್ಣಿಮೆಗಳಲ್ಲಿ ದೇವಸ್ಥಾನಗಳಿಗೆ ಕೊಡುವ ಕಾಣಿಕೆ; Contributions made to the temples on festive occasions; (EC. VIII(O), Na.69, 1464).

೧೨. ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳ ಮೇಲಿನ ಕರಗಳು

12. TAXES ON SOCIAL AND CULTURAL ACTIVITIES

ಅಂಗಸಾಲೆವರಿ; Angasāle-vari: ಅಂಕಸಾಲೆ, ನಾಟ್ಯಗೃಹದ ಮೇಲಿನ ಕರ; Entertainment tax, tax on dancing hall; (EI. XVIII, 17, 1434). ತ. ಅಂಗಸಾಲೈ, ಅಂಕಸಾಲೈ; Ta. Angasālai, Ankasālai.

ಕಪ್ಪ; Kappa: (1) ರಾಜನಿಗೆ ಮಾಂಡಲಿಕರು, ಅಧಿಕಾರಿಗಳು ಕೊಡುವ ಕಾಣಿಕೆ; Presents to be paid by the feudatories and officers to the emperor; ಕಂಚಿಯಾನಾಳ್ವಾ ದನ್ತಿಗನ ಮೇಗೆಟ್ಟು ಕಪ್ಪಂಗೊಳಲ್ಬನ್ದಲ್ಲಿ; (EI. XXXIII, 60, 804); (2) ವೃತ್ತಿಕಾರರು ಅರಸನಿಗೆ ಕೊಡಬೇಕಾದ ಕರ; Tax to be paid to government by certain professionals; ನಾಯಿಂದರಿಗೆ ತೆಱಿಗೆ ಹೊಱಿಗೆ ಕಾಣಿಕೆ ಕಪ್ಪ ಬಿಟ್ಟಿ ಬಿರಾಡ ಆವದೂ ಯಿಲ್ಲ; (SII. IX, II, 625, 1547).

ಕುಮಾರಗಾಣಿಕೆ; Kumāra-gāṇike: ಅರಸನಿಗೆ ಪುತ್ರೋತ್ಸವವಾದಾಗ ಕೊಡಬೇಕಾದ ಕಾಣಿಕೆ; Contributions or presentations to be made to the king on the occasion of the birth of a son; (EC. VIII(R), Hn.141, 1200).

ಗೋಷ್ಠಿಪಣ; Gōshṭhipaṇa: ಸಮಿತಿಗೆ ಸಲ್ಲುವ ಕರ; Tax to be paid to an Assembly; (SII. XV, 215, 1199-1200).

ಗೌಡುವಣ; Gauḍu-vaṇa: ಮದುವೆಯ ಕಾಲದಲ್ಲಿ ಊರ ಗೌಡರಿಗೆ ಸಲ್ಲಬೇಕಾದ ಹಣ; Contributions of money to be made to the headman of a village at the time of marriage; ಈ ಮದುವೆಯ ಸುಂಕವನು ಅಷ್ಟಾದಶ ಪ್ರಜೆಯೊಳಗಾಗಿದ್ದ ಸಮಸ್ತರಿಗೂ ಬಿಟ್ಟೆಉ ಆ ಮದುವೆಯ ಸಂಮಂಧವಾಗಿ ಸಲುವ ಗೌಡುವಣ ತಳವಾಱಿಕೆಯ ಹಣ ಅಕ್ಕಸಾಲೆಯ ನೋಟದ ಹಣ.... ಮುಂತಾದ ಸರ್ವ ಸುಂಕ ಸ್ವಾಂಮ್ಯವನು; (EC. XII(O), Ck.5, 1535).

ತಳವಾಱಿಕೆಯ ಹಣ; Taḷavāṟikeya haṇa: ಮದುವೆಯ ಕಾಲದಲ್ಲಿ ತಳವಾರನಿಗೆ ಸಲ್ಲಬೇಕಾದ ಹಣ; Contribution of money to be made at the time of marriage to the Taḷavāra; (EC. XII(O), Ck.5, 1535).

ಪಟ್ಟಬದ್ಧ, ಪಟ್ಟಬಂಧ; Paṭṭabaddha, Paṭṭabandha: ಪಟ್ಟಾಭಿಷೇಕದ ಕಾಲದಲ್ಲಿ ಪ್ರಜೆಗಳು ರಾಜರಿಗೆ ಕೊಡಬೇಕಾದ ಕಾಣಿಕೆ; Contributions made by the people on the occasion of coronation of the king; ಪಟ್ಟಬದ್ಧ ಪುತ್ರೋತ್ಸಾಹ ದವಳಾರದ ಭಂಡಿ ತುಪ್ಪದಳ ಮಿಳ .... ಇಂನ್ತೀವೊಳಗಾದ ಎಲ್ಲಾ ಹದಿಕೆಯನೂ ಎಲ್ಲಾ ಬಾಧೆಯನೂ ... ಪರಿಹರ್ಸಿ ಕೊಟ್ಟು; (EC. VII(R), Ng.73, 1284; Ibid. Ng.74, 1271; Ibid. Ng.76, 1284).

ಪುತ್ರೋತ್ಸಾಹ, ಪುತ್ರೋತ್ಸವ; Putrōtsāha, Putrōtsava: ಅರಸನಿಗೆ ಮಗನು ಹುಟ್ಟಿದ ಕಾಲದಲ್ಲಿ ಪ್ರಜೆಗಳು ಕೊಡುತ್ತಿದ್ದ ಕಾಣಿಕೆ; Presents made to the king on the occasion of the birth of a son; ಪಟ್ಟಬದ್ಧ ಪುತ್ರೋತ್ಸಾಹ ದವಳಾರದ ಭಂಡಿ..... ಇಂತೀ ಮೊದಲಾದ ಎಲ್ಲಾ ಹದಿಕೆಯನು; (EC. VII(R), Ng.73, 1284; Ibid. 74, 1271)., Cf. ಕುಮಾರಗಾಣಿಕೆ; Kumārakāṇike above.

ಪೆಂಡ್ಲಿಸುಂಕ; Peṇḍli-sunka: s.a. ಮದುವೆತೆರೆ; Maduvetere, below; (EC. XII(O), Mi, 64, 1510). ತೆ. ವೆಂಡ್ಲಿತೆರೆ (ತೆ. ಪೆಂಡ್ಲಿ = ಹೆಂಡತಿ).

ಬಾಗಿಲು ಜೋಳ; Bāgilu Jōḷa: ಬಾಗಿಲು ಬಾಗಿಲಿಗೆ ಹೋಗಿ ಸಂಗ್ರಹಿಸಿದ ಧಾನ್ಯ; Door to door collection of grain; ಪಾದ ಪೂಜೆಯಂ ಕೊಟ್ಟು ಸ್ಥಾನಪೂಜೆ ಬೆಳುಗೊಡೆ ಬಾಗಿಲು ಜೋಳ ತಳಾಱಗೂಲಿ; (SII. XV, III, 1165).

ಮದುವೆತೆಱೆ, ಮದುವೆದೆಱೆ; Maduve-teṟe, Maduve-deṟe: ಮದುವೆಗಳ ಮೇಲಿನ ಕರ; Tax on marriages; ಯೀ ಊರ ಮದುವೆದೆಱೆಯೊಳಗೆ; (EC. V(O), Ak.171, 12th cent.).

ಮದುವೆಯ ಸುಂಕ, Maduveya sunka: s.a. ಮದುವೆತೆಱೆ; Maduve-teṟe; (SII. XVIII, 420, 15th cent.; EC. XII(O), Ck.44, 1533).

ಮದುವೆಯಾಯ; Maduveyāya: s.a. ಮದುವೆಯ ಸುಂಕ; Maduveya sunka; (EI. XXIII, 30, 1265).

ಮನ್ನೆಯದೆಱೆ; Manneya-deṟe: s.a. ಮನ್ನೆಯಗಾಣ್ಕೆ; Manneyagāṇike; (SII. IX, I, 112, 1053).

ಹಸಿರುವಾಣಿಯ ಸುಂಕ; Hasiruvāṇiya sunka: s.a. (1) ಹಂದರ ಹಣ; Handara-haṇa below; tax on pendals; (SII. IV, 255, 1513); (2) ಹಸಿರು ಎಲೆ ಹಣ್ಣು ಹಂಪಲಗಳ ಮೇಲಿನ ಕರ; ಸೋಮಲಾಪುರದ ಸೀಮೆಯಲು ಹುಟ್ಟಿದಂಥ ತೆಂಗು ಹಲಸು ಎಲೆಬಳ್ಳಿ ಹುಣಿಸೆ ನಿಂಬೆ ಮಾದಳ ಮೊದಲಾದ ಹಸಿರುವಾಣಿ; Tax on green leaves, fruits etc.; (SII. IX, II, 595, 1539).

ಹಸೆಯ ಹಣ; Haseya haṇa: s.a. ಮದುವೆತೆರೆ; Maduve-tere; (SII. XV, 233, 1202; KI. V, 32, 1215).

ಹಂದರ ಹಣ; Handara-haṇa: ಮದುವೆ ಮುಂತಾದ ಸಮಾರಂಭಗಳಲ್ಲಿ ಹಂದರ ಹಾಕಿದಾಗ ಕೊಡಬೇಕಾದ ಕರ; Tax on erecting pendals on occasions like marriages; s.a. ಮದುವೆಯ ಸುಂಕ; Marriage tax; (EC. VII(O), HI, 46, 1189).

ಹೆಗ್ಗಡೆಕಾಣಿಕೆ; Heggaḍe-kāṇike: s.a. ಗೌಡುವಣ; Gauḍuvaṇa above; ಮೆಯ್ಸ ನಾಡ ಹೆಗ್ಗಡೆಕಾಣಿಕೆ; (EC. VIII(R), Hn.41, 1200).

ಹೊಲೆದೆರೆ; Hole-dere: ಕನ್ಯೆ ಮೈನೆರೆದಾಗ ಕೊಡುವ ಕಾಣಿಕೆ; Contributions made on the occasion a girl attaining maturity. ಒಕ್ಕುಲಂದದ ದಾಸಗಾವುಂಡಗೆ ಅಲ್ಲಿಯ ಹಂದರ ಹಣ, ಹೊಲೆದೆಱೆ ಕೋಟವುಡ್ಡಿಗೆ ಕೊಳಂ ಕುಮ್ಮರಿ ಪರಿಹಾರವಾಗಿ ಸಿರಿಯಾಗರದೇವಂ ಕೊಟ್ಟ; (SII. XVIII, 93, 1088).

೧೩. ಸೈನ್ಯ ನಿರ್ವಹಣೆಯ ಕರಗಳು

13. MILITARY TAXES

ಆನೆಯ ಸೇಸೆ; Āneya sēse: ಆನೆಯ ದಂಡಿನ ನಿರ್ವಹಣೆಗಾಗಿ ಕೊಡಬೇಕಾದ ಕರ; Tax levied for the maintenance of elephant squad in the army; (EC. VII(R), Ng. 73, 1284).

ಕಟಕಸೇಸೆ; Kaṭak-sēse: ಸೈನ್ಯದ ಠಾಣೆಯ ನಿರ್ವಹಣೆಗಾಗಿ ಕೊಡುವ ಕರ; Tax levied for maintaining a military camp; (EC. VII(R), Ng.73, 1284; Ibid. II, 479, 1296).

ಕುದುರೆಯ ಸೇಸೆ; Kudureya-sēse: ಕುದುರೆಯ ದಳದ ನಿರ್ವಹಣೆಗಾಗಿ ಕೊಡುವ ಕರ; Tax to be paid for the maintenance of cavalry; (EC. VIII(R), Hn.141, 1319-20).

ಕೋಟೆಯ ಹದಿಕೆ; Kōṭeya hadike: ಊರಿನಲ್ಲಿ ಕೋಟೆಯ ರಕ್ಷಣೆಗಾಗಿ ಎತ್ತುವ ಕರ; Tax to be levied for maintaining the fort; (EC. VIII(R). Hn.141, 1200).

ದಂಡಿನ ಭ್ಯಾಗತೆ; Daṇḍin-abhyāgate: s.a. ದಂಡಿನ ಹೊದಿಕೆ; Daṇḍina hodike below; (EC. VII(R), Ng.73, 1284).

ದಂಡಿನ ಹೊದಿಕೆ; Daṇḍina hodike: ಸೈನ್ಯ ನಿರ್ವಹಣೆಗಾಗಿ ಕೊಡುವ ಕರ; Tax levied for maintaining the army. (EC. VII(R), Ng.76, 1284).

ವಂಠದೆರೆ; ಬಂಟದೆರೆ; Vanṭhadere; Banṭadere: ಸೈನಿಕರ ನಿರ್ವಹಣೆಗಾಗಿ ಹಾಕುವ ಕರ; Tax levied for maintaining soldiers; (EC. VI(O), Kd.12, 1233).

೧೪. ಕರ, ತೆರಿಗೆಗಳಿಗೆ ಸಂಬಂಧಿಸಿದ ಇತರ ಪದಗಳು*

14. OTHER TERMS RELATING TO TAX, CESS ETC.*

ಅಕರ; Akara: ಆ ದೇವಸ್ವಕೆ ವೊಸಗೆ ಅಕರವಿಲ್ಲ; (KI. III, 2, 1304) ಅಕರ ಅನ್ಯಾಯವನೂ ಕಾದು ಸರ್ವಬಾಧಾ ಪರಿಹಾರವಾಗಿ; (SII. IX, II, 409, 1365)

ಅಕ್ಕೆ; Akke: ಯೀ ಗ್ರಾಮಕ್ಕೆ ಬಿಟ್ಟ ಬಿಡಾರ ಕಲೆ ಕಂಬಳ ಅಕ್ಕೆ ತಕ್ಕೆ ದಾನಧರ್ಮ; (EC. VI(O), Mg.88, 1515).

ಅಡಿದೆರೆ; Aḍidere: ಕಾವಲಿದೆಱೆ ಅಡಿದೆಱೆ ಯಿಷ್ಟೂ ಪುರದ ವೀರಭದ್ರದೇವರ ಅಂಗರಂಗ...... (EC. VI(R), Kr.21, 26, 1402).

ಅಣಗಿ; Aṇagi: ಅಣಗಿ ಅನಾಡಿ ಅಧಿಕಾರಿಗಳನೂ ಸಿವರಾತ್ರಿ ಕಾಣಿಕೆ ಅರಮನೆಗೆ ಬಹುದೆಂದು; (SII. IX, II, 429, 1405).

ಅನಾಯ; Anāya: ಬಲ್ಲಾಳರಿಗೆ ಅನಾಯ ಸನಾಯ ಸಲ್ಲದು; (EI. XX, 9, 1556).

ಅನ್ಯಾಯ; Anyāya: ಅಭ್ಯಾಗತೆ ಅಂನ್ಯಾಯ ತಪ್ಪು ತವುಡಿ; (EC. VI(O), 1265); Cf. ಅನಾಯ; Anāya above.

ಅಸಂತಾಯ; Asantāya: ವೊಸಗೆ ಅಸಂತಾಯ ಆಕರ ಅನ್ಯಾಯ ಕಾಣಿಕೆ ಕಡಾಯ; (KI. III, I, 9, 1538).

ಅಳಿವಣ; Aḷivaṇa: ಅರಸರ್ಗ್ಗೆ ಸೇಸೆಯೆಂದರಸರ ಕಾಣಿಯೆಂದು ದಾಯದವರ್ಗ್ಗಳ ತೆಱೆಯಿಂದರುವಣ ಮಂದಳಿವಣಂ; (EC. XII(O), Si.40, 1040).

---

* ಈ ಪದಗಳು ಕರ ಎಂಬರ್ಥ ಬರುವಂತೆ ಪ್ರಯೋಗಿಸಲ್ಪಟ್ಟಿವೆ. ಆದರೆ ಅವುಗಳ ಖಚಿತವಾದ ಅರ್ಥವನ್ನು ಕೊಡುವುದು ಕಠಿಣವಿದೆ. ಆದ್ದರಿಂದ ಅವುಗಳ ಪಟ್ಟಿಯನ್ನು ಆಕರಗಳೊಂದಿಗೆ ಇಲ್ಲಿ ಕೊಡಲಾಗಿದೆ.

* These terms are used to denote some types of taxes. But it is difficult to ascertain their meaning. Hence a list of such terms is given here, with their occurrences.

ಅಗಾಡದ ಪನ್ನಾಯ; Agāḍada pannāya: ಸಮಸ್ತ ಗುಣಸಂಪನ್ನರಪ್ಪ ಶ್ರೀಮತ್ಸಮಸ್ತಾಗಾಡದ ಪನ್ನಾಯ; (SII. IX, I, 149, 1081).

ಅಡಿದೆಱೆ, ಅಡುವದೆಱೆ, ಅಡೆದೆಱೆ; Aḍideṟe, Aḍuvadeṟe, Aḍedeṟe: (SII. IX, II, 701, 1512; EC. VI(R), Pp.260-61, 1402).

ಅನೀತ ಬಿರಾಡ; Anīta-birāḍa: ಅನೀತ ಬಿರಾಡ ಸಹವಾಗಿ ಸರ್ವಮಾನ್ಯವಾಗಿ; (SII. IX, II, 642, 1551).

ಅಂದುಪನ್ನು; ಅಂನುಪಂನು; Aṁdu pannu; Annu pannu: ಅಂನುಪಂನು ಬಿಟಿ ಬಿರಾಡವನೂ; (SII. IX, II, 615, 1545) ಸಿದ್ಧಾಯ ತೆರಿಗೆ ಬಿಟ್ಟ ಬಿರಾಡ ಅಂನುಪಂನು ಯೋನುಂಟಾದ ತೆಱುವುದನೆಲ್ಲವನೂ; (Ibid. 608, 1544).

ಆಸೆ; Āse: ಬಿಟ್ಟ ಬಿಡಾರ ಆಸೆ ಅಪ್ಪಣೆ ವರಡ ಸರಡ ಸರ್ವಬಾಧಾಪರಿಹಾರವಾಗಿ; (KI. III, I, 9, 1538).

ಉದುವಲುದೆಱೆ; Uduvalu-deṟe: ಮೇದದೆಱೆ ಸಾದದೆಱೆ ಉದುವಲುದೆಱೆ; (EC. IV(O), Hs.137, 1162).

ಉತ್ತರ (ಉತ್ತಾರ); Uttara (Uttāra): ಗ್ರಾಮ ಒಂದಕ್ಕಂ ಉಂಬಳಿ ಉತ್ತರವ ಕಳದು ಹೊಂದುಬಳಿಯ ನಟ್ಟ; (EC. VIII(O), Tl.133, 1403).

ಉಂಡಿಗೆ; Uṁḍige: ಕಲ್ಲುಕೆರೆಯ ಗ್ರಾಮದ ಗದೆ ಬೆದಲೆ ಸುಂಕ ಉಂಡಿಗೆ ಮುಂತಾಗಿ; (EC. XI(O), Hk.125, 1535).

ಓವತೆ; Ōvate: ಸೇಸೆ ಗ ೨ ಹಾ ೨ ಕಂಡಿಕೆ ವಣ ಪಳ ಓವತೆ ಗ ೮ ಅಂತು ಗ ೨೯; (EC. VIII(R), Hn.112, 13th cent.).

ಕಚ್ಚಿಲವಡಿ; Kachchilavaḍi: ಮಗ್ಗದೆಱೆ ಕಚ್ಚಿಲವಡಿ; (EC. VII(R), Md.137, 1278).

ಕಟಳೆವಟ; Kaṭalevaṭa: ಯೀ ಗ್ರಾಮದ ಚತುಸೀಮೆಗೆ ಸಲುವ .... ದುಳಿರವಟ ಕಟಳೆವಟ ಏರಿ ಮೀನಬೆಲೆ ಸಂತೆ ಉಂಟಾದ ಹಲ ಉಪಾಧಿಗಳೂ ಸೇರ್ರಿ ಕೊಟ್ಟೆವಾಗಿ; (SII. IX, II, 463, 1470).

ಕಟು; Kaṭu: ಸುಂಕ ಸಾಮ್ಯ ಕಟು ತಳವಾಱಿಕೆ; (SII. IX, II, 493, 1513).

ಕಟ್ಟುಗೂಳು; Kaṭṭugūḷu: ಕಾಣಿಕೆ ಕಿಱುಕುಳ ಕಟ್ಟುಗೂಳು ಕಟಕಸೇಸೆ; (EC. VII(R), Ng.73, 1284).

ಕಟ್ಟುಮಾನ್ಯ; Kaṭṭu-mānya: ಕೊಟ ಕಟ್ಟೆಯ ಕಟ್ಟುಮಾನ್ಯಕಂ; (SII. IX, II, 619, 1545).

ಕಟ್ಟುಂದೆರು, ಕಟ್ಟುತೆರು; Kaṭṭun-deru, Kaṭṭu-teru: ಆ ಬಾಳಿಂಗೆ ಕಟ್ಟುಂದೆರು ಕೋಟೀಶ್ವರ ದೇವರಿಂಗೆ; (SII. IX, I, 308, 1325); ಗುರುವಾರದಲು ತ್ಯಾಗಱ ಗೊಡಲ ಸ್ಥಳವ ಕಟ್ಟುತೆಱು ೧೨ ವನು; (KI. I, 37, 1414).

ಕಡಿವಾಱಿ; Kaḍivāṟi: ದುರ್ಗದೇವರಿಗೆ ಕೊಟು ಬಹ ಕಡಿವಾರಿ; (SII. IV, 255, 1513).

ಕಣ್ಣಿಯ ವಣ; Kaṇṇṭhiya-vaṇa: ಸಮಸ್ತ ಸುಂಕದ ಠಾಣಾನ್ತರಂಗಳೊಳ್ ಕಣ್ಠಿಯ ವಣ ಯೆರಡು; (EC. VII(O), Sk.111, 1080).

ಕದಲಕುಳ; Kadala-kuḷa: ತೆರಕಣಾಂಬೆಯಲಿ ಕದಲಕುಳವ ತಱಿದು; (EC. III(R), Gu.156, 1521).

ಕಲುಪಟ್ಟು; Kalupaṭṭu: ನಿತ್ಯ ಸಮಾರಾಧನೆ ಚಂದ್ರಾರ್ಕತಾರಂಬರ ಸಲುವಂತಾಗೆ ಆ ನಾಡ ಕಲುಪಟ್ಟುವನು ಸಕವರುಷ ..... ಧಾರಾಪೂರ್ವಕವಾಗಿ ಕೊಟ್ಟರು; (EC. III(R), Gu.89, 1221).

ಕಲೆ; Kale: ಯಿ ಗ್ರಾಮಕ್ಕೆ ಬಿಟ್ಟ ಬಿಡಾರ ಕಲೆ ಕೆಂಬಳ ಅಕ್ಕೆ ತಕ್ಕೆ ದಾನಧರ್ಮ ಅವದೊಂದೂ ಯಿಲ್ಲ ಯೆಂದು; (EC. VI(O), Mg.88, 1515).

ಕರ್ವ್ವಣಿ; Karvvaṇi: ಊರ ಮೇಲೆ ಕರ್ವ್ವಣಿ ವೃದ್ಧಿಯಲ್ ಮೂಲಸ್ಥಾನ ಕಲಿದೇವಸ್ವಾಮಿಗೆ ವಿಷ್ಣುದೇವರ್ಗ್ಗೆ; (SII. XI, I, 92, 1054).

ಕಳವತ್ತ; Kaḷa-vatta: ಸೊಡರಿಗೊಂದು ಗಾಣಮುಮಂ ಅಪಾರ ತಿಪ್ಪೆಸುಂಕಮುಮಂ ಕಳವತ್ತಮುಮಂ ಮಲ್ಲಗೌಂಡನೊಳಗಾದ .... ಬಿಟ್ಟರು; (EC. V(O), Ak.141, 1158).

ಕಳ್ಳವಳಿಕೆ; Kaḷḷavaḷike: ಕಳ್ಳವಳಿಕೆ ಸಾದಂ ಬಣ್ಣಿಗೆಯನೆ ಪರಿಹಾರಂ ಮಾಡಿ ಬಿಟ್ಟಂ; (APGAS. III, 1, Āland, 1082).

ಕಳುಕು; Kaḷuku: ಖಾಣ ಎಳ್ಳು ಜೋಳ ನಲ್ಲಾವು ನಲ್ಲೆತ್ತು ಕಳುಕು ಕಂಡಿಕೆ; (EC. VI(O), Tk.20, 1185; Ibid.VIII(R), Bl.170, 1261).

ಕಂಡಿಕೆ, ಕಂಡಿಕೆವಣ; Kaṇḍike, Kaṇḍike-vaṇa: ಅಡಕೆ ಲಕ್ಕ ೧ ಕ್ಕಂ ಗ ೫ ಪಣವೊಂದರ ಸೇಸೆಗೆ ಗ ೪ ಪ ೫ ಕಂಡಿಕೆವಣ; (EC. IX(O), Bn.6, 1253; Ibid.VIII(R), B1.170, 1261).

ಕಾಣಿ; Kāṇi: ಅರಸರ್ಗ್ಗೆ ಸೇಸೆಯೆಂದರಸರ ಕಾಣಿಯೆಂದು ದಾಯದವರ್ಗ್ಗಳ ತೆಱೆಯೆಂದಳುವಣಮೆಂದವಳಿವಣಂ; (EC. XII(O), Si.40, 1040).

ಕಾಱುವಣಿಗೆ; Kāṟuvṇige: ಜಂಗಮಾರಾಧನೆಗಂ ಕೊಟ್ಟಸಿ ಕಾಱುವಣಿಗೆ ತಳವಿತ್ತಿ ಅಂಕವಲ ಕೂಂಡಿನಾಡೊಳು ಸಲುವಂತೆ; (EI. XXI, 2, 1260).

ಕುಳಬಿರಾಡ; Kuḷabirāḍa: ರಾಜಪಾಲು ಕುಳಬಿರಾಡ ಅನೀತಬೀರಾಡ ಸಹವಾಗಿ; (SII. IX, II, 642, 1551).

ಕೂಳ್ದೆರೆ; Kūḷdere: ಬಾರಿಕಂಗೆ ಮನೆದೆಱೆ ಬಿಟ್ಟಿಬೆಸ ಕೂಳ್ದೆಱೆ ಮೊದಲಾಗಿ ..... ಬಿಟ್ಟರ್; (KI. II, 8, 1072).

ಕೊಟ್ಟಸಿ; Koṭṭasi: ಜಂಗಮಾರಾಧನೆಗಂ ಕೊಟ್ಟಸಿ ಕುಱುವನಿಗೆ ತಳವಿತ್ತಿ ಅಂಕವಲ ಕೂಂಡಿನಾಡೊಳು ಸಲುವಂತೆ; (EI. XXI, 2, 1260).

ಕೊಡಗಿದೆರೆ; Koḍagi-dere: ಆ ಗದ್ದೆಗೆ ಕೊಡಗಿದೆಱೆ ಸೇಸೆ ಸಿದ್ಧಾಯ ಅಳಿವಂನ್ಯಾಯ ಆವುದೂ; (EC. VII(R), Ng.73, 1284).

ಕೊಡವೀಸ; Koḍavīsa: ಎರಡೊಕ್ಕಲ್ದೆಱೆ ಕೊಡವೀಸವ ಸಹಿತಂ; (SII. XX, 34, 1053; Ibid. XV, 104, 1165); ತಮ್ಮ ಕೊಡವೀಸದೊಳಗೆ ಬರಿಸಕ್ಕೆ ನಾಲ್ಕು ಹಣವಂ ಬಿಟ್ಟರು; (SII. IX, I, 223, 1127); ಕೊಡವೀಸದ ಮಾರವೆರ್ಗ್ಗಡೆ; (EC, VIII(O), Sb.140, 1197).

ಕೊದೆವಣ; Kode-vaṇa: ಯದಿ ನಾಯಕತ್ವಂ ನೇಚ್ಛಂತಿ ಸ್ವೇಚ್ಛಯಾ ತಿಷ್ಠಂತಿ ತದಾ ಕೊದೆವಣಂ ನಾಸ್ತಿ; (EI. XXVII, 32, 1115).

ಕೋಟೆವುಡ್ಡಿಗೆ; Kōṭevuḍḍige: ಹಂದರಹಣ ಹೊಲೆದೆರೆ ಕೋಟೆವುಡ್ಡಿಕೆ ಸೂಳಂ ಕುಮ್ಮರಿ .....; (SII. XVIII, 93, 1088).

ಜಡದೆಱೆ; Jaḍa-deṟe: ಜಡದೆಱೆಯ ಭಾಗ; EC. IX(R), Bl.170, 1261).

ಜಾತ್ರಾಮುಖ; Jātrāmukha: ಇರ್ಪ್ಪತ್ತನಾಲ್ಕು ವಂತ್ತರ್ಕ್ಕಸುಕಾಡು ಜಾತ್ರಾಮುಖವುಮಂ ಬಿಟ್ಟು ಮಾಡಿದರುವಣದ ದ್ರಮ್ಮ ವಿರ್ಪ್ಪತ್ತನಾಲ್ಕು; (EI. XXXIV, 12, 972).

ಜೋಡಿಕೆಯ ಬಿರಾಡ; Jōḍikeya-birāḍa: ತಳವಾಱಿಕೆ ಜೋಡಿಕೆಯ ಬಿರಾಡ .... ಸಹವಾಗಿ ಏನುಂಟಾದನು; (SII. IX, II, 493, 1513).

ತಕ್ಕೆ; Takke: ಯೀ ಗ್ರಾಮಕ್ಕೆ ಬಿಟ್ಟ ಬಿಡಾರ ಕಲೆ ಕೆಂಬಳ ಅಕ್ಕೆ ತಕ್ಕೆ ದಾನಧರ್ಮ ಆವದೊಂದೂ ಯಿಲ್ಲಯೆಂದು; (EC. VI(O), Mg.88, 1515).

ತಾಣಿಕದ ಹೊನ್ನು; Tāṇikada honnu: ದೇವಾಲಯಕೆ ತಾಣಿಕದ ಹೊನ್ನು ಸಮ್ಮ ಭಾಗ; (EC. III(R), Nj.156, 1198).

ತೆಱುಗಡೆ; Teṟugḍe: ಕರ ಹಾಕುವಿಕೆ; Taxaion; imposing tax ಮೊದಲಾದ ಆವ ತೆಱುಗಡೆ ಹೊಱುಗಡೆವುಂ ಇಲ್ಲದೆ; (EC. XII(O), Ck.2, 1261).

ದವಣಾಯ; Davaṇāya: ದೇವರಂಗಭೋಗಕ್ಕೆ ದವಣಾಯ ಪೊಗುವ ಪೊಱಮಡುವ ಸೀರೆ; (SII. XX, 112, 1144).

ದಳ; Daḷa: ದವಳಾರದ ಭಂಡಿ ತುಪ್ಪ ದಳ ಮಿಳಿ ನೂಲ ಕಳುಹು ... ಇನ್ತೀ ವೊಳಗಾದ ಎಲ್ಲಾ ಹದಿಕೆಯನೂ; (EC. VII(R), Ng.73, 1284).

ದಂಡಿಗೆ; Daṇḍige: ಆ ಕೆಲನಾಡ ಮೊದಲ ಸಿದ್ಧಾಯ ನೂಱ ಅಇವತ್ತಕ್ಕೆ ವುಂಬಳಿ ದೇವಾಸ ಗ ೧ ಖಂಡಿಕೆ ೧೧ ದಂಡಿಗೆ ವುಡುಗೊರೆ; (EC. VI(O), Sg.1, 1346).

ಧವಳಾರದ ಭಂಡಿ; Dhavaḷārada bhaṇḍi: ದಳ ಮಿಳಿ ತುಪ್ಪ ನೂಲು ಧವಳಾರದ ಭಂಡಿ ಕಳುಕು; (EC. VI(O), Kd.49, 1291).

ನಟ್ಟು; Naṭṭu: ತೆಱು ಸಿದ್ಧಾಯ ನಟ್ಟು ಬೆಡೆ; (SII. IX, II, 416, 1377).

ನಲುಗಂಟಿ; Nalugaṇṭi: ಬೀರವಣ ನಲ್ಲೆತ್ತು ನಲುಗಂಟಿ ನಲ್ಲಾಯ ದಂಡಾಯ; (EC. IX(R), Bl.17, 1174).

ಪರಿಪು; Paripu: ಪರಿಪುಂ ಪಾರಣೆಯುಂ ಮೊದಲಾಗಿ ಕಿರುಕುಳ ಬಾಧೆಯೊನ್ದುಮಿಲ್ಲದನ್ತಾಗಿ; (SII. XI, I, 78, 1045).

ಪಾರಣೆ; Pāraṇe: ಪರಿಪುಂ ಪಾರಣೆಯುಂ ಮೊದಲಾಗಿ ಕಿರುಕುಳ ಬಾಧೆಯೊನ್ದುಮಿಲ್ಲದನ್ತಾಗಿ; (SII, XI, I, 78, 1045).

ಪುಲ್ಲುಳ್ವು; Pullulvu: ಸಿದ್ಧಾಯಮನೆ ತೆತ್ತು ಬಾಳ್ವುದು ಪುಲ್ಲುಳ್ವು ಬಾಲವಣಮು ಮಾಯಿಲದೆಱೆ; (SII. IX, I, 54, 9th cent.).

ಪೊಗೆ; Poge: ಅಳಿವಸತಾಯ ಪೊಗೆ ವೊಗೆ ತಳಾಱಗೂಲಿ; (SII. XI, I, 75, 1042).

ಪೊಮ್ಮ; Pomma: ಕೊಡದೆಣ್ಣೆ ಯೆಲೆಯ ಹೇಱುಗಳ ಪೊಮ್ಮ ಕಿಱುಕುಳ; (EI. XIX, 4, 1144). See Kittel; ಪೊಮ್, Pom; ಕಿಟೆಲ್ ನಿಘಂಟಿನಲ್ಲಿ ಪೊಮ್ಮು ಎಂದರೆ ತಂಬಾಕದ ಮೇಲಿನ ಕರ ಎಂದು ಹೇಳಿದೆ. ಆದರೆ ಈ ಅರ್ಥ ಇಲ್ಲಿ ಹೊಂದುವದಿಲ್ಲ. Kittel gives the meaning of Pommu as tax on tobacco. But this meaning does not suit here. (Kittel, p.1022).

ಬಿನುಗು; Binugu: ಕುಂಬಾರದೆಱೆ ಬಿನುಗು ಬೆಸ ಒಕ್ಕಲು; (EC. III(R), Nj.273, 1488).

ಬಿನುಗುದೆರೆ; Binugu-dere: ಮನೆವಣ ಕಾಣಿಕೆ ಬೇಡಿಗೆ ಬಿನುಗುದೆಱೆ ಕುಂಬಾಱದೆಱೆ; (SII. IX, II, 701, 1512).

ಬೀಜವಣ; ಬೀಜವೊಂನು; Bījavaṇa; Bījavoṁnu: ಸ್ತಾನಿಕರ ವಸದಲು ಕೊಟ್ಟ ಬೀಜವಣ ಪ ೫; ಸ್ಥಾನಿಕರ ಕಯ್ಯಲು ಕೊಟ್ಟ ಬೀಜವೊಂನು ಗದ್ಯಾಣ ೨; (EC. VI(O), Tk.18, 1166).

ಬೀಡಗೊಳು; Bīḍagoḷu: ಕಾಣಿಕೆ ಕಡ್ಡಾಯ ಬೀಡಗೊಳು; (EC. X(O), Mb.20, 1468).

ಬೆಡುಂಗೊಳು; Beḍuṁgoḷu: ಪರಿಧಾನ ಬೆಡುಂಗೊಳು ಚಳಾಯ ದಾಯದೆಱೆ; (EC. IX(R), Bl.17, 1174).

ಬೆಳಾಕರಣೆ; Beḷākaraṇe: ವೊಕ್ಕಲು ಗುತ್ತಗೆ ..... ಬೆಳಾಕರಣೆ ಬೆಳುದಂಡ; (SII. XV, 247, 1433).

ಬೆಳ್ಳಾಯ; Beḷḷāya: ಪೆರ್ಜ್ಜುಂಕದ ಬೆಳ್ಳಾಯ ಬಿಲ್ಕೊಡೆಯ ಬೆಳ್ಳಾಯ; (SII, XX, 77. 1118).

ಬೆಳುದಂಡ; Beḷu-daṇḍa: ಬೆಳ್ಳಾಕರಣೆ ಬೆಳುದಂಡ ಎಸೆ ವೊಸಗೆ; (SII. XV, 247, 1433).

ಮಗವಳಿ; Magavaḷi: ಹಱವಣ ಮಗವಳಿ ವುಂಬಳಿ ಬೆಂಬಳಿ; (SII. XVIII, 51, 1033).

ಮಾಯಿಲದೆಱೆ; Māyila-deṟe: ಬಾಳ್ವುದು ಪುಲ್ಲುಳ್ವು ಬಾಲವಣಮು ಮಾಯಿಲದೆಱೆಗಳು; (SII. IX, I, 54, 9th cent.).

ಮಿಳಿ; Miḷi: ದಳ ಮಿಳಿ ನೂಲಕಳುಹು ನಲೆತ್ತು ಇಂನ್ತೀ ಎಲ್ಲಾ ಹದಿಕೆಯನೂ; (EC. VII(R), Ng.373, 1284).

ಮುಕುಡಿದೆರೆ; Mukuḍi-dere: ಕಾರುಕ ಅಲೆದೆರೆ ಮುಕುಡಿದೆರೆ ಜೆಟ್ಟಿದೆರೆ; Translated doubtfully as tax on drunkenness by B.L. Rice; ಕುಡಿತದ ಮೇಲಿನ ಕರವೆಂದು ಬಿ.ಎಲ್. ರೈಸ್ ಅವರು ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಭಾಷಾಂತರಿಸಿದ್ದಾರೆ; (EC. VI(O), Kd.49, 1921; translation p.10).

ಮುಲಾದಿ; Mulādi: ಅರುವಾರ ಕುಂಡು ಹೊಡೆಕಟ್ಟು ಮುಲಾದಿ ಮೈಸಾಲ ಸಹಿತ; (SII. IX, II, 512, 1520).

ವರ್ದ್ಧಾದಾನ; Varddhādāna: ಹೆಜ್ಜುಂಕದ ವಡ್ಡರಾವುಳ ವರ್ದ್ಧಾದಾನ ತಳರ ಸುಂಕ ಮಾನ್ಯಂ; (EC. VII(O), Sk.137, 1114).

ವರಡ; Varaḍa: ವೊಸಗೆ ಅಸಂತಾಯ ಆಕರ ಅನ್ಯಾಯ ಕಾಣಿಕೆ ಕಡಾಯ ಬಿಟ್ಟಿ ಬಿಡಾರ ಅಸೆ ಅಪ್ಪಣೆ ವರಡ ಸರಡ ಸರ್ವಬಾಧಾಪರಿಹಾರವಾಗಿ; (KI. III, I, 9, 1538).

ವುಂಡಿಗೆ; Vuṇḍige: ತಾವು ಮುಂದಿಟ್ಟು ಕೊಟ್ಟ ನಾಡ ಸಿವಾಲ್ಯಂಗಳಿಗೆ ಆ ಅಭ್ಯಾಗತ ಅಂನ್ಯಾಯ ತಪ್ಪು ತವುಡಿ ದಂಡ ವುಂಡಿಗೆ ವೊಡದ ತಲೆ ವೊಕ್ಕ ಭರಣ ಯಿಂತಿವು ಇಲ್ಲೆಂದು; (EC. VI(O), Cm.89, 1265).

ವೊಗೆ; Voge: ಪೊಗೆ ವೊಗೆ ತಳಾಱಗೂಲಿ; (SII. XI, I, 75, 1042).

ವೊಡದ ತಲೆ; Voḍada tale: ತಾವು ಮುಂದಿಟ್ಟು ಕೊಟ್ಟ ನಾಡ ಸಿವಾಲ್ಯಂಗಳಿಗೆ ಆ ಅಭ್ಯಾಗತೆ ಅಂನ್ಯಾಯ ತಪ್ಪು ತವುಡಿ ದಂಡ ವುಂಡಿಗೆ ವೊಡದ ತಲೆ ವೊಕ್ಕ ಭರಣ ಯಿಂತಿವು ಯಿಲ್ಲೆಂದು; (EC. VI(O), Cm.89, 1265).

ವೊವತೆ; Vovate: s.a. ಓವತೆ; Ōvate above; ವೊವತೆ ಗ ೧೨ ಪ ೮; (EC. IX(O), Bn.6, 1053).

ಸೌಟಿಗೆ; Sauṭige: s.a. ಸೊಟಿಗೆ; Soṭige; ಗಾಣದಲು ಸೌಟಿಗೆಣ್ಣೆ (SII. XV, 58, 1148; EC. IX(R), Bl.554, 1191).

ಸೌಟು; Sauṭu: s.a. ಸೊಟಿಗೆ; Soṭige; (IND. 9, 1078).

ಸೌಂಠಿಗೆ; Saunṭhige: s.a. ಸೊಟಿಗೆ; Soṭige; ಗಾಣದಲು ಸೌಣ್ಠಿಗೆಣ್ಣೆ; (EC. VI(O), Tk.11, 1149).

ಹಳಿಗೆ; Haḷige: s.a. ಪಳಿಗೆ; Paḷige, above; ದೇವರ ನಂದಾದೀವಿಗೆಗೆ ಗಾಣಂಗಳಲೊಂದೊಂದು ಹಳಿಗೆ ಯಂಣೆಯಂ ಕೊಟ್ಟರು; (EI. V, 3A, 1161).

ಹಾಡ; Hāḍa: ಪ್ರವಾಹಿ ಅಳತೆಯ ಒಂದು ಮಾನ; A unit of liquid measure; (EC. XI, Dg.59, 1280).

ಹಾದ; Hāda: ಪ್ರವಾಹಿ ಅಳತೆ; Liquid measure; ಬೇಜೂರಿಂದ ಬಂದು ಮಾಱುವ ಎಂಣ್ಣೆಯ ಹಾದಕ್ಕೆ ಯದ್ದೆಂಣ್ಣೆಯ ಕೊಟ್ಟರು; (SII. XX, 248, 1228).

(ಬ) ಘನವಸ್ತುಗಳ ಅಳತೆಗಳು

(B) Solid Measures

ಅರ್ಧಸೊಲ್ಲಗೆ; Ardha-sollage: ಸೊಲ್ಲಗೆಯ ಅರ್ಧ; Half of sollage; ಸಂತೆಯ ಪನಾಯ ಹಡಕೆ ಅರ್ಧ ಸೊಲ್ಲಗೆ; (SII. XX, 164, 1176). See Sollage below.

ಅರವನೆ ಕೊಳಗ; Aravane-koḷaga: ಅರಮನೆಯಿಂದ ಪ್ರಮಾಣಿತವಾದ ಕೊಳಗವೆಂಬ ಅಳತೆ; A standard measure called Koḷaga approved by the palace; ಅರವನೆಕೊಳಗದಾಯ; (APGAS. III, Ma.42, 1116).

ಅರೆವಾನ; Are-vāna: ಮಾನದ ಅರ್ಧ; ಅಧಿಕೃತ ಅಳತೆಯ ಅರ್ಧ; Half of Māna, Half of the standard measure; ಅಂಗಡಿಯಲು ಅರೆವಾನ ಪ್ರಮಾಣಿನಲು ಅಕ್ಕಿ; (EC. XI(O), Dg.61, 1172).

ಇಕ್ಕುಳ, ಇಗುಳ; Ikkuḷa, Iguḷa: ಎರಡು ಕುಳ; Two Kuḷas; ಅಕ್ಕಿ ಇಕುಳಂ; (EC. VI(O), Cm.95, 1025); ಇಕ್ಕುಳದ ಬೀಜವ; (SII. IX, II, 432, 1407). See ಕುಳ; Kuḷa below.

ಕಲ; Kala: ಧಾನ್ಯದ ಒಂದು ಅಳತೆ; A measure of grains; ವರುಷ ೧ ಕ್ಕೆ ಮೂನೂಱು ಕಲ ಅಕ್ಕಿ; (SII. IX, II, 463, 1470).

ಕಳ; Kaḷa: s.a. ಕಲ; Kala; ನೆಲ್ಲುಗದ್ದೆ ಮಾಗಳ ವೊಕ್ಕಲಿಕ್ಕಳ ಭತ್ತಮಂ; (SII. IX, I, 25, 936); ವೊಕ್ಕಲಲಿಕ್ಕಳ ಭತ್ತಮಂ; (Ibid. XX, 118, 1148).

ಕಂಚಿನ ಹಾನೆ; Kanchina hāne: ಕಂಚಿನಿಂದ ಮಾಡಿದ ಹಾನೆ ಎಂಬ ಅಳತೆ; A measure called hāne made out of bell-metal; ಕಂಚಿನ ಹಾನೆ ೧೦ಕ್ಕೆ ನಾಡ ಹಾನೆ ೫ ರ ಲೆಕ್ಕದಲು; (SII. VII, 351, 1386). See Hāne below.

ಕಂಡಗೆ; Kaṇḍage: s.a. ಕಂಡುಗ; ಖಂಡುಗ; Kaṇḍuga; Khaṇḍuga; ಯಱುವತ್ತೊಕ್ಕಲು ಕೊಟ್ಟ ತಾಱಿನ ಕಂಡಗೆ ಯೆಲೆ; (KI. I, 30, 1222).

ಕಂಡುಗ, ಖಂಡುಗ; Kaṇḍuga, Khaṇḍuga: ಧಾನ್ಯಗಳನ್ನು ಅಳೆಯುವ ಒಂದು ಪ್ರಮಾಣ; A unit for measuring

grains; (SII. IX, I, 397, 12th cent.). ತುಳುವೇಶ್ವರದೇವರಿಗೆ ತೆಱುವ ಭತ್ತ ಮೂಗಂಡುಗದಲು (SII. IX, II, 424, 1401); ಪದಿರ್ಕ್ಕಂಡುಗ ನಲ್ವತ್ತು (EC. VI, Cm.50, 6th cent.); ಮೂಸಾಸಿರ ಗಂಡುಗ ಬತ್ತಮುಮಂ ವಡ್ಡಾ, Vaḍḍā. p.22, l.3, 10th cent.; also written as ಕಂಡು, ಕಂಡೆ; Kaṇḍu, Kaṇḍe; ಅಕ್ಕಿ ನಾಗಂಡೆಯಲು; (SII. IX, II, 425, 1401).

ಕಾಡಿ; Kāḍi: s.a. ಕಂಡುಗ; Kaṇḍuga; ಆಯುನೂಱುಕ್ಕಾಡಿ ನೆಲ್ಲುಂ ಪತ್ತು ಪೊಣ್ಣುಂ; (EI. XVII, 1, 10th cent.); ಇದು ತಮಿಳು ಶಬ್ದ; This is a Tamil word.

ಕುಡಿತೆ; Kuḍite: ಒಂದು ಬೊಗಸೆಯ ಅಳತೆ; A measure of two hand fulls; ೧೨ ಕುಡಿತೆಯಕ್ಕಿಯ ನಿವೇದ್ಯಕ್ಕೆ; (SII. VII, 177, 1303).

ಕುಡುತೆ; Kuḍute: s.a. ಕುಡಿತೆ; Kuḍite; ಕಳಸನಥದೇವರ ಅಮ್ರಿತಪಡಿಗೆ ಅಕಿ ಕುಡುತೆ ೧; (EI. V, 67, 1277).

ಕುಳ, ಕುಳಗ; Kuḷa, Kuḷaga: ಧಾನ್ಯದ ಒಂದು ಅಳತೆ; A measure of grains; ಮೂಗುಳವುಂ ಕಪ್ಪಡಕ್ಕೆ (EC. III(R), Nj.215, 1032).

ಕೊಳ, ಕೊಳಗ; Koḷa, Koḷaga: ಧಾನ್ಯವನ್ನು ಅಳೆಯುವ ಒಂದು ಪ್ರಮಾಣಿತ ಅಳತೆಯ ಪಾತ್ರೆ; A vessel of standard measure for measuring grains; ದೇವರ ನೀವೇದ್ಯಕ್ಕೆ ರಾಜಾನ್ನದಕ್ಕಿ ಕೊಳಗ ಒಂದು (APGAS. III, Rc.13, 1088); ತಿಂಗಳಿಂಗೊಕ್ಕಲ್ಗಳೊಳ್ ಚೋಳ ಕೊಳಗ ೧; (EI. XX, 12A, 1167).

ಖಂಡಿಕಾ; Khaṇḍikā: ಧಾನ್ಯ ಮುಂತಾದವುಗಳ ಒಂದು ಅಳತೆ; A solid measure; ದ್ವಿಜನ್ಮನಾಂ ಸಂಬಂಧಿನೋ ವಿದ್ಯಾಸನಸ್ಯ ಸ್ನೇಹ ಲವಣ ಸಮಗ್ರಸಂಪಾದನಾಯ ದಿನಂಪ್ರತಿ ತೈಲಪ್ರಸ್ಥದ್ವಯಂ .... ಲವಣಸ್ಯ ಖಂಡಿಕಾಸ್ಸಾರ್ಧಾಶ್ಚತಸ್ರ: (IND. 2, 10th cent.); ಖಂಡಿಕಾ, Khaṇḍikā > ಖಂಡುಗ, Khaṇḍuga.

ಖಂಡುಗ; Khaṇḍuga: ಧಾನ್ಯದ ಪ್ರಮಾಣಿತ ಅಳತೆ; A standard measure of grains; ವರುಷವೊಂದಕ್ಕಂ ಅಕ್ಕಿ ಹದಿನೆಂಟು ಖಂಡುಗ; (EC. XI(O), Mk.31, 1386; ಬ.ಪು. Ba.Pu. II, VIII, 21, 14th cent.).

ಗ್ರಾಮಖಂಡುಗ; Grāma-Khaṇḍuga: ಆಯಾ ಗ್ರಾಮಗಳಲ್ಲಿ ಬಳಕೆಯಲ್ಲಿದ್ದ ಧಾನ್ಯದ ಅಳತೆಯ ಪ್ರಮಾಣ; Measure of grains current in respective villages; ಭೋಜನಕ್ಕೆ ಪ್ರತಿಜನ ೧ ಕ್ಕಂ ಪ್ರತಿ ವರ್ಷ ೧ ಕ್ಕಂ ಭತ್ತ ಗ್ರಾಮ ಖಂ ೧೨ ಲೆಕ್ಕದಲು; (EC. VI(O), Kp.32, 1448).

ಗ್ರಾಮಗೊಳಗ; ಗ್ರಾಮದ ಕೊಳಗ; Grāma-golaga; Grāmada koḷaga: ಆಯಾ ಗ್ರಾಮಗಳಲ್ಲಿ ಬಳಕೆಯಲ್ಲಿದ್ದ ಧಾನ್ಯದ ಪ್ರಮಾಣಿತ ಅಳತೆ; Measure of grains current in respective villages; (APGAS. IX, 9, 1537); ಆ ಗ್ರಾಮದ ಕೊಳಗದಲ್ಲಿ; (EC. VIII(O), Tl.14, 1422).

ಚೋಳನ ಸಿಂಗಂ ಕೊಳಗ; Chōḷana singaṁ koḷaga: ಚೋಳನ ಸಿಂಗ ಎಂಬ ಹೆಸರಿನ ಅಳತೆ; A measure named after a title Chōḷana singa; ಚೋಳನ ಸಿಂಗಂ ಕೊಳಗದಲ್ ಕಣ್ದುಂಗಂ; (EC. X(O), Chintamani, 30, 1047).

ಛತ್ರದ ಆಯಿದು ಸಿದ್ದೆಯ ಕೊಳಗ; Chhatrada ayidu siddeya koḷaga: ಛತ್ರದಲ್ಲಿ ಬಳಕೆಯಲ್ಲಿದ್ದ ಐದು ಸಿದ್ದೆಗಳಿಗೆ ಸಮಾನವಾದ ಕೊಳಗ ಎಂಬ ಅಳತೆ; A measure called Koḷaga equal to 5 siddhe of grain used in Chhatra; ಛತ್ರದ ಆಯಿದು ಸಿದ್ದೆಯ ಕೊಳಗದಲು ಹೊಂನಿಗೆ ಹತ್ತು ಸಲಗೆಯ ಧಾರಣೆಯಲು; (EC. VIII(O), Tl.33, 15th cent.).

ಛತ್ರದ ಕೊಳಗ; Chhatrada koḷaga: ಛತ್ರದಲ್ಲಿ ಧಾನ್ಯವನ್ನು ಅಳೆಯಲಿಕ್ಕೆ ಬಳಸುತ್ತಿದ್ದ ಅಳತೆಯ ಪ್ರಮಾಣ; ನಾಲ್ವತ್ತು ಸಲಿಗೆ ಭತ್ತ ಯಿದೂ ಛತ್ರದ ಕೊಳಗದಲು ಖಂಡುಗ ನಾಲ್ವತ್ತು; (EC. VIII(O), Tl. 33, 15th cent.).

ದೇವಗೊಳಗ; Dēva-goḷaga: ದೇವಾಲಯಗಳಲ್ಲಿ ಧಾನ್ಯಗಳನ್ನು ಅಳೆಯಲು ಬಳಸುತ್ತಿದ್ದ ಒಂದು ಅಳತೆ; A measure used for measuring grains in temples; (SII. XVIII, 191, 1182).

ದೇವಮಾನ; Dēva-māna: ದೇವಾಲಯಗಳಲ್ಲಿ ಧಾನ್ಯಗಳನ್ನು ಅಳೆಯುವ ಒಂದು ಪ್ರಮಾಣ; A standard measure for measuring grains in temples; ಅಂಗಡಿಯ ಅವಟದಲು ಹೇಱಿಗೆ ಭತ್ತ ದೇವಮಾನ; (IND. 3, 1047). ಹೇಱಿನಲ್ಲಿ ದೇವಮಾನವು; (APGAS. III, Md.4, 1156).

ದೇವರ ಹಾನೆ; Dēvara hāne: ದೇವರ ಹೆಸರಿನಲ್ಲಿ ಬಳಸುತ್ತಿದ್ದ ಹಾನೆ ಎಂಬ ಅಳತೆಯ ಪ್ರಮಾಣ; A

measure called Hāne current in the name of god; ದೇವರ ಹಾನೆಯಲ್ಲಿ ಯಿ ಹಾನೆ ಅಕ್ಕಿಯ ಮರ್ಯಾದೆಯಲಿ; (SII. VII, 270, 1402) Cf. ದೇವಮಾನ, ದೇವಗೊಳಗ above.

ದೇವರಾಯ ಕೊಳಗ; Dēvarāya-koḷaga: ವಿಜಯನಗರ ಅರಸನಾದ ಪ್ರೌಢದೇವರಾಯನ ಹೆಸರಿನಲ್ಲಿ ಬಳಕೆಯಲ್ಲಿದ್ದ ಅಳತೆ; A measure named after the king Prauḍhadēvarāya of Vijayanagara; ದೇವರಾಯ ಕೊಳಗನಾಮಾಖ್ಯ: ತ್ರಿಷೋಡಶಮಾನ ಮೆಂಬುವಂಥ; (EC. XII, Tm.31, 1445).

ಧರ್ಮಗೊಳಗ; Dharma-goḷaga: s.a. ದೇವಗೊಳಗ; ಧಾನ್ಯದಲು ದೇವಗೊಳಗ ಧರ್ಮಗೊಳಗವೆರಡು ೨ ಕೊಳಗ; (SII. XVIII, 191, 1182).

ನಾಡಹಾನೆ; Nāḍa-hāne: ಒಂದು ಪ್ರದೇಶದಲ್ಲಿ ಪ್ರಚಾರದಲ್ಲಿದ್ದ ಹಾನೆ; ಎಂಬ ಅಳತೆ; A measure called Hāne current in a region; ನಾಡಹಾನೆ ೧ ಜ ಲೆಕ್ಕ ೨೦; (SII. VII, 330, 1360).

ನಾಳಿ; Nāḷi: ತಮಿಳರ ಪ್ರದೇಶದಲ್ಲಿ ಪ್ರಚಲಿತವಿದ್ದ ಧಾನ್ಯದ ಅಳತೆಯ ಪ್ರಮಾಣ; A unit of measure current in the Tamil settlements; (EC. X(O), Kl.92, 1288).

ಪಡಿ; Paḍi: ಪ್ರವಾಹಿ ಮತ್ತು ಧಾನ್ಯಗಳನ್ನು ಅಳೆಯುವ ಒಂದು ಪ್ರಮಾಣ; A measure for measuring grains as well as liquid articles; ತುಪ್ಪ ಪಡಿ ಎಣ್ಣೆ ಪಡಿ ಉಪ್ಪು ಪಡಿ; (SII. IV, 266, 1545).

ಪ್ರಸ್ಥ; Prastha: ಧಾನ್ಯ ಮತ್ತು ಪ್ರವಾಹಿ ವಸ್ತುಗಳನ್ನು ಅಳೆಯುವ ಒಂದು ಪ್ರಮಾಣ; A unit of measure of solid and liquid articles; (1) ತೈಲಪ್ರಸ್ಥದ್ವಯಂ; (IND. 2, 10th cent.), (2) ಲವಣಸ್ಯ ಚೈಕಂ ಪ್ರಸ್ಥಂ ವಿಧಾಯ; Ibid. ಡಾ. ಸರಕಾರ ಅವರ ಅಭಿಪ್ರಾಯದಲ್ಲಿ ದ್ರೋಣದ ೧೬ನೇ ಭಾಗಕ್ಕೆ ಸಮವಾದುದು. It is equal to one sixteenth of a Drōṇa, according to Sircar; (IEG. p.253).

ಬಳ, ಬಳ್ಳ; Baḷa, Baḷḷa: ಧಾನ್ಯಗಳ ಅಳತೆಯ ಒಂದು ಪ್ರಮಾಣ, ಕಿಟೆಲ್ ಅವರ ಪ್ರಕಾರ ಕೊಳಗದ ೪ನೇ ಭಾಗ; A unit of measuring grains; ¼ of koḷaga according to Kittel (Kannada, English Dictionery, V.S. ಬಳ್ಳ); Baḷḷa ಧಾನ್ಯವರ್ಗ್ಗಕ್ಕೆ ...... ಎತ್ತಿನ ಹೇಱಿಂಗೆ ಬಳ್ಳವೊಂದು (EI. XIX, 4B, 1142); ಭಂಡಿಯ ಭತ್ತದಲು ಬಳ್ಳ ೧ (SII. IX, I, 269, 1169).

ಬಿಸಿಗೆ, ಬೀಸಿಗೆ; Bisige, Bīsige: ಒಂದು ಅಳತೆ; ಕಿಟೆಲ್‌ರಂತೆ ೨೦ ಪಲಗಳಿಗೆ ಸಮವಾದುದು; A measure of capacity, equal to 20 palas according to Kittel (Kan.Eng.Dic.S.V. ಬೀಸಿಗೆ) ಹತ್ತಿ ಮಳವೆಗಯ್ವಲಂ ಭಂಡಿಯ ಕರುಸೆಯ ಮಳವೆಗೆರಡು ಬಿಸಿಗೆ; (EI, XIX, 4A,1136).

ಮಾನ; Māna: ಭತ್ತ ಮುಂತಾದ ಧಾನ್ಯಗಳ ಅಳತೆಯ ಪ್ರಮಾಣ; A unit of measure for measuring paddy and other grains; ಧಾನ್ಯ ಕೊಂಡಲ್ಲಿ ಮಾನ ೧ ಕೊಟ್ಟಲ್ಲಿ ಮಾನ ೧; (SII. XX, 100, 1129).

ಮೂಗುಳ; Mūguḷa: ಮೂರು ಕುಳ; Mūru-kuḷa; ಮೂಗುಳ ಭತ್ತ; (EC. VIII(R), Hn.95, 1170). See Kuḷa above.

ಮೇಟಿಗಂಡುಗ (ಮೇಟಿ-ಖಂಡುಗ); Mēṭi-gaṇḍuga (Mēṭi-khaṇḍuga): ಧಾನ್ಯಗಳನ್ನು ಒಕ್ಕುವಾಗ ಉಪಯೋಗಿಸುತ್ತಿದ್ದ ಅಳತೆ; A measure used at the time of harvesting the crop; ಭತ್ತಮುಮಂ .... ವಣಮುಮಂ ಮೇಟಿಗಂಡುಗಮುಮಂ ಬಿಟ್ಟರು; (KI. IV, 39, 1111).

ಮೇಟಿಗೊಳಗ (ಮೇಟಿ-ಕೊಳಗ); Mēṭi-goḷaga (Mēṭi-koḷaga): ಧಾನ್ಯಗಳನ್ನು ಒಕ್ಕುವಾಗ ಉಪಯೋಗಿಸುತ್ತಿದ್ದ ಕೊಳಗ ಎಂಬ ಅಳತೆ; A measure used at the time of harvesting the crop, called koḷaga; (KI. VI, 73, 1228).

ಮೇಂಟಿವಳ್ಳ, ಮೇಂಟಿ-ಬಳ್ಳ; Mēṇṭi-vaḷḷa, Mēṇṭi-baḷḷa: ಧಾನ್ಯಗಳನ್ನು ಒಕ್ಕುವಾಗ ಬಳಸುವ ಅಳತೆ, ಬಳ್ಳ; The measure used at the time of harvesting, called baḷḷa; (KI. II, 42, 1306).

ಯಿಕುಳ; Yikula: s.a. ಇಕ್ಕುಳ, ಎರಡು ಕುಳ; Ikkuḷa, Eraḍu kuḷa; (APGAS. IX, 9, 1537); See Kuḷa above.

ರಾಶಿಗೊಳಗ, ರಾಸಿಯ ದೇವಗೊಳಗ; Rāśi-goḷaga, Rāsiya dēva-goḷaga: s.a. ಮೇಟಿಗೊಳಗ; Mēṭigoḷaga; ರಾಶಿ ಮಾಡುವಾಗ ಕಾಳನ್ನು ಅಳೆಯಲು ಬಳಸುವ ಅಳತೆ; A

measure for measuring grains on the threshing grounds; (KI. V, 21, 1125); ರಾಸಿಯ ದೇವಗೊಳಗ; (SII. IX, I, 233, 1139).

ವರವೆ; Varave: ಧಾನ್ಯದ ಒಂದು ಅಳತೆ; A unit of measuring grains; ರುದ್ರಪೂಜೆಗೆ ವರುಷಂಪ್ರತಿ ಹಂಜಕೆರೆಯ ಹಾನೆಯಲಿ ವರವೆ ಅಕ್ಕಿಯನೂ ನಡಿಸಿ ಬಹರು; (SII. IX, II, 444, 1433); ಹಾನೆಗಿಂತ ಚಿಕ್ಕ ಅಳತೆ; See ಹಾನೆ; Hāne below.

ವಳಸಪಡಿ; Vaḷasapaḍi: ಒಂದು ವಿಧದ ಅಳತೆ; A type of measure (KI. V, 64, 1173).

ವೀರಗಂಗನ ಕೊಳಗ; Vīragangana koḷaga: ವೀರಗಂಗನೆಂಬವನ ಹೆಸರಿನಲ್ಲಿ ಪ್ರಚಾರದಲ್ಲಿದ್ದ ಅಳತೆಯ ಕೊಳಗ; A measure of capacity, Koḷaga, named after Vīraganga; ಕೇಶವದೇವರ್ಗೆ ವೀರಗಂಗನ ಕೊಳಗದಲು ಸೊಲಗೆಯಱವತ್ತನಳವ; (EC. IX(R), Bl.101, 1173).

ವೊಪ್ಪನೆ (ವೊಪ್ಪಾನೆ);Voppāne (Voppāne): ಒಂದು ಹಾನೆ; One Hāne; ದೇವರಿಗೆ ವೊಪ್ಪನೆ ಅಕಿಯ ತಳವನು; (SII. VII, 304, 1475). See ಹಾನೆ, Hāne below.

ಶಿವಮಾನ; Śivāmāna: s.a. ದೇವಮಾನ; Dēvamāna; ಅನ್ವಹವ್ ಶಿವಮಾನಮಿತಂ ಶಾಲಿತಂಡುಲಾನಾಞ್ಚ ಸಂಚಯಮ್; (EI. XXXIII, 39, 1532 A.D.).

ಸ; Sa: ಸಲಿಗೆ ಶಬ್ದದ ಸಂಕ್ಷಿಪ್ತ ರೂಪ; Abbreviation of Salige; ಉಭಯಂ ಭ್ತ (ಭತ್ತ) ಸ. ೧೫ (EC. VI(O), Md.39, 1496).

ಸಟ್ಟು; Saṭṭu: s.a. ಸಟ್ಟುಗ; Saṭṭuga; ಅಂಗಡಿಯಲು ಸಟ್ಟು ಭತ್ತಮುಮಂ; (SII. IX, I, 269, 1169).

ಸಟ್ಟುಗ, ಸಟ್ಟುಗೆ; Saṭṭuga, Saṭṭuge: ಸೌಟಿನ ಆಕಾರದ ಧಾನ್ಯ ಮತ್ತು ಪ್ರವಾಹೀ ಪದಾರ್ಥಗಳ ಅಳತೆ; A unit of measure like a laddle for measuring grains and liquids; ಅಂಗಡಿಯಲರವಾನಂಗೊಳ್ವ ಸಟ್ಟುಗ ಭತ್ತಮಂ; (KI. II, 10, 1080; SII. XX, 152, 1170)

ಸಟ್ಯುಗ; Saṭyuga: s.a. ಸಟ್ಟುಗ; Saṭṭuga; (KI. II, 10, 1080).

ಸಲಗೆ, ಸಲ್ಲಗೆ; Salage, Sallage: ಧಾನ್ಯಾದಿಗಳನ್ನು ಅಳೆಯುವ ಒಂದು ಅಳತೆ; A unit of measuring grains; ಮಾಣಿಕ್ಯದೇವರಿಗೆ ಸಲಗೆ ಮೂಱು ಕೊಳಗ ಹತ್ತು; (EC. III(R), Nj.137, 1371); ಮಟದ ಚತ್ರಕೆಂದು ಸಲ್ಲಗೆಯುಮ, (SII. XX, 85, 1124) ಹೊಱಗಣಿಂ ಬಂದು ಊಱೊಳಗೆ ಮಾಱಿದ ಭತ್ತ ಸಲಗೆ (Ibid. 82, 1122).

ಸಲಿಗೆ; Salige: s.a. ಸಲಗೆ, ಸಲ್ಲಗೆ; Salige, Sellage; ಪ್ರತ್ಯೇಕ ಸಲಿಗೆ ಎರಡು ಕೊಳಗ ಹತ್ತು; (EC. III(R), Nj.137, 1371).

ಸಂಟುಗ; Sanṭuga: s.a. ಸಟ್ಟುಗ; Saṭṭuga; ಮಹಾಜನಂ ಶ್ರೀಮರುಳೇಶ್ವರದೇವರಿಗೆ ಅಂಗಡಿಯಲರವಾನಂ ಗೊಳ್ವ ಸಂಟ್ಟುಗ ಭತ್ತಮಂ ಕೊಟ್ಟರು; (KI. II, 10, 1080).

ಸಿದ್ದಿ; Siddi: ಧಾನ್ಯಗಳ ಅಳತೆಯ ಒಂದು ಪ್ರಮಾಣ; A unit of measure for measuring grains; (EC. VIII(O), Tl.33, 15th cent.).

ಸಿದೆ, ಸಿದ್ದೆ; Side, Sidde: ದ್ರವ ಮತ್ತು ಧಾನ್ಯ ಪದಾರ್ಥಗಳನ್ನು ಅಳೆಯುವ ಒಂದು ಅಳತೆ; A unit of measure for measuring solids and liquids; (KI. III, I, 11, 1542); ಅಕ್ಷತೆ ದಿನ ೧ ಕ್ಕೆ ಸಿದ್ದೆ ಲೆಕ್ಕ ಅಕ್ಕಿ ಮೂ ೧; (KI. III, I, 15, 1532); ಯೆಂಣೆ ದೀ ೧ ಕ್ಕೆ ಸಿದ್ದೆ ೧೮ ಲೆಕ್ಕ (Ibid.).

ಸೆರೆ; Sere: ಒಂದು ಕೈ ತುಂಬುವಷ್ಟು ಕಾಳಿನ ಪ್ರಮಾಣ; A unit of palmful of grains; ಇಲ್ಲಿಯ ಪಸರಕ್ಕೊಬ್ಬೆರೆ (ಒಂದು ಸೆರೆ); (EC. XI, Dg.59(O), 1280).

ಸೇ; Sē: ಬಹುಶಃ ಸೇರು ಶಬ್ದದ ಸಂಕ್ಷಿಪ್ತ ರೂಪ; ಒಂದು ಅಳತೆ; Probably abbreviation of Sēru; a measure; (EC VI(O) Mg.30, 1496)

ಸೇರೆ, Sēre: ಒಂದು ಅಳತೆಯ ಪ್ರಮಾಣ, ಸೇರು; A unit of measure, Sēru; (APGAS. III, Mn.42, 1116).

ಸೊಟ್ಟಿಗೆ; Soṭṭige: s.a. ಸಟ್ಟುಗ; Saṭṭuga; (SII. XX, 143, 1166).

ಸೊಲಗೆ, ಸೊಲ್ಲಗೆ; Solage, Sollage: ಧಾನ್ಯವನ್ನು ಅಳೆಯುವ ಪ್ರಮಾಣ; A measure of capacity for grains; ಮೆಳಸು ಕೊಂಡಲ್ಲಿ ಕೊಟ್ಟಲ್ಲಿ ಸೊಲ್ಲಗೆ ಒಂದು; (APGAS. III, Al. 32, 1182); ಹನ್ನಿಧ್ಯಾನ್ಯವಂ ಕೊಂಡು ಮಾಱುವವರಲ್ಲಿ ಹೊಂಗೆ ಸೊಲ್ಲಗೆ ಭತ್ತವಂ ಪಡೆದು ಕೊಟ್ಟರು (SII. XVIII, 260, 1283); ಮೆಣಸು ಪೊಂಗೆ ಸೊಲಗೆ (Ibid. XX, 138, 1162).

ಸೊಲಿಗೆ, ಸೊಲ್ಲಿಗೆ; Solige, Sollige: s.a. ಸೊಲ್ಲಗೆ; Sollage; ಸಾಸಿವಿ ಕೊಂಡಲ್ಲಿ ಕೊಟ್ಟಲ್ಲಿ ಸೊಲ್ಲಿಗೆ; (APGAS. III, Al.32, 1182).

ಸೊಳಸ, ಸೋಳಸ; Soḷasa, Sōḷasa: ದ್ರವ ಮತ್ತು ಧಾನ್ಯಗಳನ್ನು ಅಳೆಯುವ ಪ್ರಮಾಣ; A measure of solids and liquids; ದೆವಸವಳವೆಂಣೆ ಗಾಣದಲಿ ಸೊಳಸವೆರಡು (EI. XX, 12(A) 1167).

ಸೊಂಟಿಗೆ; Soṇṭige: s.a. ಸಟ್ಟುಗ; Saṭṭuga; ಪಸರಕೆ ಸೊಂಟಿಗೆ ಜೋಳಂ (KI. V, 46, 1288).

ಸೌಟಿಗೆ Sauṭige: sa ಸಟ್ಟುಗ; Saṭṭuga; ಹಸರದಲ್ಲೊಂದು ಸೌಟಗೆ ಭತ್ತ (HAS. XVIII, 17, 1215).

ಸೌಟು; Sauṭu: s.a. ಸಟ್ಟುಗ; Saṭṭuga; ಸೊಲ್ಲಗೆ ಭತ್ತದ ಸೌಟು; (IND. 9, 1078).

ಹನೆ; Hane: s.a. ಹಾನೆ; Hāne below; (SII. IX, II, 620, 1546).

ಹಾಡ; Hāḍa: ಧಾನ್ಯದ ಒಂದು ಅಳತೆಯ ಪ್ರಮಾಣ; A unit of measuring grains; ಇಲ್ಲಿಯ ಪಸರಕ್ಕೊಚ್ಚರೆ ಸೊಲ್ಲಗೆ ಹಾಡ ಹೊಱಗೊಳೊಳಗಣವಕ್ಕಂ (EC. XI(O), Dg.59, 1280).

ಹಾನೆ; Hāne: ಧಾನ್ಯದ ಹಾಗೂ ಪ್ರವಾಹಿ ಅಳತೆಯ ಒಂದು ಪ್ರಮಾಣ; A unit of measuring grains and liquids; ಭತ್ತ ಹಾನೆ ೪೫ ನೂ ಧಾರೆಯಾಗಿ ಎಱದು ಕೊಟ್ಟರು (KI, III, I, 2, 1304); ಗಡಿಯಿಂದೊಳಗಣ ಕೊಡಗೆ ೧ಕ್ಕೆ ಹಾನೆ ೧೫ (KI. I, 51, 1432).

ಹಿರಿಯ ಸೊಳಸ; Hiriya soḷasa: ಸೊಳಸದ ದೊಡ್ಡ ಪ್ರಮಾಣದ ಅಳತೆ; A bigger capacity measure of soḷasa; ಮೆಣಸು ಹೇರಿಂಗೆ ಹಿರಿಯ ಸೊಳಸ, (SII. IX, I, 172, 1106).

ಹುಡಿಕೆ; Huḍike: ಒಂದು ಅಳತೆ; A measure; ಭತ್ತ ಹುಡಿಕೆ ೧೦; (EC. VI(O), Mg.27, 1520)

ಹೆಗಡೆಗೊಳಗ; Hegaḍe-golaga: ಊರಿನ ಹೆಗ್ಗಡೆಯಿಂದ ಮಾನ್ಯಮಾಡಲ್ಪಟ್ಟ ಕೊಳಗ; A koḷaga approved by the village headman; (SII. XVIII, 240, 1259).

ಹೇಱು; Hēṟu: ಪ್ರವಾಹಿ ಅಥವಾ ಘನ ವಸ್ತುಗಳ ಅಳತೆಯ, ತೂಕದ ಅಥವಾ ಎಣಿಕೆಯ ಒಂದು ಪ್ರಮಾಣ; A unit of measure for measuring counting or weighing liquid or solid articles; ಈ ಶಬ್ದವನ್ನು ಯಾವದೊಂದು ವಸ್ತುವಿನ ನಿರ್ದಿಷ್ಟ ಪ್ರಮಾಣವನ್ನು ಸೂಚಿಸಲು ಉಪಯೋಗಿಸಲ್ಪಡುತ್ತಿದ್ದಿತು; ಎಣ್ಣೆ, ಧಾನ್ಯ ಮೊದಲಾದವುಗಳನ್ನು ಅಳತೆ ಮಾಡಿ ಹೇರಿನ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು. ಅಡಕೆ, ಎಲೆ ಮುಂತಾದವುಗಳನ್ನು ಎಣಿಕೆಯ ಮೇಲಿಂದ ಹೇರಿನ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು. ಉಪ್ಪು, ಸಕ್ಕರೆ, ಮೆಣಸು, ಅರಿಸಿನ, ಜೀರಿಗೆ, ಮೆಂತೆ, ಬೆಲ್ಲ, ಏಲಕ್ಕಿ ಮುಂತಾದವುಗಳನ್ನು ತೂಕದ ಮೇಲಿಂದ ಹೇರಿನ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು; This term was used to denote a particular measure of a commodity. In case of oil, grain etc., the standard of hēṟu was fixed by measuring. In case of betel leaves and nuts, the standard of hēṟu was fixed by counting. In case of salt, sugar, cardmum etc they were weighed and the standard of hēru was fixed.

ಧಾನ್ಯ, ನೆಲ್ಲು, ಜೋಳ, ರಾಗಿ, ನವಣೆ, ಬರಗು, ಸಾವೆ, ಅಂತು ಧಾನ್ಯವಾಱಕ್ಕಂ ಪ್ರತಿ ಹೇಱೊಂದಕ್ಕಂ ಬೇಳೆ, ವಿದಲ ಪೈಕ ಗೋದಿ, ಕಡಲೆ ಎಳ್ಳು, ಅಗಸೆ ಕುಸುಬೆ, ಹೆಸರು, ಉದ್ದು, ತೊಗರಿ, ಹುರುವಲ್ಲಿ ಮುಂತಾದ ಧಾನ್ಯಕ್ಕೆ ಪ್ರತಿ ಹೇಱೊಂದಕ್ಕೆ ಹಾಗ; ಅಕ್ಕಿಯ ಹೇಱೊಂದಕ್ಕೆ ಬೇಳೆ .... ಎಣ್ಣೆ ತುಪ್ಪದ ಹೇಱೊಂದಕ್ಕಂ ಅಡ; ಉಪ್ಪಿನ ಹೇಱೊಂದಕ್ಕೆ ಬೇಳೆ, ಬೆಲ್ಲದ ಹೇಱೊಂದಕ್ಕಂ ಹಾಗ ಸಖ್ಖರೆಯ ಹೇಱೊಂದಕ್ಕಂ ಅಡ್ಡ, ಅಡಕೆಯ ಹೇಱೊಂದಕ್ಕಂ ಹಾಗ; ಎಲೆಯ ಹೇಱೊಂದಕ್ಕಂ ಹಾಗ; ಮೆಣಸಿನ ಹೇಱೊಂದಕ್ಕಂ ಅಡ್ಡ; ಅರಿಸಿನ, ಉಳ್ಳಿ, ಜೀರಗೆ, ಮೆಂಥೆಯ ಡಂವ ಸಬ್ಬಸಿಗೆ; ಸಾಸವೆ ಮುಂತಾದ ಪ್ರತಿ ಹೇಱೊಂದಕ್ಕಂ ಹಾಗ .... ಅಲ್ಲದ ಹೇಱೊಂದಕ್ಕಂ ಹಾಗ; ನಾರಿವಣದ ಕಾಯ ಹೇಱೊಂದಕ್ಕಂ ಹಾಗ; (EC. IX(R), Bl.171, 1382); ಹತ್ತಿಯ ಹೇಱು ೧೦ಕ್ಕೆ ಪಣ ೧ ಕೊಂಡಲ್ಲಿ ಹತ್ತಿ ಪಲ ೫ ಬೆಂಬಡೆಯ ಮಳವೆ ೧೦ ಕೆ ಪಣ ೧ ಅರಿಸಿನದ ಹೇಱು ೧೦ಕ್ಕೆ ಪಣ ೧ ಬೆಲ್ಲದ ಹೇಱು ೧೦ಕ್ಕೆ ಪಣ ೧ ಓಲೆಯ ಮಳವೆ ೧೦ ಕೆ ಪಣ ೧ ಉಪ್ಪಿನ ಹೇಱು ೨೦ ಕೆ ಪಣ ೧ ದವನದ ಹೇಱು ೨೦ ಕೆ ಪಣ ೧ ಅಡಕೆಯ ಹೇಱು ೧೦ ಕೆ ಪಣ ೨ ಮೆಣಸಿನ ಹೇಱು ೧೦ ಕೆ ಪಣ ೨ ಏಲಕ್ಕಿಯ ಹೇಱು ೧೦ ಕೆ ಪಣ ೨ ಕಂಬಳಿಯ ಮಳವೆ ೧೦ ಕೆ ಪಣ ...... ಗೂಲ ಮಳವೆ ೧೦ ಕಂಪಣ ೨ ಸಂಭಾರದ ಹೇಱು ೧೦ ಕೆ ಪಣ ೨ (EC. IX(O), Db.31, 1267).

೨. ತೂಕಗಳು

2. WEIGHTS

ಕಣಂಜು, ಕಳಂಜು; Kaṇanju, Kaḷanju: ಸುಗಂಧ ಮತ್ತು ಇತರ ದ್ರವ್ಯಗಳನ್ನು ತೂಗುವ ತೂಕದ ಪ್ರಮಾಣ; A weight used for weighing incenses and other valuable articles; ಕುಂಕುಮದ ಕಣಂಜು ಎರಡು ಕಸ್ತೂರಿ ಕಣಂಜು ತಟ್ಟುಪುನಗು ಕಣಂಜು ...... (SII. IX, II, 489, 1513-14). ಶ್ರೀಗಂಧದ ಚೆಕ್ಕೆ ೧೬ ಕರ್ಪೂರದ ಕುದಿರು ೬ ಕಸ್ತೂರಿ ಕಳಂಜು ೩೦ ಕುಂಕುಮದ ಹೂ ಕಳಂಜು ೧೭೦; (Ibid. 550, 1532).

ಕುದಿರು; Kudiru: ಒಂದು ತೂಕದ ಪ್ರಮಾಣ; A unit of weight; ಕರ್ಪೂರದ ಕುದಿರು ೬; (SII. IX, II, 550-51, 1532).

ಕುರುಜು; Kuruju: ಒಂದು ಚಿಕ್ಕ ತೂಕ; Small weight; (SII, IX, II, 547, 1532).

ಕೂರು; Kūru: ಒಂದು ತೂಕದ ಪ್ರಮಾಣ; A measure of weight; ಇಪ್ಪಣ ಸುಗಂಧಗಳಿಗೆ ಪಚ್ಚೆಕಪ್ಪುರ ಕೂರು ಒಂದಕ್ಕೆ ಹಾಗ; (EC. IX(R). Bl.171, 1382).

ತೊಲೆ; Tole: ಒಂದು ತೂಕದ ಪ್ರಮಾಣ; A measure of weight; ಒಸಗೆ ಉತ್ಸಾಹಂಗಳ್ಗೆ ಸಮೂಹಂ ಒರ್ತೊಲೆ; (EI. XIV, 14, 725).

ಪಲ, ಫಲ; Pala, Phala; ಒಂದು ತೂಕದ ಪ್ರಮಾಣ; A measure of weight: (EI. XIV, 14, 725); ತೂಗಿ ಮಾಱುವ ಭಂಡಂಳ್ಗೆ ಹೇಱಿಂಗಯ್ವಲಂ (EI. XIII, 4, 1135); ಶ್ರೀಖಂತಸ್ಯ ಪಲಾನಿ ಅರಸಿನ ಹೇಱುಂಗೆ ಫಲ ೨ (EC. XII(O), Pg.43, 1150).

ಪಾಗ; Pāga: ಒಂದು ತೂಕ; Weight; ಮಂಗರಾಜ ನಿಘಂಟು; 14th cent.

ಮಣ; Maṇa: ತೂಕದ ಒಂದು ಪ್ರಮಾಣ; A unit of weight; ಕಾಯಿ ಮೇಲೋಗರ ಮಣ; (SII. IV, 266, 1545).

ಸೇರು; Sēru: ತೂಕದ ಒಂದು ಪ್ರಮಾಣ; A unit of weight, a seer; ಬೆಲ್ಲ ಸೇರು ೧೦ಕ್ಕೆ (SII. IX, II, 668, 1559).

ಹಲ; Hala: ಒಂದು ತೂಕದ ಪ್ರಮಾಣ; ಕುಳದ ಒಂದು ನಾಲ್ಕಾಂಶ; A measure of weight, ¼ of a kuḷa; ಪವಿತ್ರಾರೋಪಣಕ್ಕೆ ಇಂನೂಱು ಹಲ ತೂಕದ ನೂಲುಂ (EC. XII(O), Ck.2, 1261); ಸಖರೆಯ ಹಲ ೧೫ ಗಂಧದ ಹಲ ೧೦ (SII, IX, II, 550-52, 1532); (Cf. Kittel, ಹಲ; Hala).

೩. ಎಣಿಕೆ

3. COUNTING

ಅಚ್ಚು; Achchu: ನಿರ್ದಿಷ್ಟಪಡಿಸಿದ ಆಕಾರದ ಬೆಲ್ಲದ ಅಚ್ಚು; Moulded piece of jaggery of a specified size; ಬೆಲ್ಲದ ಭಂಡಿಗೆ ಬೆಲ್ಲದಚ್ಚು ಹದಿನಯ್ದು ಆ ಹೊಱೆಗ ಅಚ್ಚೊಂದು; (EI. XIII, 3A, 1204).

ಎಣಿಕೆಯ ಖಂಡ; Eṇikeya khaṇḍa: ಎಣಿಸಿ ಅಳೆಯುವ ಪ್ರಮಾಣ; A unit of measuring by counting; ಎಣಿಕೆಯ ಖಂಡಕ್ಕೆ ಹೊಂಗೆ ಬೆಳ್ಳಿಯ ಹಾಗ; (JSI. II, 1171).

ಕಟ್ಟು; Kaṭṭu: ನಿರ್ದಿಷ್ಟ ಸಂಖ್ಯೆಯ ವೀಳ್ಯದ ಎಲೆಗಳ ಕಟ್ಟು; A pack of a specified number of betel leaves; ಎಲೆಯ ಸುಂಕ ಮಾವಟಿಗೆ ಕಟ್ಟು ೨ (IND. 3, 1047).

ಕಡಗೆ; Kaḍage: ನಿರ್ದಿಷ್ಟ ಸಂಖ್ಯೆಯ ಬಟ್ಟೆಗಳ ಒಂದು ಗಂಟು; A bundle of specified number of cloth; ಹೊಱಗಣಿಂ ಬಂದ ಸೀರೆಯ ಕಡಗೆಗೆ ವೀಸವೊಂದು; (EI. XIII, 3A, 1204).

ಕೌಳಿಗೆ; Kauḷige: ಕವಳಿಗೆ, ನಿರ್ದಿಷ್ಟ ಸಂಖ್ಯೆಯ ವೀಳ್ಯದೆಲೆಗಳ ಒಂದು ಕಟ್ಟು; ಹೇರಿಗಿಂದ ಚಿಕ್ಕದು; A bundle of specified number of betel leaves, smaller in denomination than the hēru; ಎಲೆಯ ಹೇಱಿಂಗೆ ವೊಂದು ಕೌಳಿಗೆ ಎಲೆ (EC. VI(O), Tk.80, 1278).

ಪೊದಕೆ; Podake: ನಿರ್ದಿಷ್ಟ ಸಂಖ್ಯೆಯ ಬಟ್ಟೆಗಳ ಗಂಟು. A pack of fixed number of cloth pieces; ಸೀರೆಯ ಸುಂಕ ಪೊದಕೆಯ ಪಾಗ ೨ (IND. 3, 1047).

ಸೊಜ್ಜ; Sojja: ಬಹುಶಃ ನಿರ್ದಿಷ್ಟ ಸಂಖ್ಯೆಯ ಅಡಕೆಯ ಗಂಟು; Probably a pack of specified number of betel nuts; ಅಡಕೆಯಲ್ಲಿ ಸೊಜ್ಜಮುಮಂ ಎಲೆ ಹೇಱಿಂಗೆ

೧೦೦ ಮಂ (SII. IX, I 269, 1169); ನಾಸಿಕಕ್ಕೆ ಪನ್ನೊಂದಡಕೆಯ ಸೊಜ್ಜಮುಮಂ; (EI. XVIII, 22, 1224).

ಹೇಱು; Hēṟu: ನಿರ್ದಿಷ್ಟ ಸಂಖ್ಯೆಯ ವೀಳ್ಯೆದೆಲೆಗಳ ಕಟ್ಟು; A bundle of betel leaves, in specified number; ತಂಬುಲಿಗ ಸಾಸಿರ್ವರು ಹೇಱಿಂಗೆ ನೂಱೆಲೆಯುಮಂ ಪೊಱೆಗಯ್ವತ್ತೆಲೆಯುಮಂ ಸಲಿಸುವರು; (SII. XX, 112, 1144). ಈ ಉದಾಹರಣೆಯಲ್ಲಿ ಒಂದು ಹೇರಿಗೆ ಎರಡು ಹೊರೆಗಳಾಗುತ್ತವೆ. In this case two Hores made a Hēru. See also ಹೇಱು, Hēru under solid measures.

ಹೊಱೆ; Hoṟe: ನಿರ್ದಿಷ್ಟ ಸಂಖ್ಯೆಯ ವೀಳ್ಯೆದೆಲೆಗಳ ಗಂಟು, ಬಹುಶಃ ತಲೆಯ ಮೇಲೆ ಹೊರುವಂಥದು; A bundle of specified number of betel leaves, probably carried on the head; ತಂಬುಲಿಗ ಸಾಸಿರ್ವ್ವರು ಹೇಱಿಂಗೆ ನೂಱೆಲೆಯುಮಂ ಹೊಱೆಗಯ್ವತ್ತೆಲೆಯುಮಂ ಸಲಿಸುವರು. (SII, XX, 112, 1144); ದೇವರಾಯ ಯಲೆಯ ಹೊಱೆಗೆ ೫೦ ಹೇಱಿಂಗೆ ೧೦೦ (EC. XII(O), Ck.11, 1172). ಈ ಉದಾಹರಣೆಯಲ್ಲಿಯೂ ಒಂದು ಹೇರಿಗೆ ಎರಡು ಹೊರೆಗಳಿಂದಾಗುತ್ತದೆ. In this example also two Hore make one Hēru.

೪. ಹೊರೆ, ಗಂಟು, ಮೊಟ್ಟೆ, ತಲೆಹೊರೆ ಇತ್ಯಾದಿ

4. PACKAGES, BUNDLES, HEAD LOADS ETC.

ಅರವಟ್ಟದ ಹೇಱು; Aravaṭṭada hēru: ಹೇರಿನ ಒಂದು ಪ್ರಕಾರ; A type of Hēru; ಅರವಟ್ಟದ ಹೇಱು; (SII. XV, 164, 1220).

ಎತ್ತಿನ ಹೇಱು; Ettina hēṟu: ಎತ್ತುಗಳ ಮೇಲೆ ಸಾಗಿಸುವ ವಸ್ತುಗಳ ಭಾರದ ಪ್ರಮಾಣ; A unit of weight carried by oxen; ಎತ್ತಿನ ಹೇಱಿಂಗೆ ಹತ್ತಡಕೆ; (APGAS. III, Mn.42, 1116).

ಕತ್ತೆಯ ಹೇಱು; Katteya hēru: ಕತ್ತೆಗಳ ಮೇಲೆ ಸಾಗಿಸುವ ವಸ್ತುಗಳ ಭಾರದ ಪ್ರಮಾಣ; A unit of weight carried by donkies; ಕತ್ತೆಯ ಹೇಱಿಂಗೆ ಐದಡಕೆ; (APGAS. III, Mn.42, 1116).

ಕಂಪೆ; Kampe: ಕುಂಬಾರರು ತಲೆಯ ಅಥವಾ ಹೆಗಲ ಮೇಲೆ ಹೊರುವ ಮಡಿಕೆಗಳ ಹೊರೆ; A load of earthern pots carried by potters; ಕುಂಬಾರರ ಕಂಪೆಗೆ ಮಡಕೆ ೧; (SII. XX, 299, 12th cent.).

ಜವಳ; Javaḷa: ತೂಕದ ಒಂದು ಪ್ರಮಾಣ; A unit of weight; ಅಡಕೆ ಹೇಱಿಂಗೆ ಅಯ್ವತ್ತು ಜವಳಕ್ಕಿರ್ಪ್ಪತ್ತು ಮೆಳಸಿನ ಹೇಱಿಂಗೆ ಮೆಳಸಿನೊಮ್ಮಾನಂ ಆ ಜವಳಕ್ಕೆ ಅರವಾನಂ; (EI. XIII, 3A, 1204).

ತಲೆವೊರೆ; ತಲೆಹೊರೆ; Tale-vore, Tale-hore: ತಲೆಯ ಮೇಲೆ ಹೊತ್ತು ಒಯ್ಯುವ ಒಂದು ಹೊರೆ; Head load; ಎಲೆ ಹೇಱಿಂಗೆ ಮೂಱು ತಲೆವೊಱೆಗೈವತ್ತು; (EI. XIX, 4A, 1136) ತಲೆವೊಱೆಗೆ ನಾಲ್ಕಕ್ಕಂ; (Ibid.).

ಪೇಱು; Pēṟu: s.a. ಹೇಱು, Hēṟu; ವಸ್ತುಗಳ ಭಾರದ ಒಂದು ಪ್ರಮಾಣ; A unit of weight; ಅಡಕೆಯ ಪೇಱಿಂಗೆ ಎಲೆಯ ಪೇಱು; (EC. XI(O), Jl.9, 1111).

ಭಾರ; Bhāra: ತೂಕದ ಒಂದು ಪ್ರಮಾಣ; A unit of weight; ಮೆಣಸಿನ ಭಾರಕ್ಕೊಬ್ಬಳ; (EC. VI(O) Tk.19, 1158); ಮಾಸೆ ಮಾಸೇ ತತಃ ಪ್ರಾಪ್ಯ ವ್ರೀಹೀಣಾಂ ಭಾರಪಂಚಕಂ; (EI. XXXIII, 39, 1532).

ಮಳವೆ; Maḷave: ಹತ್ತಿ ಮುಂತಾದವುಗಳ ಒಂದು ತೂಕದ ಪ್ರಮಾಣದ ಗಂಟು; A bundle of cotton etc. of a particular weight; ಒಕ್ಕಲು ಪಣಂ ಮೂರು ಪತ್ತಿಯ ಮಳವೆ ಪನ್ನೆರಡು; (EI. XVI, 24, 1077); ಹತ್ತಿಮಳವೆಗಯ್ವಲಂ (EI, XIX, 4A, 1136); ಹತ್ತಿಯ ಮಳವೆ ೧೦೦ಕ್ಕೆ (SII. XX, 118, 1148).

ಮಾವಟೆ; Māvaṭe; ವೀಳ್ಯದ ಎಲೆಗಳ ಕಟ್ಟುಗಳ ದೊಡ್ಡ ಗಂಟು; A big bundle of small packs of betel leaves; ಎಲೆಯ ಸುಂಕ ಮಾವಟೆಗೆ ಕಟ್ಟು ೨; (IND. 3, 1047).

ಮುಡಿ; Muḍi: ನಿರ್ದಿಷ್ಟಪಡಿಸಿದ ಅಳತೆಯ ಭತ್ತದ ಅಥವಾ ಅಕ್ಕಿಯ ಮೂಟೆ; a load of rice or paddy of specified measure; ಅಕಿನಾಡ ಮುಡಿ; (SII. VII, 383, 1414).

ಮುಡೆ; Muḍe: s.a. ಮುಡಿ; Muḍi; ಆ ಗದ್ದೆಯಿಂದ ಧರ್ಮಕ್ಕೆ ಅಕ್ಕಿ ಮುಡೆ ೨೨; (SII. IX, II, 512, 1520; Ibid, VII, 264, 1542).

ಮೊಟ್ಟೆ; Motte: ಬೆನ್ನ ಮೇಲಾಗಲಿ, ತಲೆಯ ಮೇಲಾಗಲಿ ಒಯ್ಯುವ ಹೊರೆ; Load carried on the back or head; ಕೊಂಡ ಹೊರಗಣ ಭತ್ತದ ಮೊಟ್ಟೆ ೧; (IND. 9, 1079).

ಮೊಳವೆ; Moḷave: ಎತ್ತು, ಕತ್ತೆ ಮುಂತಾದ ಪ್ರಾಣಿಗಳ ಮೇಲೆ ಹೇರುವ ವಸ್ತುಗಳ ನಿರ್ದಿಷ್ಟಪಡಿಸಿದ ತೂಕ; A specified weight carried on the backs of the animals such as ox, donkey etc.; ಎತ್ತಿನ ವೊಳವೆಗಡ್ಡ ಕತ್ತೆಯ ವೊಳವೆಗೆ ಹಾಗ; (EC. IX(R), Bl.409, 1167).

ಸೂಡು; Sūḍu: s.a. ಸಿವುಡು; Sivuḍu; ಕಟ್ಟು; bundle; ಓಲೆಯ ಹೇಱಿಂಗೆ ಓಲೆಯ ಸೂಡೆರಡು ಆ ಹೊಱೆಗೆ ಸೂಡೊಂದು; (EI. XIII, 3A, 1204).

ಹಗರ; Hagara: ಕಬ್ಬಿನ ಒಂದು ಹೊರೆ; A load of Sugar cane; ಕರ್ವಿನ ಹಗರಕ್ಕೆ ಒಂದು ಕರ್ವು; (EI. XIII, 3A, 1204).

ಹಸರ; Hasara: ಎಣಿಕೆಯ ಒಂದು ಪ್ರಮಾಣ; A unit of counting; ಅಡಕೆ ಹೇಱಿಂಗೆ ಐವತ್ತು ಜವಳಕಿರ್ಪ್ಪತ್ತು ಹಸರಕಯ್ದು ಎಲೆ ಹೇಱಿಂಗೆ ನೂಱು ತಲೆವೊಱೆಗಯ್ವತ್ತು ಹಸರಕ್ಕಿರ್ಪ್ಪತ್ತಯ್ದು; (EI. XIX, 4A, 1136).

ಹೆಡಗೆ; Heḍage: ಕಾಳುಗಡಿ, ಕಾಯಿಪಲ್ಲೆ ಮುಂತಾದವುಗಳನ್ನು ಒಯ್ಯುವ ನಿರ್ದಿಷ್ಟ ಪ್ರಮಾಣದ ಬುಟ್ಟಿ, ಒಂದು ಅಳತೆಯ ಪ್ರಮಾಣ; A basket of specified size to carry grain, vegetables etc. A unit of measure; ಹೆಡಗೆಗೆ ೪ ಕಾಯಿ ಹೆಡಗೆಗೆ ಒಂದು ಹಿಡಿ ಬಾಡು; (SII. XX, 183, 1197).

ಹೊಱೆ; Hoṟe: ವ್ಯಾಪಾರದ ವಸ್ತುಗಳನ್ನು ಕಟ್ಟಿದ ನಿರ್ದಿಷ್ಟ ಅಳತೆಯ ಆಕಾರದ ಗಂಟು, ತಲೆಯ ಮೇಲೆ ಹೊತ್ತುಕೊಂಡು ಹೋಗುವಂಥದು; A bundle of specified measure or size containing mercandise goods carried on head. ಎಲೆ, ಅಡಿಕೆ, ಇತ್ಯಾದಿಯಾಗಿ ಇತರ ಅನೇಕ ವಸ್ತುಗಳ ಸಂಬಂಧದಲ್ಲಿ ಈ ಪದವನ್ನು ಅಸಂಖ್ಯ ಶಾಸನಗಳಲ್ಲಿ ಉಪಯೋಗಿಸಲಾಗಿದೆ. The term is used in numerous inscriptions in relation to areca nut, betel leaf and various other commodities. ದೇವರಾಯ ಯೆಲೆಯ ಹೊಱೆಗೆ ೫೦ ಹೇಱಿಂಗೆ; (EC. XII(O), Ck.11, 1172).

೫. ಅಂತರದ ಅಳತೆ

5. MEASUREMENT OF DISTANCE

ಕೋಶ; Kōśa: s.a. ಕ್ರೋಶ; Krōśa, ಅಂತರದ ಒಂದು ಅಳತೆ; A measure of distance; (EC. VIII(O), Sb.179, 1189).

ಕ್ರೋಶ; Krōśa: ಅಂತರದ ಅಳತೆ, ಎರಡು ಮೈಲುಗಳ ಅಂತರ ಎಂದು ಪರಿಗಣಿಸಲಾಗಿದೆ; A measure of distance; Supposed to be a distance of 2 miles; ಒಂದು ಯೋಜನದ ೩/೪ ಭಾಗ; 3/4 of a Yōjana; ಕಾಲದ ಅಳತೆ; A measure of time; (Apte's Sk.Eng.Dic., Krōśa).

ಗವ್ಯೂತಿ; Gavyūti: ಗಾವುದ; Gāvuda; ಒಂದು ಅಂತರದ ಅಳತೆ; A measure of distance; ಪೂರ್ವದಿಗ್ವಿಭಾಗೇ ಗವ್ಯೂತಿದ್ವಯೇ ನಿಡುಬರುನಾಮ ಗ್ರಾಮಂ; (EI. XVIII, 5, 10th cent.).

ಗಾವುದ; Gāvuda: s.a. ಗವ್ಯೂತಿ; Gavyūti; (ಬ.ಪು. Ba.Pu. II, 5, 13, 14th cent.).

ಪುಟ್ಟ; Puṭṭa: ಒತ್ತಿ ತೋರುವ ಹೆಜ್ಜೆ; ಸುಮಾರು ಒಂದು ಫೂಟು ಅಳತೆ; A foot print; About a foot in length; ಊರಿಂದ ಮೂನೂರು ಪುಟ್ಟವುಂ; (EC. III(R), Hg.32, 1053).

೬. ಕಾಲಮಾಪನ

6. MEASUREMENT OF TIME

ಘಳಿಗೆ; Ghaḷige: ಕಾಲದ ಅಳತೆ; ೬೦ ಪಲ(ಳ)ಕ್ಕೆ ಒಂದು ಘಳಿಗೆ (೨೪ ನಿಮಿಷ); A unit of measure of time equal to sixty pala (24 minutes); ಧನು ಲಗ್ನದ ಪೂರ್ವಾಣ್ಣದಾಱು ಘಳಿಗೆ; (EC. II(R), 156, 1115); ಆ ದೇವರಲ್ಲಿ ಬೈಗ ನಾಲ್ಕು ಘಳಿಗೆ ಪುರಾಣ ಹೇಳುವರು; (EC. XII(O), Ck.2, 1261).

ತಿಂಗಳು; Tingaḷu: ಸಾಮಾನ್ಯವಾಗಿ ಮೂವತ್ತು ದಿನದ ಒಂದು ಕಾಲಮಾನ; A time unit of generally thirty days; ಮತ್ತೆರಡು ತಿಂಗಳು ತನ್ನನಮೇಕಭಾವದಿಂ; (KI. II, 38, 1235).

ಪಲ; Pala: ಘಳಿಗೆಯ ಅರವತ್ತನೆಯ ಭಾಗ; Sixtieth part of a ghaḷige (೨ ೧/೨ ಪಲ = ೧ ನಿಮಿಷ); (EI. XV, 10, 160).

ಪ್ರಹರ; Prahara: ಮೂರು ತಾಸುಗಳ ಅವಧಿ; -A period of three hours; (EC. IX, Cn.93, 1100).

ಯುಗ; Yuga: (1) ಕಾಲಮಾನದ ಒಂದು ಅಳತೆ (ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಇವು ನಾಲ್ಕು ಯುಗಗಳು); Ancient way of measuring period (Kṛitha, Trēta, Dvāpara and Kali are 4 Yugas); (EI. XV, 10) (2) ಜೈನ ಪರಂಪರೆಯಂತೆ ಐದು ವರ್ಷದ ಒಂದು ಕಾಲಮಾನ; A unit of five years according to Jaina tradition; ಜಿನ ಶಾಸನದೊಳ್ ವರ್ಷಮಯ್ದು ವರ್ಷದೊಳೆ ಯುಗಂ; (ಪಂ.ರಾ. Paṁ.Rā. I, 52, 12th cent.).

ಶ್ರಾಹೆ; Śrāhe: ಒಂದು ವರ್ಷ; ಹನ್ನೆರಡು ತಿಂಗಳುಗಳ ಕಾಲದ ಒಂದು ಅವಧಿ; A year or a period of 12 months); ವಮಾನ್ಯಕಾಱವರ್ಮೂಱು ಶ್ರಾಹೆಗೆ ಪರಿಯರ ಗದ್ಯಾಣವನ್ತಿಱುವರ್; (SII. IX, I, 77, 992); ವಿಕಾರಿ ಸಂವತ್ಸರದ ಶ್ರಾಹೆಯ ಶ್ರಾವಣ ಪುಣ್ಣಮೆ ಮಂಗಳವಾರದಂದು; (Ibid. 124, 1059).

೭. ಭೂಮಾಪನ

7. LAND MEASURE

(ಅ) ಒಕ್ಕಲುತನದ ಭೂಮಿಯ ಅಳತೆ

(A) Agricultural land

ಅಡಿ; Aḍi: ಕಾಲ ಅಳತೆ; The length of a foot; ೧೨ ಅಡಿಯ ಆಳದಲ್ಲಿ; (EC. IX(O), Db.56, 1418).

ಅಣ್ಣಿಗೆಱೆಯ ಕೋಲು; Aṇṇigeṟeya kōlu: ಅಣ್ಣಿಗೇರಿಯಲ್ಲಿ ಪ್ರಚಲಿತವಿದ್ದ ಪ್ರಮಾಣಿತ ಅಳತೆಯ ಕೋಲು; Standard measuring rod prevalent in use in Aṇṇigeri; (SII. XV, 54, 12th cent.).

ಅಯಿಗಂಡುಗ ಬೆದ್ದಲು ಕಂಬ; Ayigaṇḍuga-Beddalu-kaṁba: ಐದು ಖಂಡುಗ ಬೀಜ ಬಿತ್ತುವ ಅಳತೆಯ ಹೊಲ; Agricultural land with sowing capacity of five Khaṇḍugas of seeds; (EC. III(R), Gu.135, 1492).

ಅಯ್ಗುಳ; Ayguḷa: ಆಯ್ದು ಕುಳ; Aidu kuḷa; ಐದು ಕುಳ ಬೀಜ ಬಿತ್ತುವ ಅಳತೆಯ ಹೊಲ; Agricultural land with the capacity of sowing five kuḷas of seeds; (EC. IX(O), Ht.86, 720).

ಅರುವತ್ತು ಗೇಣ ಘಳೆ; Aṟuvattu-gēṇa-ghaḷe: ಅರುವತ್ತು ಗೇಣು ಉದ್ದದ ಅಳೆಯುವ ಕೋಲು; Measuring rod 60 spans in length; (SII. IX, I, 229, 1134).

ಅರುವತ್ತು ನಾಲ್ಗೇಣ ಘಳೆ; Aṟuvattunāḷ-gēṇa-ghaḷe: ಅರವತ್ತು ನಾಲ್ಕು ಗೇಣು ಉದ್ದದ ಅಳತೆಯ ಕೋಲು (ಗಳ); Measuring rod sixty spans in length; (SII. IX, I, 230, 1134).

ಅರೆಮತ್ತರು; Are-mattaru: ಅರ್ಧ ಮತ್ತರು; Half of a mattar; (SII. XX, 31, 1044-45). See ಮತ್ತರ್ below.

ಅಳತೆಯ ಕೋಲು; Aḷateya kōlu: ಹೊಲಗಳನ್ನು ಅಳೆಯುವ ಕೋಲು (ಅಳತೆಗೋಲು); Measuring rod for measuring agricultural land; (EC. X(O), Mb.173, 1503).

ಅಳತೆಯ ಘಳೆ; Aḷateya ghaḷe: s.a. ಅಳತೆಯ ಕೋಲು; Aḷateya kōlu; (EC. VI(O), Tk.83, 1230).

ಇಪ್ಪತ್ತೇಳು ಗೇಣ ಕೋಲು; Ippattēḷu gēṇa-kōlu: ಇಪ್ಪತ್ತೇಳು ಗೇಣು ಉದ್ದದ ಅಳತೆಯ ಕೋಲು; Measuring rod of 27 spans in length; (SII. XX, 302, 12th cent.).

ಇಪ್ಪತ್ತೇಳು ಗೇಣ ಘಳೆ; Ippattēḷu-gēṇa-ghaḷe: s.a. ಇಪ್ಪತ್ತೇಳು ಗೇಣ ಕೋಲು; Ippattēḷu-gēṇa-kōlu; (SII. XV, 126, 1207).

ಇರ್ಪತ್ತೆಂಟು ಗೇಣ ಕೋಲು; Īrpatteṇṭu gēṇa-kōlu: ಇಪ್ಪತ್ತೆಂಟು ಗೇಣು ಉದ್ದದ ಅಳತೆಯ ಕೋಲು; Measuring rod of 28 spans in length; (SII. XX, 69, 1107). ವಿವಿಧ ಅಳತೆಯ ಕೋಲುಗಳ ಅನೇಕ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. References to numerous rods of different lengths are found in inscriptions.

ಊರ ಕೋಲು; Ūra-kōlu: ಊರಿನಲ್ಲಿ ಪ್ರಮಾಣಿತ ಮಾಡಿದ ಅಳತೆಯ ಕೋಲು; Local standard measuring rod; ಬಿಟ್ಟ ಭೂಮಿಯ ಪ್ರಮಾಣ ಊರಕೋಲ ಸಮಕಟ್ಟಿನೂರಿಂ; (SII. XV, 73, 1189).

ಎಡೆನಾಡ ದಂಡಮಾನ; Eḍenāḍa-daṇḍamāna: ಎಡೆನಾಡಿನಲ್ಲಿ ಪ್ರಚಲಿತವಿದ್ದ ಭೂಮಿಯ ಅಳತೆಯ

ಕೋಲು; Rod for measuring land used in Eḍenāḍu; (EI. III, 29, 1194).

ಎರಡು ಖಣ್ಡುಗ ವೆದೆಗಳ್ದೆ; Eraḍu-khaṇḍuga-vede-gaḷde: ಎರಡು ಖಂಡುಗ ಬೀಜ ಬಿತ್ತುವ ಅಳತೆಯ ಗದ್ದೆ; Wet land with the sowing capacity of two Khaṇḍugas of seeds; (SII. IX, I, 99, 1044).

ಎಳರಾವೆಯ ಘಳೆ; Eḷarāveya-ghaḷe: ಎಳರಾವೆ ಎಂಬ ಊರಿನಲ್ಲಿ ಪ್ರಚಲಿತವಿದ್ದ ಘಳೆ (ಕೋಲು); A measuring pole used in a place called Eḷarāve; ಎಳರಾವೆಯ ಘಳೆಯೊಳ್ ಕಿಱಿಯ ಬೆಳ್ಳುಂಬಟ್ಟೆಯ ಪೊಲದೊಳ್ ಬಿಟ್ಟ ಕೆಯ್ಮತ್ತರ್ ನೂಱು; (EI. XII, 32B, 1077).

ಐವತ್ತ ಎರಡು ಗೇಣು ಘಳೆ; Aivatta-Eraḍugēṇu-ghaḷe: ಐವತ್ತು ಎರಡು ಗೇಣು ಉದ್ದ ಅಳತೆಯ ಕೋಲು; A measuring rod fifty two spans in length; (SII. XV, 187, 1248).

ಒಕ್ಕಳ ಗದ್ದೆ; Okkaḷa gadde: ಬಹುಶಃ ಒಕ್ಕುಳ ಗದ್ದೆ; probably okkuḷa gadde; ಒಂದು ಕುಳ ಬೀಜ ಬಿತ್ತುವ ಅಳತೆಯ ಗದ್ದೆ; Wet land with sowing capacity of one kuḷa of seeds; (SII. IX, I, 24, 936).

ಒರಂಟರಮಲ್ಲನ ಘಳೆ; Oraṁṭaramallana ghaḷe: ಒರಂಟರಮಲ್ಲನೆಂಬವನ ಹೆಸರಿನಲ್ಲಿ ಪ್ರಸಿದ್ಧವಾದ ಕೋಲು; A measuring rod named after Oraṁṭaramalla; ಒರಂಟರಮಲ್ಲನ ಘಳೆಯೊಳ್ ಅಳೆದು ಬಿಟ್ಟ ಕರಿಯ ನೆಲಂ ಮತ್ತರ ನೂಱೈವತ್ತು; (EI. XII, 32B, 1077).

ಕಚ್ಛವಿಯ ಘಳೆ; Kachchhaviya ghaḷe: ಕಚ್ಚವಿ (ಕಚವಿ, ಹಿರೇಕೇರೂರ ತಾಲೂಕ, ಹಾವೇರಿ ಜಿಲ್ಲೆ) ಎಂಬ ಊರಿನಲ್ಲಿ ಬಳಕೆಯಲ್ಲಿದ್ದ ಕೋಲು; A measuring rod prevalent in the village Kachchavi (Kachavi in Hirekerur Taluk, Haveri District); (KI. IV, 12, 1073) ಕಡಂಬಗಟ್ಟದ ಕೆಳಗೆ ಮುಟ್ಟವಯಲೊಳಗೆ ಬಿಟ್ಟ ಗಟ್ದೆ ಕಚ್ಚವಿಯ ಗಳೆಯಲು ಕಮ್ಮಂ ೨೫; (EC. VII(O), Sk.14, 1089).

ಕಡಿಮಂಣ ಕೋಲು; Kaḍimaṁṇa-kōlu: ಒಂದು ವಿಧದ ಅಳತೆಯ ಕೋಲು; A type of measuring rod; (SII. XX, 248, 1228).

ಕಂಬ, ಕಂಭ; Kaṁba, Kaṁbha: ಒಕ್ಕಲುತನದ ಭೂಮಿಯ ಒಂದು ನಿಶ್ಚಿತ ಪ್ರಮಾಣ; A unit of Agricultural land; ಬೆಳವಾಡಿಯ ಘಳೆಯಲು ಕೊಟ್ಟ ಕಂಬ ನೂರು ೧೦೦; (EC. IX(R), Bl.560, 1207; Ibid. VI(O), Kd.2, 12th cent.) ಮತ್ತರಿನ ೧೦೦ನೇ ಭಾಗ; 100th part of a mattar; (EC. VIII(O), Sb.135). See **ಮತ್ತರ್,** mattar below.

ಕಮ್ಮ; Kamma: s.a. ಕಂಬ; Kamba; (SII. XVIII, 48, 1033).

ಕಾಲಗೆ; Kālage: ಒಕ್ಕಲುತನದ ಭೂಮಿಯ ಒಂದು ಅಳತೆ; A unit of agricultural land; ಪಿಂಟಗಟಿಗೆರೆಯ ಗದ್ದೆ ಕಾಲಗೆ ಹತ್ತು ೧೦; (EC. V(O), Cn.228, 1154).

ಕಿರಿಯ ಕೋಲು; Kiriya kōlu: ಸಣ್ಣ ಪ್ರಮಾಣದ ಅಳತೆಯ ಕೋಲು; Measuring rod of small size; ಸಿಂಗನಕಟ್ಟೆಯಲು ಕಿಱಿಯ ಕೋಲಲು ಮೂಱು ಮತ್ತರು ಗಟ್ದೆಯುಮಂ ಬಿಟ್ಟರು; (EI. IV, 6C, 12th cent.). Cf. ಪಿರಿಯ ಕೋಲು, Piriya kōlu below.

ಕುಳ; Kuḷa: ಒಕ್ಕಲುತನದ ಭೂಮಿಯ ಒಂದು ಅಳತೆ; A unit of agricultural land; ನಾಯಕಗಯ್ಯುಗ್ಗಳ ಮಣ್ಣು (ಐಗುಳ = ಐದು ಕುಳ); (EC. IX(O), Bn.40, 9th cent.).

ಕುಳಿ; Kuḷi: ಒಕ್ಕಲುತನದ ಭೂಮಿಯ ಒಂದು ಅಳತೆ; Unit of agricultural land; ಈ ಪದ ತಮಿಳು ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿದ್ದಿತು; This term was more prevalent in Tamil area; (EC. X(O), Mb.42 (a), 1100).

ಕುಂದೂರು ಕೋಲು; Kundūru-kōlu: ಕುಂದೂರು ಎಂಬಲ್ಲಿ ಪ್ರಚಲಿತವಿದ್ದ ಪ್ರಮಾಣಿತ ಅಳತೆಯ ಕೋಲು; A standard measuring rod prevalent in the place called Kundūr; (EI. XII, 28B, 1126).

ಕೂಱಗೆ; Kūṟage: (1) ಹೊಲದ ಅಳತೆಯ ಪ್ರಮಾಣ; A unit of agricultural land; (2) ಹೊಲದಲ್ಲಿ ಬೀಜ ಬಿತ್ತುವ ಸಾಧನ; An implement for sowing seeds; ಬೀಜವರಿ ಬೆದ್ದಲು ಹಾಲಪ್ಪನ ಗುಡ್ಡೆಗೆ ತೆಂಕಲು. ಒಂದು ದಿನದ ಒಂದು ಕೂಱಿಗೆ ಬಿತ್ತುವ ಆ ಯಿಷ್ಟು ಭೂಮಿ; (EC. XI(O), Hk.127, 1386).

ಕೂಂಟಿ; Kūṁṭe: ಒಕ್ಕಲುತನದ ಭೂಮಿಯ ಅಳತೆ; ಮೂಲತಃ ನಿರ್ದಿಷ್ಟ ಅವಧಿಯಲ್ಲಿ ಕುಂಟೆಯಿಂದ ಹರಗಲು

ಸಾಧ್ಯವಾಗುವಷ್ಟು ಭೂಮಿಯು ಒಂದು ಅಳತೆಯಾಗಿ ಪರಿಣಮಿಸಿತು; The unit was originally fixed on the basis of ploughing the land by the impliment Kunṭe within a specified time; ಎರಳ್ಕೊಂಟೆಗಳಂ ನವಮಸ್ಯವೆನೆ ಬಿಟ್ಟಂ; (IND. 23, 1122).

ಕೂಂಡಿದೇಶದಂಡ; Kūṁḍidēśa-daṇḍa: ಕೂಂಡಿ ದೇಶದಲ್ಲಿ ಪ್ರಚಲಿತವಿದ್ದ ಒಂದು ಅಳತೆಯ ಕೋಲು; A measuring rod used for measuring agricultural land in the Kūṇḍi province; ಕೂಂಡಿದೇಶದಂಡೇನ ನಿವರ್ತ್ತನ ಚತುರ್ಥಭಾಗಪ್ರಮಿತ ಕ್ಷೇತ್ರಂ; (EI. III, 28, 1150).

ಕೂಂಡಿಯ ಕೋಲು; Kūṁḍiya kōlu: s.a. ಕೂಂಡಿದೇಶದಂಡ; Kūndidēśa-daṇḍa; (EI. XIII, 3B, 1204).

ಖಂಡಿ; Khaṁḍi: (1) ಧಾನ್ಯದ ಅಳತೆಯ ಪ್ರಮಾಣ; Standard measure of a grain. (2) ಖಂಡಿ ಅಳತೆಯ ಬೀಜವನ್ನು ಬಿತ್ತುವ ಭೂಮಿ; Land with capacity of sowing Khaṁdi of seeds. ಶಿಂಗನಗದ್ದೆ ಗ್ರಾಮದಲ್ಲು ಕೊಡಗಿಯಿಂದ ಸಾಹ ಬೀಜವರಿ ಖಂಡಿ ೩೦ ಮೂವತ್ತು ಖಣ್ಡಿ ಭೂಮಿಯನ್ನು; (EC. VI(O), Kp.21, 1509).

ಖಂಡಿಕ, ಖಂಡಿಕಾ, ಖಂಡಿಕೆ; Khaṇḍika, Khaṇḍikā, Khaṇḍike: s.a. ಖಂಡಿ, Khandi; ವಿಂಶತಿ ಖಂಡಿಕಾವ್ರೀಹಿ ಬೀಜಪರಿಪ್ರಾಮಾಣಂ (ಪರಿಮಾಣಂ); (EI. XVIII, 6, 8th cent.).

ಖ, ಖಂಡುಕ, ಖಂಡುಗ; Kha, Khaṇḍuka, Khaṇḍuga: ಒಕ್ಕಲತನದ ಭೂಮಿಯ ಒಂದು ಅಳತೆ; A unit of measurement of agricultural land; ತಟಾಕಸ್ಯಾಧಸ್ಥಾತ್ ಖಂಡುಕದ್ವಯಂ ವ್ರೀಹಿಕ್ಷೇತ್ರಂ .... ಕ್ರಮುಕ ಕದಳೀನಾಂ ಯೋಗ್ಯಂ ಖಂಡುಕದ್ವಯಂ ಕ್ಷೇತ್ರಂ; (EI. XXVII, 25, 771); ಕೊಟ್ಟ ಮಣ್ಣು ಇರ್ಖಣ್ಡುಗ ಎಱೆ; (EC. IX(O) Bn.40, 9th cent.); ಖ ಎಂಬುದು ಖಂಡುಗ ಶಬ್ದ ಸಂಕ್ಷಿಪ್ತ ರೂಪ; ಗಾವುಂಡು ಕೆಱೆಯ ಕೆಳಗೆ ಖ ೧ ಬೆದ್ದಲೆ ಮತ್ತ; (EC. VI(O), Tk.62, 1101).

ಖಾರಿ; Khāri: ಭೂಮಿಯ ಒಂದು ಅಳತೆ: A measure of land; ಖಾರಿ ತ್ರಯಮಿತಂ ಭುವಂ (EI. XVII, 14, 1467); ಅರ್ಥಶಾಸ್ತ್ರದಲ್ಲಿ ಧಾನ್ಯದ ಅಳತೆಯೆಂದು ಬಳಸಲ್ಪಟ್ಟಿದೆ; Used in *Arthaśastra* as a grain measure (II, 73, 19).

ಗಡಿಂಬದ ಘಳೆ; Gaḍiṁbada ghaḷe: ಒಂದು ವಿಧದ ಅಳತೆಯ ಕೋಲು; A type of measuring rod; (SII. IX, I, 297, 1177).

ಗಳೆ; ಘಳೆ; Gaḷe, Ghaḷe: ಕೋಲು; ಗಳ; ಅಳತೆಯ ಕೋಲು; Measuring rod; (SII. XV, 40, 12th cent.). ಬಹಳಷ್ಟು ಶಾಸನಗಳಲ್ಲಿ ಉಕ್ತವಾಗಿದೆ; Figures in numerous inscriptions.

ಗಂಗನ ಕಂಬ, ಗಂಗನ ಕಂಭ; Ghaṁgana kaṁba, Gangana kaṁbha: ಗಂಗನ ಗಳೆ ಎಂಬ ಪ್ರಮಾಣಿತ ಅಳತೆಯ ಕೋಲಿನಿಂದ ಅಳೆದ ಕಂಭ; Kamba of land measured by the standard rod called Gangana gaḷe; ಗದ್ದೆಯ ಕೆಳಗೆ ಗಂಗನ ಕಂಬ ೫; (SII. XVIII, 246, 1263). See ಕಂಬ, Kamba above.

ಗಂಗನ ಗಳೆ, ಗಂಗನ ಘಳೆ; Gaṁgana-gaḷe, Gaṁgana-ghaḷe: ಗಂಗ ಎಂಬ ವ್ಯಕ್ತಿಯ ಹೆಸರಿನಲ್ಲಿ ಪ್ರಸಿದ್ಧವಾದ ಗಳೆ ಅಥವಾ ಕೋಲು; A measuring rod named after a person called Ganga; ಅಪ್ಪಡೆಯ ಬಸುರಿಯ ಕೊಳನ ಮೊದಲೇರಿಯಲು ಬಿಟ್ಟದು ಗಂಗನ ಗಳೆಯಲು ಕಂಬ ಇಪ್ಪತ್ತಂ; (EC. VII(O), Ci.32, 1050); ದೇಗುಲದಿಂ ತೆಂಕ ಗಂಗನ ಗಳೆಯಲಿ ೫೦; (SII. XVIII, 98, 1092); ಗಂಗನ ಘಳೆಯಲು ಮತ್ತರು ಮೂಱು; (Ibid. 195, 1202).

ಗಂಗನ ಮತ್ತರು; Gangana mattaru: ಗಂಗನ ಮತ್ತರು; ಗಂಗನ ಗಳೆಯಿಂದ ಅಳೆದು ನಿರ್ದಿಷ್ಟಪಡಿಸಿದ ಮತ್ತರು; A mattar of land measured by the measuring rod called Gangana gaḷe; (EC. XI(O), Dg.74, 11th cent.; SII. XVIII, 247, 1265). See ಮತ್ತರ್, mattar below.

ಗುಣಿಗಗಳೆ; Guṇiga-gaḷe: ಗುಣಿಗ ಎಂಬವನ ಹೆಸರಿನ ಅಳತೆಯ ಕೋಲು; Measuring named after an individual called Guṇiga. ಗುಣಿಗಗಳೆಯುಲ್ಕಮ್ಮ ೫೦; (EC. VIII(O), Sb.184, 1077).

ಗುಣಿಗನ ಮತ್ತರು; Guṇigana mattaru: ಗುಣಿಗ ಎಂಬುವನ ಹೆಸರಿನ ಕೋಲಿನಿಂದ ಅಳೆದ ಮತ್ತರು; A unit of land measured by a pole named after an individual called Guṇiga; ಕೆಂಗಾಡು ಗುಣಿಗನ ಮತ್ತರ್; ಗಜ್ಜೆ ಗುಣಿಗನ ಮತ್ತರ್; (SII. IX, I, 165, 1099).

ಗೇಣು; Gēṇu: ಹೆಬ್ಬೆರಳ ತುದಿಯಿಂದ ಕಿರುಬೆರಳಿನ ತುದಿಯವರೆಗಿನ ಅಳತೆ; ಸುಮಾರು 9 ಇಂಚು; A span's length equal to about 9"; ಈ ಐವತ್ತು ಗೇಣು ಗಡಿಬವ ಸಲಿಸದೆ ಕಿತ್ತವಂಗೆ ಕುಂಬಿನೀ ನರಕ ಸಂತಾನಕ್ಷಯವಕ್ಕುಂ; (EC. VII(R), Ng.129, 12th cent.).

ಗೋಪ್ರಚಾರ; Gōprachāra: ಭೂಮಿಯ ಒಂದು ನಿರ್ದಿಷ್ಟ ಅಳತೆ; A specific unit of land. ಮೂಲತಃ ಒಂದು ನಿರ್ದಿಷ್ಟ ಅವಧಿಯಲ್ಲಿ ಆಕಳು ಎಷ್ಟು ಪ್ರದೇಶದಲ್ಲಿ ಮೇಯುತ್ತದೋ ಅಷ್ಟು ಪ್ರದೇಶ. ಮುಂದೆ ಪ್ರಮಾಣಿತ ಅಳತೆಯಾಯಿತು. Originally the area covered by the grazing of a cow within a specified time. (See, IEG, 118). Later became a standard measure.

ಗೋರುತ; Gōruta: ಭೂಮಿಯ ಒಂದು ನಿರ್ದಿಷ್ಟ ಅಳತೆ; A specific unit of land; ಒಂದು ನಿರ್ದಿಷ್ಟ ಸ್ಥಳದಿಂದ ಆಕಳದ ಧ್ವನಿಯು ಎಲ್ಲಿಯವರೆಗೆ ಕೇಳುತ್ತದೆಯೋ, ಅಲ್ಲಿಯವರೆಗಿನ ಪ್ರದೇಶ; The area upto which the honking of the cow is heared from a specific spot; ದೇವದ್ವಿಜಪ್ರದೇಯಾ ಗೋರುತ ಪ್ರಮಾಣಾ ಭೂಮಿ (ನೀ.ವಾ. Nī.Vā. 19, 24).

ಗೌಡುವಾನ್ಯದ ಕೋಲು; Gauḍuvānyada kōlu: ಗ್ರಾಮಾಧಿಕಾರಿಗಳು ಪ್ರಮಾಣವೆಂದು ಮಾನ್ಯಮಾಡಿದ ಅಳತೆಯ ಕೋಲು; A measuring rod recognised as standard by the village officers; ಗೌಡುವಾನ್ಯದ ಕೋಲಿನಲಳೆದು; (SII, XX, 248, 1228).

ಘಟೆಯ ಮಾರ್ಕ್ಕೊಳ್ವನ ಕೋಲು; Ghaṭeya-markoḷvana kōlu: ಶೂರನೊಬ್ಬನ ಬಿರುದಿನ ಹೆಸರು ಇದ್ದ ಅಳತೆಯ ಕೋಲು; Measuring rod named after the title of a hero; ಘಟೆಯ ಮಾರ್ಕ್ಕೊಳ್ವನ ಕೋಲೊಳ್ಕೊಟ್ಟ ನೆಲ; (IND. 5, 1050).

ತಂಬಳ ಕೋಲು; Taṁbaḷa kōlu: ತಂಬಳ ಎಂಬ ಗ್ರಾಮದಲ್ಲಿ ಪ್ರಚಾರದಲ್ಲಿದ್ದ ಅಳತೆಯ ಕೋಲು; Measuring rod prevalent in the village Taṁbaḷa; (EI. IV, 6C, 12th cent.).

ತಿಗುಳ ಘಳೆ; Tiguḷa-ghaḷe: ತಿಗುಳರು (ತಮಿಳರು) ಉಪಯೋಗಿಸುತ್ತಿದ್ದ ಅಳತೆಯ ಕೋಲು; Measuring rod used by Tamil residents; ಮಂತಿಕಟ್ಟದ ಕೋಡಿಯಿಂ ಪಡುವಲು ಮಣಲ ಕೆಯಿ ತಿಗುಳ ಘಳೆಯಲು ಮತ್ತರು; (EC. VII(O) Ci.21, 1268).

ತೋಳು; Tōḷu: ಒಂದು ಕೈ ಉದ್ದದ ಅಳತೆ, ಭುಜದಿಂದ ನಡು ಬೆರಳಿನ ತುದಿಯವರೆಗೆ; An arm-length, from shoulder to the tip of the middle finger; ನಾಲ್ಕು ಮಾರು ಒತ್ತೋಳು ಗಳೆಯಲು; (EC. VII(O), Ci. 52, 1233).

ದಂಡಮಾನ; Daṁḍamāna: ಭೂಮಿ ಅಳೆಯುವ ಕೋಲು; a rod for measuring land; ಎಡೆನಾಡ ದಂಡಮಾನೇನ; (EI. III, 29, 1194).

ದಾನಚಿನ್ತಾಮಣಿ ಘಳೆ; Dānachintāmaṇi-ghaḷe: ದಾನಚಿನ್ತಾಮಣಿ ಎಂಬ ಬಿರುದಿನ ಹೆಸರಿನಿಂದ ಪ್ರಚಲಿತವಿದ್ದ ಕೋಲು; Measuring rod named after the title Dānachintāmaṇi. (ಕನ್ನಡ ಕವಿ ರನ್ನನ ಆಶ್ರಯ ದಾತಳಾದ ಅತ್ತಿಮಬ್ಬೆಗೆ ಈ ಬಿರುದು ಇದ್ದುದನ್ನು ಗಮನಿಸಬಹುದು; It may be noted that Attimabbe, the patron of Kannada poet Ranna had this title); (SII. XV, 596, 12th cent.)

ದಾನವಿನೋದನ ಗಳೆ; Dānavinōdana gaḷe: ದಾನವಿನೋದ ಎಂಬ ಬಿರುದಿನಿಂದ ಕರೆಯಲ್ಪಡುತ್ತಿದ್ದ ಅಳತೆಯ ಕೋಲು; A measuring rod named after the epithet Dānavinōda; (EI. XII, 32(B), 1077); ಇದು ೨೫ ಗೇಣು ಉದ್ದವಿದ್ದಿತೆಂದು ಒಂದೆಡೆ ಹೇಳಿದೆ. In one case it measured 35 spans (Ibid.)

ನವಿಲ ಕೋಲು; Navila kōlu: ಒಂದು ಅಳತೆಯ ಕೋಲಿನ ಹೆಸರು; The name of a measuring rod; (SII. IX, I, 166, 1099); ಬಹುಶಃ ಇದು ನವಿಲ ವಾಹನನಾದ ಕಾರ್ತಿಕೇಯನ ಹೆಸರಿಗೆ ಸಂಬಂಧಿಸಿದ್ದಿತು. ಈ ಕೋಲನ್ನು ಹೆಸರಿಸುವ ಶಾಸನದಲ್ಲಿ ಕಾರ್ತಿಕೇಯತಪೋವನದ ಉಲ್ಲೇಖವಿರುವುದು ಗಮನಾರ್ಹವಾಗಿದೆ. Probably this was associated with Kārtikēya whose vāhana was the peacock. It is significant that the inscription mentioning this rod refers to Kārtikēya tapōvana.

ನವಿಲ ಮತ್ತರು; Navila-mattaru: ನವಿಲು ಕೋಲಿನಿಂದ ಅಳೆದು ನಿರ್ದಿಷ್ಟಪಡಿಸಿದ ಮತ್ತರು; A mattar of land measured by the Navila kōlu; (SII. IX, I, 197, 1119).

ನವಿಲ್ಗುಂದ ಕೋಲು; Navilgunda-kōlu: ನವಿಲ್ಗುನ್ದದಲ್ಲಿ ಪ್ರಚಲಿತವಿದ್ದ ಪ್ರಮಾಣಿತ ಅಳತೆಯ ಕೋಲು;

Measuring rod in use in the place called Navilgunda; (SII. XX, 248, 1228).

ನಾಡಮತ್ತರ ಘಳೆ; Nāḍamattara-ghaḷe: ಆಯಾ ಪ್ರದೇಶದಲ್ಲಿ ಪ್ರಚಲಿತವಿದ್ದ ಅಳತೆಯ ಒಂದು ಮತ್ತರ್ ಪ್ರಮಾಣ; A rod for measuring and fixing the unit of land as mattar in a given region (nāḍu); (SII. IX, I, 117, 1055).

ನಾಲ್ವತ್ತಗೇಣ ಕೋಲು; Nālvatta-gēṇa-kōlu: ನಾಲ್ವತ್ತು ಗೇಣು ಉದ್ದದ ಅಳತೆಯ ಒಂದು ಕೋಲು; Measuring rod measuring forty spans in length; (SII. IX, I, 210, 1125).

ನಾಲ್ವತ್ತನಾಲ್ಗೇಣ ಘಳೆ; Nālvattanālgēṇa ghaḷe: ನಾಲವತ್ತು ನಾಲ್ಕು ಗೇಣು ಉದ್ದದ ಅಳತೆಯ ಗಳೆ; Measuring rod measuring 44 spans in length; (SII. IX, I, 290, 11th cent.).

ನಾಲ್ವತ್ತುಗೇಣ ಹಂದಿಯ ಗಡಿಂಬದ ಗಳೆ; Nalvattugēṇa Handigaḍimbada gaḷe: ನಾಲ್ವತ್ತುಗೇಣು ಉದ್ದದ ಹಂದಿಯ ಗಡಿಂಬ ಎಂಬ ಅಳತೆಯ ಕೋಲು; Measuring rod named Handiya-gaḍimba measuring forty spans in length; (EI. V, 3A, 1161).

ನಾಲ್ವತ್ತೆರಡು ಗೇಣ ಗಳೆ; Nālvatteraḍu gēṇa-gaḷe: ನಾಲ್ವತ್ತೆರಡು ಗೇಣು ಉದ್ದದ ಅಳತೆಯ ಕೋಲು; Measuring rod measuring 42 spans in length. ಊರಿಂದ ಹಡುವಣ ಹೊಲದಲ್ಲಿ ಬೆದ್ದಲೆ ನಾಲ್ವತ್ತೆರಡು ಗೇಣು ಗಳೆಯಲು ಕಂಭ ೩೨ ಬಿಟ್ಟ ದತ್ತಿ; (EC. VIII(R), Hn.147, 1174).

ನಾಲ್ವತ್ತೆರಡು ಮೆಟ್ಟಿನ ಗಡಿಂಬದ ಗಳೆ; Nālvatterḍu meṭṭina guḍimbada ghaḷe: ನಾಲ್ವತ್ತೆರಡು ಹೆಜ್ಜೆಯ ಉದ್ದದ ಅಳತೆಯ ಕೋಲು; A measuring rod measuring forty two (human) feet; (EC. V(O), Cn.269, 1276).

ನಾಲ್ವತ್ತೆಂಟು ಮೆಟ್ಟಿನ ಗಳೆ; Nālvatteṇṭu meṭṭina gaḷe: ನಾಲ್ವತ್ತೆಂಟು ಹೆಜ್ಜೆಯ ಉದ್ದದ ಅಳತೆಯ ಕೋಲು; A measuring rod measuring forty eight (human) feet; (EC. V(O), Ak.13, 1288).

ನಾಲ್ಕು ಮಾರು ಒತ್ತೋಳ ಗಳೆ; Nālku māru ottōḷa gaḷe: ನಾಲ್ಕು ಮಾರು ಮತ್ತು ಒಂದು ತೋಳು ಉದ್ದದ ಅಳತೆಯ ಕೋಲು; Measuring rod of four māru and one arm: ಮೊದಲೇರಿಯ ಗದೆ ನಾಲ್ಕು ಮಾರು ಒತ್ತೋಳ ಗಳೆಯಲು ಕಂಬ ೬೦; (EC. VII(O), Ci.64, 1214). Māru represented the distance between the tip of middle fingers of both the stretched hands. Tōḷu is the arm from the tip of the middle finger to the shoulder.

ನಿವರ್ತನ; Nivartana: ಒಕ್ಕಲುತನದ ಭೂಮಿಯ ಒಂದು ಪ್ರಮಾಣ. ಒಂದು ಮತ್ತರಿಗೆ ಸಮನಾದುದು; A unit of agricultural land corresponding to a mattar; ಸಂಸ್ಕೃತ ಶಾಸನಗಳಲ್ಲಿ ನಿವರ್ತನವೆಂದೂ, ಕನ್ನಡ ಶಾಸನಗಳಲ್ಲಿ ಮತ್ತರ್ ಎಂದೂ ಉಕ್ತವಾಗಿದೆ. (KI. I, 3, 759; SII. XX, 13, 875-76). ಮೂಲತಃ ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟ ಸ್ಥಳದಿಂದ ಹೊರಟು ನಿರ್ದಿಷ್ಟ ಅವಧಿಯಲ್ಲಿ ಅಲ್ಲಿಗೆ ತಿರುಗಿಬರಲು (ನಿವರ್ತನ) ಕ್ರಮಿಸುವಷ್ಟು ಭೂಮಿ. Originally, the area covered by a person, by starting from a specified spot and returning to the same (nivartana=return) within a stipulated period.

ಪದಿನಱುಗೇಣ ಕೋಲು; Padinaru-gēṇa-kōlu: ಹದಿನಾರು ಗೇಣು ಉದ್ದದ ಅಳತೆಯ ಕೋಲು; Rod measuring of 16 spans; (EC. IX(O), Nl.1, 1029).

ಪದಿನೆಣ್ಟುಗೇಣ ಕೋಲು; Padinenṭugēṇa-kōlu: ಹದಿನೆಂಟು ಗೇಣು ಉದ್ದದ ಅಳತೆಯ ಕೋಲು; Measuring rod 18 spans in length; (SII. IX, I, 53, 10th cent.).

ಪಿರಿಯ ಕೋಲು; Piriya kōlu: ಹೊಲ ಅಳೆಯುವ ದೊಡ್ಡ ಅಳತೆಯ ಕೋಲು; A measuring rod of big size; (SII. XX, 13, 875-76). See Hiriya kōlu below.

ಪಿರಿಯ ಗಳೆ; Piriya gaḷe: s.a. ಪಿರಿಯ ಕೋಲು; Piriya kōlu; (EC. VIII(O), Sb.184, 1077).

ಬನ್ಧುಚಿಂತಾಮಣಿಯ ಕೋಲು; Bandhuchintāmaṇiya kōlu: ಬನ್ಧುಚಿಂತಾಮಣಿ ಎಂಬ ಬಿರುದಿನ ಹೆಸರಿನ ಪ್ರಮಾಣಿತ ಅಳತೆಯ ಕೋಲು; A standard measuring rod named after Bandhuchintāmaṇi, a title of an individual; (SII. XX, 302, 12th cent). ಚಾಳುಕ್ಯ ೬ನೇ ವಿಕ್ರಮಾದಿತ್ಯನ ಅಧಿಕಾರಿಯೊಬ್ಬನಿಗೆ ಈ ಬಿರುದಿದ್ದಿತೆಂದು ಒಂದು ಶಾಸನದಲ್ಲಿ ಹೇಳಿದೆ. ಈ ಶಾಸನದಲ್ಲಿ ಅದು ೨೮ ಗೇಣು ಇದ್ದಿತೆಂದು ಹೇಳಿದೆ. (SII. XX, 69, 1107). In

one inscription, an officer of Chālukya Vikramāditya VI bears this title. In this inscription this rod is said to be measuring 28 spans in length. (SII. XX, 69, 1107). ಮೇಲೆ ಉಲ್ಲೇಖಿಸಿದ ಶಾಸನದಲ್ಲಿ ಅದು ೨೭ ಇದೆ ಎಂದು ಹೇಳಿದೆ. In the inscription cited above, it is said to be 27 spans in length.

ಬಾಚವೊಡೆಯರ ಕೋಲು; Bāchavoḍeyara kōlu: ಬಾಚಒಡೆಯನೆಂಬುವನ ಹೆಸರಿನ ಅಳತೆಯ ಕೋಲು; A measuring rod, named after an individual called Bāchavoḍeya; (SII. XX, 219, 1269).

ಬಾಚಿವಿಡಿಯ ಘಳೆ; Bāchiviḍiya ghaḷe: ಒಂದು ವಿಧದ ಅಳತೆಯ ಕೋಲು; A type of measuring rod (SII. XV, 164, 1220). ಒಂದೆಡೆಯಲ್ಲಿ ಅದು ೩೫ ಗೇಣು ಉದ್ದವಿದ್ದಿತೆಂದು ಹೇಳಿದೆ; In one case it is said to hae measured 35 spans; (EC. V(O), Ak.1, 1169). ಇನ್ನೊಂದೆಡೆಯಲ್ಲಿ ಅದು ೪೬ ಗೇಣು ಉದ್ದವಿದ್ದಿತೆಂದು ಹೇಳಿದೆ; In another case it measured 46 spans (Ibid. Hn.65, 12th cent.).

ಬಾರ್ಚಿವಿಡಿಯ ಘಳೆ; Bārchiviḍiya ghaḷe: s.a. ಬಾಚಿವಿಡಿಯ ಘಳೆ; (EC. VI(O), Kd.96, 1141).

ಬಾಚಿಹಿರಿಯ ಗಳೆ; Bāchihiriya gaḷe: ಬಾಚಿವಿಡಿಯಂಥ ಇನ್ನೊಂದು ಅಳತೆಗೋಲು; A measuring rod similar to Bāchiviḍi; (EC. IX(R), Bl.241, 1247).

ಬೆಳವತ್ತರ್; Beḷavattar: ಬೆಳೆವ ಭೂಮಿಯ ಒಂದು ಮತ್ತರು; A mattar of cultivable land; (SII. XX, 16, 920-21).

ಬೆಳವಾಡಿಯ ಘಳೆ; Beḷavāḍiya Ghaḷe: ಬೆಳವಾಡಿ ಎಂಬ ಗ್ರಾಮದಲ್ಲಿ ಉಪಯೋಗಿಸಲ್ಪಡುತ್ತಿದ್ದ ಕೋಲು; A measuring rod used in a village called Belavāḍi; ಬೆಳವಾಡಿಯ ಘಳೆಯಲು ಕೊಟ್ಟ ಕಂಭ ನೂಱು ೧೦೦; (EC. IX(R), Bl.560, 1160).

ಬೆಂಕೊಳ್ವನ ಕೋಲು; Benkoḷvana kōlu: ಅರಸನ ಬೆಂಕೊಳ್ವ ಎಂಬ ಬಿರುದಿನ ಹೆಸರುಳ್ಳ ಅಳತೆಗೋಲು; Measuring rod named after the title Benkoḷva of the king; (SII. XV, 166, 1220).

ಬೆಂಕೊಳ್ವನಱುವತ್ತುನಾಲ್ಗೇಣ ಘಳೆ; Benkoḷvan-aṟuvattu-nālgēṇa ghaḷe: s.a. ಬೆಂಕೊಳ್ವನ ಕೋಲು; ೬೪ ಗೇಣು ಉದ್ದವಿದ್ದದ್ದು; Benkoḷvana kōlu, measuring 64 spans in length. (SII, IX, I, 230, 1134).

ಭರಣದ ಕೋಲು; Bharaṇada kōlu: ಒಂದು ಅಳತೆಯ ಕೋಲು; A type of measuring rod. ಭರಣದ ಕೋಲ ಮತ್ತರು ಅಯ್ವತ್ತು; (SII, XV, 113, 1170); ಭರಣದ ಕೋಲ ಪರಿಸಂಕಿನ ಮತ್ತರು; (Ibid, 129, 1176).

ಭುಜೆ; Bhuje: s.a. ಭುಜ; Bhuja; ಭೂಮಿಯ ಒಂದು ನಿಟ್ಟು; One side of the land; ನವಿಲಮತ್ತರೈದು ಕಮ್ಮ ೪೧೫ ಆ ಭುಜೆ ಪ ೨೨ ಬ ೬೬ ॥ ಮೂ ೧೯॥ ತೆಂ ೬೧. (SII, IX, I, 197, 1119). ಇಲ್ಲಿ ಭೂಮಿಯ ನಾಲ್ಕೂ ದಿಕ್ಕುಗಳ ಅಳತೆಯನ್ನು ಕೊಟ್ಟಿದೆ. Here the measurements of the four sides of all the land are given.

ಭೇರುಂಡಗಳೆ; ಭೇರುಂಡನ ಗಳೆ; Bhēruṇḍa-gaḷe; Bhēruṇḍana-gaḷe: ಭೇರುಂಡ ಎಂಬ ಬಿರುದಿನಿಂದ ಹೆಸರಾದ ಅಳತೆಯ ಕೋಲು; Measuring rod named after the title Bhēruṇḍa; ಭೇರುಣ್ಡಗಳೆಯೊಳ್ ಕೊಟ್ಟ ಗಜ್ದೆ; (EC. VII(O), Sk.120, 1048; Ibid, VIII(O) Sb.140, 1197).

ಮತ್ತ, ಮತ್ತರ್, ಮತ್ತಲು, ಮತ್ತರು; Matta, Mattar, Mattalu, Mattaru: ಒಕ್ಕಲುತನದ ಭೂಮಿಯ ಒಂದು ಪ್ರಮಾಣ. ಇದು ಬಹುಶಃ ಸಂಸ್ಕೃತ ನಿವರ್ತನಕ್ಕೆ ಸಮಾನವಾಗಿದ್ದಿತು. A unit of agricultural land, probably Kannada equivalent of Sanskrit Nivartana; (SII, XX, 2, 7th cent.), ಒಂದು ಅಭಿಪ್ರಾಯದಂತೆ ಮತ್ತರು = ೧೦೦ ಮಾರು; ೧ ಮಾರು ೨ ಯಾರ್ಡಿಗೆ ಸಮ; One opinion is that it measured 100 Māru, 1 Māru being equal to 2 yards; (INKK, Introduction, p.19).

ಮಳಿಗೆಯ ಕೋಲು; Maḷigeya kōlu: ಒಂದು ವಿಧದ ಅಳೆಯುವ ಕೋಲು; A type of measuring rod; ಮಳಿಗೆಯ ಕೋಲು ಕೊಳಗ ಸಕಲ ಸಾಮ್ಯಮೆಲ್ಲವೂ .... ದೇವರದು; (KI. I, 30, 1222).

ಮಾಕಾಣಿ; Mākāṇi: ತಮಿಳ ದೇಶದಲ್ಲಿ ಪ್ರಚಲಿತವಿದ್ದ ಭೂಮಿಯ ಒಂದು ಅಳತೆ; A unit of agricultural land in use in Tamil region; (EC. III(R), Nj.213, 1075-76).

ಮಾಣಿಕೇಶ್ವರದ ಕೋಲು; Māṇikēśvarada kōlu: ಮಾಣಿಕೇಶ್ವರ ಎಂಬ ದೇವತೆಯ ಹೆಸರಿನ ಒಂದು ಅಳತೆಯ ಕೋಲು; A measuring rod named after the god Māṇikēśvara; (SII. XX, 79, 1119).

ಮಾಣಿಕೇಶ್ವರದ ಮತ್ತರು; Māṇikēśvarada mattaru: ಮಾಣಿಕೇಶ್ವರ ಕೋಲಿನಿಂದ ಅಳೆದು ನಿಶ್ಚಯಿಸಿದ ಮತ್ತರು; Mattar of land measured by Māṇikēśvara kōlu; (SII. XX, 116, 1146). See mattar above.

ಮಾನ್ಯಗೋಲು; ಮಾನ್ಯದ ಕೋಲು; Mānya-gōlu, Mānyada kōlu: ಮಾನ್ಯತೆ ಪಡೆದ ಅಥವಾ ಪ್ರಮಾಣವೆಂದು ನಿರ್ಧರಿಸಿದ ಅಳತೆಗೋಲು; Measuring rod accepted as a standard one. (SII. XX, 134, 1129) ಮಾನ್ಯಗೋಲ ಮತ್ತರು ಹಂನ್ನೆರಡು; (SII. XV, 126, 1174).

ಮಾರು; Māru: ನಾಲ್ಕು ಮೊಳ; A measure, the distance between tips of the fingers of the two extended arms. ಹನ್ನೊಂದು ಮಾರಗಳೆಯಲು ಗದ್ದೆ; (KI, IV, 1, 1204); ನಾಲ್ಕುಮಾರು ಒತ್ತೋಳು ಗಳೆಯಲು ಕಂಬ ೬೦; (EC. VII(O), Ci.64, 1214); ಹದಿನಾಲ್ಕು ಮಾರುಂ ಒತ್ತೋಳು ಘಳೆಯಲು ಗದ್ದೆ ಕಮ್ಮಂ ೨೫; (Ibid. VII(O), Ci.52, 1233; SII. XV, 244, 1379).

ಮಾವನ ಸಿಂಘನ ಕೋಲು; Māvana singhana kōlu: ಮಾವನ ಸಿಂಘ ಎಂಬ ಬಿರುದಿನ ಹೆಸರುಳ್ಳ ಕೋಲು; Measuring rod named after the title māvana singha; ಮಾವನಸಿಂಘನ ಕೋಲ ಮತ್ತರಿಪ್ಪತ್ತೊಂದು; (IND. 4, 1049).

ಮೂರುಗೇಣು ಕೋಲು; Mūru-gēṇu kōlu: ಮೂರು ಗೇಣು ಉದ್ದದ ಅಳತೆಯ ಕೋಲು; Measuring rod of 3 spans in length; (SII, IX, I, 104, 1046).

ಮೂವತ್ತಆಱು ಮೆಟ್ಟಿನ ಗಳೆ; Mūvatta-āṟu meṭṭina gaḷe: ಮೂವತ್ತಾರು ಹೆಜ್ಜೆ ಉದ್ದದ ಅಳತೆಯ ಕೋಲು; A measuring rod measuring thirty six human feet; (EC. XII (O), Ti.4, 1267).

ಮೂವತ್ತಾರು ಮೆಟ್ಟಿನ ಕಂಭ; Muvattāru meṭṭina kaṁbha: ೩೬ ಹೆಜ್ಜೆಗಳಷ್ಟು ಉದ್ದದ ಅಳತೆಯ ಕೋಲಿನಿಂದ ಅಳೆದು ನಿರ್ಧರಿಸಿದ ಒಂದು ಕಂಭ ಭೂಮಿ; One khamba of land fixed by the measuring rod 36 (human) feet in length; ಮೂವತ್ತಾಱು ಮೆಟ್ಟಿನ ನೂರು ಕಂಭ ಕೆಯಿ ಸಲುಉದು; (EC. XI(O), Cd.6, 1338). See Kamba above.

ಮೂವತ್ತುಮೂರುಗೇಣು ಗಳೆ; Mūvattumūru-gēṇu gaḷe: ಮೂವತ್ತುಮೂರು ಗೇಣು ಉದ್ದದ ಅಳತೆಯ ಕೋಲು; Rod measuring 33 spans in length; (SII, XV, 102, 1162).

ಮೂವತ್ತೆರಡು ಗೇಣ ಕೋಲು; Mūvatteraḍu gēṇa-kōlu: ಮೂವತ್ತೆರಡು ಗೇಣು ಉದ್ದದ ಅಳತೆಯ ಕೋಲು; Measuring rod of 32 spans; (SII. XV, 39, 1148).

ಮೂವತ್ತೆರಡು ಗೇಣ ಘಳೆ; Mūvatteradu-gēṇu-ghaḷe: ಮೂವತ್ತೆರಡು ಗೇಣು ಉದ್ದದ ಅಳತೆಯ ಕೋಲು; A rod measuring 32 spans; ಹೊಂನರಸನ ಕೆರೆಯ ಮೂಡಗೋಡಿಯ ಬೆದ್ದಲೆ ೩೨ ಗೇಣ ಘಳೆಯಲ್ ಕಂಭವರನೂರು; (EC. V(O), Ak.79, 1184).

ಮೂವತ್ತೆರಡು ಮೆಟ್ಟಿನ ಘಳೆ; Mūvatteraḍu mettina ghaḷe: ಮನುಷ್ಯನ ೩೨ ಹೆಜ್ಜೆ ಉದ್ದದ ಅಳತೆಯ ಕೋಲು; A rod measuring thirty two human feet; (EC. IV(O), Ng.48, 1270; Ibid. V(O), Cn. 237, 1253).

ರಾಜಮಾನ; Rājamāna: ಭೂಮಿಯ ಅಳತೆಯ ಅಧಿಕೃತ ಪ್ರಮಾಣ; A standard authorised measure of land; ಸರಕಾರ ಅಥವಾ ಅರಸನಿಂದ ಮನ್ನಣೆ ಪಡೆದ ಭೂಮಿಯ ಒಂದು ಅಳತೆ; Land measure recognised by the government or king; ರಾಜಮಾನೇನ ಪಂಚಾಶನ್ನಿವರ್ತನಪರಿಮಾಣಂ ಕ್ಷೇತ್ರಂ; (EI. X, 22, 674).

ರಾಜಮಾನ-ದಂಡ; Rājamāna-daṇḍa: ಸರಕಾರದ ಅಥವಾ ರಾಜನ ಮನ್ನಣೆ ಪಡೆದ ನಿರ್ಧಿಷ್ಟ ಉದ್ದದ ಅಳೆಯುವ ಕೋಲು; A measuring rod of specified length approved by the government or king; ಜೀರ್ಣೋದ್ಧಾರಕ್ಕಂ ರಾಜಮಾನದಂಡದಲು ಮತ್ತರ್ ನೂಱು; (KI. I, 17, 1055 A.D.); ನೀರ್ಗುಂದಾಂತರ್ಗ್ರಾಮೇ ರಾಜಮಾನೇನ ದಂಡೇನ ತ್ರಿಂಶಂನಿವರ್ತನಕ್ಷೇತ್ರಂ ದತ್ತವಾನ್; (EI. IV, 28, 982).

ವೇಣುಗ್ರಾಮದ ಕೋಲು; Vēṇugrāmada kōlu: ವೇಣುಗ್ರಾಮದಲ್ಲಿ ಬಳಕೆಯಲ್ಲಿದ್ದ ಅಳತೆಯ ಕೋಲು;

Measuring rod prevalent in Vēṇugrāma. ವೇಣುಗ್ರಾಮವು ಇಂದಿನ ಬೆಳಗಾವಿ (ಕರ್ನಾಟಕ). Vēṇugrāma is modern Balgaum (Karnataka); (EI. XIII, 3, 1204).

ವೇಳಿ; Vēḷi: ತಮಿಳು ಪ್ರದೇಶದಲ್ಲಿ ಪ್ರಚಲಿತವಿದ್ದ ಭೂಮಿಯ ಅಳತೆ; A land measure prevailing in Tamil region (EC. IX(O), Nl.37, 1053).

ಸ; Sa: ಸಲಗೆಯ ಸಂಕ್ಷಿಪ್ತ ರೂಪ; Abbreviated form of Salage; (EC. IX(O), Cg.32, 1218).

ಸಲಗೆ; Salage: ಭೂಮಿಯ ಅಳತೆಯ ಒಂದು ಪ್ರಮಾಣ; A unit of land measure; ಎಂಟು ಸಲಗೆ ಗದ್ದೆಯನು ಅದ ಉತ್ಪತ್ತಿಯೊಳಗೆ; (EC. V(O), Cn.237, 1253).

ಸ್ತಂಭ; Stambha: s.a. ಕಂಬ, ಕಮ್ಮ; Kamba, Kamma; ಒಕ್ಕಲುತನದ ಭೂಮಿಯ ಒಂದು ಅಳತೆಯ ಪ್ರಮಾಣ; A unit of measuring agricultural land; ತೇನೈವ ದಂಡೇನ ತ್ರಿಶತ್‌ಸ್ತಂಭಪ್ರಮಾಣ ಪುಷ್ಪವಾಟೀಂ (EI. III, 28, 1150)

ಸೊಗಲ ದಡಿಗೇಶ್ವರದೇವರ ಕೋಲು; Sogala-Daḍigēśvarada kōlu: ಸೊಗಲ ಗ್ರಾಮದ ದಡಿಗೇಶ್ವರದೇವರ ಹೆಸರಿನಲ್ಲಿ ಪ್ರಚಲಿತವಿದ್ದ ಕೋಲು; A measuring rod named after a god Daḍigēśvara of the village Sogala (SII. XX, 248, 1228).

ಸೊಲ; Sola: s.a. ಸೊಲಗೆ; Solage; ನಿರ್ದಿಷ್ಟ ಸೊಲಗೆ ಬೀಜ ಬಿತ್ತುವ ಭೂಮಿ; Land where specified Solage of seeds could be sown; ಬೆಳಗವರ್ತಿಯಲು ಗದ್ದೆ ಸೊಲ ೨೧ ಬೆದ್ದಲೆ ಕಂಬವ (EC. VII, Hl.44, 1215).

ಹತ್ತುಕುಳಗ ಗಳ್ದೆ; Hattu kuḷaga-gaḷde: ಹತ್ತು ಕೊಳಗ ಬೀಜ ಬಿತ್ತುವಷ್ಟು ವಿಸ್ತಾರವಾದ ಗದ್ದೆ; Agricultural wet land with the sowing capacity of 10 Koḷaga of seeds (SII. IX, I, 112, 1053).

ಹದಿನಾಱು ಮೆಟ್ಟಿನ ಹಾಸಗಳೆ; Hadināṟu meṭṭina hāsa-gaḷe: ಹದಿನಾರು ಹೆಜ್ಜೆ (ಪಾದ)ಗಳಷ್ಟು ಉದ್ದಳತೆಯ ಅಳತೆಯ ಕೋಲು; A measuring rod of sixteen feet in length; (EC. VIII(R), Ag.46, 1250)

ಹದಿನೈದು ಮಾರುಂಚ ತೋಳುಘಳೆ; Hadinaidu-māruncha tōḷu-ghaḷe: ಹದಿನೈದು ಮಾರು ಉದ್ದವಾದ ಅಳತೆಯ ಕೋಲು; Pole measuring 15 māru (EC. XI (O), Dg.3, 1121). See Māru above.

ಹನ್ನೆರಡು ಗೇಣ ಕೋಲು; Hanneraḍu-gēṇa-kōlu: ಹನ್ನೆರಡು ಗೇಣು ಉದ್ದದ ಅಳತೆಯ ಕೋಲು; Measuring rod of 12 spans in length; (SII. XX, 149, 12th cent.).

ಹನ್ನೊಂದು ಮಾರು ಗಳೆ; Hannondu māru-gaḷe: ಹನ್ನೊಂದು ಮಾರು ಉದ್ದವಾದ ಅಳತೆಯ ಕೋಲು; A pole measuring eleven māru; (KI. IV, 13, 1204). See Māru above.

ಹಾದ; Hāda: ಒಕ್ಕಲುತನದ ಭೂಮಿಯ ಒಂದು ಅಳತೆ; A unit of agricultural land (EC. VII(O), Sk.227, 1200). ಹಾದವೆಂದರೆ ೨೫ ಕಮ್ಮ ಅಥವಾ ೧/೪ ಮತ್ತರ್ ಇದ್ದಿತೆಂದು ತಿಳಿದು ಬರುತ್ತದೆ. ಇದು ಸಂಸ್ಕೃತ ಪಾದದ ಕನ್ನಡ ರೂಪ. It is learnt that Hāda was equal to 25 Kambas or ¼ mattar; i.e. 4 Hādas made a matar. It is the same as Sanskrit pāda meaning one-fourth (Seü p. 231).

ಹಿರಿಯ ಕೋಲು; Hiriya kōlu: s.a. ಪಿರಿಯ ಕೋಲು; Piriya kōlu; (SII. XV, 16, 1137).

ಹೊಂಬೊಳಲ ಕೋಲು; Homboḷala-kōlu: ಹೊಂಬೊಳೊಲ ಗ್ರಾಮದಲ್ಲಿ ಪ್ರಚಲಿತವಿದ್ದ ಅಳತೆಯ ಕೋಲು; Measuring rod in use in the village Homboḷal; (SII. XV, 73, 1189). (ಇಂದಿನ ಹೊಂಬಳ ಗದಗ ಜಿಲ್ಲೆ; Modern Hombaḷ in Gadag District.)

(ಆ) ಮನೆ, ಮನೆ-ನಿವೇಶನಗಳು

(B) Measure, Houses, House-sites

ಅಂಕಣ; Aṁkaṇa: ಮನೆದಳ (ಎರಡು ತೊಲೆಗಳ ನಡುವೆ) ವಿಭಾಗಿಸಿ ತೋರಿಸುವ ಅಳತೆ; Sub-division of the inner part of a house (between the two beams); ಆ ಬಸದಿಯ ಮುಂದೆ ಯೆಂಟಂಕಣದ ಮನೆಯನು (EC. IV(R), Ch.390, 1482; Ibid. Ch.391, 1487)

ಕೈ; Kai: ಒಂದು ಮೊಳ; ಮನೆಯ ನಿವೇಶನಗಳನ್ನು ಅಳೆಯಲು ಬಳಸುತ್ತಿದ್ದ ಪ್ರಮಾಣ; ೨೪ ಅಂಗುಲ ಅಥವಾ ೧೮ ಇಂಚು;

A measure of length being the distance between the elbow and the tip of the middle finger used for measuring house sites (24 angulas or 18 inches); A Cubit; ನಿವೇಶನದಗಲವಱುಗೈಯ್ಯಲಿ ನೀಳ ಹದಿನಯ್ದು ಕಯ್ಯ ಪ್ರಮಾಣು; (EI. V, 3A, 1161); ಅಯ್ಗಯ್ಯಗಲ ಹಂನ್ನಿಕೈ ನೀಳದ ಮನೆಯ ಕೊಟ್ಟರು; (SII. XX, 248, 1228); Sk. ಹಸ್ತ; Hasta.

ಚತುರಸ್ರ; Chaturasra: ನಿವೇಶನದ ಸುತ್ತಳತೆ, ನಾಲ್ಕೂ ಮಗ್ಗಲುಗಳ ಒಟ್ಟು ಅಳತೆ; Perimeter of a site; (EC. IX(R), Bl.106, 1136).

ಚದುರಸ; Chadurasa: s.a. ಚತುರಸ್ರ; Chaturasra; (EC. VIII(R), Ag.46, 1250); ಹನ್ನೆರಡು ಚದುರಸ ಹನ್ನಿಕಯ್ಯ ಮನೆ ನಿವೇಶನ; (SII. XV, 126, 1174).

ಚವುರಸ, ಚೌರಸ; Chavurasa, Chaurasa: s.a. ಚದುರಸ; Chadurasa; ಮಾಣಿಕೇಸರದ ಚವುರಸ ೫೦ ಕಯಿ ನಿವೇಸಣ; (SII. XX, 184, 1199); ಕುಱುಬಗೇರಿಯಿಂ ಮೂಡಲು ನಿವೇಸಣ ಚೌರಸ ೩೦; (Ibid. 208, 12-13th cent.).

ನೆಲಸಣ; Nelasaṇa: ಬಯಲು ಜಾಗ; Open site; (SII. IX, I, 120, 1058).

ಬಂಧುಚಿಂತಾಮಣಿಯ ಹಸ್ತ; Bandhuchintāmaṇiya hasta: ಬಂಧುಚಿಂತಾಮಣಿ ಎಂಬ ಬಿರುದಿನ ಪ್ರಮಾಣಿತ ಕೈಯ್ಯ ಅಳತೆ; Standard measurement by hand named after Bandhuchintāmaṇi; ಬನ್ಧುಂತಾಮಣಿಯ ಹಸ್ತದ ಮೂವತ್ತು ಕೈ ನೀಳ ಹನ್ನಿ ಕೈಯಗಲದ ಬಣಂಬೆಯ ನಿವೇಶನ; (SII. XX, 302, 12th cent.). Cf. ಬಂನ್ಧುಚಿಂತಾಮಣಿಯ ಕೋಲು; Bandhuchintāmaṇiya kōlu above.

ನಿವೇಶನ; Nivēśana: ಮನೆದಳ; ಮನೆಕಟ್ಟುವ ಸ್ಥಳ; A house site; ಹತ್ತು ಕೈಯಗಲ ೨೫ ಕೈಯ್ಯ ನೀಳ ನಿವೇಶನ ೧; (SII. XX, 64, 1100); ಮಾಲಗಾಱಗೇರಿಯೊಳಗಣ ಮಾಳಿಗೆ ಸಹಿತಮಪ್ಪೊಂದು ನಿವೇಶನಮುಮಂ; (SII. XX, 118, 1227).

ಪರಮಾಣಿನ (ಪ್ರಮಾಣ) ಹಸ್ತ; Paramāṇina (pramāṇa) hasta: ಪ್ರಮಾಣ ಬದ್ಧ ಕೈ ಅಳತೆ; A standard cubit measure; ಅದೇ ದೇವಾಲ್ಯದ ಪರಮಾಣಿನ ಹಸ್ತದಿಂ ನೂಱಯ್ವತ್ತು ೧೫೦; (KI. V, 42, 1139).

ಮನೆಯ ನಿವೇಶನ; Maneya Nivēśana: s.a. ನಿವೇಶನ; Nivēśana; ದೇವರಿಗೆ ಬಿಟ್ಟ ಮನೆಯ ನಿವೇಶನವೆರಡು; (SII. XX, 93, 11th cent.).

ಮನೆ ಠಾವು; Mane-ṭhāvu: s.a. ಮನೆಯ ನಿವೇಶನ; ಯೀ ನಾಲ್ಕು ಗಡಿಯಿಂದೊಳಗೆ ಮನೆಠಾಉ; (SII. IX, II, 465, 1472; Ibid. 424, 1401).

ಮನೆದಾಣ; Mane-dāṇa: s.a. ಮನೆಯ ನಿವೇಶನ; Maneya nivēśana; (EI. XXI, 29, 8th cent.)

ಮೆಯಿನೀಳ; Meyi-nīḷa: ಪುರುಷ ಪ್ರಮಾಣ; ಸಾಮಾನ್ಯ ದೇಹದ ಅಳತೆಯ ಮಾನ; A standard measure; average height of a human being: ನಿವೇಶಣದೊಳಗಾ ದೇವಾಲಯದ ಪ್ರಾಸಾದದ ಮೆಯಿನೀಳವೆ ನೀಳ ಹಂನ್ನಿರ್ಕ್ಕಯಿಯಗಲವೆ ಯಗಲವಾಗಿ ಬಿಟ್ಟ ಮಠದ ಮನೆಯೊಂದು; (KI. I, 25, 1186).

ರಾಜಹಸ್ತ; Rāja-hasta: ರಾಜಾಜ್ಞೆಯಂತೆ ನಿಗದಿಪಡಿಸಿದ ಕೈಯ ಅಳತೆ; A standard cubit as per royal order; ರಾಜಹಸ್ತದಿಂ ಮೂವತ್ತು ಕಯಿ ನೀಳದ ಹನ್ನೊಂದು ಕೈಯ್ಯಗಲದ ಮನೆಯರಡು; (EI. XIII, 28B, 1126); ರಾಜಹಸ್ತದ ಯಿಕ್ಕೈವರೆಯಂ ಕಳದುವುಳಿದ ನಿವೇಶನಮಂ; (EI. XIX, 3, 1246).

ಹಸ್ತ; Hasta: s.a. ಕೈ; Kai; ದ್ವಾದಶಹಸ್ತಪ್ರಮಾಣ ಗೃಹಮೇಕಂ; (EI. XXIX, 2, 1184); ನೀಳ ಹಸ್ತ ೨೭ ಅಗಲ ಹಸ್ತ ೨೦ ನಿವೇಶಣ ೧; (SII. XV, 56, 1184); ೨೫ ಹಸ್ತದಗಲದ ನಿವೇಶನವಂ; (EI. XIX, 3, 1246).

೮. ಕಟ್ಟಡಗಳು ಇತ್ಯಾದಿಗಳ ಅಳತೆ

8. MEASUREMENT OF BUILDINGS ETC.

ಆಹಾರಧಾನಿ; Āhāradhāni: ಅನ್ನ ಸಂತರ್ಪಣೆಯ ಮನೆ; Feeding house; Refectory; ಬಳಸಿದ ದೇವಾಲಯಮುಂ ಘಳಿಗೆಯುಮಾಹಾರಧಾನಿಯುಂ ಪ್ರಪೆಯುಂ; (EI. XIII, 29, 929).

ಊರ್ಗೋಡೆ; Ūrggōḍe: ಊರ ಸುತ್ತಲಿನ ರಕ್ಷಣಾ ಗೋಡೆ; Protective wall around the town; (EI. XXXVIII, 24, 1134).

ಕಲ್ವೆಸ; Kalvesa: ಕಲ್ಲಿನ ಕಟ್ಟಡದ ಕೆಲಸ; Stone work; Construction work; (APGAS. III, Rc.13, 1089).

ಕೀಳಿಲು; Kīḷilu: ಗುಡಿಸಲು; Hut; (ಹ.ಕಾ., IV, 32, 13th cent.).

ಕ್ರೀಡಾವಾಸ; Krīḍāvāsa: ಆರಾಮುಧಾಮು; Pleasure resort; (ಪಂ.ರಾ. I, 100, 12th cent.).

ಗಾಣದ ಮನೆ; Gāṇada mane: ಎಣ್ಣೆಯ ಗಾಣವಿರುವ ಕೊಠಡಿ; Room for oil mill; ದೇವರ ನಂದಾದೀವಿಗೆಗೆ ನಡೆವ ಗಾಣದ ಮನೆ; (EI. XII, 37, 1105).

ದಾನಶಾಲೆ; Dānaśāle: ಬಹುಶಃ ಪ್ರವಾಸಿಗರಿಗೆ ಉಚಿತ ಊಟ ವಸತಿ ವ್ಯವಸ್ಥೆಯುಳ್ಳ ಕಟ್ಟಡ; ಧರ್ಮಶಾಲೆ; Charity house; Probaly, with free feeding and lodging arrangement; Dharmaśālā; (INKK. 23, 11th cent.).

ಪಟ್ಟಶಾಲೆ; Paṭṭaśāle: ವಿಶಾಲವಾದ ಕೋಣೆ; Main hall; (ಪಂ.ರಾ., VII, 47, 12th cent.). Cf. ಪಡಸಾಲೆ.

ಪರಿಸೂತ್ರ; Parisūtra: ಪ್ರಾಕಾರ; Compound; (SII. XX, 111, 1142); ದೇವರ ಪರಿಸೂತ್ರದಾಗ್ನೇಯದ ಗೋಂಟಿ ; (APGAS. III, Gb.4, 12th cent.).

ಪೌಳಿ; Pauḷi: ದೇವಸ್ಥಾನದ ಪ್ರದಕ್ಷಿಣಾ ಪಥ; Circumambulatory path in a temple; ಆ ಸಾಹಸಿಗರು ಆ ಬ್ರಹ್ಮಪುರಿಯ ದೇವಾಲ್ಯದ ಪೌಳಿಯ; (SII. XV, 56, 1184; EI. XIX, 3, 1246).

ಪ್ರಸೂತಿಕಾ ಮಂದಿರ; Prasūtika-mandira: ಬಾಣಂತಿಯ ಕೋಣೆ; ಹೆರಿಗೆಯ ಮನೆ; Labour room; (ಮ.ಪು. XII, 28, 12th cent.).

ಪ್ರಾಸಾದ; Prāsada: ಸುಂದರವಾಗಿ, ವಿಶಾಲವಾಗಿ, ಕಟ್ಟಿದ ದೇವಾಲಯ; A large, beautiful temple; ಶ್ರೀಸ್ವಯಂಭು ಮಾಧವೇಶ್ವರದೇವರ ಮಾಟಕೂಟ ಪ್ರಾಸಾದಕ್ಕಂ; (SII. V, 140, 1184).

ಬಾಣಸು; Bāṇasu: ಅಡುಗೆಯ ಮನೆ; Kitchen; ಕೃತಾಂತನ ಬಾಣಸುವೊಲಿದನ ಮಾರಿಯ ಮನೆಯಂ (ಯ.ಚ., I, 26, 13th cent.); ಕಲ್ಲಬಾಣಸದ ಮನೆ; (EC. XII(O), Ck.2, 1272); ಅಮೃತಪಡಿಯ ಬಾಣಸು: Amṛitapaḍiya bāṇasu: ದೇವರ ನೈವೇದ್ಯವನ್ನು ತಯಾರಿಸುವ ಅಡುಗೆ ಮನೆ; Kitchen for preparing offerings to the god; (EC. XII(O), Ck.2, 1272). ಸಂ. ಮಹಾನಸ; Sk. Mahānasa.

ಭಂಡಸಾಲೆ; Bhaṇḍasāle: ವಸ್ತುಗಳ ಸಂಗ್ರಹದ ಕಟ್ಟಡ; Warehouse; ಹುಲಿವರದ ಭಣ್ಡಸಾಲೆಯ ಮಲ್ಲಿಸೆಟ್ಟಿ; (SII. XX, 101, 1129).

ಭೋಜನಶಾಲೆ; Bhōjanaśāle: ಊಟದ ಮನೆ; Dining hall; (ಜೈ.ಭಾ. VI, 43, 16th cent.; EI. XXXVIII, 24, 1134).

ಮಜ್ಜನಗೃಹ; Majjanagṛiha: ಸ್ನಾನದ ಮನೆ; ಬಚ್ಚಲಮನೆ; Bath-room; (ಅಜಿ.ಪು., Aji.Pu. X, 1 ವ, Pr. 10th cent.).

ಮಹಾಪ್ರಾಕಾರ; Mahāprākāra: ಹೆಗ್ಗೋಡೆ; Compound wall; (ಅಜಿ.ಪು., Aji.Pu. X, 1 ವ, Pr. 10th cent.).

ಮಹಾಪ್ರಾಸಾದ; Mahāprāsada: ದೊಡ್ಡ ಅರಮನೆ; A big mansion; (ಅಜಿ.ಪು., Aji.Pu. X, 1 ವ, 10th cent.).

ಮಹಾಪ್ರೇಕ್ಷಾಗೃಹ; Mahāprēkshāgṛiha: ಪ್ರೇಕ್ಷಕರಿಗಾಗಿ ದೊಡ್ಡ ಸಭಾಗೃಹ; Large auditorium; (ಅಜಿ.ಪು. Aji.Pu. X, 1 ವ, 10th cent.).

ಮಾಳಿಗೆ; Māḷige: (1) ಅಟ್ಟ; ಮೇಲಿನ ಅಂತಸ್ತು; Upper floor of the house; (2) ಮನೆ; House; ಮಾಳಿಗೆಸಹಿತಮಪ್ಪೊಂದು ನಿವೇಶನಮುಮಂ; (SII. XX, 198, 1227).

ಮೊಗಸಾಲೆ; Mogasāle: ಮನೆಯ ಮುಂದಿನ ಪಡಸಾಲೆ; A verandah in front of the house; (ಪಂ.ರಾ. II, 2ವ, 10th cent.).

ವಟ್ಟಾರ; Vaṭṭāra: s.a. ವಠಾರ; Vaṭhāra below; (EI. XXXVIII, 24, 1134).

ವಠಾರ; Vaṭhāra: ಮನೆಗಳ ಸಾಲು; Line of houses; (SII. XVIII, 301, 1233).

ಸತ್ರದ ಮನೆ; Satrada mane: ಅನ್ನಛತ್ರವನ್ನು ನಡೆಸುವ ಮನೆ; Building for running free feeding house; ದೇವರ ಸತ್ರದ ಮನೆ; (EI. XII, 37, 1105).

ಸತ್ರಶಾಲಾ; Satra-śalā: s.a. ಸತ್ರದ ಮನೆ; Satrada mane (IND. 2, 10th cent.).

ಸಭಾಮಂಟಪ; Sabhāmaṇṭapa: ಜನರು ಸೇರುವ ವಿಶಾಲವಾದ ಮಂಟಪ, ಬಹುಶಃ ದೇವಾಲಯಕ್ಕೆ ಹೊಂದಿದ್ದು; An essembly hall, perhaps attached to a temple; ಅಶೇಷ ಮಹಾಜನಗಳು ಸಭಾ ಮಂಟಪದಲು ಮಹಾಸಭೆಯಾಗಿ ನೆರೆದಿದ್ದಲ್ಲಿ; (EC. V(O), Ak.123, 1237).

ಸರ್ವ್ವಲೋಕಾಶ್ರಯಮಂಡಪ; Sarvvalōkāśraya-maṇḍapa: ಎಲ್ಲರಿಗೂ ಮುಕ್ತವಿರುವ ಧರ್ಮಶಾಲೆ; Rest house open to all; ಸುವಿಹಿತ ಪ್ರವರಾಣಾಸ್ತರಣಾದಿ ಪರಿಕರ: ಸರ್ವ್ವಲೋಕಾಶ್ರಯ ನಾಮಾ ಮಂಡಪ; (IND. 2, 10th cent.).

೯. ಮೇರೆಗಳು

9. BOUNDARIES

ಆಘಾಟ; Āghāṭa: ಮೇರೆ; Boundary; (EI. VI, 4, 860).

ಚತುರಾಘಾಟ; Chaturāghāṭa: ನಾಲ್ಕೂ ದಿಕ್ಕುಗಳ ಮೇರೆಗಳು; Boundaries on all four sides; (SII. XV, 128, 1174; Ibid. 220, 1207; KI. V, 42, 1239).

ಚತುಸೀಮೆ, ಚತುಸ್ಸೀಮೆ; Chatuḥsīme, Chatussīme: ನಾಲ್ಕೂಕಡೆಗಳ ಮೇರೆ; Boundary on all four sides; (SII. XV, 220, 1207; Ibid. IX, II, 449, 1444); ಚತುಸೀಮೆಗಳಿಗೆ ವಾಮನಮುದ್ರೆಯ ಕಲ್ಲುಗಳನೂ ನಡಿಸಿ ಕೊಟ್ಟೆವಾಗಿ; (EC. VIII(O), Tl.190, 1405).

ಚತುಃಸೀಮಾಘಾಟ; Chatuḥsīmāghāṭa: ನಾಲ್ಕು ಕಡೆಗಳಲ್ಲಿ ನಿರ್ದಿಷ್ಟಪಡಿಸಿದ ಮೇರೆ; Area with specified boundaries on all four sides; (SII. XX, 158, 1176).

ಚತುಃಸೀಮಾಸಂಶುದ್ಧಿ; Chatuḥ-sīmā-samśuddhi: ಯಾವದೊಂದು ಸ್ಥಾನದ ನಾಲ್ಕೂ ಮೇರೆಗಳನ್ನು ಸ್ಪಷ್ಟವಾಗಿ ಗುರುತಿಸುವದು; Clear demarcation of four boundaries of a place; (SII. XV, 96, 1156).

ಗೋಟು; Gōṭu: ಅಂಚು; ಮೇರೆ; Boundary; ದೇವರ ಪರಿಸೂತ್ರದಾಗ್ನೇಯದ ಗೋಟಿಂ ತೆಂಕ ಶ್ರೀ ರಾಮೇಶ್ವರ ದೇವರ ತೋಟದಿಂ; (APGAS. III, Gb.4, 12th cent.).

ಸೀಮಾಸೂತ್ರ; Sīmāsūtra: s.a. ಚತುಃಸೀಮೆ; Chatuḥsīme; (SII. IX, I, 247, 1147).

ಸೀಮಾಕ್ರಮ; Sīmākrama: ಮೇರೆಗಳನ್ನು ನಿರ್ದಿಷ್ಟಪಡಿಸುವ ವಿಧಾನ; Order of describing the boundaries; ಬಸದಿಯ ಕೆಯ್ಯ ಸೀಮಾಕ್ರಮುಮೆಂತೆಂದಡೆ; (SII. XV, 128, 1174).

೧೦. ಮೇರೆಗಲ್ಲುಗಳು

10. BOUNDARY STONES

ಎಲ್ಲೆಗಲ್ಲು; Ellēgallu: ಮೇರೆಗಲ್ಲು; Boundary stone; ಯೀ ಗ್ರಾಮಕ್ಕೆ ಸಲುವ ಚತುಸೀಮೆಯಲ್ಲೆಗಲ್ಲಿನ ವಿವರ; (EC. IV(R), Ch.302, 1536).

ಗಡಿಯ ಕಲ್ಲು; Gaḍiya kallu: ಗಡಿಯನ್ನು ಗುರುತಿಸಲು ನೆಟ್ಟ ಕಲ್ಲು; A stone set up to mark the boundary; (EC. VIII(O), Tl.133, 1403).

ಚಕ್ರಕಲ್ಲು; Chakra-kallu: ಚಕ್ರದ ಚಿತ್ರವುಳ್ಳ ಮೇರೆಗಲ್ಲು; Boundary stone with the figure of a chakra (wheel); ರಾಜಬೀದಿಗೆ ಹತ್ತಿರ ನಟ್ಟ ಚಕ್ರಕಲು ೧; (SII. IX, II, 533, 1531); ವೈಷ್ಣವ ದತ್ತಿಯನ್ನು ಸೂಚಿಸುವ ವಿಷ್ಣುವಿನ ಆಯುಧವಾದ ಚಕ್ರದ ಚಿತ್ರವುಳ್ಳ ಕಲ್ಲು; Stone bearing the figure of chakra which is the weapon wielded by Vishṇu, indicating a Vaishṇava grant.

ತ್ರಿಸುಲದ ಕಲ್ಲು; (ತ್ರಿಶೂಲದ ಕಲ್ಲು); Trisulada kallu (Triśūlada kallu): ತ್ರಿಶೂಲದ ಚಿಹ್ನೆಯುಳ್ಳ ಮೇರೆಗಲ್ಲು; The boundary stone having the mark of Triśūla (Trident); ಚತುಸೀಮೆಯ ಭೂಮಿಯನು ತ್ರಿಸುಲದ ಕಲ್ಲ ಹಾಕಿಸಿ; (EC. III(R), Hg.133, 1497); ಶಿವನ ಆಯುಧವಾದ ತ್ರಿಶೂಲದ ಚಿಹ್ನೆಯಿದ್ದ ಕಲ್ಲು; ಶೈವ ದತ್ತಿಯನ್ನು ಸೂಚಿಸುತ್ತದೆ;

Stone bearing the figure of Triśūla, the weapon of Śiva; Indicates a Śaiva grant.

ತ್ರಿಶೂಲಾಂಕಿತ ಪಾಷಾಣ; Triśūl-āṁkita-pāśhāna: s.a. ತ್ರಿಶೂಲದ ಕಲ್ಲು; Triśūlada kallu above (EC. IV(O), Ch.64, 1380).

ಧರ್ಮದ ಕಲ್ಲು; Dharmada kallu: ದಾನವಾಗಿ ಕೊಟ್ಟ ಭೂಮಿಯ ಮೇರೆಯ ಕಲ್ಲು; Boundary stone of a donated land; ಇಂತೀ ಧರ್ಮದ ಕಲ್ಲಿಂದೊಳಗೆ ಆಯುಧವನು ಅರೆಕಿತ್ತವಂಗೆ ಅರಸಿಂಗೆ ತಿರುವ ಗದ್ಯಾಣ ೫; (SII. VII, 213, 12th cent.).

ನಂದಿಯ ಕಲ್ಲು; Nandiya kallu: ನಂದಿಯ ಪ್ರತಿಮೆಯುಳ್ಳ ಮೇರೆಯ ಕಲ್ಲು; A boundary stone having the figure of a Nandi (bull); (SII. IX, II, 565, 1534). ಶಿವನ ವಾಹನವಾದ ನಂದಿಯ ಚಿತ್ರವಿದ್ದ ಕಲ್ಲು; ಶೈವ ಧರ್ಮಕ್ಕಾಗಿ ದತ್ತಿಕೊಟ್ಟಿದ್ದನ್ನು ಸೂಚಿಸುತ್ತದೆ; Stone bearing the figure of Nandi, the vāhana of Śiva; Indicates a Śaiva grant.

ಬಸವನ ಕಲ್ಲು; ಬಸವನ ಮುದ್ರೆಯ ಕಲ್ಲು; Basavana kallu; Basavana mudreya kallu: ಬಸವನ ಅಥವಾ ನಂದಿಯ ಮುದ್ರೆಯುಳ್ಳ ಮೇರೆಯ ಕಲ್ಲು; A boundary stone having the image of Basava or Nandi (bull); (SII. IX, II, 453, 1450) s.a. ನಂದಿಯ ಕಲ್ಲು; Naidiya kallu above.

ಲಿಂಗದ ಕಲ್ಲು; Lingada kallu: ಲಿಂಗದ ಚಿಹ್ನೆಯುಳ್ಳ ಮೇರೆಗಲ್ಲು; Boundary stone with the figure of a Śivaliṅga; ನಾಲ್ಕುಂ ದೆಸೆಯೊಳು ನಟ್ಟ ಲಿಂಗದ ಕಲುಗಳ್; (KI. I, 25, 1186); ಶೈವ ದತ್ತಿಯನ್ನು ಸೂಚಿಸುತ್ತದೆ; Indicates a Śaiva grant.

ಲಿಂಗಮುದ್ರೆಯ ಕಲ್ಲು; ಲಿಂಗಮುದ್ರೆಯ ಪಾಷಾಣ; Linga-mudreya kallu; Linga-mudreya pashāṇa: s.a. ಲಿಂಗದ ಕಲ್ಲು; Lingada kallu; (EC. VI(O), Cm.115, 1492; SII. IX, II, 565, 1534).

ಲಿಂಗಮುದ್ರೆಯ ಕಿನ್ನರಿಗಲ್ಲು; Lingamudreya Kinnari-gallu: s.a. ಲಿಂಗಮುದ್ರೆಯ ಕಲ್ಲು; (SII. XV, 220, 1207).

ಮುಕ್ಕೊಡೆ ಕಲ್ಲು; Mukkoḍe-kallu: ಮೂರು ಛತ್ರಗಳ ಚಿತ್ರವಿರುವ ಗಡಿಕಲ್ಲು; A boundary stone with the figures of three umbrellas; ಹರಿವರಿಯ ಗದೆಯಂಚಿನಲ್ಲಿ ನೆಟ್ಟ ಮುಕ್ಕೊಡೆ ಕಲ್ಲು ಗಡಿ; (KI. III, I, 15, 1550); ಜೈನಧರ್ಮದ ದಾನಭೂಮಿಗಳಿಗೆ ಸಂಬಂಧಿಸಿರುತ್ತದೆ; Related to grant-lands of Jaina religion.

ವಾಮನಮುದ್ರೆ ಕಲ್ಲು; Vāmanamudre-kallu: ವಾಮನಾವತಾರದ, ಅಂದರೆ ಕೈಗಳಲ್ಲಿ ಕೊಡೆ, ಪಾತ್ರೆಗಳನ್ನು ಹಿಡಿದುಕೊಂಡ ಮನುಷ್ಯನ ಚಿತ್ರವಿರುವ ಮೇರೆಗಲ್ಲು; Boundary stone with a human figure holding a small vessel and an open umbrella indicating the Vāmana incarnation of Vishṇu; (EC. III(R), Gu.26, 1506; Ibid, VIII(O), Tl.133, 1403). ವಿಶೇಷವಾಗಿ ಇವು ವೈಷ್ಣವ ಧರ್ಮದ ದಾನ ಭೂಮಿಗಳಿಗೆ ಸಂಬಂಧಿಸಿರುತ್ತವೆ. Particularly such stones are related to the grant of lands of Vaishṇava religion.

ಶಾಸನ ಲಿಂಗದ ಕಲ್ಲು; Śāsana-lingada-kallu: ಲಿಂಗದ ಚಿತ್ರವಿರುವ ಶಾಸನದ ಕಲ್ಲು; Inscribed slab with the figure of a linga, serving as a boundary stone; (EC. XI(O), Cl.10, 1054).

ಅಧ್ಯಾಯ ೬ CHAPTER VI

ನಾಣ್ಯ ಪದ್ಧತಿ
COINAGE

೧. ಟಂಕಸಾಲೆಗಳು
1. MINTS

ಅಚ್ಚಿನ ಕಮ್ಮಟ; Achchina kammaṭa: ನಾಣ್ಯಗಳ ಪಡಿಯಚ್ಚಿನ ಟಂಕಸಾಲೆ; Mint for casting coins; ಶ್ರೀಮದಕ್ಕಸಾಲದಚ್ಚಿನ ಕಮ್ಮಟದಲು; (SII. XV, 70, 1186).

ಅಚ್ಚಿನ ಟಂಕಸಾಲೆ; Achchina-ṭankasāle: s.a. ಅಚ್ಚಿನ ಕಮ್ಮಟ; Achchina Kammaṭa; ಅಚ್ಚಿನ ಟಂಕಸಾಲೆಯಲು ದಳಕ್ಕೆ ವೀಸ ೨; (SII. IX, I, 228, 1133).

ಕಮ್ಮಟ; Kammaṭa: ಟಂಕಸಾಲೆ, ನಾಣ್ಯಗಳನ್ನು ಮುದ್ರಿಸುವ ಸ್ಥಳ; Mint; Place where coins were struck; ಕಂಮಟಕೆ ಬಂಗಾರ ಬೆಳ್ಳಿ ಸಂದಲ್ಲಿ ಹೊಂಗೆ ಕಾಣಿ; (HAS. XVIII, 17, 1215; EC. II(R), 433, 10th cent.).

ಕಮ್ಮಟದ ಅಚ್ಚಿನ ಮೊಳೆ; Kammaṭada achchina moḷe: ಟಂಕಸಾಲೆಯ ಪಡಿಯಚ್ಚಿನ ಮೊಳೆ; Types in the mint; ಅಲ್ಲಿಯ ಕಮ್ಮಟದಚ್ಚಿನ ಮೊಳೆಯಕ್ಕಸಾಲಿಗಳು; (SII. IX, I, 295, 1172).

ಟಂಕಸಾಲೆ; Tankasāle: ನಾಣ್ಯಗಳನ್ನು ಮುದ್ರಿಸುವ ಸ್ಥಳ; Place where coins were minted; (EC. X(O), Mb.142, 12th cent.).

ಬಿಡಿಗಮ್ಮಟ; Biḍigammaṭa: ಚಿಲ್ಲರೆ ನಾಣ್ಯಗಳನ್ನು ಪೂರೈಸುವ ಟಂಕಸಾಲೆ; Mint supplying coins for retail orders; (SII. IX, I, 262, 12th cent.).

ಬೆಳ್ಳಿಗಮ್ಮಟ; Beḷḷigammaṭa: ಬೆಳ್ಳಿಯ ನಾಣ್ಯಗಳನ್ನು ತಯಾರಿಸುವ ಟಂಕಸಾಲೆ; Mint where silver coins were minted; ಬೆಳ್ಳಿಗಮ್ಮಟದವರು ಅಜ್ಜಿಯ ವಸ್ತ್ರದಾನಕ್ಕೆಂದು; (SII. XV, 67, 1185).

ಬೇಡಿಗೆಯ ಕಮ್ಮಟ; Bēḍigeya-kammaṭa: ಒಟ್ಟು ಗುತ್ತಿಗೆಗೆ ನಾಣ್ಯ ಪೂರೈಸುವ ಟಂಕಸಾಲೆ; The mint that supplied coins for whole sale orders; (SII. IX, I, 262, 12th cent.).

೨. ಟಂಕಸಾಲೆಯ ಅಧಿಕಾರಿಗಳು
2. OFFICERS OF THE MINT

ಕಮ್ಮಟಕಾಱ; Kammaṭakāṟa: ಟಂಕಸಾಲೆಯ ಅಧಿಕಾರಿ; Officer of the mint; mint master; (HAS. XVIII, 8, 1109).

ಕಮ್ಮಟದ ಅಧಿಕಾರಿ; Kammaṭada adhikāri: ಟಂಕಸಾಲೆಯ ಅಧಿಕಾರಿ; Officer of the mint; (HAS. XVIII, 8, 1109).

ಸವಕಟ್ಟುಕಾಱ; Savakaṭṭukāṟa: ನಾಣ್ಯಗಳನ್ನು ತಿಕ್ಕಿ ತೂಕ ಆಕಾರಗಳಿಗನುಗುಣವಾಗಿ ಸಮರೂಪ ಮಾಡುವ ಕೆಲಸಗಾರ; Worker who trains the diestruck coins, making them uniform in size and weight; ಸವಕಟ್ಟುಗಾಱರು ದಳಕ್ಕೆ ತಮ್ಮ ಉಂಬಳಿಯಲು ಕೊಟ್ಟ ವೀಸ ೧; (HAS. XVIII, 8, 1109).

೩. ನಾಣ್ಯಗಳ ಗುತ್ತಿಗೆ, ಗುತ್ತಿಗೆದಾರರು

3. CONTRACT OF COINS, CONTRACTORS

ಅಚ್ಚಿನ ಕೇಣಿ; Achchina kēṇi: ಪಡಿಯಚ್ಚಿನ ಗುತ್ತಿಗೆ; Contract for supply of dyes; ತವನಿಧಿ ಕೇಶವದೇವಂ ತನ್ನಚ್ಚಿನ ಕೇಣಿಯಲ್ಲಿ; (SII. XV, 119, 1173).

ಅಚ್ಚಿನ ಕೇಣಿಕಾರ; Achchina kēṇikāra: ಟಂಕಸಾಲೆಯ ಗುತ್ತಿಗೆದಾರ; ನಾಣ್ಯಗಳ ವ್ಯವಹಾರಿ; Person holding the monopoly in the mint; person dealing in coins; ಶ್ರೀಮದಚ್ಚಿನ ಕೇಣಿಕಾಱ ಭಾಗ್ಯೋದಯ ಕೇಶವದೇವಯ್ಯಂಗಳು; (SII. XV, 135, 1179).

ಅಚ್ಚಿನ ಮೊಳೆಯ ಕೇಣಿಕಾಱ; Achchina moḷeya kēnikāṟa: ನಾಣ್ಯಗಳ ಪಡಿಯಚ್ಚುಗಳ ವ್ಯವಹಾರಿ; ಗುತ್ತಿಗೆದಾರ; Person holding the monopoly of casting of the dyes in the mint; (SII. XV, 67, 1185).

೪. ನಾಣ್ಯಗಳ ಪ್ರಕಾರಗಳು

4. TYPES OF COINS

ಅಡ್ಡ; Aḍḍa: ಒಂದು ನಾಣ್ಯ; ಬಹುಶಃ ಸಂಸ್ಕೃತ ಅರ್ಧ ಶಬ್ದದ ತದ್ಭವ; A coin; *tadbhava* of Sanskrit ardha; ಹೆಚ್ಚಿನ ಬೆಲೆಯ ನಾಣ್ಯದ ಅರ್ಧ ಬೆಲೆಯ ನಾಣ್ಯವಿದ್ದಿರಬೇಕು; Probably half of a coin of higher denomination; ಮತ್ತರಿಗಡ್ಡ ಚಿನ್ನ ಲೆಕ್ಕದಿಂದಱುವಣಮುಂ ಮೂಱು ಪಣಮುಂ ತೆತ್ತುಂಬಂತಾಗಿ; (SII. V, 849, 1044); ಕೊಂಡವರಲ್ಲಿ ಪೊಂಗಡ್ಡ; (Ibid. IX, I, 200, 1121); ಬಡಗಿ ಕಮ್ಮಾಱ ಅಕ್ಕಸಾಲ ಬೆಱಟ್ಟುಂಬರಾದಿಯಾಗಿ ಒಕ್ಕಲು ಅಡ್ಡಮುಂ ಬಿಟ್ಟರು; (EI. XII, 37D, 1110).

ಅರ್ಧಕಾಟಿ ಗದ್ಯಾಣ; Ardha-kāṭi-gadyāṇa: ಕಾಟಿ ಗದ್ಯಾಣದ ಅರ್ಧಬೆಲೆಯ ನಾಣ್ಯ; Coin half of the denomination of Kāṭi-gadyāṇa; ಅಗರ ಸಹಿತವಾಗಿ ಕೊಟ್ಟ ಅರ್ಧಕಾಟಿ ಗದ್ಯಾಣ; (SII. IX, II, 659, 1555). See ಕಾಟಿಗದ್ಯಾಣ below.

ಅರ್ಧಕಾಟಿಹೊನ್ನು; Ardha-kāṭi-honnu: s.a. ಅರ್ಧಕಾಟಿ ಗದ್ಯಾಣ; Ardha-Kāṭi-gadyāṇa; (SII. IX, II, 471, 1482) (ಹೊನ್ನು = ಗದ್ಯಾಣ; Honnu=Gadyāṇa). See ಕಾಟಿಹೊನ್ನು; Kāṭi-honnu below.

ಅರ್ಧಗದ್ಯಾಣ; Ardha-gadyāṇa: ಗದ್ಯಾಣದ ಅರ್ಧಬೆಲೆಯ ನಾಣ್ಯ; A coin half in denomination of Gadyāṇa. See ಗದ್ಯಾಣ below.

ಅರ್ಧವರಹ; Ardha-varaha: ವರಹದ ಅರ್ಧಬೆಲೆಯ ನಾಣ್ಯ; A coin half in denomination of varaha; (SII. IX, II, 512, 1520). See ವರಹ below.

ಅರ್ಧವರಹ ಗದ್ಯಾಣ; Ardha-varaha-gadyāṇa: ವರಹ ಎಂಬ ಹೆಸರಿನ ಗದ್ಯಾಣದ ಅರ್ಧಬೆಲೆಯ ನಾಣ್ಯ; A coin half in denomination of Gadyāṇa known as varaha; (SII. IX, II, 471, 1482). See ವರಹ below.

ಅರೆವಾಗ; Arevāga: ಹಾಗ ಅಥವಾ ಪಾಗವೆಂಬ ನಾಣ್ಯದ ಅರ್ಧಬೆಲೆಯ ನಾಣ್ಯ; A coin half in denomination of Hāga or Pāga; (SII. XVIII, 120, 1122; Ibid. 206, 1227). See ಪಾಗ, ಹಾಗ below.

ಅರೆವೀಸ; Are-vīsa: ವೀಸದ ಅರ್ಧಬೆಲೆಯ ನಾಣ್ಯ; A coin half in denomination of vīsa; (SII. XX, 77, 1118). See ವೀಸ below.

ಅಣಿ ಗದ್ಯಾಣ; Āṇi-gadyāṇa: ಗದ್ಯಾಣದ ಒಂದು ವಿಧ; ಬಹುಶಃ ಚೊಕ್ಕ ಚಿನ್ನದ ನಾಣ್ಯ; A type of Gadyāṇa, probably coin of pure gold; ತಪೋಧನರ್ಗೆ ಭೋಜನವಂ ಬಡ್ಡಿಯಿಂದಂ ಮಾಡುವಂತಾಗಿ ಬಿಟ್ಟ ಅಣಿಗದ್ಯಾಣ ೨; (SII. XV, 612, 1249).

ಆನೆಯ ಪೊನ್; Āneya pon: ಆನೆಯ ಚಿನ್ಹವಿರುವ ಗದ್ಯಾಣ ಅಥವಾ ಚಿನ್ನದ ನಾಣ್ಯ; A Gadyāṇa or gold coin with the figure of an elephant; ಪ್ರತಿವರ್ಷ ಆನೆಯ ಪೊನ್ನಾಱು ಗದ್ಯಾಣಮುಂ ಧರಣಪೊನ್ನ ಆದಿತ್ಯದೇವರ್ಗೆ ಇಕ್ಕುವ; (SII. IX, I, 75, 987).

ಕಟಕಗದ್ಯಾಣ; Kaṭaka-gadyāṇa: ಗದ್ಯಾಣದ ಒಂದು ವಿಧ; A type of Gadyāna; (SII. XV, 15, 1137; EI. XXXVII, 34, 1132).

ಕಟಕಪ್ರಿಯ ಗದ್ಯಾಣ; Kaṭaka-priya-gadyāṇa: s.a. Kaṭaka-gadyāṇa; (EI. XXXVII, 34, 1132).

ಕಟಿ; Kaṭi (Kāṭi): s.a. ಕಾಟಿ ಗದ್ಯಾಣ; Kāṭi-gadyāṇa below; (SII. IX, II, 539, 1531).

ಕಟಿ ಗದ್ಯಾಣ; Kaṭi-gadyāṇa: s.a. ಕಾಟಿ ಗದ್ಯಾಣ; Kāṭi-gadyāṇa below; (SII. IX, II, 424, 1401).

ಕಟಿಗೆ ವರಹ; Kaṭige-varaha: ನಾಣ್ಯದ ಒಂದು ವಿಧ; A type of coin; (SII. IX, II, 511, 1519).

ಕಠಾರಿ ಅಂಕುಶ ಗದ್ಯಾಣ; Kaṭhāri-ankuśa-gadyāṇa: ಕಠಾರಿ ಮತ್ತು ಅಂಕುಶ ಚಿನ್ಹಗಳಿದ್ದ ಗದ್ಯಾಣ; Gadyāṇa with the figures of a dagger and trident; ಕಠಾರಿ ಅಂಕುಸ ಗ ೪ ಅಕ್ಷರದಲು ಗದ್ಯಾನ ನಾಕು; (SII. VII, 229, 1390).

ಕರಿಯ ದ್ರಮ್ಮ; Kariya dramma: ದ್ರಮ್ಮದ ಒಂದು ವಿಧ, ಬಹುಶಃ ಆನೆಯ ಚಿತ್ರವಿದ್ದ ದ್ರಮ್ಮ; A variety of Dramma, probably with the emblem of a Kari i.e. an elephant; (IND. 38, 12th cent.). Cf. ಆನೆಯ ಗದ್ಯಾಣ above.

ಕಾಗಿಣಿ; Kāgiṇi: ಒಂದು ನಾಣ್ಯ; A type of coin; ೪ ಕಾಗಿಣಿ = ೧ ವೀಸ; 4 Kāgiṇi = 1 vīsa; ಬಹಳಕಾಲದಿಂದಲೂ ಪ್ರಚಲಿತವಿದ್ದುದು; A coin current from ancient time; ಆ ಹಸುಂಬೆಗಳ್ಗೆ ಕಾಗಿಣಿ ಎರಡು; (EC. VI(O), Kd. 96, 1141). See HD. Vol.III, p.126.ಕಾಕಿಣಿ; ನೀ.ವಾ, Nī.Vā. 28, 44.

ಕಾಟಿ; Kāṭi: s.a. ಕಾಟಿ ಗದ್ಯಾಣ; Kāṭi gadyāṇa; ಪ್ರತಿ ವ ಗ ೧ ಕ್ಕಂ ಕಾ ೪ ರಲೆಕ್ಕದಲು; (EC. VIII(O), Ng.69, 1464); ಎಂಣೆಯ ಕಟ್ಟಳೆಗೆ ಕಾಟಿ ಗ ೧೧೫ ಅಕ್ಷರದಲೂ ನೂಱ ಹದಿನೈದು ಕಾಟಿಯನೂ; (SII. IX, II, 461, 1467).

ಕಾಟಿ ಗದ್ಯಾಣ; Kāṭi-gadyāṇa: ಕಾಟಿ ಗದ್ಯಾಣ ಹೊನ್ನು; Kāṭigadyāṇa honnu; ಚಿನ್ನದ ನಾಣ್ಯವಾಗಿದ್ದ ಗದ್ಯಾಣದ ಒಂದು ವಿಧ; A type of gold gadyāṇa; (SII. IX, II, 417, 1377; Ibid. VII, 385, 1425; Ibid. IX, II, 450, 1444).

ಕಾಟಿ ವರಹ ಗದ್ಯಾಣ; Kāṭi-varaha-gadyāṇa: s.a. ಕಾಟಿ ಗದ್ಯಾಣ; Kāṭi-gadyāṇa; (SII. IX, II, 417, 1525).

ಕಾಟಿ ಹಣ, ಕಾಟಿಯ ಹಣ; Kāṭi-haṇa, Kāṭiya haṇa: ಒಂದು ವಿಧವಾದ ಪಣ; A type of paṇa; (SII. VII, 374, 14th cent.; Ibid. 346, 1475). See ಪಣ below.

ಕಾಟಿ ಹೊನ್ನು; Kāṭi-honnu: s.a. ಕಾಟಿ ಗದ್ಯಾಣ; Kāṭi-gadyāṇa; (SII. VII, 383, 1414).

ಕಾಟಿ ಹೊಂಗದ್ಯಾಣ; Kāṭi-hoṁ-gādyāṇa: ಚಿನ್ನದ ಕಾಟಿಗದ್ಯಾಣ; ಕಾಟಿಹೊನ್ನು; (SII. IX, II, 511, 1519).

ಕಾಣ; Kāṇa: s.a. ಕಾಣಿ; Kāṇi below; (EI. XXIV, 70, 964).

ಕಾಣಿ; Kāṇi: ಚಿಕ್ಕ ನಾಣ್ಯ; ಪಣದ ಅರವತ್ತನಾಲ್ಕನೆಯ ಭಾಗ; A kind of small coin, 1/64 of a paṇa; ಸಮಸ್ತ ತೂಕದ ಭಂಡವನಿತಕ್ಕಂ ಪೊಂಗೆ ಕಾಣಿ ಎರಡು; (EC. VII(O), Sk.118, 1150).

ಕಾಶು; Kāśu: s.a. ಕಾಸು; Kāsu below; (EC. X(O), Ck.22, 1049).

ಕಾರ್ಷಾಪಣ; Kārshāpaṇa: ಬಂಗಾರ, ಬೆಳ್ಳಿ ಅಥವಾ ತಾಮ್ರದಿಂದಾದ ಒಂದು ನಾಣ್ಯ; ಬಂಗಾರದ ಕಾರ್ಷಾಪಣದ ತೂಕ = ೮೦ ಅಥವಾ ೧೦೦ ರತಿ (ಗುಂಜಿ); ತಾಮ್ರದ ಕಾರ್ಷಾಪಣದ ತೂಕ = ೮೦ ಅಥವಾ ೧೦೦ ರತಿ (ಗುಂಜಿ); A coin made of gold, copper or silver. Gold Kārshāpaṇa weighed 80 or 100 Ratis and copper Kārshāpaṇa weighed 80 or 100 Ratis; (IEG. p.149); ಪೆರೂರೇವಾನಿಅದಿಗದರ್ಹ ದಾಯತನಾಯ ಶುಲ್ಕಬಹಿಷ್ಕರ್ಷಾಪಣೇಷು ಪಾದಶ್ಚ; (EC. X(O), Ml.72, 425).

ಕಾಸು; Kāsu: ತಾಮ್ರದ ಚಿಕ್ಕ ನಾಣ್ಯ; Copper coin of small denomination; ತಿರುವೆಂಗಳನಾಥನ ಸ್ತಾನವಮಾನಕ್ಕೆ ಯಾವದೊಂದು ಕಾಸು ವೀಸದ ತೆರ್ಗೆ (ತೆರಿಗೆ)ನೂ ಯಿಲಾ; (EC. VI(O), Kd.6, 14th cent.).

ಕಿರಿಯ ಪಾಗ; Kiriya pāga: ಪಾಗಕ್ಕಿಂತ ಕಡಿಮೆ ಬೆಲೆಯ ಒಂದು ಪ್ರಕಾರದ ಚಿಕ್ಕ ಪಾಗ; A variety of small pāga of a lesser denomination; ಪೊಂಗೆ ತಿಂಗಳ್ಗೆ ಕಿಱಿಯ ಪಾಗ ಬಡ್ಡಿ ಲೆಕ್ಕದೆ; (SII. XV, 1, 1059).

ಕಿರು ಹೊನ್ನು; Kiru-honnu: ಗದ್ಯಾಣಕ್ಕಿಂತ ಕಿರಿಯ ಪ್ರಮಾಣದ ಚಿನ್ನದ ನಾಣ್ಯ; A gold coin of a denomination smaller than a Gadyāṇa; ಪೆರ್ಬ್ಬೊನ್ನಮುಂ ಕಿಱುವೊನ್ನನೊಳಂ; (EC. VI(O), Cm.129, 900).

ಕುಮಾರ ಗದ್ಯಾಣ; Kumāra-gadyāṇa: ಗದ್ಯಾಣದ ಒಂದು ವಿಧ, ಬಹುಶಃ ಕುಮಾರ ಅಥವಾ ಕಾರ್ತಿಕೇಯನ ಚಿತ್ರವಿರುವ ನಾಣ್ಯ; A type of gold coin, probably with the emblem of Kumāra or Kārtikēya; (EC. X(O), Mb.49 (a), 1072; Ibid. IX(O), Bn.6, 1233).

ಕೊಮಾರ ಗದ್ಯಾಣ; Komāra-gadyāṇa: s.a. ಕುಮಾರ ಗದ್ಯಾಣ; Kumāra Gadyāṇa; (EC. XI(O), Hk.30, 964).

ಗದ್ಯಾಣ; Gadyāṇa: ಚಿನ್ನದ ನಾಣ್ಯ; Gold coin; ಪೊನ್ ಅಥವಾ ಪೊಂಗದ್ಯಾಣ ಎಂದೂ ಕರೆಯಲ್ಪಡುತ್ತಿತ್ತು; Also known as pon or poṁgadyāṇa; ಒಂದು ವರಹಕ್ಕೆ ಸಮಾನವಾದ ಚಿನ್ನದ ನಾಣ್ಯ; A gold coin equal to a varaha; ತಿರುವೆಂಗಳನಾಥ ದೇವತಾಪ್ರತಿಷ್ಠೆಗೆ ಹಾಕಿದ ದ್ರವ್ಯ ಗ ೭೦ ಅಕ್ಕರದಲು ಯೆಪ್ಪತ್ತು ವರಹ; (EC. VII(O), Sk.54, 1523); ಗ ೪೦ ಅಕ್ಷರದಲ್ಲಿ ಗಟ್ಟಿ ನಲ್ವತ್ತು ವರಹ; (EC. III(R), Nj.217, 1530); ಪ್ರಾಚೀನ ಕಾಲದಿಂದ ಅಸಂಖ್ಯ ಶಾಸನಗಳಲ್ಲಿ ಕಂಡುಬರುತ್ತದೆ. Found in numerous inscriptions from very early period.

ಗದ್ಯಾಣಕ; Gadyāṇaka: s.a. ಗದ್ಯಾಣ; Gadyāṇa; ತಸ್ಯ ಹಸ್ತೇ ಜ್ಞಾನಶಿವಾಚಾರ್ಯ್ಯೇಣ ತ್ರಿಂಶದ್ಭಿರ್ಗ್ಗದ್ಯಾಣಕೈಃ; (EI. III, 1, 754).

ಗದ್ಯಾಣ ಪೊನ್ನು; ಗದ್ಯಾಣ ಪೊನ್, ಗದ್ಯಾಣ ಹೊನ್ನು; Gadyāṇa-ponnu, Gadyāna-pon, Gadyāṇa-Honnu: ಗದ್ಯಾಣವೆಂಬ ಚಿನ್ನದ ನಾಣ್ಯ; A gold coin called Gadyāṇa; (SII. IX, I, 165, 1099).

ಗರದ್ರಮ್ಮ; Garadramma: ದ್ರಮ್ಮ ಎಂಬ ನಾಣ್ಯದ ಒಂದು ವಿಧ; A variety of a coin called Dramma; (SII. XVIII, 66, 1062). See ದ್ರಮ್ಮ below.

ಗಂಬೊನ್ನು; Goṁ-bonnu: ಗದ್ಯಾಣ ಪೊನ್ನು; ಎಂದರೆ ಚಿನ್ನದ ಗದ್ಯಾಣ ಎಂಬುದರ ಸಂಕ್ಷಿಪ್ತ ರೂಪ Abbreviation of Gadyāṇa-ponnu, i.e. a gold coin Gadyāṇa; (EI. XVI, 21D, 970).

ಗ್ರಾಮ-ಗದ್ಯಾಣ; Grāma-gadyāṇa: ಗದ್ಯಾಣದ ಒಂದು ವಿಧ; A type of Gadyāṇa; (EC. VII(O), Hn.71, 1396)

ಗುಲಿಕೆ, ಗುಳಿಕೆ; Gulike, Guḷike: ಗದ್ಯಾಣಕ್ಕಿಂತ ಕಡಿಮೆ ಬೆಲೆಯ ನಾಣ್ಯ; A kind of coin, lesser in value than Gadyāṇa; ಸೇನಬೋವ ಮಯಿಲಣಂಗಳು ಬಿಟ್ಟ ಕಟಕಂ ಗದ್ಯಾಣ ೨ ಗುಲಿಕೆ ೪ ಅನ್ತು ಗದ್ಯಾಣ ೧೨ ಗುಳಿಕೆ; (SII. XV, 15, 1157).

ಗೌಡ ಗದ್ಯಾಣ; Gauḍa-Gadyāṇa: ಗದ್ಯಾಣದ ಒಂದು ಪ್ರಭೇದ; A type of Gadyāṇa; ಮುಡಿಯ ರಾಮೇಶ್ವರದ ಗದ್ಯಾಣ ೩ ಮ ೬ ಉಪ್ಪಿನಿಕ ಗೌಡ ಗದ್ಯಾಣ ೧ ಮ ೨; (SII. IX, I, 145, 1079).

ಘಟ್ಟಿ ಗದ್ಯಾಣ; Ghaṭṭi-gadyāṇa: ಅಚ್ಚ ಚಿನ್ನದ ಗದ್ಯಾಣ; Gadyāṇa of pure gold; ಘಟಿ ಗ ೫ ಅಯಿದು ವರಹ; (EC. IX(R), Bl.148, 1557).

ಘಟ್ಟಿ ವರಹ ; Ghaṭṭi-varaha: s.a. ಘಟ್ಟಿ ಗದ್ಯಾಣ; Ghaṭṭi-gadyāṇa; (SII. IX, II, 187, 1538).

ಘಟ್ಟಿ ವರಹ ಗದ್ಯಾಣ; Ghaṭṭi-varaha-gadyāṇa: s.a. ಘಟ್ಟಿ ಗದ್ಯಾಣ; Ghaṭṭi-gadyāṇa; (SII. IX, II, 588, 1538).

ಚಕ್ರ ಗದ್ಯಾಣ; Chakra-gadyāṇa: ಚಕ್ರದ, ಬಹುಶಃ ವಿಷ್ಣುವಿನ ಚಕ್ರದ ಚಿಹ್ನೆಯುಳ್ಳ ಗದ್ಯಾಣ; A gadyāṇa having the sign of Vishṇu's chakra over it; (SII. IV, 262, 1533).

ಚಿಕ್ಕ ಗದ್ಯಾಣ; Chikka gadyāṇa: ಚಿ.ಗ. ಎಂದು ಸಂಕ್ಷಿಪ್ತರೂಪದಲ್ಲಿ ಉಕ್ತವಾಗಿದೆ; Mentioned in the abbreviated form as chi.ga; ಗದ್ಯಾಣಕ್ಕಿಂತ ಕಡಿಮೆ (ಬಹುಶಃ ಅರ್ಧ) ಬೆಲೆಯ ನಾಣ್ಯ; Coin of a smaller (probably half) denomination than gadyāṇa; ಲೋಕಮನಾಯ್ಕತಿಯ ಬಗೆಯಾದ ಗ ಮೂಱುಕೆ ತೆಱು; (KI. III, 11, 1542).

ಚಿಕ್ಕ ತಾರ; Chikka tāra: ಒಂದು ವಿಧದ ಬೆಳ್ಳಿಯ ನಾಣ್ಯ; ಅದರ ಬೆಲೆ ತಾರದ ಅರ್ಧದಷ್ಟು ಎಂದು ತೋರುತ್ತದೆ; A type of silver coin; seems to be half of the

value of tāra; ಚಿಕ್ಕ ತಾಱವ ತೆಱುವರು ಬೆಳ್ಳಿಯ ತಾರದರ್ಧದ; (SII. IX, I, 336, 1219).

ಚೌಲ; Chaula: ಒಂದು ವಿಧದ ನಾಣ್ಯ; A type of coin; (EC. XI(O), Mk.31, 1387).

ಜಗದಟಿ ಗದ್ಯಾಣ; Jagadaḷa-gadyāṇa: ಒಂದು ಬಗೆಯ ಗದ್ಯಾಣ; A type of gadyāṇa; ಆಂಧ್ರದಂಡದ ಪರ್ಷೆಗೆ ಭೋಜನವಂ ಮಾರ್ಪ್ಪಂತು ಕೊಟ್ಟ ಜಗದಟಿಂ ಗದ್ಯಾಣ ೨೫; (SII. XVIII, 118, 1121)

ಡೊಂಕಿವಣ, ಡೊಂಕೆವಣ; Ḍiṇkivaṇa, Ḍoṇkevaṇa: ಪಣ ಎಂಬ ನಾಣ್ಯದ ಒಂದು ವಿಧ; A type of coin called paṇa; ನಂದಾದೀವಿಗೆಗೆ ಡೊಂಕಿವಣ ಮಾನೆಣ್ಣೆಸಹಿತಂ ಬಿಟ್ಟ ಗಾಣವೊಂದು; (KI. II, 10, 1080; Ibid. IV, 13, 1165). See ಪಣ below.

ಡೊಂಕಿ ಬೀರವಣ; Ḍonki-bīravaṇa: ಒಂದು ಬಗೆಯ ಡೊಂಕಿವಣ; A type of Ḍonkivaṇa; ದೇವರ ಗಾಣಕ್ಕೆ ತೇಱ ಬಣ್ಣಿಗೆ ಡೊಂಕಿಬೀರವಣ ಸರ್ವ್ವಬಾಧಾ ಪರಿಹಾರಮಾಗಿ ಬಿಟ್ಟರು; (SII. XI, II, 158, 1109).

ತಾರ; Tāra: ಒಂದು ಬೆಳ್ಳಿಯ ನಾಣ್ಯ; A silver coin; ಹತ್ತಿಯ ಬಂಡಿಗೆ ತಾರಂ ಮೂಱು; (EI. XIII, 3A, 1204); ರಾಹುತಂಗೆ ಮೂಱು ತಿಂಗಳಿಗೆ ತಾ ೨ ಕಾಲಾಳಿಂಗೆ ಮೂಱು ತಿಂಗಳಿಂಗೆ ತಾ ೧; (EC. VII(O), Hl.18, 1286); ಬೆಳ್ಳಿಯ ತಾರದರ್ಧದ; (SII. IX, I, 336, 1219).

ತೊಡರು ಗದ್ಯಾಣ; Toḍaru-gadyāṇa: ಗದ್ಯಾಣದ ಒಂದು ಪ್ರಕಾರ; A type of gadyāṇa; (EC. IX(R), Bl.170, 1261).

ದಮ; ದಾಮ; Dama, Dāma: ದ್ರಮ್ಮ ಶಬ್ದದ ವಿಕೃತ ರೂಪ; Corrupt form of Dramma; (EI. XXIII, 43D, 1185). See ದ್ರಮ್ಮ, Dramma below.

ದಮ್ಮ; Damma: s.a. ದ್ರಮ್ಮ; Dramma; ಕೆಸಲೂರ್ಗ್ಗೆ ಕೊಟ್ಟ ಸ್ಥಿತಿ ಮತ್ತಲ್ಗೆ ನಾಲ್ಕು ದಮ್ಮ; (EI. XVI, 21D, 970).

ದರ್ಶನಪಾಗ; Darśana-pāga: ಪಾಗ ಎಂಬ ನಾಣ್ಯದ ಒಂದು ಪ್ರಕಾರ; A variety of the coin pāga; (SII. XV, 16, 1138). See ಪಾಗ, pāga below.

ದಳ; Daḷa: ತಯಾರಿಸಿದ ನಾಣ್ಯಗಳ ಕಟ್ಟು; Bundle of coins; ಸವಕಟ್ಟುಕಾಱರು ದಳಕ್ಕೆ ತಮ್ಮ ಉಂಬಳಿಯಲು ಕೊಟ್ಟ ವೀಸ ೧; (HAS. XVIII, 8, 1109).

ದ್ರ; Dra: ದ್ರಮ್ಮ ಶಬ್ದದ ಸಂಕ್ಷಿಪ್ತ ರೂಪ; Abbreviated form of the word Dramma; ದ್ರಮ್ಮಾಃ ಪಂಚಾಶತ್ ದ್ರ ೫೦ ವಸ್ತ್ರಯುಗಮೇಕಂ; (IND. 2, 1047).

ದ್ರಮ್ಮ; Dramma: ಒಂದು ನಾಣ್ಯ, ಬಹುಶಃ ಬೆಳ್ಳಿಯದು; A coin probably of silver; ವಿವಾಹಮುಮಾಗಪ್ಪನಿತ ಜೊಳೆಲ್ಲಮೊಸಗೆ ದ್ರಮ್ಮಮ್ಮೂಱಂ; (KI. II, 4, 918); ವಂದಿಜನಾನಾಂ ದ್ರಮ್ಮಶತದ್ವಯಂ ದ್ರ ೨೦೦; (IND. 2, 10th cent.); ಮೂಲತಃ ದ್ರಖ್ಮ ಎಂಬ ಗ್ರೀಕ ಶಬ್ದದಿಂದ ಬಂದುದು ಎಂದು ಹೇಳುತ್ತಾರೆ; Said to have been derived from Greek Drachma. (IEG, p.100).

ದಾಯದ್ರಮ್ಮ; Dāya-dramma: ದ್ರಮ್ಮದ ಒಂದು ವಿಧ; A variety of Dramma; (SII. XVIII, 66, 1062; Ibid. XX, 47, 1074).

ದೀನಾರ; Dīnāra: ಒಂದು ನಾಣ್ಯ; A coin; ಪಂಚಾಶತಾಂ ದೀನಾರಾಣಾಂ; (EI. IX, 41, 7th cent.) (ವಡ್ಡಾ. Vaḍḍā, p.17, l.14); ರೋಮನ್ ದಿನೇರಿಯಸ್ ಶಬ್ದದ ರೂಪಾಂತರ; ಕ್ರಿ.ಶ. 2-3ನೆಯ ಶತಮಾನದಿಂದಲೂ ಪ್ರಚಾರದಲ್ಲಿದ್ದಿತೆಂದು ಹೇಳಲಾಗುತ್ತದೆ; A coin; Indian form of Roman Dinarius, said to be in use since 2-3rd cent. itself; See HD, Vol. III, p. 121-22 and also IEG p. 97.

ದು; Du: ದುಡ್ಡು ಪದದ ಸಂಕ್ಷಿಪ್ತ ರೂಪ; Abbreviation of the term Duḍḍu; (KI. III, I, 17, 1556).

ದುಡು (ದುಡ್ಡು); Duḍu (Duḍḍu): ತಾಮ್ರದ ನಾಣ್ಯ; A copper coin; (KI. III, I, 15, 1550).

ದೂಸರಗದ್ಯಾಣ; Dūsara-gadyāṇa: ಗದ್ಯಾಣದ ಒಂದು ಪ್ರಕಾರ; A type of Gadyāṇa; (SII. XV, 1, 1059).

ದೊಡ್ಡ ವರಹ ಗ; Doḍḍa varaha ga: ದೊಡ್ಡ ವರಹ ಗದ್ಯಾಣ; ವರಹವೆಂಬ ಗದ್ಯಾಣ; ಬಹುಶಃ ಸಾಮಾನ್ಯ ಗದ್ಯಾಣಕ್ಕಿಂತ ಹೆಚ್ಚಿನ ಬೆಲೆಯದು; A Gadyāṇa known as varaha, probably of a denomination higher than the usual Gadyāṇa; (SII. IX, II, 512, 1442; Ibid. VII, 345, 1502; Ibid. IX, II, 659,

1555); ಮನೆತಾವು ಅನುಭ ಸಹ ಕೊಟ್ಟ ದೊಡ್ಡ ವರಹ ಗ ೫೭; (Ibid. IX, II, 632, 1548).

ದೊ ವ ಗ; Do va ga: ದೊಡ್ಡ ವರಹ ಗದ್ಯಾಣದ ಸಂಕ್ಷಿಪ್ತ ರೂಪ; Abbreviated form of Doḍḍa-varaha-gadyāṇa; (SII. IX, II, 527, 1525).

ಧರಣ; Dharaṇa: (1) ಒಂದು ನಾಣ್ಯ, ಬಹುಶಃ ಗದ್ಯಾಣಕ್ಕಿಂತ ಕಡಿಮೆ ಬೆಲೆಯದು; A coin; probably lesser in denomination than Gadyāṇa; ದೀಪಾವಳಿಯಲು ತಿಙುವ ಆರುವಣಂ ಗದ್ಯಾಣಂ ಗದ್ಯಾಣ ೧ ಧರಣ ೧; (SII. XX, 119, 1148) ಲೀಲಾವತಿಯ ಪ್ರಕಾರ ಗದ್ಯಾಣಕದ ಅರ್ಧ ಭಾಗ; ಮನು ಹೇಳುವಂತೆ ಒಂದು ಬೆಳ್ಳಿಯ ನಾಣ್ಯ; According to Līlāvati, in denomination it was half of gadyāṇaka; according to Manusmriti it was a silver coin; (IEG. p.91).

ಧರಣ ಪೊನ್; Dharaṇa pon: ಧರಣವೆಂಬ ಚಿನ್ನದ ನಾಣ್ಯ; Gold coin Dharaṇa; ಆನೆಯ ಪೊನ್ನಾಙು ಗದ್ಯಾಣಮಂ ಧರಣಪೊನ್ನ ಆದಿತ್ಯದೇವರ್ಗ್ಗೆ; (SII. IX, I, 75, 987).

ನವಿಲಚ್ಚಿನ ಪೊನ್ನು; Navil-achchina ponnu: ಕಾರ್ತಿಕೇಯನ ವಾಹನವಾದ ನವಿಲಿನ ಚಿಹ್ನವುಳ್ಳ ಹೊನ್ನು ಅಥವಾ ಗದ್ಯಾಣವೆಂಬ ಚಿನ್ನದ ನಾಣ್ಯ; The gold coin Honnu or Gadyāṇa with the emblem of the peacock, the vehicle of Kārtikēya; (SII. IX, I, 164, 1098).

ನವಿಲ ಪೊನ್ನು; Navila ponnu: s.a. ನವಿಲಚ್ಚಿನ ಪೊನ್ನು, Navilachchina ponnu; (SII. IX, I, 53, 11th cent.) Cf. ಕುಮಾರ ಗದ್ಯಾಣ above.

ನಿಬಂಧ ಗದ್ಯಾಣ; Nibaṁdha gadyāṇa: ಗದ್ಯಾಣದ ಒಂದು ವಿಧ; A variety of gadyāṇa; (EC. IX(O), Bn.6, 1253; Ibid. IX(R), Bl.170, 1261).

ನಿಬಂಧ ಪಣ; Nibandha-paṇa: ಪಣದ ಒಂದು ಪ್ರಕಾರ; A type or Paṇa; (EC. IX(O), Bn.6, 1253). See ಪಣ below.

ನಿಬಂಧದ ಹೊನ್ನು; Nibandhada honnu: s.a. ನಿಬಂಧ ಗದ್ಯಾಣ; Nibandha-gadyāṇa above; (SII. XX, 104, 1133).

ನಿಷ್ಕ; Nishka: ಚಿನ್ನದ ನಾಣ್ಯ; ಬಹುಶಃ ಗದ್ಯಾಣಕ್ಕೆ ಸಮನಾದುದು; A gold coin probably equivalent to Gadyāṇa; (SII. XI, II, 159, 1111); ಪ್ರಾದಾತ್ಸ ಚತುರೋ ನಿಷ್ಕಾನ್ ಶಾಂತಿವಾರೇ ದ್ವಿಜನ್ಮನಾಂ ತಾಂಬೂಲಾರ್ಥಂ; (Ibid. XVIII, 118, 1121; EC. V(O), Cn.172, 1209. See also IEG, p. 219).

ಪಣ; Paṇa: ಒಂದು ನಾಣ್ಯ; ಗದ್ಯಾಣದ ಹತ್ತನೆಯ ಭಾಗ; A coin, one tenth of a Gadyāṇa; (SII. XI, II, 189, 1106); also see Ibid. Intro. p.VI.

ಪುಷ್ಪ; Pushpa: ಒಂದು ನಾಣ್ಯ; A coin; ಪಂಚ ಪುಷ್ಪಾಣಿ ದೇಯಾನಿ; (EI. IV, 6, 945).

ಪ್ರ.ಗ; Pra.ga.: ಪ್ರತಾಪ ಗದ್ಯಾಣದ ಸಂಕ್ಷಿಪ್ತ ರೂಪ; Abbreviation of Pratāpa gadyāṇa; (SII. IX, II, 836, 1412).

ಪ್ರತಾಪ; Pratāpa: ಒಂದು ನಾಣ್ಯ; A type of coin; ನಾಲ್ನೂರು ಸಂಣ ಪ್ರತಾಪಂಗಳ ಕೊಟ್ಟು; (SII. VII, 209, 1406).

ಪ್ರತಾಪ ಗದ್ಯಾಣ; Pratāpa-gadyāṇa: ಗದ್ಯಾಣದ ಒಂದು ವಿಧ; A type of Gadyāṇa; ಅಂತು ಪ್ರತಾಪ ಗದ್ಯಾಣ ನಾನುರಕ್ಕಂ; (EC. XI(O), Mk.31, 1386); ಭತ್ತವಳಿ ಪ್ರತಾಪ ಗದ್ಯಾಣ ಹೊಂನು; (SII. IX, II, 681, 16th cent.).

ಪ್ರತಾಪ ವರಹ; Pratāpa-varaha: ವರಹದ ಒಂದು ಪ್ರಕಾರ; A type of varaha; ಆ ತುಂಬಿಂಗೆ ಹತ್ತಿದ ವರ ಮುವತ್ತು ಪ್ರತಾಪ ಅಕ್ಷರದಲೂ ಮುವತ್ತು ಪ್ರತಾಪ; (SII. XV, 665, 1404); ಪ್ರತಾಪ, ಪ್ರತಾಪ ಗದ್ಯಾಣ, ಪ್ರತಾಪ ವರಹ ಇವು ಒಂದೇ ಎಂದು ತೋರುತ್ತದೆ; Pratāpa, Pratāpa-gadyāṇa, pratāpa-varaha appear to be identical.

ಪಾಗ; Pāga: ಪಣಕ್ಕಿಂತ ಕಡಿಮೆ ಬೆಲೆಯ ನಾಣ್ಯ; A coin smaller in denomination than paṇa; ಎಲೆಯ ಹೇಱಿಂಗೆ ಅಡಕೆ ೨೦೧ ಪಾಗ ೧೦; (SII. XX, 80, 1120); ಚೈತ್ರಕ್ಕೆ ಪಾಗ ೧ ಪವಿತ್ರಕ್ಕೆ ಪಾಗ ೧; (SII. XV, 229, 1158). ಪಾದ ಶಬ್ದದ ತದ್ಭವವೆಂದು ಕಿಟೆಲ್ಲರ ಅಭಿಪ್ರಾಯ; (Kan.Eng.Dict., ಪಾಗ); ಮಂಗರಾಜ ನಿಘಂಟಿನ ಪ್ರಕಾರ ಪಣದ ೭/೮ ಭಾಗ. Kittel thinks that it is a *tadbhava* of Pāda (Kittel, Pāga).

According to Maṅgarāja-nighaṇṭu, it is 7/8 part of Paṇa.

ಪಾಟಿಗದ್ಯಾಣ; Pāṭi-gadyāṇa: ಒಂದು ಬಗೆಯ ಗದ್ಯಾಣ; A type of gadyāṇa; ತೋಂಟಿಗರು ಒಕ್ಕಲಲ್ಲಿ ಚೈತ್ರಕ್ಕೆ ಪಾಟಿ ಗ ೧ ಪವಿತ್ರಕ್ಕೆ ಪಾಗ ೧; (SII. XV, 229, 1158).

ಪಾಂಡ್ಯ ಗದ್ಯಾಣ; Pāṇḍya-gadyāṇa: ಗದ್ಯಾಣದ ಒಂದು ಪ್ರಕಾರ; ಬಹುಶಃ ಪಾಂಡ್ಯ ದೇಶದಲ್ಲಿ ಪ್ರಚಲಿತವಿದ್ದ ಗದ್ಯಾಣ; A kind of Gadyāṇa; Probably, a gadyāṇa current in the Pāṇḍya country; ಬಿದಿರಗದ್ದೆಯ ಮೇಲಿಕ್ಕಿದ ಪಾಣ್ಡ್ಯ ಗದ್ಯಾಣಂ; (SII. VII, 381, 1140).

ಪಿರಿಯ ಪಾಗ; Piriya pāga: ಪಾಗದ ಒಂದು ಪ್ರಕಾರ; A variety of a coin pāga; ದೊಡ್ಡ ಅಥವಾ ಹೆಚ್ಚಿನ ಬೆಲೆಯ ಪಾಗ; Bigger pāga or a pāga of higher denomination; (SII. XV, 1, 1059). Cf. ಕಿರಿಯ ಪಾಗ above.

ಪುತ್ತಳಿ ಕಾಸು; Puttaḷi-kāsu: ಒಂದು ನಾಣ್ಯದ ಪ್ರಕಾರ; A type of coin; (EC. X(O), Gb.22, 1454).

ಪೆರ್ಗ್ಗಡೆ ಗದ್ಯಾಣ; Perggaḍe-gadyāṇa: ಗದ್ಯಾಣದ ಒಂದು ಪ್ರಕಾರ; A type of Gadyāṇa; (EC. III(R), Hg.123, 1079).

ಪೆರ್ಬ್ಬೊನ್ನು; Per-bbonnu: ಪಿರಿಯ ಪೊನ್ನು; Piriya ponnu; ಹಿರಿಯ ಗದ್ಯಾಣ; Hiriya gadyāṇa; ಸಾಮಾನ್ಯ ಹೊನ್ನು ಅಥವಾ ಗದ್ಯಾಣಕ್ಕಿಂತ ಹಿರಿಯ ಪ್ರಮಾಣದ ಚಿನ್ನದ ನಾಣ್ಯ; A gold coin of the denomination higher than normal Hon or Gadyāṇa; (EC. VI(O), Cm.129, 900).

ಪೊನ್ನು; Ponnu: ಹೊನ್ನು; ಚಿನ್ನದ ನಾಣ್ಯ; ಗದ್ಯಾಣದ ಇನ್ನೊಂದು ಹೆಸರು; Honnu a gold coin, a synonym of Gadyāṇa; ಬಿಜೇಶ್ವರಕ್ಕೆ ಮಾಡಿಸಲ್ಕೊಟ್ಟ ಪೊನ್ನು ಅಯ್ವತ್ತೊನ್ದು ಗದ್ಯಾಣ; (SII. XV, 453, 8th cent.).

ಪೊರಳು; Poraḷu: ಒಂದು ನಾಣ್ಯ (?); a coin (?); ಬ್ರಾಹ್ಮಣರ್ಗ್ಗಂ ತವಸಿಯರ್ಗ್ಗಂ ಕೊಟ್ಟ ಪೊರಳು ಮುವತ್ತೇಳು; (EC. IX(O), Ht.10, 1023).

ಪೊಂಗದ್ಯಾಣ; Pon-gadyāṇa: ಗದ್ಯಾಣವೆಂಬ ಚಿನ್ನದ ನಾಣ್ಯ; A gold coin, called gadyāṇa; ಸಿದ್ಧಾಯ ಪೊಂಗದ್ಯಾಣ ಮೂಱು; (SII. IX, I, 62, 932). (ಪೊನ್+ಗದ್ಯಾಣ; Pon+gadyāṇa)

ಬಲ್ಲಹ ಗದ್ಯಾಣ; Ballaha-gadyāṇa: ಗದ್ಯಾಣದ ಒಂದು ವಿಧ; ಬಹುಶಃ ವಲ್ಲಭ ಗದ್ಯಾಣ, ಅರಸನ ಹೆಸರಿನಲ್ಲಿ ಹೊರಡಿಸಿದ ಗದ್ಯಾಣ; A type of gadyāṇa, probably vallabha-gadyāṇa issued in the name of the king; ಅರಸನ ವಲ್ಲಭ ಎಂಬ ಬಿರುದಿನ ಹೆಸರನ್ನು ಹೊಂದಿದ ಗದ್ಯಾಣ; Gadyāṇa named after the title vallabha, of the king; (EC. IX(O); Bn.6, 1253).

ಬಾರಕೂರ ಗದ್ಯಾಣ; Bārakūra gadyāṇa: ಬಾರಕೂರಿನಲ್ಲಿ ಪ್ರಚಲಿತವಿದ್ದ ಗದ್ಯಾಣ; Gadyāṇa in use in Bārakūru; ಬಾರಕೂರಿನಲ್ಲಿ ಮುದ್ರಿಸಿದ ಗದ್ಯಾಣ; Gadyāṇa minted at Bārakūru (SII. IX, II, 609, 1365).

ಬೀಜ ಹೊನು (ಬೀಜ ಹೊನ್ನು); Bīja-honu (Bīja-Honnu): ಹೊನ್ನ ಗದ್ಯಾಣಗಳ ನಿಧಿ; Fixed fund of gold gadyāṇas; ಮಹಾಜನಂಗಳ ಕಯಲು ಕೊಟ ಬೀಜ ಹೊನು ಗ ೧೦; (EC. XI(O), Dg. 48, 1263) (ಬೀಜ=ನಿಧಿ; Bīja=fund).

ಬೆಳ್ಳಿಯ ತಾರ; Beḷḷiya tāra: ತಾರವೆಂಬ ಬೆಳ್ಳಿಯ ನಾಣ್ಯ; Silver coin called tāra; ಕಟ್ಟಿದಲಗಿನ ಚಿಕ್ಕ ತಾರವ ತೆಱುವರು ಬೆಳ್ಳಿಯ ತಾರದರ್ಧದ; (SII. IX, I, 336, 1219).

ಬೆಳ್ಳಿಯ ದ್ರಮ್ಮ; Beḷḷiya dramma: ಬೆಳ್ಳಿಯಿಂದ ಮಾಡಿದ ದ್ರಮ್ಮ; Dramma made of silver; ಬೆಳ್ಳಿಯ ದ್ರಮ್ಮ ೫೦; (IND. 8, 1070).

ಬೆಳ್ಳಿಯ ಹಾಗ; Beḷḷiya hāga: ಬೆಳ್ಳಿಯಿಂದ ಮಾಡಿದ ಹಾಗ ಅಥವಾ ಪಾಗ; A silver coin called Hāga or Pāga; ತೂಕದ ಖಂಡಕ್ಕೆ ಹೊಂಗೆ ಬೆಳ್ಳಿಯ ಹಾಗ ಒಂದು ಎಣಿಕೆಯ ಖಂಡಕ್ಕೆ ಹೊಂಗೆ ಬೆಳ್ಳಿಯ ಹಾಗ ೧; (JSI. 11, 1171).

ಬೆಳ್ಳಿಯ ಹೊನ್ನು; Beḷḷiya honnu: ಬೆಳ್ಳಿಯ ಗದ್ಯಾಣ; Beḷḷiya gadyāṇa; ಹೊನ್ನು ಎಂಬ ಪದವನ್ನು ಗದ್ಯಾಣ ಎಂಬ ಸಾಮಾನ್ಯ ಅರ್ಥದಲ್ಲಿ ಉಪಯೋಗಿಸಿದಂತೆ ತೋರುತ್ತದೆ; The term Honnu appears to have been used to stand for gadyāṇa in general; (KI. III, I, 9, 1538).

ಬೇಳೆ; Bēḷe: ಒಂದು ನಾಣ್ಯ; ಮಂಗರಾಜ ನಿಘಂಟಿನ ಪ್ರಕಾರ ಪಾಗದ ಅರ್ಧ ಬೆಲೆಯ ನಾಣ್ಯ; A coin, half the value of pāga according to Mangarāja Nighaṇṭu; ಸಿಕ್ಕಿಸಲು ಬೇಳೆ ಎರಡುಮಂ ಒಂದು ಪಾಗಂ; ಅಡಕೆಯ ಪೇಱಿಂಗೆ ಲಕ್ಕಕೆ ಬೇಳೆಯಲು; (EC. XI(O), Jl.9, 1111; Ibid. IX(R), Bl.171, 1392).

ಬೋವ ಗದ್ಯಾಣ; Bōva-gadyāṇa: ಗದ್ಯಾಣದ ಒಂದು ಪ್ರಕಾರ; A type of gadyāṇa; ಮಡಿಯ ರಾಮೇಶ್ವರದ …… ಬೋವ ಗದ್ಯಾಣ ಮ ೨; (SII. IX, I, 145, 1079).

ಮ; Ma: ಒಂದು ನಾಣ್ಯದ ಹೆಸರಿನ ಸಂಕ್ಷಿಪ್ತ ರೂಪ ಎಂದು ಸಂದರ್ಭ ಮೇಲಿಂದ ಗುರುತಿಸಬಹುದಾಗಿದೆ. Probably abbreviation of the name of a coin as indicated by context; ಗದ್ದೆಗೆ ತೆರುವ ಗದ್ಯಾಣ ೩ ಮ ೬ ಆ ಕೆರೆಯ ಗದ್ಯಾಣ ಕೊಳವೆ ಗದ್ಯಾಣ ೧ ಮ ೨; (SII. IX, I, 145, 1079).

ಮಯಿಕಾಟಿಗದ್ಯಾಣ; Mayi-kāti-gadyāṇa: ಕಾಟಿ ಗದ್ಯಾಣದ ಒಂದು ಪ್ರಭೇದ; A variety of kāṭi gadyāṇa; (SII. IX, II, 452, 1450).

ಮಾದರ ಗದ್ಯಾಣ; Mādara gadyāṇa: ಗದ್ಯಾಣದ ಒಂದು ಪ್ರಕಾರ; A type of Gadyāṇa; ಮಾದರ ಗದ್ಯಾಣ ೧ ಮ ೨; (SII. IX, I, 145, 1079).

ಮುದ್ರಾಪಣ; Mudrā-paṇa: ರಾಜನ ಮುದ್ರೆಯಿದ್ದ ಪಣವೆಂಬ ನಾಣ್ಯ; The coin paṇa bearing the royal emblem; (SII. IX, I, 233, 1139) ; ವಿಚಾರಂಗೆಯ್ದವರಲ್ಲಿ ಮುದ್ರಾಪಣಂ; (EI. XIX, 4B, 1143).

ರಾಮಟೆಂಕಿ; ರಾಮಟೆಂಕಿ ವರಾಹ; Rāmaṭenki, Ramaṭenki-varāha: ವರಾಹ ಎಂಬ ಒಂದು ನಾಣ್ಯ; ರಾಮ ಸೀತೆ ಲಕ್ಷ್ಮಣರ ಚಿತ್ರಗಳನ್ನೊಳಗೊಂಡ ಒಂದು ನಾಣ್ಯ; A variety of gold coin known as varāha; a coin with the figures of Rāma, Sītā, and Lakshmaṇa; (EC. X, Gb.22, 1454; Ibid. XII, Pg.72, 15th cent.).

ರಾಯಜಗದಳಂಗದ್ಯಾಣ; Rāya-jagadaḷaṁ-gadyāṇa: ಅರಸನ ಬಿರುದಿನ ಹೆಸರಿನ ಒಂದು ಪ್ರಕಾರದ ಗದ್ಯಾಣ; A kind of Gadyāṇa, named after the title of the king; (KI. II, 16, 1122).

ರಾಯರೇಖೆ ಗದ್ಯಾಣ; Rāya-rekhe-gadhāṇa: ಒಂದು ವಿಧದ ಗದ್ಯಾಣ; ಬಹುಶಃ ರಾಜನ ಮುದ್ರೆಯಿದ್ದ ಗದ್ಯಾಣ; A kind of gadhāṇa probably bearing the seal of the king; ರಾಯರೇಖೆ ಗದ್ಯಾಣ ೨೨; (EC. VI(O), Md.87, 1371).

ರೇಖಾ ವರಾಹ; Rēkhā-varāha: ಒಂದು ವಿಧದ ವರಹ; A type of Varaha; (EC. XII(O), Pg.69, 1447).

ರೇಖೆ ಗದ್ಯಾಣ; Rēkhe-gadyāṇa: ಒಂದು ವಿಧದ ಗದ್ಯಾಣ; A type of Gadyāṇa; (SII. IX, II, 551, 1532). Cf. ರಾಯರೇಖೆ ಗದ್ಯಾಣ, Rāyarēkhe-gadyāṇa above.

ರೇಖೆ ಹೊನ್ನು; Rēkhe-honnu: ಒಂದು ವಿಧದ ಹೊನ್ನು ಅಥವಾ ಗದ್ಯಾಣ; A type of Honnu or Gadyāṇa; (SII. IX, II, 550, 1532) (550 ಮತ್ತು 551ನೇ ಶಾಸನಗಳು ಒಂದೇ ಶಾಸನದ ಎರಡು ಪ್ರತಿಗಳಾಗಿದ್ದು 551ರಲ್ಲಿ ರೇಖೆಹೊನ್ನು ಎಂಬ ಪ್ರಯೋಗವಿದ್ದು ಇನ್ನೊಂದರಲ್ಲಿ ರೇಖೆ ಗ. ಅಂದರೆ ರೇಖೆ ಗದ್ಯಾಣ ಎಂದಿದೆ).

ರೊಕ್ಕ; Rokka: Money or amount, cash; ತಂಬುಲಿಗರು ಹುಟ್ಟಿದ ಧಾರಣೆಯಿಂ ರೊಕ್ಕ ಮಾಡಿ ಕುಡುವದು; (KI. I, 30, 1222); ವರುಷ ೧ ಕಂ ಬಹ ರೊಕ್ಕ ಗ ೬; (SII. IX, II, 409, 1365).

ಲಕ್ಷ್ಮೀಪತಿ ವರಹ; Lakshmīpati-varaha: ವಿಷ್ಣುವಿನ ಚಿತ್ರವುಳ್ಳ ಒಂದು ಬಗೆಯ ವರಹ; A variety of Varaha bearing the figure of Vishṇu; (EC. X(O), Gb.22, 1454).

ಲೊಕ್ಕಿ ಗದ್ಯಾಣ; ಲೊಕ್ಕಿಯ ಗದ್ಯಾಣ; Lokki-gadyāṇa, Lokkiya gadyāṇa: ಲಕ್ಕುಂಡಿಯ ಟಂಕಸಾಲೆಯಲ್ಲಿ ನಿರ್ಮಿತವಾದ ಗದ್ಯಾಣ; Coin struck in mint at Lakkuṇḍi; ಪಾದಪೂಜೆಗೆ ಲೊಕ್ಕಿಯ ಪತ್ತು ಗದ್ಯಾಣ ೧ ಪೊನ್ನಂ ಕೊಟ್ಟು; (KI. IV, 33, 1079); ಶ್ರೀಪಾರ್ಶ್ವ ದೇವರಂಗಭೋಗಕ್ಕೆ ಬಡ್ಡಿಯಿಂದಕ್ಷಯವಾಗಿ ಕೊಟ್ಟ ಲೊಕ್ಕಿಯ ಗದ್ಯಾಣ; (EC. VII(O), Sh.97, 1113).

ಲೊಕ್ಕಿಯಚ್ಚಿನ ಗದ್ಯಾಣ; Lokkiy-achchina gadyāṇa: s.a. ಲೊಕ್ಕಿ ಗದ್ಯಾಣ; Lokki-gadyāṇa; ಆ ದೇವರ್ಗ್ಗೆ ಬಿಟ್ಟ ಹೊಸ ಲೊಕ್ಕಿಯಚ್ಚಿನ ಗದ್ಯಾಣ ಹತ್ತು; (SII. XV, 22, 1142).

ಲೊಕ್ಕಿಯ ಪ್ರಿಯಶ್ರಾಹೆ ಗದ್ಯಾಣ; Lokkiya priyaśrāhe-gadyāṇa: ಲೊಕ್ಕಿ ಗದ್ಯಾಣದ ಒಂದು ವಿಧ; A type of lokki-gadyāṇa; ಲೊಕ್ಕಿಯ ಪ್ರಿಯಶ್ರಾಹೆಯ ಗದ್ಯಾಣ ೫೨ ಮಂ ಕೊಂಡು; (SII. XV, 233, 1216).

ಲೊಕ್ಕಿಯ ಪೊನ್; Lokkiya pon: ಲೊಕ್ಕಿಗುಂಡಿಯ ಟಂಕಸಾಲೆಯಲ್ಲಿ ತಯಾರಿಸಿದ ಪೊನ್ ಅಥವಾ ಗದ್ಯಾಣವೆಂಬ ಚಿನ್ನದ ನಾಣ್ಯ; A gold coin pon or gadyāṇa issued in the mint at Lokkuṇḍi; ಪಾದಪೂಜೆಗಯ್ವತ್ತು ಗದ್ಯಾಣ ಲೊಕ್ಕಿಯ ಪೊನ್ನ ಕೊಟ್ಟವರ ಕೈಯಲವರಂ; (SII. XX, 101, 1129).

ಲೊಕ್ಕಿಯ ವೀಸ; Lokkiya vīsa: ಲೊಕ್ಕಿ ಅಥವಾ ಲೊಕ್ಕಿಗುಂಡಿಯಲ್ಲಿ ಅಚ್ಚಾದ ವೀಸ ಎಂಬ ನಾಣ್ಯ; A coin known as Vīsa, struck at Lokki i.e. Lokkiguṇḍi; ಲೊಕ್ಕಿಯ ವೀಸ ೧೦ರ ಲೆಕ್ಕದಿಂದರುವಣ; (SII. XVIII, 187, 13th cent.).

ವಟ್ಟಪಣ; Vaṭṭa-paṇa: ಪಣದ ಒಂದು ಪ್ರಕಾರ; ಬಹುಶಃ ವೃತ್ತಾಕಾರದ್ದು; A type of paṇa, probably round in shape; (EC. IX(R), Bl.71, 1261).

ವತ್ತ ಗದ್ಯಾಣ; Vatta-gadyāṇa: ಗದ್ಯಾಣದ ಒಂದು ಪ್ರಕಾರ; A type of gadyāṇa; (EC. IX(R), Bl.170, 1261).

ವರ್ತಕ ಲೊಕ್ಕಿಗದ್ಯಾಣ; Vartaka-Lokki-gadyāṇa: ಬಹುಶಃ ವರ್ತಕರು ಬಳಸುತ್ತಿದ್ದ ಲೊಕ್ಕಿ ಗದ್ಯಾಣ; Probably the Lokki-gadyāṇa used by the merchants; ಪೊಂಗೆ ತಿಂಗಳಿಂಗೆ ವೀಸಂ ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ ಲೊಕ್ಕಿ ಗದ್ಯಾಣ ೨೦; (EI. XXXVII, 34, 1132).

ವರ ಗ, ವರಹ ಗ; Vara ga, Varaha ga: ವರಹ ಎಂಬ ಗದ್ಯಾಣ; Gadyāṇa which was also known as Varaha; (KI. III, I, 9, 1538).

ವರಹ ಗದ್ಯಾಣ; ವರಾಹ ಗದ್ಯಾಣ; Varaha-gadyāṇa, Varāha-gadyāṇa: s.a. ವರಹ ಗ; Varaha ga; ವಿಷ್ಣುಭಟ್ಟರು ಕೊಟ್ಟ ವರಾಹ ಗ ೧೦೮೦ ಬಡ್ಡಿ ಗದ್ಯಾಣಂ ೩; (EC. XI(O), Dg.49, 1280).

ಶುಧ (ಶುದ್ಧ) ವರಹ ಗದ್ಯಾಣ; Śudha (Śuddha)-Varaha-gadyāṇa: ವರಹ ಅಥವಾ ಗದ್ಯಾಣದ ಒಂದು ಪ್ರಕಾರ; A type of Varaha or Gadyāṇa; (SII. IV, 262, 1533).

ಶ್ರೀಕರಣ ಪಣ; Śrīkaraṇa-paṇa: ಪಣದ ಒಂದು ಪ್ರಕಾರ; A type of Paṇa; (EC. IX(O), Bn.6, 1253); See ಪಣ above.

ಸಲಿಕೆ; Salike: ಒಂದು ನಾಣ್ಯದ ಹೆಸರು; Name of a coin; ಉತ್ತಮ ಕರಿಯ ನೆಲಕ್ಕೆ ಸಲಿಕೆ ೨ ಮಧ್ಯಮಕ್ಕೆ ಸಲಿಕೆ ೧ ಪಣ ೩ ಕನಿಷ್ಟಕ್ಕೆ ಸಲಿಕೆ ೧; (SII. XVIII, 41, 996).

ಸಣ್ಣ ಪ್ರತಾಪ; Saṇṇa-pratāpa: ಕಡಿಮೆ ಬೆಲೆಯ ಪ್ರತಾಪ; ಬಹುಶಃ ಅರ್ಧಪ್ರತಾಪ; Pratāpa of smaller denomination; Probably half of Pratāpa; ನಾಲ್ನೂಱು ಸಂಣ ಪ್ರತಾಪಗಳನೂ ಕೊಟ್ಟು; (SII. VII, 209, 1476). See ಪ್ರತಾಪ above.

ಸ್ರಾಹೆ(ಶ್ರಾಹೆ)ಲೊಕ್ಕಿಗದ್ಯಾಣ; Srāhe(Śrāhe)-lokki-gadyāṇa: ನಿರ್ದಿಷ್ಟ ವರ್ಷದಲ್ಲಿ ಮುದ್ರಿಸಿದ ಲೊಕ್ಕಿ ಗದ್ಯಾಣ; Lokki-gadyāṇa minted in a particular year; (SII. XX, 320, 12-13th cent.).

ಸುವರ್ಣ; Suvarṇa: ಚಿನ್ನದ ನಾಣ್ಯ; ಗದ್ಯಾಣ ಅಥವಾ ಹೊನ್ನಿಗೆ ಸಂಸ್ಕೃತದಲ್ಲಿ ಇನ್ನೊಂದು ಹೆಸರು; A gold coin, a synonym of gadyāṇa or Honnu in Sanskrit; ಸುವರ್ಣಲಕ್ಷತ್ರಯಸಮೇತಾನಿ; (EI. VII, 6, 930).

ಹಣ; Haṇa: s.a. ಪಣ; Paṇa; ಪೇಜೆಂಗೆ ಹಣ ಒಂದು; (APGAS. III, Mn.51, 1091); ಅಕ್ಷರದಲೂ ಯೇೞು ಹೊಂನೂ ಆಯಿದು ಹಣ; (EC VI(O), Mg.48,1502); ಅನೇಕ ಸಲ ಹ. ಎಂದು ಸಂಕ್ಷಿಪ್ತ ರೂಪದಲ್ಲಿ ಬರುತ್ತದೆ; Many times, figures in abbreviated form as ha.

ಹಾಗ; Hāga: s.a. ಪಾಗ; Pāga above; ಅಱುವಣ ಪಣವೊಂದು ಹಾಗವೆರಡು; (EI. XVIII, 22D.1097).

ಹಿರಣ್ಯ; Hiraṇya: ಬಂಗಾರದ ನಾಣ್ಯ; ಬಹುಶಃ ಗದ್ಯಾಣಕ್ಕೆ ಸಮವಾದುದು; Gold coin probably same as gadyāṇa; ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದರೆ ಲಕ್ಷ ಸಂಖ್ಯೆಯ ಹಿರಣ್ಯವ ತಂದು ಸಂತೋಷ ಪಡಿಸುವಂತೆ (ಬ.ವ. Ba.Va. 705, 12th cent.).

ಸುವರ್ಣ, ಹಿರಣ್ಯ, ಹೊನ್ನು, ಇವೆಲ್ಲ ಒಂದೇ ನಾಣ್ಯದ ವಿವಿಧ ಹೆಸರುಗಳೆಂದು ತೋರುತ್ತದೆ. Suvarṇa, Hiraṇya, Honnu, appear to be the different names of the same coin.

ಹಿರಿಯ ಹಾಗ; Hiriya hāga: ಹೆಚ್ಚಿನ ಬೆಲೆಯ ಹಾಗ; Hāga of higher denomination; (EI. XIII, 3, 1204). See Kiriya Pāga above.

ಹಿರಿಯ ನಿಜವರಹ; Hiriya-nija-varaha: ವರಹದ ಒಂದು ವಿಧ; A type of varaha; ಗೇಣಿ ವರುಷ ೧ಕ್ಕೆ ಹಿರಿಯ ನಿಜವರಹ ೭೩ ಅಕ್ಷರದಲು; (KI. III, I, 15, 1511).

ಹು; Hu: ಯಾವುದೋ ಒಂದು ನಾಣ್ಯದ ಹೆಸರಿನ ಸಂಕ್ಷಿಪ್ತ ರೂಪ; An abbreviation of the name of a coin; ಆದಕೆ ನಿಧಾಯ ಹಾಗ ೧ ಹು ೧; (EC. XI(O), Hk.136, 1307); ಹಾಗಕ್ಕಿಂತ ಕಡಿಮೆ ಬೆಲೆಯದು; Lesser in dinomination than Hāga. ಬಹುಶಃ ಹುಲುವೀಸದ ಸಂಕ್ಷಿಪ್ತ ರೂಪ; Probably abbreviation of Huluvīsa.

ಹುಲುವೀಸ; Hulu-vīsa: ಒಂದು ಪ್ರಕಾರದ ವೀಸ; A variety of Vīsa; of a lesser denomination; ಹೊರೆ ಒಂದಕ್ಕಂ ಹುಲುವೀಸ ...... ಕಾಲುನಡೆ ಒಂದಕ್ಕಂ ಹುಲುವೀಸ; (EC. IX(R), Bl.171, 1382).

ಹೊನ್ನು; Honnu: s.a. ಪೊನ್; Pon; ಚಿನ್ನದ ನಾಣ್ಯ, ಗದ್ಯಾಣ; Gold coin, Gadyāṇa; (SII. XX, 104, 1133).

ಹೊಸ ಲೊಕ್ಕಿ ಗದ್ಯಾಣ; Hosa-lokki-gadyāṇa: s.a. ಲೊಕ್ಕಿಯ ಗದ್ಯಾಣ; ಹೊಸದಾಗಿ ಅಚ್ಚು ಹಾಕಿಸಿದ್ದು; Lokkiya gadyāṇa, new issue; ಶ್ರೀ ಸೂರ್ಯದೇವರ್ಗೆ ಹೊಸ ಲೊಕ್ಕಿಗದ್ಯಾಣವೆರಡು; (SII. XV, 22, 1142).

ಅಧ್ಯಾಯ ೭ | CHAPTER VII

ನ್ಯಾಯಪದ್ಧತಿ
JUDICIARY

೧. ಅಧಿಕಾರಿ-ಅಧಿಕಾರವಾಚಕ ಪದಗಳು
1. OFFICERS-OFFICES

ದಂಡಪಾಶಿಕ, ದಾಂಡಪಾಶಿಕ; Daṇḍapāśika, Dāṇḍapāśika: (1) ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿ; ಶಬ್ದಶಃ ದಂಡ ಮತ್ತು ಹಗ್ಗವನ್ನು ಉಪಯೋಗಿಸುತ್ತಿದ್ದ ಅಧಿಕಾರಿ; Police officer; Literally, officer using a stick and rope; (EI. VI, 13A,B, 13th cent.); (2) ಅಪರಾಧಿಗಳನ್ನು ದಂಡಿಸುವ ಅಧಿಕಾರಿ; Officer entrusted with the punishment of offenders; (IEG. p.81); ಮಹಾಸಾಮಂತಮಹಾರಾಜರಾಜಪುತ್ರಾಂತರಂಗ ಕುಮಾರಾಮಾತ್ಯೋಪರಿಕ ವಿಷಯಪತಿ ತದಾಯುಕ್ತಕ ದಾಂಡಪಾಶಿಕ ಸ್ಥಾನಾಂತರಿಕಾನನ್ಯಾನಪಿ; (EI. VI, 13B, 13th cent.).

ಧರ್ಮಾಧ್ಯಕ್ಷ; Dharmādhyaksha: (1) ನ್ಯಾಯಾಧೀಶ; Judge, Judicial Officer; ಸಮಸ್ತ ಧರ್ಮಾಧ್ಯಕ್ಷಂಗಳುಂ ರಾಜಾಧ್ಯಕ್ಷಂಗಳೆನಿಸಿದ ಕರಣಂಗಳ್ವೆರಸು; (EC. VII(O), Sk.123, 1159); (2) ನ್ಯಾಯಾಲಯ; Judicial Court; ನಖರಮುಂ ಮುಂಮುರಿದಂಡಂಗಳು ಧರ್ಮಾಧ್ಯಕ್ಷದ ಮುಂದೆ; (EC. VIII (O), Sb.387, 1249; Ibid. VII(O), Sk.123, 1159; ಶಾಂತೀ ಪು. Śāntī Pu. XV, 90, 13th cent.; ಕು.ವ್ಯಾ.ಭಾ ಅರಣ್ಯ ಪ. Ku.Vyā.Bhā. Araṇya Pa. VII, 4, c.1400).

ಧರ್ಮಾಧಿಕರಣ; Dharmādhikarana: (1) ನ್ಯಾಯಾಧೀಶ; A Judge; (2) ಧಾರ್ಮಿಕ ದತ್ತಿ ಮತ್ತು ಇತರ ವಿಷಯಗಳ ಅಧಿಕಾರಿ; Officer in charge of endowments and other religious matters; ನಾಗಪುರದಗ್ರಹಾರ ಮಹಾಜನಮುಂ ಧರ್ಮಾಧಿಕರಣವಿರ್ದ್ದು; (EC. VI(O), Kp.14, 1157; ಹ.ಕಾ. Ha.Kā. XIII, 7, 13th cent.); ಲಿಖಿತಂಚೈತದ್ ಧರ್ಮ್ಮಾಧಿಕರಣೇನ ಸೇನಭೋಗಿಕೇನ; (EI. XVIII, 26, 871; Ibid. X, 19, 775; Ibid. VI, 4, 860).

ಧರ್ಮಾಧಿಕಾರ; Dharmādhikāra: (1) ನ್ಯಾಯಾಲಯ; Judicial Court; (2) ಧಾರ್ಮಿಕ ವ್ಯವಹಾರಗಳ ಕಾರ್ಯಾಲಯ; Office relating to the religious matters; (EC. VI(O), Kd.9, 990).

ಧರ್ಮಾಸನ; Dharmāsana: ನ್ಯಾಯಾಲಯ; Judicial Court seat of Justice; (ನೀ.ವಾ. Nī.Vā. XXV, 74, 10th cent.).

ಸತ್ಯಾಧಿಕಾರಿ; Satyādhikāri: ಸತ್ಯವನ್ನು ಕಂಡುಹಿಡಿಯುವ ಅಧಿಕಾರಿ; Officer to find out the truth; ಧರ್ಮಾಧಿಕಾರಿ ಎಂಬ ಪದದ ಸಮಾನಾರ್ಥ ಪದ;

ನ್ಯಾಯಾಧಿಕಾರಿ, ನ್ಯಾಯಾಧೀಶ; A term parallel to Dharmādhikāri; Officer in charge of Judiciary. A Judge; ಶ್ರೀಮನ್ಮಹಾಪ್ರಧಾನ ಸತ್ಯಾಧಿಕಾರಿ ಬಲ್ಲೆಯದೇವನಾಯಕ; (EC. IV(O), Yd.48, 1539).

ಬುದ್ಧಿವಂತರು; Buddhivantaru: ನ್ಯಾಯವಾದಿಗಳು; ನಾಯದರ್ಶಿಗಳು; The Jurists; Jury; ವೇಳೆಯದಲೂ ನಮ್ಮ ಚಾವಡಿ ಬುದ್ಧಿವಂತರ ಸೂರಪ್ಪಸೇನಬೋ[ವ*]ರ ಮುಖಾಂತರದಲೂ; (EC. VI(O), Mg.41, 1516).

ಮಹಾಧರ್ಮ್ಮಾಧಿಕರಣಿಕ; Mahādharmādhikaraṇika: ಮುಖ್ಯನ್ಯಾಯಾಧಿಕಾರಿ; ಮುಖ್ಯನ್ಯಾಯಾಧೀಶ; Chief gudicial officer; Chief justies; (EI. XI, 13, 1047).

೨. ನ್ಯಾಯಪದ್ಧತಿಗೆ ಸಂಬಂಧಿಸಿದ ಇತರ ಪದಗಳು

2. OTHER TERMS RELATING TO JUDICIARY

ಅಪ್ರವೇಶನೀಯ; Apravēśanīya: ಪ್ರವೇಶಕ್ಕೆ ಪ್ರತಿಬಂಧವುಳ್ಳದ್ದು; Prohibiting entry; ಚಾಟಭಟದೂತರಾಜಪುರುಷಾಣಾಮಪ್ರವೇಶನೀಯ; (EI. III, 8, 609).

ಅಪುತ್ರಿಕಧನ; Aputrika-dhana: ಅಪುತ್ರಿಕಾರ್ಥ; ಮಕ್ಕಳಿಲ್ಲದವರ ಆಸ್ತಿ; ಇಂಥ ಆಸ್ತಿಯು ಸಾಮಾನ್ಯವಾಗಿ ಸರಕಾರಕ್ಕೆ ಹೋಗುತ್ತಿತ್ತು; Wealth or property belonging to the persons with no issue; such property generally went to the State; (EC. XI(O), Dg.70, 1275); ಬಳ್ಳಿಗಾವೆಯ ಬಣಂಜಿಗರಲ್ಲಿಯ ಅಪುತ್ರಿಕ ಮೃತಕ ಧನವೆಲ್ಲಂ ಶ್ರೀಮತ್ ಗವಜೇಶ್ವರದೇವರ ..... ದೇವಕಾರ್ಯ್ಯಕ್ಕೆ ನಗರದಲ್ಲಿಯ-ಪುತ್ರಿಕಧನವಪ್ಪುದು ನಗರೇಶ್ವರದೇವರ್ಗ್ಗೆ; (EC. VII(O), Sk.119, 1181).

ಆರುವಾರ; Āruvāru: ಒಬ್ಬರ ಸ್ವಾಧೀನದಲ್ಲಿರುವ ಭೂಮಿಯನ್ನು ಅಡುವು ಇಡುವ ಪತ್ರ; A document of mortgage of landed property in the possession of a person; ಯೀ ಮಠಕ್ಕೆ ಕೊಟ ಆರುವಾರ ಪತ್ರದ ಅರ್ಥ ಬಂದರೂ ವ್ರಿತಿ ಬಂದರೂ ಯೀ ಧರ್ಮಕ್ಕೆ ಮೂಲ ಆರುವಾರದಿಂದ; (SII. IX, II, 446, 1436).

ಆರುವಾರಿ; Āruvāri: ಆಸ್ತಿಯನ್ನು ಒತ್ತಿಹಿಡಿದವ; Mortgagee of property with possession; (SII. VII, 209, 1407).

ಗಂಡಿಗೆ ಮೂಲ; Gaṇḍige mūla: ಗಂಡಿನ ಅನುವಂಶಿಕ ಹಕ್ಕು; Heriditary right of a male member; ಹತ್ತುವರೆ ಮೂಡೆ ಗದ್ದೆಯನು ನಿಂನ ಸಂತತಿ ಪರಂಪರೆಯಾಗಿ ಹೆಂಣಿಗೆ ದಾನ ಗಂಡಿಗೆ ಮೂಲವಾಗಿ ಆಚಂದ್ರಾರ್ಕಸ್ಥಾಯಿಯಾಗಿ ಯಥಾನುರೂಪದಿಂ ಸುಖಂ ಭೋಗಿಸಿ ಬಂದು ಬಹುದು ಯಂದು ಪಾಲಿಸಿದ ಸಾಧನ ಯಿಂತಪುದಕ್ಕೆ ಸಾಕ್ಷಿಗಳು; (KI. III, I, 13, 1542).

ಧರ್ಮಗತಿ; Dharmagati; ಧರ್ಮದ ಪರಿಸ್ಥಿತಿ; ನ್ಯಾಯದ ಸ್ಥಿತಿ; Position of law; (ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. XIV, 80, c. 1400).

ಧರ್ಮನಿರ್ಣಯ; Dharma-nirṇaya: ನೀತಿ ನಿಯಮಗಳಿಗೆ ಅನುಗುಣವಾದ ನಿರ್ಣಯ; A decision passed on law and morals; (ಕು.ವ್ಯಾ.ಭಾ.ಗದಾ ಪ; Ku.Vyā.Bhā. Gadā Pa. VIII, 31, c.1400).

ಧರ್ಮಸೂಕ್ಷ್ಮ; Dharma-sūkshma: ನ್ಯಾಯನಿರ್ಣಯದಲ್ಲಿ ಸೂಕ್ಷ್ಮ ಸ್ಥಿತಿ; A delicate law point in the decision; (ಕು.ವ್ಯಾ.ಭಾ. ಸಭಾ ಪ; Ku.Vyā.Bhā. Sabhā Pa. XIV, 58, c.1400).

ನ್ಯಾಯ; Nyāya: ನ್ಯಾಯ; Law, Justice; ಶ್ರೀಮತು ಅರಿನಬಾವಿಒಡೆಯರು ನ್ಯಾಯಧರ್ಮ್ಮಗಳನೂ ಪಾಲಿಸುತ; (EC. X(O), Mb.7, 1416).

ನಿರೂಪ; Nirūpa: ಅಪ್ಪಣೆ, ಆಜ್ಞೆ; Order; Direction; ಕೃಷ್ಣರಾಯಮಹಾರಾಯರ ನಿರೂಪದಿಂದ ಸಾಳುವ ಗೋವಿಂದರಾಜರವರು; (EC. IV(R), Ch.160, 1517).

ಮೂಲಪರಿಚ್ಛೇದ; Mūla-parichchēda: ಒಡೆತನದ ಹಕ್ಕು; Proprietory right; (KI. III, I, 3, 1336).

ಸಾಕ್ಷಿ; Sākshi: ಕಣ್ಣಿಟ್ಟು ನೋಡಿದವನು; Eye witness; (EC. III(R), Gu.28, 1029).

ಸ್ವಾಸ್ತೆ (ಸ್ವಾಸ್ಥ್ಯ); Svāste, (Svāstya): ಆಸ್ತಿ, ಹೊಲ; Landed property; (SII. IX, 637, 1549).

ಹೆಂಣಿಗೆ ದಾನ; Heṇṇige-dāna: ಗಂಡು ಸಂತಾನವಿಲ್ಲದಾಗ ಆಸ್ತಿಯ ಮೇಲಿನ ಹೆಣ್ಣಿನ ಹಕ್ಕು; Secondary right to property of a female member in the absence

of a male descendant. ಆಸ್ತಿಯ ಹಕ್ಕು ಪುರುಷವಾರಸದಾರನಿಗೆ ಬರುವದೆಂದೂ ಇಂಥ ವಾರಸದಾರನಿಲ್ಲದಾಗ ಸ್ತ್ರೀವಾರಸದಾರಳಿಗೆ ದಾನವಾಗಿ ಹೋಗುವದೆಂದೂ ಶಾಸನದಲ್ಲಿ ಸೂಚಿತವಾಗಿದೆ. It is indicated in the inscription that right to property would devolve on a male descendant and in the absence of a male descendant it would devolve on a female descendant as a gift; ನಿಂಮ ಸಂತತಿ ಪರಂಪರೆಯಾಗಿ ಹೆಂಣಿಗೆ ದಾನ ಗಂಡಿಗೆ ಮೂಲವಾಗಿ ಆ ಚಂದ್ರಾರ್ಕಸ್ಥಾಯಿಯಾಗಿ; (KI. III, I, 13, 1542).

೩. ಅಪರಾಧಗಳು, ಅಪರಾಧಿಗಳು ಮತ್ತು ಶಿಕ್ಷೆಗಳು

3. OFFENDERS, CRIMES AND PUNISHMENTS

ಅಡಗಿನ ಬಸನಿಗ; Aḍagina basaniga: ಮಾಂಸಾಹಾರದ ವ್ಯಸನವುಳ್ಳವ; ಇಂಥವನಿಗೆ ವೃತ್ತಿಗಳ ಮೇಲಿನ ಹಕ್ಕು ಇರುತ್ತಿದ್ದಿಲ್ಲ; Habitually adicted to meat eating; Such a person would be deprived of his share; ಅಡಗಿನ ಬಸನಿಗರ್ಗ್ಗಂ ಕಳ್ಗುಡಿವವರ್ಗ್ಗಂ ವೃತ್ತಿಲೋಪಮೆಂಬೀ ನುಡಿಯಂ ಕಡೆಗಣ್ಣಣಿಸದೆ; (SII. IX, I, 117, 1055).

ಅನ್ಯಾಯ; Anyāya: ಅಧರ್ಮ; ಅಸತ್ಯ; ಅಯೋಗ್ಯ; Injustice; transgressing; ಸುಂಕದನ್ಯಾಯ ಪೆರ್ಚ್ಚಿದಡೆ ಶ್ರೀಮದಾಹವಮಲ್ಲದೇವರ ಶ್ರೀಪಾದಂಗಳ್ಗೆ . . . . . . ಬಿನ್ನಪಂಗೆಯ್ದಡೆ; (SII. IX, I, 76, 991).

ಅಪರಾಧ; Aparādha: ತಪ್ಪುದಂಡ; ಅಪರಾಧಕ್ಕೆ ದಂಡವನ್ನು ಕೊಡುವುದು; Fine to be paid for a crime; ಹಂನೆರಡು ಸಾವಿರಾ ವರಹನ ಅಪರಾಧಾ ತೆತು ಬಹರು; (SII. VII, 305, 16th cent.).

ಅಪೋಹ; Apōha: ನಿರ್ಲಕ್ಷ್ಯ, ವ್ಯತ್ಯಯ; Neglect, disturbance, lapse; ಇನ್ತಿನಿತು ಸಮಕಟ್ಟು ಮನಪೋಹವಾಗಲೀಯದೆ ನಡಸುವನ್ತಾಗಿ; (SII. XX, 111, 1140).

ಅಳಿಪು; Aḷipu: ತಪ್ಪುವುದು, ಕಟ್ಟಳೆಯಂತೆ ನಡೆಯದಿರುವುದು; Breach of law, committing offence, lapse; ಈ ಧರ್ಮಕ್ಕೆ ಅಳುಪಿದವರು ಹಂನೆರಡು ಸಾವಿರ ಹೊಂನನೂ ಹಂನೆರಡು ಕಪಿಲೆಯನೂ ಅರಸಿಂಗೆ ತೆಱುವರು; (EC. VIII, Tl.197, 1362).

ಆಣೆ ಮಿಗು; Āṇe-migu: ಅಪ್ಪಣೆಯನ್ನು ಕಡೆಗಣಿಸುವುದು; Ignore or disregard the order; ಆಣೆಯಂ ಮಿಕ್ಕಂಗೆ ಪನ್ನೆರಡು ಪಣಂ; (SII. IX, I, 77, 992).

ಆಣೆಮೀಱು; Āṇe mīṟu: ಆಜ್ಞೆಯನ್ನು ಮೀರುವುದು; Not obeying the orders; ಆಣೆಯಂ ಮಿಕ್ಕಂಗೆ ಪನ್ನೆರಡು ಪಣಂ ಮೀಱಿದಂಗೆ ಪನ್ನೆರಡು ಗದ್ಯಾಣಂ ದಣ್ಡಂ; (SII. IX, I, 77, 992).

ಆತ್ಮದ್ರೋಹ; Ātmadrōha: ಆತ್ಮವಂಚನೆ; ತನ್ನ ಮಾತನ್ನು ಪೂರೈಸದಿರುವುದು; Self deception; not keeping ones own word; ವೀರಪ್ರತಿಜ್ಞೆ ಕೈಗೂಡದಾತ್ಮದ್ರೋಹ (ಜೈ.ಭಾ. Jai.Bhā. IV, 2, 1532)

ಆಯುಧಕಿತ್ತುವದು; Ayudha-kittuvadu: ಆಯುಧವನ್ನು ಹೊರತೆಗೆಯುವುದು; ಹೆದರಿಸುವುದು; Taking out the sword; Threatening;

(1) ಅರೆಕಿತ್ತುವುದು; ಹೊಡೆಯುವುದಕ್ಕಾಗಿ ಆಯುಧವನ್ನು ಅರ್ಧ ಸೆಳೆಯುವುದು; Drawing of the sword partially, to strike.

(2) ನೆರೆಕಿತ್ತುವುದು; ಆಯುಧವನ್ನು ಪೂರ್ಣವಾಗಿ ಹೊರತೆಗೆಯುವುದು; Drawing of the sword fully to strike.

ಆಯುಧವನು ಅರೆಕಿತ್ತವಂಗೆ ಅರಸಿಂಗೆ ತೆರುವ ಗ ೫೧ ನೆರೆಕಿತ್ತವಂಗೆ; (SII. VII, 213, 12th cent.).

ಇಱಿ; Iṟi: ಇರಿಯುವುದು; Stabbing; Piercing; ಇಱಿಯೆ ಪನ್ನೆರಡು ಪಣ; (SII. IX, I, 102, 1046).

ಕಡಿ; Kaḍi: ಖಡ್ಗದಿಂದ ಕಡಿಯುವುದು, ಕೊಲೆಮಾಡುವುದು; Murder; ಕಡಿದಂಗೆ ಗ ೫೦೦; (SII. VII, 213, 12th cent.).

ಕವರ್ತೆ; Kavarte: ಸೂರೆ ಮಾಡುವುದು; To loot; ಸಮಯದ್ರೋಹರು ರಾಜದ್ರೋಹರು ಬಣಂಜಿಗ ಪಣೆಯರು ನತ್ತಣೆಯರು ಕೊಲೆಕವರ್ತ್ತಗೊಡೆಯರು; (EC. II(R), 455, 13th cent.).

ಕಳ್‌ಗುಡಿವವ; Kaḷguḍivava: ಸೆರೆಕುಡುಕ; Habitual drunkard; ಇಂಥವನಿಗೆ ವೃತ್ತಿ ಲೋಪವೆಂದು

ವಿಧಿಸಲಾಗಿದೆ; Such a person was to be deprived of his shares in donations; (SII. IX, I, 117, 1055).

ಕೀಳು; Kīḷu: ಕಿತ್ತುವುದು, ಸ್ಥಾನಾಂತರಿಸುವುದು; Uproot, disturb, remove; ಶಾಸನದ ಕಲ್ಲನ್ನು ಕಿತ್ತಿಹಾಕುವುದು ಒಂದು ಅಪರಾಧವಾಗಿದ್ದಿತು. ಅದನ್ನು ಅರ್ಧಕಿತ್ತರೆ ಇಷ್ಟು ದಂಡ, ಪೂರ್ಣವಾಗಿ ಕಿತ್ತರೆ ಇನ್ನಷ್ಟು ದಂಡ ಎಂದು ವಿಧಿಸಲಾಗಿದ್ದಿತು. Removal of a stone with an inscription was an offence. A fine was prescribed for partly removing it and for fully displacing it; ಅಱೆಕಿತ್ತವಂಗಯ್ನೂರು ನೆಱೆಕಿತ್ತವಂಗೆ ಸಾವಿರ; (SII. VII, 211, 1407).

ಕೈತಪ್ಪು; Kaitappu: ಆಜ್ಞೆಯನ್ನು ಅನುಸರಿಸದೇ ಇರುವುದು; Default; ಕೈತಪ್ಪು ಮಾಡಿದಾತನಲ್ಲದೆ; (SII. VII, 213, 12th cent.).

ಕೊಲೆ; Kole: ಕೊಲ್ಲುವುದು; Slaughter, murder; (EC. II(R), 455, 13th cent.).

ಗ್ರಾಮದ್ರೋಹಿ; Grāma-drōhi: ಗ್ರಾಮದ ಕಟ್ಟಳೆಗಳನ್ನು ಮುರಿಯುವವ; ಗ್ರಾಮದ ಜನರಿಗೆ ಎರಡು ಬಗೆಯುವವ; Transgressor of regulations of a village; proving false to the villagers; Committing crime against the villagers; ಗ್ರಾಮದ ಜನರ ವಿರುದ್ಧ ಅಪರಾಧವೆಸಗುವುದು; ಗ್ರಾಮಸಮಯ ಯೀ ದಿನಂ ಮೊದಲಾಗಿ ಬ್ರಾಹ್ಮಣರಿಗೆ ಸಾಮ್ಯ . . . . . ಯಿಲ್ಲ ವೃತ್ತಿವ್ಯಾಹಾರವಿಲ್ಲ ಇದಂ ಮೀಱಿದವನು ಗ್ರಾಮದ್ರೋಹಿ; (SII. IX, I, 344, 1228).

ಗುರುದ್ರೋಹ; Guru-drōha: ಹಿರಿಯರ ಮಾತು ನಡೆಸದಿರುವದು; Not obeying elders; (ಜೈ. ಭಾ. Jai.Bhā. IV, 2, 1530).

ತವುಡಿ; ತವುಡೆ; Tavuḍi, Tavuḍe: ತಪ್ಪಿಗಾಗಿ ಕೊಡುವ ದಂಡ, ತಪ್ಪುದಂಡ; Penalty or fine for default; ತಪ್ಪು ತವುಡಿ ದಂಡ ಉಂಡಿಗೆ; (EC. IX(O), Kn.41, 1300; Ibid. IX(R), Bl.17, 1174).

ತಪ್ಪು; Tappu: ತಪ್ಪಿಗಾಗಿ ಕೊಡುವ ದಂಡ; Fine for offence; (EC. IX(R), Kn.41, 1300); ಅರಸಿಂಗೆ ತಪ್ಪು ಗ ೧೦೦೦; (SII. VII, 180, 1362); ಅರಮನೆಗೆ ತಪ್ಪು ವರಹ ಹಂನೆರಡು ಸಾವಿರ ಹೊಂನನೂ ತೆಱುವೆವು; (SII. VII, 309, 1431).

ತಪ್ಪುದಂಡ; Tappu-daṇḍa: ತಪ್ಪಿಗಾಗಿ ಕೊಡುವ ದಂಡ; Fine for a crime; ಅರಸಿಂಗೆ ತಪ್ಪು ದಂಡವ ಸಾಪಿರ ಹೊಂನ ತೆಱುವ ಅಡಕ; (SII. VII, 189, 1384).

ದಶಾಪರಾಧ; Daś-āparādha: ಹತ್ತು ಬಗೆಯ ಅಪರಾಧಗಳು; Ten kinds of crimes; (EI. XXXIV, 16, 1262).

1. ಆಜ್ಞೋಲ್ಲಂಘನೆ; Not obeying orders
2. ಸ್ತ್ರೀವಧ; Killing of Women
3. ವರ್ಣಸಂಕರ; Admixture of races
4. ಪರಸ್ತ್ರೀಗಮನ; Adultery
5. ಚೌರ್ಯ; Theft
6. ಗಂಡನಿಲ್ಲದೆ ಬಸಿರು; Illegitimate pregnancy
7. ವಾಕ್ಪಾರುಷ್ಯ ಮತ್ತು ಅವಾದ್ಯ; Scolding
8. ಅಸಂಸ್ಕೃತ ವರ್ತನೆ; Misbehaviour
9. ಹೊಡೆಯುವುದು; Beating
10. ಗರ್ಭಪಾತ; Causing abortion

IEG. p.85; See also Kane HD. III, 264-65;

ದಸದೋಶ (ದಶದೋಷ); Dasadōśa (Daśa-dōsha): ಬಹುಶಃ s.a. ದಶಾಪರಾಧ; Daśāparādha; (KI. I, 30, 1222).

ದಂಡ; Daṇḍa: ದಂಡ ಕೊಡುವುದು; Fine; ಶುಲ್ಕದಂಡಾದಿ ಸಕಳದ್ರವ್ಯೋಪಾರ್ಜನೋಪೇತಂ; (EI. VI, 10, 1192; HAS. XVIII, 14, 1183; For different types of fines see SII. VII, 213; also Ibid. IX, I, 77, 102 and 117).

ದಂಡದೋಷ; Daṇḍa-dōsha: (1) ದಂಡ ಕೊಡುವ ಶಿಕ್ಷೆ; Punishment of fines (2) ದಂಡದಿಂದ ಬರುವ ಆದಾಯ; Income from fine. ಧಾನ್ಯಾಯ ಹಿರಣ್ಯಾದಾಯ ದಂಡದೋಷದಶಾಪರಾಧಾದಿ ಸಮಸ್ತೋತ್ಪತ್ತಿ ಸಹಿತೋ ದತ್ತಃ; (EI. VIII, 6, 930); ಧಾರಾಪೂರ್ವಕಂ ಮಾಡಿ ನಿಧಿ ನಿಧಾನ ನಿಕ್ಷೇಪಂ ಸಹಸ್ರದಂಡದೋಷಂ ಮೊದಲಾಗೆ ಸರ್ವಾಯಸುದ್ಧಿಯಿಂ; (EC. XI(O), Cd.34, 1123).

ದಂಡಾದಾಯ; Daṇḍādāya: ದಂಡದಿಂದ ಬರುವ ಉತ್ಪನ್ನ; Income from fines; (SII. IX, I, 172, 1106).

ದಂಡಾಯ; Daṇḍāya: s.a. ದಂಡಾದಾಯ; Daṇḍādāya; (EI. XIII, 14, 1045; EC. IX(R), Bl.17, 1174);

ದಿವ್ಯ; Divya: ಬೆಂಕಿ, ಕಾದ ಕಬ್ಬಿಣ ಮುಂತಾದವನ್ನು ಹಿಡಿದು ಪ್ರಮಾಣ ಮಾಡುವುದು; Ordeal; ದಿವ್ಯದಿನಪವಾದಮಂ ಕಳೆವಂತು; (ಪಂ.ರಾ. Pam.Rā, XVI, 24, 12th cent.); ಕಾಳಗವುಡ ದಿಬ್ಯವ ಹಿಡಿದು ಗೆಲ್ದುಕೊಂಡ ಜಯಪತ್ರ; (EC. VIII(O), Sb.387, 1248).

ಏಳು ವಿಧ ದಿವ್ಯಗಳು; Seven types of divyas; ಕೊಪ ರವಿ ತಣ್ಡುಲವಗ್ನಿ ತಪ್ತಮಾಷಂ ಜಲವಿಷದಳಸಪ್ತ ದಿವ್ಯಮಂ ವರ್ತಿಸುಗುಂ; (SII. IX, I, 153, 1083).

ಈ ಏಳು ದಿವ್ಯಗಳು ಈ ರೀತಿಯಾಗಿದ್ದವು: ಕೊಪ್ಪ: ಕೊಪ್ಪರಿಗೆಯಲ್ಲಿಯ ಕುದಿಯುತ್ತಿರುವ ಎಣ್ಣೆಯಲ್ಲಿ ಕೈ ಅದ್ದುವುದು; ರವಿ: ಬಹುಶಃ ಬಿಸಿಲಲ್ಲಿ ನಿಲ್ಲುವುದು; ತಣ್ಡುಲ: ನೆನೆಸಿದ ಅಕ್ಕಿಯನ್ನು ಮುಕ್ಕುವುದು; ಅಗ್ನಿ: ಕಾದ ಕಬ್ಬಿಣವನ್ನು ಹಿಡಿದು ನಡೆಯುವುದು; ತಪ್ತಮಾಷ: ಕುದಿಯುವ ತುಪ್ಪವುಳ್ಳ ಪಾತ್ರೆಯ ತಳದಿಂದ ಚಿನ್ನದ ಉಂಗುರವನ್ನೆತ್ತಿ ತೆಗೆಯುವದು; ಜಲ: ನೀರಿನಲ್ಲಿ ಮುಳುಗುವುದು; ವಿಷ: ವಿಷವನ್ನು ತಿನ್ನುವುದು. ಆರೋಪಿಯ ಮೇಲೆ ಇವುಗಳ ಪರಿಣಾಮವಾಗದಿದ್ದರೆ ಅವನು ನಿರಪರಾಧಿಯೆಂದು ನಿರ್ಣಯಿಸಲ್ಪಡುತ್ತಿದ್ದಿತು. These seven were as follows: Koppa: dipping the hand in a cauldron of boiling oil; Ravi: probably standing in the Sun; Taṇḍula: swallowing specified quantities of soaked rice; Agni: walking, holding in hand red hot iron rod or ball; Tapta-māsha: lifting a golden ring from the bottom of a vessel with boiling ghee; Jala: drowning in water; Visha: eating poison. If these would not affect the accused, he would be declared innocent. (For details see HD. III, pp. 361ff under Ordeals.

ಬಳ್ಳಾರಿ ಜಿಲ್ಲೆಯ ಕೂಡಲಗಿ ತಾಲೂಕಿನ ಅಂಬಲಿ (ಪ್ರಾಚೀನ ಅಮ್ಮೆಳೆ) ಯಲ್ಲಿಯ ಕಲಿದೇವಸ್ವಾಮಿಯ ದೇವಾಲಯದಲ್ಲಿ ಈ ಏಳು ದಿವ್ಯಗಳು ನಡೆಯುತ್ತಿದ್ದವೆಂದು ಅಲ್ಲಿಯ ಒಂದು ಶಾಸನದಲ್ಲಿ ಹೇಳಿದೆ ಮತ್ತು ಅದಕ್ಕಾಗಿ ಹಣವನ್ನು ಕಟ್ಟಬೇಕಾಗಿದ್ದಿತೆಂಬುದೂ ಸೂಚಿತವಾಗಿದೆ. It has been stated in an inscription from Ambali (ancient Ammeḷe) in Kudalgi Taluk of Bellary District that these seven types of divyas were performed in the temple of Kalidēvasvāmi of that place; ಸಲೆ ಧರ್ಮ್ಮರೂಪದಿಂ ಶ್ರೀಕಲಿದೇವಸ್ವಾಮಿಯಲ್ಲಿ ಕೊಪ ರವಿ ತಣ್ಡುಲ ಅಗ್ನಿ ತಪ್ತಮಾಷಂ, ಜಲ ವಿಷದಳ ಸಪ್ತದಿವ್ಯಮುಂ ವರ್ತ್ತಿಸುಗುಂ ದೇವರ್ಗ್ಗೆ ದಿವ್ಯದ ಮುದ್ರಾವಣದಿಂ ಪುಟ್ಟಿದರ್ಥವಪ್ಪುದು; (SII. IX, I, 153, lines 63-65).

ದೇಶದ್ರೋಹ; Dēśadrōha: ದೇಶಕ್ಕೆ ದ್ರೋಹ ಬಗೆಯುವುದು; Treason; (KI. V, 14, 1099).

ಧರ್ಮ; Dharma: ಧಾರ್ಮಿಕ ಉಂಬಳಿಯನ್ನು ಅನುಭವಿಸುವ ವಿಷಯದಲ್ಲಿ ಮಾಡಿದ ನಿಬಂಧನೆಗಳು; Conditions imposed on the enjoyment of religious gifts ; ಈ ಧರ್ಮವಂ ಸಲಿಸದಿರ್ದ್ದಡೆ ಅರಸಿಂಗೆ ೫೦೦ ಹೊನ್ನಂ ತಪ್ಪುವರು; (SII. VII, 221, 1406).

ಧರ್ಮದೂರ; Dharma-dūra: ಧರ್ಮವನ್ನು ಲಕ್ಷಿಸದವ, ನೀತಿಯಿಲ್ಲದವ; ಧರ್ಮದಿಂದ ದೂರ ಸರಿದವ; One who has no respect for law and ethics; One who moves away from dharma; ಧರ್ಮದೂರನು ನಿನ್ನವನು; (ಕು.ವ್ಯಾ.ಭಾ. ಗದಾ ಪ. Ku.Vyā.Bhā. Gadā Pa. XI, 7, c.1400).

ಧರ್ಮದ್ರೋಹ; Dharma-drōha: ನೀತಿ ನಿಯಮಗಳನ್ನು ಉಲ್ಲಂಘಿಸುವುದು; Transgressing law and ethics; (ಜೈ.ಭಾ. Jai.Bhā. IV, 2, 16th cent.).

ನಷ್ಟಿ; Nashṭi: ನಷ್ಟವನ್ನುಂಟುಮಾಡುವವನು; One who causes loss; defaulter; ಸಿದ್ದಾಯವನಿಕ್ಕದ ನಷ್ಟಿಯ ವೃತ್ತಿಗಳನು ವೋಹಳರಿಟ್ಟ ದಿನಂ ಮೊದಲಾಗಿ; (EC. V(O), Ak.128, 1229).

ನೆತ್ತಗೆಯರು; Nettageyaru: ಜೂಜಾಡುವವರು; Gamblers (EC. II(R), 455, 13th cent.).

ಪರದನಂ ಪೊಯ್; Paradanaṁ poy: ವ್ಯಾಪಾರಿಯನ್ನು ಹೊಡೆಯುವುದು; Attacking a merchant; ಅನ್ಯಾಯದೊಳ್ ಪರದನಂ ಪೊಯ್ದೊಡೆ ಸಾವುಸಾಲ್ವರ್; (SII. IX, I, 77, 992).

ಪಾದರ; Pādara: ಹಾದರ; Adultery; (SII. IX, I, 77, 992).

ಪಾದರಿಗ; Pādariga: ಹಾದರ ಮಾಡುವವ; Adultrer; ಪಾದರಿಗನಂ ಕೊಲ್ವರು; (SII. IX, I, 77, 992).

ಪಾದರಿಗೆ; Pādarige: ಹಾದರಗಿತ್ತಿ; Adultress; ಪಾದರಿಗೆಯ ಪಚ್ಚವಂ ಕೊಂಡು ಪಾದರಿಗೆಯ ಮೂಗನರಿದು

ಪಾದರಿಗನಂ ಕೊಲ್ವರು; (SII. IX, I, 77, 992; ಧರ್ಮಾ; Dharmā, V, 125, 12th cent.).

ಪೊಯ್; Poy: ಹೊಡೆ; Attack; ಪೊಯ್ದಂಗೆಂಟು ಪಣ; (SII. IX, I, 77, 992); ಪೊಯ್ದಂಗಾಱು ಪಣಂ; (Ibid. 102, 1046).

ಬಯ್; Bai: ಬಯ್ಯುವುದು; Using indescent language; ಬಯ್ದಂಗೆ ಪಣಮುವೊಂದು; (SII. IX, I, 102, 1046).

ಬೀಳ್ಸಿದ್ಧಾಯ; Bīlsiddhāya: ದಂಡದ ರೂಪದಲ್ಲಿ ಕೊಡುವ ಕರ; Penal Tax; ತಾವು ಮಾಡದೆಯಂ ಪೆಱರ ಮಾಡಲೀಯ್ಯದೆಯುಮಿರ್ದ್ದರಪ್ಪಡಂಗಡಿಯಕ್ಕೆ ಮನೆಯಕ್ಕೆ ಬೀಳ್ಸಿಧಾಯಮಂ ತಿಱುವರು; (SII. XX, 102, 1132).

ಮನೆ ಪೊಗು; Mane Pogu: ಅನಧಿಕೃತವಾಗಿ ಇತರರ ಮನೆಯನ್ನು ಪ್ರವೇಶಿಸುವುದು; Illegal entry, tranpass; ಊರ್ಮ್ಮನೆವಾರ್ತೆಗರ ಮನೆ ಪೊಕ್ಕಡೆ ಪನ್ನೆರಡು ಗದ್ಯಾಣ ದಂಡ; (SII. IX, I, 77, 992).

ರಾಜದ್ರೋಹ; ರಾಜದ್ರೋಹಿ; Rājadrōha; Rājadrōhi: ರಾಜನಿಗೆ ದ್ರೋಹ ಬಗೆಯುವವ; A traitor to the king; (EC. II(R), 455, 13th cent; ಕು.ವ್ಯಾ.ಭಾ. ಸಭಾ ಪ; Ku.Vyā.Bhā. Sabhā Pa. I, 34, c.1400).

ರಾಷ್ಟ್ರಕಂಟಕ; Rāshṭra-kaṇṭaka: ರಾಷ್ಟ್ರದ್ರೋಹಿ; Enemy of the country; (EC. VIII(O), Sb.179, 1189).

ವೃತ್ತಿಲೋಪ; Vṛitti-lōpa: 1) ಕೆಲಸದಿಂದ ತೆಗೆದು ಹಾಕುವುದು; 2) ವೃತ್ತಿಗಳನ್ನು, ದಾನವಾಗಿ ಕೊಟ್ಟ ಭೂಮಿಗಳನ್ನು ಹಿಂದೆಗೆದುಕೊಳ್ಳುವದು; 1) Dismissal from job; 2) Forfeiture of grant lands; (SII. IX, I, 117, 1055).

ಸಮಕಟ್ಟು; Samakaṭṭu: ವ್ಯವಸ್ಥೆ, ಕರಾರು, ನಿಯಮಾವಳಿ, ನಿರ್ಬಂಧ; Arrangement, rules, regulations and conditions; ಇನ್ತಿನಿತು ಸಮಕಟ್ಟುವುನಪೋಹ ವಾಗಲೀಯದೆ; (SII. XX, 111, 1140).

ಸಮಯದ್ರೋಹ; Samaya-drōha: ತಮ್ಮ ಧರ್ಮಕ್ಕೆ ದ್ರೋಹ ಬಗೆಯುವವನು; Betraying ones own religion; (EC. II(R), 455, 13th cent.).

ಸಾಹಸದಂಡ; Sāhasa-daṇḍa: ಗಂಭೀರ ಅಪರಾಧಗಳಿಗೆ ಕೊಡುವ ಶಿಕ್ಷೆ; Punishment accorded for serious types of offence (ನೀ.ವಾ. ಕ. ವ್ಯಾಖ್ಯಾನ, Nī.Vā. Kan. comm., XVII, 26, 12th cent.).

ಸುರಿಗೆಗಿತ್ತು; Surigegittu: ಖಡ್ಗ ತೋರಿಸಿ ಹೆದರಿಸುವುದು; Threatening at the point of knife; ಸುರಿಗೆಗಿತ್ತರದೆಯ್ದಿದವಂಗೆಂಟು ಪಣವೆ ದಂಡಂ ನಿರುತಂ; (SII. IX, I, 102, 1046)

ಸ್ವಾಮಿದ್ರೋಹ; Svāmi-drōha: ಒಡೆಯನಿಗೆ ಎರಡು ಬಗೆಯುವದು; ಸಮಯಕ್ಕೆ ಆಗದಿರುವುದು; Proving false to the master; Not helping the master and the proper time; . . ಮೆರಡರಸನವಸರಕೊದಗದ ಸ್ವಾಮಿದ್ರೋಹ; (ಜೈ.ಭಾ. Jai.Bhā. IV, 2, 16th cent.).

ಅಧ್ಯಾಯ ೮ CHAPTER VIII

ಶಿಕ್ಷಣ
EDUCATION

೧. ಶಿಕ್ಷಣ ಸಂಸ್ಥೆಗಳು ಮತ್ತು ಸಂಬಂಧಿಸಿದ ಪದಗಳು

1. EDUCATIONAL INSTITUTIONS AND RELATED TERMS

ಅಗ್ರಹಾರ; Agrahāra: ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟ ಹಳ್ಳಿ; Village granted to the Brāhmaṇas; (ಪಂ.ಭಾ. Paṁ.Bhā. XIV, 41, 10th cent.).

ಅಗ್ರಹಾರಗಳು ವಿದ್ವಾಂಸರಾದ ಬ್ರಾಹ್ಮಣರಿಗೆ ಗ್ರಾಮಗಳನ್ನು ಅವರು ಶೈಕ್ಷಣಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಉಂಬಳಿಯಾಗಿ ಹಾಕಿಕೊಟ್ಟ ಗ್ರಾಮಗಳು. ಒಮ್ಮೊಮ್ಮೆ ಬೇರೆ ಪ್ರದೇಶಗಳಿಂದ ವಿದ್ವಾಂಸರನ್ನು ಕರೆಸಿ ಇಂಥ ಗ್ರಾಮಗಳಲ್ಲಿ ಅವರು ನೆಲೆಸುವಂತೆ ಮಾಡುತ್ತಿದ್ದರು. ಹಲವು ವೇಳೆ ಎರಡು-ಮೂರು ಗ್ರಾಮಗಳನ್ನು ಕೂಡಿಸಿ ಒಂದು ಅಗ್ರಹಾರವಾಗಿ ಮಾಡಿಕೊಟ್ಟದ್ದೂ ಉಂಟು. ಇಂಥ ಗ್ರಾಮಗಳಲ್ಲಿಯ ಒಕ್ಕಲುತನದ ಭೂಮಿಯನ್ನು ವೃತ್ತಿಗಳಾಗಿ ವಿಂಗಡಿಸಿ ಒಬ್ಬೊಬ್ಬ ವಿದ್ವಾಂಸರಿಗೆ ಕೊಡುತ್ತಿದ್ದರು. ಸಾಮಾನ್ಯವಾಗಿ ಇಂಥ ಭೂಮಿಗಳು ಕರದಿಂದ ವಿಮುಕ್ತವಾಗಿರುತ್ತಿದ್ದವು. ಇವುಗಳಿಂದ ಆದಾಯವನ್ನು ವಿದ್ವಾಂಸರ ಉಪಜೀವನಕ್ಕಾಗಿಯೂ ವಿದ್ಯಾರ್ಥಿಗಳ ಊಟ, ಬಟ್ಟೆ, ಔಷಧೋಪಚಾರ ಮುಂತಾದವುಗಳಿಗೆ ಉಪಯೋಗಿಸಬೇಕಾಗುತ್ತಿತ್ತು. ಇಂಥ ವಿದ್ವಾಂಸರು ಮಹಾಜನರೆಂದು ಕರೆಯಲ್ಪಡುತ್ತಿದ್ದರು. ಅವರ ವಿದ್ವತ್ತು ಮತ್ತು ಸಚ್ಚಾರಿತ್ರ್ಯದ ಅನೇಕ ವರ್ಣನೆಗಳು ಶಾಸನಗಳಲ್ಲಿ ದೊರೆಯುತ್ತವೆ. ಒಂದೊಂದು ಅಗ್ರಹಾರದಲ್ಲಿ ಅವುಗಳ ವ್ಯಾಪ್ತಿಗನುಗುಣವಾಗಿ ನಿರ್ದಿಷ್ಟ ಸಂಖ್ಯೆಯ ಮಹಾಜನರಿರುತ್ತಿದ್ದರು. ಉದಾ: ಲಕ್ಕುಂಡಿಯಲ್ಲಿ ಒಂದು ಸಾವಿರ ಮಹಾಜನರಿದ್ದರೆ ಹಾವೇರಿಯಲ್ಲಿ ನಾನೂರು ಮಹಾಜನರಿದ್ದರು. ಬಹು ಪ್ರಾಚೀನಕಾಲದಿಂದ ಪ್ರಸಿದ್ಧವಾದ ತಾಳಗುಂದದಲ್ಲಿ ೩೨,೦೦೦ ಮಹಾಜನರಿದ್ದರು. ಅಗ್ರಹಾರಗಳು ಪ್ರಾಚೀನ ಕಾಲದ ವಿದ್ಯಾಕೇಂದ್ರಗಳು. ಇಂಥ ಅಗ್ರಹಾರಗಳಲ್ಲಿ ವೇದ, ಧರ್ಮಶಾಸ್ತ್ರ, ಸಾಹಿತ್ಯ, ವ್ಯಾಕರಣ ಮುಂತಾದ ಶಾಸ್ತ್ರಗಳ ಅಧ್ಯಯನ ನಡೆಯುತ್ತಿದ್ದಿತು. ಎಷ್ಟೋ ಸಲ ಒಂದು ವಿಶಿಷ್ಟ ವಿಷಯದ ಅಭ್ಯಾಸಕ್ಕಾಗಿ ಅಗ್ರಹಾರಗಳು ನಿರ್ಮಿಸಲ್ಪಡುತ್ತಿದ್ದವು. ಉದಾ: ಗದಗ ಜಿಲ್ಲೆಯ ಕೋಟಉಮಚಗಿಯಲ್ಲಿ ಪ್ರಾಭಾಕರ, ನ್ಯಾಸ ಇವುಗಳ ಅಭ್ಯಾಸ ನಡೆಯುತ್ತಿದ್ದಿತು. ಚಾಳೀಸಗಾವ ಜಿಲ್ಲೆಯ ಪಾಟಣದ ಅಗ್ರಹಾರದಲ್ಲಿ ಭಾಸ್ಕರಾಚಾರ್ಯರ ಕೃತಿಗಳ ಅಭ್ಯಾಸ ನಡೆಯುತ್ತಿತ್ತು. ಪ್ರಾಚೀನ ಗುರುಕುಲಗಳ ಪ್ರತೀಕವಾದ ಇಂಥ ಅಗ್ರಹಾರಗಳನ್ನು ಆಧುನಿಕ ವಿಶ್ವವಿದ್ಯಾಲಯಗಳಿಗೆ ಹೋಲಿಸಬಹುದು. ಇಂಥ ಎಷ್ಟೋ ಅಗ್ರಹಾರಗಳು ರಾಮ, ಹರಿಶ್ಚಂದ್ರ, ಜನಮೇಜಯ ಮುಂತಾದ ಪೌರಾಣಿಕ ವ್ಯಕ್ತಿಗಳಿಂದ ಸ್ಥಾಪಿಸಲ್ಪಟ್ಟವುಗಳೆಂಬ

ಪ್ರತೀತಿಯಿದೆ. ಉದಾ. ರಾಮರದತ್ತಿ ಅಗ್ರಹಾರ, ಹರಿಶ್ಚಂದ್ರದತ್ತಿ ಅಗ್ರಹಾರ, ಜನಮೇಜಯ ದತ್ತಿ ಅಗ್ರಹಾರ ಇತ್ಯಾದಿ.

Agrahāras were villages granted to the learned Brāhmaṇas for conducting educational and religious activities. Sometimes learned scholars were invited from outside and settled in such villages. There are instances when two or more villages were joined together and formed into an Agrahāra. The agricultural lands in such villages were divided into defferent shares and granted to the each learned scholar. Generally such lands were exempted from taxes. The income from such land was used for the maintenance of the scholars and students and for their food, clothing, medical treatment etc. Such learned men were known as Mahājanas. There are copious descriptions in early and medieval Kannada inscriptions, of the learning and character of the Mahājanas. The number of such mahajanas in the agrahāras were normally fixed in relation to the size of the agrahāra; for eg. in Lakkuṇḍi there were 1000 Mahājanas; at Haveri there were four hundred; in Tāḷagunda which was known from very early times, there were 32000 Mahājanas. Agrahāras were centres of ancient learning. Vēdas, Dharmaśāstras, literature, grammar and other subjects were studied and taught here. Some times some Agrahāras were specialised in imparting knowledge in a particular subject. For eg. in Koṭavumachige in Gadag district, special study was made on Prābhākara and Nyāsa. In Pāṭaṇ in Chalisgaon district, works of Bhāskarāchārya were studied. The Agrahāras, which were the relics of the Gurukulas of yore can be compared with the modern Universities.

Many times they were associated with Puranic and mythical personalities like Rāma, Hariśchandra, Janamējaya etc. Cf. Rāmaradatti-agrahāra, Hariśchandra-datti Agrahāra, Janamējaya-datti agrahāra etc.

(For a detailed study of this topic. See Dr. Shantakumari S.L., History of the Agrahāras, Karnataka, 400-1300).

ಅಘ್ರಾರ; Aghrāra: s.a. ಅಗ್ರಹಾರ; Agrahāra; ಪೂರ್ವದ ಮಾನ್ಯಕ್ಷೇತ್ರ ಗದ್ದೆಗಳನು ಪರಿವರ್ತನೆಯಾಗಿ ಅಘ್ರಾರವಾಗಿ ಕೊಟೆವಾಗಿ ಆ ಅಘ್ರಾರ ಮಹಾಜನಂಗಳಿಗೆ; (EC. IV(R), Ch.160, 1517).

ಅಭ್ಯಾಸಗೃಹ; Abhyāsa-gṛiha: ಓದುವ ಮನೆ; Study room; (ಕು.ಕಾ. Ku.Kā. VII, 59, 12th cent.).

ಅಂತರ್ವೇದಿ; Antarvēdi: ಯಜ್ಞಶಾಲೆಯ ಒಳ ಜಗಲಿ; Inner apartment (platform) of the sacrificial hall; (ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. VI, 24, c.1400).

ಘಟಿಕಾಶಾಲಾ; Ghaṭikā-śālā: s.a. ಘಟಿಕಾಸ್ಥಾನ; Ghaṭika-sthāna, below (APGAS. III, Gb.2, 1058; EI. XXV, p.325).

ಘಟಿಕಾ, ಘಟಿಕಾಸ್ಥಾನ; Ghaṭikā, Ghaṭikāsthāna: (1) ವೇದ ಉಪನಿಷತ್ತು ಮುಂತಾದ ಶಾಸ್ತ್ರಗಳ ಅಧ್ಯಯನಕ್ಕಾಗಿರುವ ವಿದ್ಯಾಲಯ; A college for the study of the Vēdas, upanishats, śāstras etc; (EI. XVIII, 5, 11th cent.) (2) ವೇಳೆಯನ್ನು ಅಳೆಯುವ ಸಾಧನವನ್ನಿಡುವ (ಘಟಿಕಾಯಂತ್ರ) ಸ್ಥಳ; A place where a vessel for measuring time (ghaṭikāyantra) was kept; (SII. XX, 154, 1172; ಅ.ಪು. A.Pu. XII, 31, 13th cent.).

ಘಟಿಕಾಸ್ಥಾನ ಒಂದು ಶಿಕ್ಷಣ ಕೇಂದ್ರ. ಇಂಥ ಕೇಂದ್ರಗಳಲ್ಲಿ ವೇದ ಮುಂತಾದವುಗಳ ಬಗ್ಗೆ ಶಿಕ್ಷಣ ನೀಡಲಾಗುತ್ತಿತ್ತು. ಇವು ದೇವಾಲಯಗಳ ಭಾಗಗಳಾಗಿರುತ್ತಿದ್ದವು. ಅಂಥ ಹಲವು ಘಟಿಕಾಸ್ಥಾನಗಳ ಬಗ್ಗೆ ಶಾಸನಗಳು ವಿವರಿಸುತ್ತವೆ. ಅಂಥ ಘಟಿಕಾಸ್ಥಾನಗಳಲ್ಲಿ ಗುಲಬರ್ಗಾ ಜಿಲ್ಲೆಯ ನಾಗಾಯಿ ೧೧-೧೨ನೇ ಶತಮಾನಗಳಲ್ಲಿ ಪ್ರಸಿದ್ಧವಾಗಿದ್ದಿತು. ಇದು

ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿತ್ತು. ಇಲ್ಲಿಯ ಶಾಸನಗಳ ಪ್ರಕಾರ ಇಲ್ಲಿ ಸುಮಾರು ೨೫೨ ವಿದ್ಯಾರ್ಥಿಗಳಿದ್ದರು. ಅವರಲ್ಲಿ ವೇದಗಳನ್ನು ಕಲಿಯುತ್ತಿದ್ದವರು ೨೦೦, ೫೨ ಜನ ವಿದ್ಯಾರ್ಥಿಗಳು ಶಾಸ್ತ್ರಗಳನ್ನು ಕಲಿಯುತ್ತಿದ್ದರು. ಈ ವಿಷಯಗಳನ್ನು ಕಲಿಸಲು ವಿದ್ವಾಂಸರಿದ್ದರು. ನ್ಯಾಸ, ಪ್ರಭಾಕರ ಹೇಳಲು ಮೂರು ಜನ ವಿದ್ವಾಂಸರಿದ್ದರೆಂದು ಹೇಳಲಾಗಿದೆ. ಎಲ್ಲ ವಿದ್ಯಾರ್ಥಿಗಳ ಹಾಗೂ ಉಪಾಧ್ಯಾಯರ ಉಪಜೀವನಕ್ಕಾಗಿ ದತ್ತಿಗಳನ್ನು ಬಿಡುತ್ತಿದ್ದರೆಂದೂ ಶಾಸನಗಳು ತಿಳಿಸುತ್ತವೆ. ಈ ಘಟಿಕಾಸ್ಥಾನದಲ್ಲಿ ಒಂದು ಪುಸ್ತಕ ಭಂಡಾರವಿದ್ದು ಇದರಲ್ಲಿ ಆರು ಜನ ಸರಸ್ವತೀ ಭಂಡಾರಿಗರಿದ್ದರೆಂದೂ ಈ ಸರಸ್ವತಿ ಭಂಡಾರಿಗರ ಹಾಗೂ ಪುಸ್ತಕ ಭಂಡಾರದ ಪೋಷಣೆಗಳಾಗಿ ದತ್ತಿಗಳನ್ನು ಬಿಡಲಾಗಿತ್ತೆಂದೂ ಶಾಸನವು ತಿಳಿಸುತ್ತದೆ.

Ghaṭikāsthānas represented educational institutions. Vēdas etc were taught here. They used to function as parts of temples. Early and medieval inscriptions of Karnataka refer to numerous such Ghaṭikāsthānas. Nāgāi in Gulburga district was one such Ghaṭikāsthāna in the 11th - 12th centuries. It was famous in the religious and educational fields. Inscriptions in this place state that there were about 252 students of whom 200 studied the Vēdas and 52 studies other śāstras. There were teachers to teach different subjects. It is stated that there were three teachers to teach Nyāsa and Prābhākara. Lands were granted for the maintenance for the students, teachers in the institution. A Library was housed in this Ghaṭikāsthana, where six Sarasvatī-Bhāndārigas or Librarians worked. Grants were made for maintenance of these officers and also the library; (APGAS, III, Gb.2, 1058)

ಶಾಳೆಯ ಕೈಂಕರ್ಯ್ಯಮಂ ಮಾಡಿಸಿ ಘಟಿಕಾಸ್ಥಾನಮೆನಿಪ ಶಾಲೆಗೆ; (Ibid.).

ಘಳಿಗೆ; Ghaḷige: s.a. Ghaṭikāsthāna; ಘಳಿಗೆಯ ಮಾಣಿಯರ್ ನಾಲ್ವರ್ಗ್ಗಂ; (EI. XV, 6, 1060).

ಘಟಿಗೆ; Ghaṭige: s.a. ಘಟಿಕಾ; Ghaṭikā; ಈ ಯೂರಾ ಘಟಿಗೆಯಾ ಮಹಾಜನಮಾನಳಿದೋರ ಲೋಕಕ್ಕೆ ಸಂದೋರಪ್ಪಾರ್; (EI. III, 48, 8th cent.).

ಪುಸ್ತಕ ಭಂಡಾರ; Pustaka bhaṇḍāra: ಗ್ರಂಥಾಲಯ; Library; (EI. XXV, p.325; ARSIE. 1936-37, Nos. 283, 1406; Ibid. 284, 1432.) ಶೃಂಗೇರಿಯ ಶಂಕರ ಮಠದಲ್ಲಿ ಒಂದು ಪುಸ್ತಕ ಭಂಡಾರವಿದ್ದಿತೆಂದೂ, ಅದರ ನಿರ್ವಹಣೆಗಾಗಿ ಪೌರಾಣಿಕ ಕವಿ ಕೃಷ್ಣಭಟ್ಟ ಎಂಬವರಿಗೆ ಮತ್ತು ನಂತರ ಅವರ ಮಗ ಕವಿ ಶಂಕರಭಟ್ಟರಿಗೆ ದತ್ತಿಯನ್ನು ಕೊಡಲಾಯಿತೆಂದೂ ಈ ಶಾಸನಗಳಲ್ಲಿ ಹೇಳಿದೆ. ಶ್ರೀರಂಗಂದಲ್ಲಿಯ ಇತಿಹಾಸ ಪ್ರಸಿದ್ಧ ಶ್ರೀರಂಗನಾಥ ದೇವಾಲಯದ ಒಂದು ಮಂಟಪದಲ್ಲಿ ಒಂದು ಸರಸ್ವತೀ ಭಂಡಾರವಿದ್ದಿತೆಂದು ಅಲ್ಲಿಯ ಒಂದು ಶಾಸನದಿಂದ ತಿಳಿದು ಬರುತ್ತದೆ. ಇಲ್ಲಿ ವಿದ್ಯಾಧಿದೇವತೆಗಳಾದ ಹಯಗ್ರೀವ, ಸರಸ್ವತಿ ಮತ್ತು ವ್ಯಾಸರ ಪ್ರತಿಮೆಗಳನ್ನು ಸ್ಥಾಪಿಸಲಾಯಿತೆಂದು ಹೇಳಿದೆ. (ARSIE. 38-39, No. 139 also EI. XXV, p.325) ಕಲಬುರ್ಗಿ ಜಿಲ್ಲೆಯ ನಾಗಾಯಿಯಲ್ಲಿ ಕ್ರಿ.ಶ. 1058ರಷ್ಟು ಪೂರ್ವದಲ್ಲಿಯೇ ಒಂದು ದೊಡ್ಡ ಸರಸ್ವತೀ ಭಂಡಾರವಿದ್ದಿತೆಂದೂ ಅದರ ನಿರ್ವಹಣೆಗಾಗಿ ೬ ಜನ ಸರಸ್ವತೀ ಭಂಡಾರಿಗರಿದ್ದರೆಂದೂ ಅಲ್ಲಿಯ ಒಂದು ಶಾಸನದಿಂದ ತಿಳಿದು ಬರುತ್ತದೆ. ಕಾಂಚಿ(ಕಂಚಿ)ಯ ವರದರಾಜ ದೇವಸ್ಥಾನದಲ್ಲಿಯ ಒಂದು ಶಾಸನದಲ್ಲಿ ಗ್ರಂಥಾಲಯವೊಂದರ ಉಲ್ಲೇಖವಿದೆ. (EI. XXV, 34, 1359).

These inscriptions state that there was a pustakabhaṇḍāra in the Śankaramaṭha at Śṛingēri and that for its maintenance paurāṇika, Kavi Kṛishṇabhaṭṭa and later his son Kavi Śankarabhaṭṭṭa were given grants. A Saraswatībhaṇḍāra was maintained in one of the manṭapas of the famous Śrīranganātha temple at Śrīrangam. It is also stated that the images of deities of learning, Hayagrīva, Saraswati and Vyāsa were installed here. (ARSIE, 1938-39, No. 139; EI. XXV, p.325). It is also known that as early as in 1058 A.D. there was a big Saraswatī bhaṇḍara at Nagai in Gulbarga District and that there were six Saraswatī bhaṇḍārigas to maintain it.

(APGAS, III, Gb. 2, 1058). (Cf. ಸರಸ್ವತೀ ಭಂಡಾರಿಗ Saraswatī bhaṇḍāriga, below).

ಬ್ರಹ್ಮಪುರಿ; Brahmapuri: ಧಾರ್ಮಿಕ ಮತ್ತು ಶಿಕ್ಷಣಕಾರ್ಯಗಳಲ್ಲಿ ತೊಡಗಿದ ವಿದ್ವಾಂಸರು ವಾಸಿಸುತ್ತಿದ್ದ ಸ್ಥಳ; Locality of Brāhmaṇas engaged in religious and educational activities; ಬ್ರಹ್ಮಪುರಿಯ ಮಾಚಿಮಯ್ಯಂಗೆ ಮತ್ತರ್ಪನ್ನೆರಡು ಗಳ್ದೆ; (SII. XVIII, 61, 1048).

ಒಂದು ಊರಿನಲ್ಲಿ ವಿದ್ವಾಂಸರಾದ ಬ್ರಾಹ್ಮಣರು ವಾಸಿಸುತ್ತಿದ್ದ ಭಾಗವೇ ಬ್ರಹ್ಮಪುರಿ. ಅಗ್ರಹಾರಗಳಂತೆ ಬ್ರಹ್ಮಪುರಿಗಳೂ ವಿದ್ವಾಂಸರಾದ ಬ್ರಾಹ್ಮಣರಿಗೆ ಕೊಟ್ಟ ದತ್ತಿಗಳಾಗಿರುತ್ತಿದ್ದವು. ಒಮ್ಮೊಮ್ಮೆ ಒಂದು ಊರಿನಲ್ಲಿ ಒಂದಕ್ಕಿಂತ ಹೆಚ್ಚಾಗಿ ಬ್ರಹ್ಮಪುರಿಗಳಿರುತ್ತಿದ್ದವು. ಉದಾ: ಅಣ್ಣಿಗೇರಿಯಲ್ಲಿ ಐದು ಬ್ರಹ್ಮಪುರಿಗಳಿದ್ದರೆ (SII. XV, 72, 1186) ಶಿಕಾರಿಪುರದ ಶಾಸನವು ಅಲ್ಲಿ ಏಳು ಬ್ರಹ್ಮಪುರಿಗಳಿದ್ದವೆಂದು ತಿಳಿಸುತ್ತದೆ (EC. VII(O), Sk.185, 1192). ಇವು ಧಾರ್ಮಿಕ ಕ್ಷೇತ್ರಗಳಾಗಿದ್ದಂತೆ ವಿದ್ಯಾಕೇಂದ್ರಗಳಾಗಿಯೂ ಹೆಸರನ್ನು ಪಡೆದಿದ್ದವು. ಇಂಥ ಬ್ರಹ್ಮಪುರಿಗಳಲ್ಲಿದ್ದ ವಿದ್ವಾಂಸರ ಹಾಗೂ ವಿದ್ಯಾರ್ಥಿಗಳ ಉಪಜೀವನಕ್ಕಾಗಿ ಕೊಡಲ್ಪಡುತ್ತಿದ್ದ ಹಲವಾರು ದತ್ತಿಗಳ ವಿವರಗಳು ೬ ರಿಂದ ೧೪ನೇ ಶತಮಾನಗಳ ಶಾಸನಗಳಲ್ಲಿ ವಿಪುಲವಾಗಿ ಸಿಗುತ್ತವೆ.

Brahmapuri was a locality in a town where the learned Brāhmaṇas settled. Like the Agrahāras, Brāhmapuris were grants, made to the learned Brāhmaṇas. Sometimes we notice more than one Brahmapuri in a town. For e.g. there were five Brahmapuris in Aṇṇigēri. (SII. XV, 72, 1186). It is learnt from an inscription from Shikaripur that there were seven such. (EC. VII(O), Sk.185, 1192). They were known for religious and educational activities. References to grants made for the maintenance of the learned Brāhmaṇas and students in such Brahmapuris are found copiously in Kannada inscriptions from the 6th to 14th centuries.

ಬ್ರಹ್ಮಪುರಿಯ ಮನೆ; Brahmapuriya mane: ಬ್ರಹ್ಮಪುರಿಯಲ್ಲಿಯ ಮನೆ; Residence in a Brahmapuri; ಬ್ರಹ್ಮಪುರಿಯ ಮನೆ ೧೨ ಕಂ ಪ್ರತಿ ಮನೆಗೆ ೧ ಕ್ಕಂ ಪ್ರತಿ ವರುಷ ೧ ಕ್ಕೆ (SII, VII, 351, 1386).

ಬ್ರಹ್ಮಪುರಿಯ ಹನ್ನಿರ್ಬ್ಬರು; Brahmapuriya hannirbbaru: ಬ್ರಹ್ಮಪುರಿಯ ಹನ್ನೆರಡು ಜನ ಮಹಾಜನರು; 12 Mahāhanas of a Brahmapuri (SII, IX, I, 251, 1149).

ಬ್ರಹ್ಮಸಭೆ; Brahma-sabhe: ಅಗ್ರಹಾರದ ಮಹಾಜನರ ಸಭೆ; An assembly of Mahājanas of an Agrahāra; (SII. XV, 7, 1123).

ಬ್ರಾಹ್ಮಣ ಛತ್ರ; Brāhmaṇa-chhatra: ಬ್ರಾಹ್ಮಣರಿಗಾಗಿದ್ದ ಧರ್ಮಛತ್ರ; Free feeding house for the brāhmaṇas; (SII. IX, II, 545, 1332).

ಮಟ; Maṭa: s.a. ಮಠ; Maṭha below (SII. IX, I, 98, 1044).

ಮಟದ ಚತ್ರ, (ಮಠದ ಛತ್ರ); Maṭada chatra (Maṭhada chhatra): ಮಠ ಅಥವಾ ದೇವಾಲಯಕ್ಕೆ ಸೇರಿದ ಅನ್ನ ಛತ್ರ; Free feeding house attached to a maṭha or temple (SII. XX, 85, 1124)

ಮಠ; Maṭha: ದೇವಾಲಯಕ್ಕೆ ಹೊಂದಿದ ಗೃಹ; ಯತಿಗಳ ವಾಸಕ್ಕಾಗಿ ಇದ್ದ ಸ್ಥಳ. ದೇವಾಲಯಕ್ಕೆ ಸೇರಿದ, ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿದ ಸಂಸ್ಥೆ. ಇಲ್ಲಿ ಹೆಚ್ಚಾಗಿ ಚಿಕ್ಕಮಕ್ಕಳು ಅಕ್ಷರಾಭ್ಯಾಸ ನಡೆಸುತ್ತಿದ್ದರೂ ವಿಶಿಷ್ಟ ಮಠಗಳಲ್ಲಿ ಶಾಸ್ತ್ರಾಭ್ಯಾಸವೂ ನಡೆಯುತ್ತಿತ್ತು. Monastery attached to a temple; Place for the residence of the ascetics. An institution attached to the temple for religious and educational activities. Though mainly it was meant for primary education, Śāstras were taught in many Maṭhas; ಶ್ರೀ ರಾಮೇಶ್ವರ ದೇವರಾಚಾರ್ಯ್ಯ .... ಮಠದಲು ಕೌಮಾರ ವ್ಯಾಕರಣಂ ಪೇಳ್ವುಪಾಧ್ಯಾಯರ ಜೀವಿತಕ್ಕಂ; (SII. XX, 83, 1123). ಶ್ರೀ ಮದೆಳಮೇಲ ಉತ್ತರೇಶ್ವರದೇವರ ಮಠದಲ್ಲೋದುವ ಕೇಳುವ ತಪೋಧನರ್ಗ್ಗಂ ಚ್ಛಾತ್ರರ್ಗ್ಗಮಶನಾಚ್ಛಾದ ಪತ್ಥ್ಯಾಷಧಾರ್ತ್ಥಮಾಗಿ ವಿದ್ಯಾಸತ್ರಕ್ಕೆನ್ದು; (Ibid. 40, 1066).

ಮಠದ ವಿದ್ಯಾದಾನ; Maṭhada-vidyā-dāna: ಮಠದಲ್ಲಿ ನಡೆಯುವ ಶಿಕ್ಷಣ; Imparting of education in the maṭha; ಮಠದ ವಿದ್ಯಾದಾನಕ್ಕೆವೆಂದರಸರ್ಗ್ಗೆ ಬಿನ್ನಪಂ

ಗೆಯ್ದು ಸವಂಟಿಯಪಾಳಂ ಪಡೆದದರ್ಕ್ಕೆ ಶಿವಪುರಮೆಂದು ಪೆಸರನಿಟ್ಟು (SII. IX, I, 101, 1045).

ಮಹಾಘಟಿಕಾಸ್ಥಾನ; Mahāghaṭikāshāna: ದೊಡ್ಡಪ್ರಮಾಣದ ಘಟಿಕಾಸ್ಥಾನ; A bigger ghaṭikāsthāna; (IND. 29, 1130). For ಘಟಿಕಾಸ್ಥಾನ ghaṭikāsthāna see above.

ಮಹಾಪರಿಷೆ; Mahāparishe: ಮಹಾಜನರ ಸಭೆ; An assembly of the Mahājanas; (EC. III(R), Nj.239, 10th cent). For Mahājanas see below.

ವಕ್ಖಣಶಾಲೆ; Vakkhaṇaśāle: ವ್ಯಾಖ್ಯಾನಶಾಲೆ; ಉಪನ್ಯಾಸ, ಅಧ್ಯಾಪನಗಳಿಗಾಗಿದ್ದ ಸಭಾಗೃಹ; Vyākhyānaśāle, A hall for lectures, discussions and teaching; ತಮ್ಮ ವಕ್ಖಣಶಾಲೆಯಲು ತರ್ಕ್ಕಶಾಸ್ತ್ರಮಂ ವ್ಯಾಖಾನಮಾಡುವಂತಾಗಿ ಬಿಟ್ಟ ಗದ್ಯಾಣ ೩೦; (SII. XI, II, 159, 1111).

ವಾಗ್ಲಲನಾಮಂಟಪ; Vāg-lalanā-maṇṭapa: ಸರಸ್ವತೀ ಮಂಟಪ; ಅಗ್ರಹಾರದಲ್ಲಿ ಚರ್ಚೆ, ಉಪನ್ಯಾಸಗಳಿಗಾಗಿದ್ದ ಸಭಾಗೃಹ; Sarasvatī-maṇṭapa; A hall in an agrāhara for learned discussions and discourses; ಮಾಡಿಸಿದನಾ ಕಾಳೇಶ್ವರಂಗೆ ದೇಗುಲಮಂ ರಂಜಿತ ನಾಟ್ಯಶಾಲೆಯನತಿಪ್ರಖ್ಯಾತಿವೆತ್ತಿರ್ದ್ದ ವಾಗ್ಲಲನಾ ಮಂಟಪಮಂ; (SII. XVIII, 117, 1121).

ವಿದ್ವತ್ಸಭೆ; Vidvat-sabhe: ವಿದ್ವಜ್ಜನರ ಸಭೆ; An assembly of learned men (EC. VIII(O), Sb.179, 1189).

ವಿದ್ಯಾದಾನ ಸತ್ರ; Vidyādāna-satra: ವಿದ್ಯಾರ್ಥಿಗಳಿಗಾಗಿ ಇರುವ ಅನ್ನಛತ್ರ; Free feeding house for students; ವಿದ್ಯಾದಾನ ಸತ್ರವಾಗೆ ಮಠಕ್ಕೆ ಕೊಟ್ಟಂ; (SII. IX, I, 67, 964)

ಶಾಲಾ; ಶಾಲೆ; Śālā; Śāle: ಶಾಲೆ; ವಿದ್ಯಾಲಯ; ಅಧ್ಯಯನ ಅಧ್ಯಾಪನಗಳಿಗಾಗಿದ್ದ ಸಭಾಗೃಹ; A hall; A school; An educational institution; A hall for teaching discussions; (SII. XX, 302, 12th cent.). ತೇನೇಯಂ ಕಾರಿತಾ ಶಾಲಾ ಶ್ರೀವಿಶಾಲಾ ಮನೋರಮಾ .... ಅತ್ರ ವಿದ್ಯಾರ್ಥಿನಃ ಸಂತಿ ನಾನಾ ಜನಪದೋದ್ಭವಾ; (EI. IV, 6, 945).

ಸತ್ರ; Satra: ಅಗ್ರಹಾರದಲ್ಲಿಯ ಅನ್ನಛತ್ರ; Free feeding house in an agrahāra; (KI. II, 6, 1022).

ಸತ್ರಶಾಲಾ; Satra-śālā: ಅಗ್ರಹಾರಕ್ಕೆ ಹೊಂದಿದ ಅನ್ನಛತ್ರ; Free feeding house attached to an agrahāra; ಸತ್ರಶಾಲಾಯಾಂ ವೇದಾಮೃತಪವಿತ್ರಿತಮುಖಾನಾಂ ತ್ರಿಂಶತ್‌ಸಂಖ್ಯಾನಾಂ; (IND. 2, 10th cent.).

ಸರಸ್ವತೀಮಂಟಪ; Sarasvatī-maṇṭapa: s.a. ವಾಗ್ಲಲನಾಮಂಟಪ; Vāg-lalanāmaṇṭapa above; (ARIE. 62-63, No. B 779, 1038).

ಸರ್ವನಮಸ್ಯದಗ್ರಹಾರ; Sarvanamasyad-agrahāra: ಎಲ್ಲಬಗೆಯ ಕರಗಳಿಂದ ಮುಕ್ತವಾದ ಅಗ್ರಹಾರ; Agrahāra free from all taxation; ಸರ್ವನಮಸ್ಯದಗ್ರಹಾರಂ ದಕ್ಷಿಣ ವಾರಣಾಸಿ ಕೋಲಾರದ (SII. XV, 196, 1223).

೨. ಶಿಕ್ಷಣದ ವಿಧಾನ ಮತ್ತು ಶಿಕ್ಷಣದ ವಿಷಯಗಳು

2. SYSTEM OF EDUCATION AND SUBJECTS OF STUDY

ಅಕರ ಖಂಡಿಕೆ; Akara Khaṇḍike: ಅಕ್ಷರ ಖಂಡಿಕೆ; ಅಕ್ಷರಗಳನ್ನು ಕಲಿಸುವ ವರ್ಗ, ಆರಂಭಿಕ ಶಿಕ್ಷಣ; Akshara-Khaṇḍike, a class for teaching alphabets; elementary class. (KI, II, 16, 1122)

ಅಕ್ಷರಸ್ವರೂಪ; Akshara-svarūpa: ಅಕ್ಷರಗಳ ಆಕಾರ; the form of letters; (ಪಂ.ಭಾ. Paṁ.Bhā. II, 34 ವ. Pr. 10th cent.).

ಅಕ್ಷರಾವಳಿ; Aksharāvaḷi: ಅಕ್ಷರಗಳ ಸಾಲು; ಅಕ್ಷರಮಾಲೆ; Lines of letters; ಚರಣವಿನಮ್ರವಾಗಿ ತೊದಳೇಂ ಬಿದಿ ಮುನ್ನೆ ಲಲಾಟಪಟ್ಟದಲು ಬರದ ದುರಕ್ಷರಾವಳಿಗಳಂ ತೊಳೆದಪ್ಪುವು; (EC. VIII(O), 35, 1077; Ibid. V(O), Ak 55, 1144).

ಅಲಂಕಾರ; Alankāra: ಅಲಂಕಾರಶಾಸ್ತ್ರ; Poetics; (ವಡ್ಡಾ, Vaḍḍā. p.3, l.28, c.10th cent.).

ಆರ್ಯ; Ārya: ಒಂದು ಭಾಷೆ, ಬಹುಶಃ ಸಂಸ್ಕೃತ; A language, probably Sanskrit; ನಾಗರ ಕಂನಡ ತಿಗುಳಾರ್ಯ್ಯವನೋದಿಸುವ ಬಾಲಶಿಕ್ಷೆ (EC. V(R), TN.238, 1290).

ಇತಿಹಾಸ; Itihāsa: ಚರಿತ್ರೆ; History; (EC. VIII, Sb.276, 1071).

ಋಗ್ವೇದ; Ṛigvēda: ನಾಲ್ಕು ವೇದಗಳಲ್ಲಿ ಮೊದಲನೆಯದು; First of the four Vēdas; ರುಗ್ವೇದವನೋದಿಸುವ ಬಂದಿಕದ ಉಪಾದ್ಯರ ಜೀವಿತಕ್ಕೆ ವರ್ಷ ೧ಕ್ಕೆ ಗದ್ಯಾಣಂ ಆಱು; (EC. V(R), TN.238, 1290) ಬಂದಿಕ ಎಂಬುದು ಖಂಡಿಕ ಎಂಬದರ ಅಪಪಾಠವಾಗಿರಬೇಕು.

ಋಗ್ವೇದ ಖಂಡಿಕ; Ṛigvēda-khaṇḍika: ಅಗ್ರಹಾರದಲ್ಲಿ ಋಗ್ವೇದವನ್ನು ಕಲಿಸುವ ವಿಭಾಗ; Section for teaching Ṛigveda in an agrahāra; (EC. VII(O), Sk.185, 1157).

ಋಗ್ವೇದ ಬಾಲ ಶಿಕ್ಷೆ; Ṛigvēda-bāla-sikshe: ಋಗ್ವೇದವನ್ನು ಬಾಲಕರಿಗೆ ಕಲಿಸುವಿಕೆ; Instructing the youngsters in Ṛigvēda; ರುಗ್ವೇದದ ಬಾಲಶಿಕ್ಷೆಯ ಖಣ್ಡಕದಲ್ಲಿ ಸ್ವಾಧ್ಯಾಯಂ ಗೆಯ್ವ ಮಾಣಿಯರ ಗ್ರಾಸಕ್ಕೆ ಬಿಟ್ಟ ಮತ್ತರು; (SII. XI, II, 173, 1124); ರುಗ್ವೇದ ಬಾಲಶಿಕ್ಷೆಯ ಖಣ್ಡಕಕ್ಕೆ ಪೊಂಗೆ ವರಿಶಕ್ಕಿಪ್ಪಣ ವೃದ್ಧಿಯ ಲೆಖ್ಖದೆ ಬಿಟ್ಟ ಗದ್ಯಾ ೨೦; (Ibid.) ಋಗ್ವೇದ ಬಾಲಸಿಕ್ಷೆಯ ಖಂಡಿಕ; (EI. XIII, 4, 1112)

ಓಜುಗಟ್ಟಿಗೆ; Ōjugaṭṭige: ಉಪಾಧ್ಯಾಯರ ಕೈಯೊಳಗೆ ಇದ್ದ ಬೆತ್ತ; A teacher's cane; ಎಡದ ಕೈಯಲು ಹಾಲ ಬಟ್ಟಲು ಬಲದ ಕೈಯಲು ಓಜುಗಟ್ಟಿಗೆ; (ಬ.ವ. 388, 12th cent.).

ಕರ್ಣಾಟಬಾಲಶಿಕ್ಷೆ; Karṇāta-bālasikshe: ಬಾಲಕರಿಗೆ ಕನ್ನಡ ಕಲಿಸುವಿಕೆ; ಕನ್ನಡದ ಪ್ರಾರಂಭಿಕ ಅಭ್ಯಾಸ; Instructing the children in Kannada; Elementary education in Kannada ಶ್ರೀಮದಗ್ರಹಾರ ಬೋಳೆಯ ಸೋವಿಯಣ್ಣಂಗಳ್ ಕರ್ಣ್ನಾಟ ಬಾಲಶಿಕ್ಷೆಯಂ ಮಾಡುವನ್ತಾಗಿ; (EC. V(O), Ak, 138, 1174).

ಕನ್ನಡ; Kannada: ಕನ್ನಡ ಲಿಪಿ ಭಾಷೆ; Kannada script, language; ನಾಗರ ಕನ್ನಡ ತಿಗುಳ ಆರ್ಯವನೋದಿಸುವ ಬಾಲಶಿಕ್ಷೆಯ ಉಪಾದ್ಯರ ಜೀವಿತಕ್ಕೆ (EC. V(R), TN.238, 1290); ಕನ್ನಡದುಪಾಧ್ಯಂಗೆ ಗ ೫; (EC. VIII(O), Sk.185, 1157).

ಕನ್ನಡದಕ್ಷರಶಿಕ್ಷೆ; Kannad-akshara-śikshe: ಕನ್ನಡ ಲಿಪಿಯನ್ನು ಕಲಿಸುವುದು; Teaching Kannada script; (EC. VII(O), Sk.185, 1157).

ಕರ್ಣ್ನಾಟಲಿಪಿ; Karṇṇāta-lipi: ಕನ್ನಡ ಅಕ್ಷರ; Kannada alphabet; ಕರ್ಣ್ನಾಟ ಲಾಟ ದ್ರಾವಿಳ ನಾನಾ ದೇಶ ಭಾಷಾವಿಶೇಷ ಲಿಪಿ ನಿರೂಪಣ ವಿದ್ಯಾಧರರುಂ (EC. V(O), Ak, 130, 1200).

ಕರಣ; Karaṇa: ಗ್ರಹಗಳ ಗತಿಯನ್ನು ಕುರಿತ ಗ್ರಂಥ; Work dealing with the movement of planets; ವರಾಹಮಿಹಿರನು ಈ ವಿಷಯವನ್ನು ಕುರಿತು ಕರಣವೆಂಬ ಹೆಸರಿನ ಗ್ರಂಥವನ್ನು ಬರೆದಿದ್ದಾನೆ; Karaṇa is the name of a work of Varāhamihira on this topic (Apte. Sanskrit-English Dictionary; Karaṇa) ಶೇಖರ ಎಂಬ ಹೆಸರಿನ ಗ್ರಹಗಳ ಕರಣ ಗ್ರಂಥವನ್ನು ಮಹೇಶ್ವರನೆಂಬವನು ರಚಿಸಿದನೆಂದು ಒಂದು ಶಾಸನದಲ್ಲಿ ಹೇಳಲಾಗಿದೆ. It is stated in an inscription that one Mahēśvara wrote Karaṇa-grantha, called Śēkhara; (EI. III, 18, 1222-23).

ಕಲ್ಪ ಖಂಡಿಕ; Kalpa-Khaṇḍika: ಕಲ್ಪವನ್ನು ಕಲಿಸುವ ವಿಭಾಗ; A section where Kalpa was taught; (EC. VII, Sk.185, 1157); ಕಲ್ಪ ಎಂಬದು ಆರು ವೇದಾಂಗಗಳಲ್ಲಿ ಒಂದು; Kalpa is one of six Vēdāngas.

ಕಾವ್ಯ; Kāvya: Poetry; (SII. XI, II, 175, 1124).

ಕಿರಿಯ ಗ್ರಂಥ; Kiriya grantha: ಚಿಕ್ಕಗ್ರಂಥಗಳು ಯಾವುವೆಂಬುದು ಸ್ಪಷ್ಟವಿಲ್ಲ; Minor works, not specified; ಸಂಹಿತೆಯುಂ ಕಿರಿಯ ಗ್ರಂಥಗಳುಮಂ ಯಾಜ್ಞವಲ್ಕೆ ಸಹಿತ ಪೇಳ್ವ ಉಪಾಧ್ಯಾಯರ್ಗ್ಗೆ (EC. XXXVII, 34, 1132). ಇವು ಕಾವ್ಯ, ನಾಟಕಕಾದಿ ಗಳಿರಬೇಕೆಂದು ಸೂಚಿಸಲಾಗಿದೆ; It is suggested that they formed Kāvya, Nāṭaka etc. (Ibid, p.190)

ಕೌಮಾರ; Kaumāra: ಕಾತಂತ್ರವೆಂಬ ಪದ್ಧತಿಯ ಒಂದು ವ್ಯಾಕರಣ ಗ್ರಂಥ; A work on grammar of the Kātantra school; ಮಠದಲು ಕೌಮಾರಮಂ ವಕ್ಖಾಣಿಸುವುಪಾಧ್ಯಾಯರ್ಗ್ಗೆ ಮತ್ತರಯ್ದು; (EI. V, 3, 1161).

ಖಂಡಿಕಾ; ಖಂಡಿಕೆ; Khaṇḍikā; Khaṇḍike: ವಿಭಾಗ, ವರ್ಗ; ಯಾವದೊಂದು ವಿಷಯವನ್ನು ಕಲಿಸುವ ವರ್ಗ ಉದಾ: ವೇದ ಖಂಡಿಕೆ, ಅಕ್ಷರ ಖಂಡಿಕೆ ಇತ್ಯಾದಿ; A class or a group to teach a subject, Eg. Vēda-Khaṇḍikā, Akshara-Khaṇḍike etc. ಮಾನ್ಯಮಾಗೆ ...... ಖಂಡಿಕಕ್ಕೆ ಬಿಟ್ಟ ಎರೆಯ ಹಸಲು ಹನ್ನೆರಡೆಂಬುದು ಮತ್ತರು ೩ ಕಮ್ಮ ೩೦೦ (SII. IX, I, 203, 1123). ಈ ಖಣ್ಡಕಮಂ ವರ್ಷಕ್ಕೊಬ್ಬರೆ ಪೇಳ್ವುದು; (Ibid.).

ಗಜಶಾಸ್ತ್ರ; Gajaśāstra: ಆನೆಗಳನ್ನು ಪಳಗಿಸುವುದಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥ; A treatise on training the elephants (EC. VIII(O), Na. 35, 1077).

ಗಣಿತ; Gaṇita: ಲೆಕ್ಕ; Arithmetic; (EC. VIII(O), Sb.276, 1071).

ಗ್ರಂಥಲಿಪಿ; Grantha-lipi; ತಮಿಳು ನಾಡನಲ್ಲಿ ೭-೧೦ನೇ ಶತಮಾನಗಳಲ್ಲಿ ಪ್ರಚಲಿತವಿದ್ದ ಲಿಪಿ; Script prevalent in Tamil region in 7-10th cent. (ಬ.ಪು. Ba.Pu. II, 5, 53, 14th cent.).

ಚಾಣಕ್ಯ; Chāṇakya: ಕೌಟಿಲ್ಯನ ಅರ್ಥಶಾಸ್ತ್ರ; Arthaśāstra of Kauṭilya (ವಡ್ಡಾ; Vaḍḍā. p.3, l.28).

ಛಂದ; Chhanda: ಛಂದಸ್ಸು; Prosody (ವಡ್ಡಾ Vaḍḍā, Ibid.).

ಜ್ಞಾನ ಚಿಂತಾಮಣಿ; Jnānachintāmaṇi: ಒಂದು ಗ್ರಂಥದ ಹೆಸರು; Name of a book; ಚಿನ್ನದ ಕಂಬಿ ಜ್ಞಾನಚಿಂತಾಮಣಿ ಪುಸ್ತಕ ೧ ಚಿಂನದ ಹೂವು ತೂಕ ೨; (SII. IX, II, 550, 551, 1532; Ibid. XVI, 98, 1532).

ತಿಗುಳ; Tiguḷa: ತಮಿಳು ಲಿಪಿ, ಭಾಷೆ; Tamil script, language; ನಾಗರ ಕಂನಡ ತಿಗುಳಾರ್ಯವನೋದಿಸುವ ಬಾಲಶಿಕ್ಷೆ; (EC. V(R), TN.238, 1290).

ತಿಲು; Tilu: ತೆಲುಗು ಲಿಪಿ; Telugu script; ತಿಲು, ತಿವುಳ ಕಂನಡನಾಗರಕ್ಕರಂಗಳ್; (SII. IX, I, 118, 1059).

ತಿವುಳ; Tivuḷa: s.a. ತಿಗುಳ above; (SII, IX, I, 118, 1057).

ತೆಲುಗ ಲಿಪಿ; Teluga-lipi; ತೆಲುಗು ಲಿಪಿ; Telugu script (ಬ.ಪು. Ba.Pu. II, V, 53, 14th cent.).

ದತ್ತಕ ಸೂತ್ರ; Dattaka-sūtra: ಒಂದು ಗ್ರಂಥದ ಹೆಸರು; Name of a work; (G.T. p.25).

ದ್ರಾವಿಡ ಲಿಪಿ; Drāviḍa-lipi: ದ್ರಾವಿಡ ದೇಶದಲ್ಲಿ ಪ್ರಚಲಿತವಿದ್ದ ಬರಹ; Alphabet in vogue in the Drāviḍa country; (ಬ.ಪು. Ba.Pu. II, 5, 14th cent.) .

ನಾಗರ; Nāgara: ನಾಗರಿ ಲಿಪಿ; Nāgari script; ನಾಗರ ಕಂನಡ ತಿಗುಳಾರ್ಯಾವ ನೋದಿಸುವ ಬಾಲಶಿಕ್ಷೆ; (EC. V(R), TN.238, 1290; SII, IX, I, 118, 1057).

ನಾಗರದ ಲಿಪಿ; Nāgarada lipi: ವಿಶೇಷತಃ ನಗರಗಳಲ್ಲಿದ್ದ ಸುಸಂಸ್ಕೃತರು ಬಳಸುತ್ತಿದ್ದ ಲಿಪಿ, ನಾಗರಿ ಲಿಪಿ; Alphabet in vogue especially in the cities and used by cultured people; Nāgari Script; (ಬ.ಪು. Ba.Pu. II, 5, 53, 14th cent.).

ನಾಟಕ; Nāṭaka: ನಾಟಕ; Drama; (ವಡ್ಡಾ; Vaḍḍā. p.3, l.28, c.10th cent.; EC. VIII(O), Sb.276, 1071; SII. XI, II, 175, 1124).

ನ್ಯಾಸ; Nyāsa: ವ್ಯಾಖ್ಯಾನ; Discouse; (SII. XX, 300, 12th cent.; EC. VII(O), Sk.185, 1157).

ಪದಖಂಡಿಕ; Pada-khaṇḍika: ವೇದಗಳಲ್ಲಿಯ ಶಬ್ದಗಳ ಅಭ್ಯಾಸದ ವಿಭಾಗ; ನಿರುಕ್ತ; Section for the study of words in the Vēdas; Etimology; ಯಜುರ್ವೇದ ಪದ; ಖಂ೧ (EC. VII(O), Sk.185, 1157).

ಪ್ರಭಾಕರ; ಪ್ರಾಭಾಕರ; Prabhākara; Prābhākara: ವ್ಯಾಕರಣ; Grammar; (SII. XX, 300, 12th cent.).

ಪಾರಸಿ ಲಿಪಿ; Pārasi lipi: ಪರ್ಶಿಯನ್ ಲಿಪಿ; Persian script; (ಬ.ಪು. Ba.Pu, II, 53, 14th cent.)

ಪಿರಿಯ ಗ್ರಂಥ; Piriya grantha: ದೊಡ್ಡ ಗ್ರಂಥ; ಇದು ಯಾವುದೆಂಬದು ಸ್ಪಷ್ಟವಿಲ್ಲ. Big work; is not specified; ಸೂತ್ರ ಸಂಹಿತಾ ಪಿರಿಯ ಗ್ರಂಥಗಳಂ ಪೇಳ್ವ ಉಪಾಧ್ಯಾಯರ್ಗ್ಗೆ; (EI. XXXVII, 34, 1132).

ಪುರಾಣ; Purāṇa: ಪುರಾಣಗಳು; Purāṇas; (SII. XX, 300, 12th cent.); ಪುರಾಣ ಬಾಲಶಿಕ್ಷಾರ್ಥಂ ಪ್ರತ್ಯೇಕಂ ನಿವರ್ತನತ್ರಯಂ; (KI. IV, 504, 1245).

ಪುರಾಣ ಖಂಡಿಕ, ಪುರಾಣ ಖಂಡಿಗ; Purāṇa-Khaṇḍika, Purāṇa-Khaṇḍiga: ಅಗ್ರಹಾರಗಳಲ್ಲಿ ಪುರಾಣಗಳನ್ನು ಕಲಿಸುವ ವಿಭಾಗ. Section for teaching purāṇas in agrahāras. (SII. XV, 12, 1128; Ibid. IX, II, 421, 1392).

ಪುಸ್ತಕ; ಪೊಸ್ತಕ; Pustaka; Postaka: ಗ್ರಂಥ; Book; ಜ್ಞಾನಚಿಂತಾಮಣಿ ಪುಸ್ತಕ; (SII. IX, II, 550, 1532). ತೇಡಿನ ಪೊಸ್ತಕಂಗಳುಂ (EI. XXV, 34, 1359, ತಮಿಳು ಶಾಸನ; Tamil ins.).

ಬಾಲಶಿಕ್ಷೆ; Bālaśikshe: ಬಾಲಕರಿಗೆ ಶಿಕ್ಷಣ ಕೊಡುವುದು; ಪ್ರಾರಂಭಿಕ ಶಿಕ್ಷಣ; Teaching the children; Elementary education; (SII. XX, 93, 11th cent.); ಪುರಾಣ ಬಾಲಶಿಕ್ಷಾರ್ಥಂ ಪ್ರತ್ಯೇಕಂ ನಿರ್ವರ್ತನತ್ರಯಂ; (KI. IV, 54, 1245); ಆ ಖಂಡಿಕ ಬಾಲಶಿಕ್ಷೆ ಉಪಾಧ್ಯರ ಜೀವಿತಕ್ಕೆ; (EC. V(R), TN.238, 1290). ಒಂದು ಶಾಸನದಲ್ಲಿ ಬಾಲಶಿಕ್ಷೆಯು, ಅಕ್ಷರ, ವ್ಯಾಕರಣ ಮತ್ತು ರೂಪಾವತಾರ ಎಂಬ ವ್ಯಾಕರಣ ಗ್ರಂಥದ ಅಭ್ಯಾಸವನ್ನೊಳಗೊಂಡಿದ್ದಿತೆಂದು ಹೇಳಿದೆ; It is stated in an inscription that Bālaśikshe included the study of alphabet, grammar and Rūpāvatāra, a textbook on grammar; (See EI. XXXVII, p.190, ff). ಇನ್ನೊಂದರಲ್ಲಿ ಅದು ನಾಗರ, ಕನ್ನಡ, ತಿಗುಳ ಆರ್ಯಗಳನ್ನು ಒಳಗೊಂಡಿದ್ದಿತೆಂದು ಹೇಳಿದೆ; ನಾಗರ ಕಂನಡ ತಿಗುಳಾರ್ಯವನೋದಿಸುವ ಬಾಲಶಿಕ್ಷೆ. (EC. V(R), TN.238, 1290). See ರೂಪಾವತಾರ, Rūpāvatāra below.

ಬೌದ್ಧ; Bauddha: ಬೌದ್ಧ ತತ್ವಜ್ಞಾನ, Buddhist philosophy; ಭಾರತೀಯ ತತ್ವಜ್ಞಾನದ ಆರು ದರ್ಶನಗಳಲ್ಲೊಂದು; One of the six systems of Indian philosophy; (EC. VIII(O), Sk.16, 1086).

ಭರತ; Bharata: ಭರತನಾಟ್ಯಶಾಸ್ತ್ರ; Bharata-nāṭyaśastra; (EC. VIII(O), Sb.276, 1071; SII. XI, II, 175, 1124).

ಭಾರತ; Bhārata: ಮಹಾಭಾರತ; Mahābhārata; (SII. XI, II, 129, 1083).

ಮೀಮಾಂಸಾ; Mīmāṁsā: ಭಾರತೀಯ ತತ್ವಜ್ಞಾನದ ಆರು ದರ್ಶನಗಳಲ್ಲಿ ಒಂದು; One of the six systems of Indian Philosophy; (ವಡ್ಡಾ; Vaḍḍā. p.3, l.27, c.10th cent.; EC. VIII(O), Sb.276, 1071).

ಭಟ್ಟದರ್ಶನ; ಭಾಟ್ಟದರ್ಶನ; Bhaṭṭa-darśana; Bhāṭṭa-darśana: ಕುಮಾರಿಲಭಟ್ಟರ ಮೀಮಾಂಸಾಸೂತ್ರಗಳು; Mīmāṁsā-sūtra of Kumārila-bhaṭṭa; (APGAS. III, Gb.2, 1093).

ಯಜುರ್ವೇದ ಬಾಲಶಿಕ್ಷೆಯ ಖಂಡಿಕ; Yajurvēda-bālaśiksheya-khaṇḍika: ಬಾಲಕರಿಗೆ ಯಜುರ್ವೇದವನ್ನು ಕಲಿಸುವ ವಿಭಾಗ; Section for teaching Yajurvēda to the youngsters: (EI. XIII, 4, 1112).

ಯಾಜ್ಞವಲ್ಕಿ; Yājñavalki: ಯಾಜ್ಞವಲ್ಕ್ಯ ಸ್ಮೃತಿ; Yājñayavalkya-smṛiti; ಸಂಹಿತೆಯುಂ ಕಿರಿಯ ಗ್ರಂಥಗಳುಮಂ ಯಾಜ್ಞವಲ್ಕಿ ಸಹಿತ ಪೇಳ್ವ ಉಪಾಧ್ಯಾಯರ್ಗೆ; (EI. XXXVII, 34, 1132).

ರಾಮಾಯಣ; Rāmāyaṇa: ವಾಲ್ಮೀಕಿಯ ಕಾವ್ಯ; Work of Vālmīki; (SII. XI, II, 129, 1083).

ರೂಪಾವತಾರ; Rūpāvatāra: ವ್ಯಾಕರಣ ಗ್ರಂಥ; Work on Grammar; (EI. XXXVII, 34, 1132; EC. VII(O), Sk.185, 1157; Ibid. V(O), 55, 1144). ಇದು ವಿದ್ಯಾರ್ಥಿಗಳಿಗೆ ಕಲಿಸುವದಕ್ಕಾಗಿ ಸಿಂಹಳದ ಬೌದ್ಧಭಿಕ್ಷುವಾಗಿದ್ದ ಧರ್ಮಕೀರ್ತಿಯೆಂಬವನಿಂದ ರಚಿತವಾಗಿದೆ. ಇವನ ಕಾಲ ಸು. ಕ್ರಿ.ಶ. ೧೨ನೇ ಶತಮಾನದ ಆರಂಭ. This was composed for young students by the Ceylonese monk Dharmakīrti. He belonged to beginning of 12th cent. (EI, XXXVII, p.190).

ಲಾಳ ಲಿಪಿ; Lāṭa-lipi: ಲಾಟ ದೇಶದಲ್ಲಿ ಅಂದರೆ ದಕ್ಷಿಣ ಗುಜರಾತದಲ್ಲಿ ಪ್ರಚಲಿತವಿದ್ದ ಲಿಪಿ, The alphabet prevalant in the country of Lāṭa i.e. Southern Gujarat; (ಬ.ಪು. Ba.Pu. II, 5, 53, 14th cent.).

ಲೆಕ್ಕವಲಗೆ; Lekkavalage: ಲೆಕ್ಕ ಬರೆದಿಡುವ ಹಲಗೆ; Wooden board for writing accounts; (ಸ.ಪ. Sa.Pa. X, 128, 11th cent.)

ಲೇಖೆ; Lēkhe: ಲೇಖನ; Writing; (ಬ.ಪು. Ba.Pu. II, 5, 53, 14th cent.).

ಲೋಕಾಯತ; Lōkāyata: ನಿರೀಶ್ವರವಾದ, ನಾಸ್ತಿಕವಾದ ಚಾರ್ವಾಕಮತ; Chārvāka school, not recognising the existence of god. (EC. VII(O), Sk.14, 1084).

ವಾತ್ಸ್ಯಾಯನ; Vātsyāyana: ಕಾಮ ಸೂತ್ರ; Kāmasūtra; (EC. VIII(O), Sb.276, 1071).

ವ್ಯಾಕರಣ; Vyākaraṇa: ಶಬ್ದ ಮತ್ತು ಅವುಗಳ ರೂಪಗಳನ್ನು ವಿವರಿಸುವ ಶಾಸ್ತ್ರ; ವ್ಯಾಕರಣ, Grammar; (ವಡ್ಡಾ;

Vaḍḍā. p.3, 1.27, c.10th cent.; EC. IV(R), Ch.148, 1380).

ವೇದ ಖಂಡಿಗ; Vēda-Khaṇḍiga: (1) ವೇದ ಖಂಡಿತ; ವೇದವನ್ನು ಕಲಿಸುವ ವಿಭಾಗ; Vēda-khaṇḍika; Section for teaching Vēda; (2) ವೇದವನ್ನು ಕಲಿಸುವವ; Teacher in Vēdas (SII. IX, II, 421, 1392).

ವೇದಾನ್ತ; Vēdānta: ತತ್ವಜ್ಞಾನ; Philosophy; (SII. XX, 300, 12th cent; EC. VII(O), Sk.185, 1157).

ವೈಶೇಷಿಕ; Vaiśēshika: ವೈಶೇಷಿಕ ತತ್ವಜ್ಞಾನ; ಭಾರತೀಯ ತತ್ವಜ್ಞಾನದ ಆರು ದರ್ಶನಗಳಲ್ಲಿ ಒಂದು; Vaiśēshika philosophy; One of the six darśanas of Indian philosophy; (EC. VII(O), Sk.16, 1086).

ಶಬ್ದಶಾಸ್ತ್ರ; Śabda-śāstra: ಶಬ್ದಗಳ ವ್ಯುತ್ಪತ್ತಿ ಇತ್ಯಾದಿಗಳ ಅಭ್ಯಾಸ; Study of Etimology; (EC. VII(O), Sk.185, 1157).

ಶಾಸ್ತ್ರಖಂಡಿಕ; Śāstra-khaṇḍika: ಅಗ್ರಹಾರಗಳಲ್ಲಿ ವಿವಿಧ ಶಾಸ್ತ್ರಗಳನ್ನು ಕಲಿಸುವ ವಿಭಾಗ; A section for teaching different Śāstras in Agrahāras; (SII. XI, II, 142, 1096).

ಶಾಸ್ತ್ರದಾನ; Śāstradāna: ಧರ್ಮಪ್ರಚಾರಕ್ಕಾಗಿ ಧಾರ್ಮಿಕ ಗ್ರಂಥಗಳ ಪ್ರತಿಗಳನ್ನು ಮಾಡಿಸಿ ದಾನಮಾಡುವದು; ಈ ಪದ್ಧತಿಯು ವಿಶೇಷವಾಗಿ ಜೈನರಲ್ಲಿ ಪ್ರಚಲಿತವಿದ್ದಿತು; ಗ್ರಂಥಾಲಯ ಪ್ರಸಾರ; Distribution of religious works by getting multiple copies of them prepared. This practice was prevalent particularly among the Jainas; Library movement; ಶಾಸ್ತ್ರದಾನಯೆಂಬಿವಕ್ಕೆ (SII. VII, 198, 1462); ನಿತ್ಯದಲು ಜಿನಶಾಸ್ತ್ರ ನಡವಂತಾಗಿ ಶಾಸ್ತ್ರದಾನಕ್ಕೆ ಕೊಟ್ಟ ಭವ್ಯಜನಂಗಳ ಹೆಸರು; (Ibid. 212, 1515).

ದಾನಚಿಂತಾಮಣಿ ಅತ್ತಿಮಬ್ಬೆಯು ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ದಾನ ಮಾಡಿದ ವಿಷಯವನ್ನಿಲ್ಲಿ ಗಮನಿಸಬಹುದು; The distribution of one thousand copies of Śantipurāṇa of Ponna by Dānachintāmaṇi Attimabbe may be noted here.

ಸ್ಮೃತಿ; Smṛiti: ಧರ್ಮಶಾಸ್ತ್ರ ಗ್ರಂಥಗಳು; Dharmaśāstra works; ಮನು ಯಾಜ್ಞವಲ್ಕ್ಯ ಪ್ರಣೀತ ಸ್ಮೃತಿ; (SII. XI, II, 129, 1083).

ಸಾಮವೇದ ಖಂಡಿಕ; Sāmavēda-khaṇḍika: ಸಾಮವೇದ ಕಲಿಸುವ ವಿಭಾಗ; Section where Sāmavēda was taught; (EC. VII(O), Sk.185, 1157).

ಸಾಮುದ್ರಿಕ; Sāmudrika: ಹಸ್ತ ಸಾಮುದ್ರಿಕೆ; Hasta-Sāmudrike; Palmistry; (ವಡ್ಡಾ; Vaḍḍā. p.3, 1.28, c.10th cent.).

ಸಾಂಖ್ಯ; Sāmkhya: ಸಾಂಖ್ಯ ತತ್ವಜ್ಞಾನ; Sānkhya Philosophy; ಭಾರತೀಯ ತತ್ವಜ್ಞಾನದ ಆರು ದರ್ಶನಗಳಲ್ಲಿ ಒಂದು; One of the six systems of Indian Philosophy; (EC. VII(O), Sk.16, 1086).

ಸೂತ್ರಚರ್ಚೆ; Sūtra-charche: ಸೂತ್ರಚರ್ಚೆ ಎಂಬ ಹೆಸರಿನ ಒಂದು ಗ್ರಂಥ; A book entitled Sūtra-charche; (SII. XVIII, 102, 1099).

ಸೂತ್ರಸಂಹಿತಾ; Sūtra-Saṁhitā: ಅಗ್ರಹಾರದಲ್ಲಿ ಕಲಿಸಲ್ಪಡುತ್ತಿದ್ದ ಒಂದು ಗ್ರಂಥ; A work taught in an agrahāra; (EI. XXXVII, 34, 1132). ಇದು ಸೂತ್ರಸಂಹಿತಾ ಎಂಬ ಸ್ಕಂದಪುರಾಣದ ಭಾಗವೆಂದು ಸೂಚಿಸಲಾಗಿದೆ; It is suggested that it is Sūtrasaṁhita, which is a part of Skanda-purāṇa; (Ibid. p.190).

ಸುಶ್ರುತ; Suśruta; ಸುಶ್ರುತನೆಂಬವನ ವೈದ್ಯಶಾಸ್ತ್ರ ಗ್ರಂಥ; ವೈದ್ಯಶಾಸ್ತ್ರ; A work on medicine by Suśruta; Medicine; (ವಡ್ಡಾ; Vaḍḍā. p.4, 1.2).

೩. ವಿದ್ಯಾರ್ಥಿಗಳು, ಉಪಾಧ್ಯಾಯರು ಮತ್ತು ಸಂಬಂಧಪಟ್ಟ ಇತರರು

3. STUDENTS, TEACHERS AND CONCERNED OTHERS

ಅಕ್ಕರಿಗ; Akkariga: ಶಿಕ್ಷಕ, ವಿದ್ವಾಂಸ; A teacher, A scholar; (ಕ.ಕಾ. 36, 1217; EI. XX, 6, 1012).

ಅಗ್ರಾಹಿತರು; Agrāhitaru: ಅಗ್ರಹಾರದಲ್ಲಿ ಪ್ರಮುಖ ವ್ಯಕ್ತಿಗಳು, ಮಹಾಜನರು; Important men in the agrahāras, mahājanas; (SII. XVIII, 381, 1278).

ಅಗ್ನಿಷ್ಟಗೆಯ ಬ್ರಾಹ್ಮಣ; Agniśhṭageya brāhmaṇa: ಅಗ್ರಹಾರದಲ್ಲಿ ಅಗ್ನಿಷ್ಟಗೆಯ ವ್ಯವಸ್ಥೆ ನೋಡಿಕೊಳ್ಳುವ ಬ್ರಾಹ್ಮಣ; A brāhmaṇa looking after the fire place in the agrahāra; ಧರ್ಮವತ್ತಳೆಯಾಗಿ ತಿರುವ ಸಿದ್ಧಾಯದ ಪೊನ್ನೊಳಗೆ ...... ಹನ್ನೆರಡು ಅಗ್ನಿಷ್ಟಗೆಯ ಬ್ರಾಹ್ಮಣರಿಗೆ; (SII. IX, I, 175, 1107).

ಆಚಾರ್ಯ; Āchārya: ಅಗ್ರಹಾರದ ಮುಖ್ಯಸ್ಥ; ಉಪಾಧ್ಯಾಯ; Head of an agrahāra; A teacher; (INKK. p.27, 10th cent.).

ಇತಿಹಾಸದ ಜನ; Itihāsada-jana: ಪರಂಪರೆ, ಇತಿಹಾಸವನ್ನು ಹೇಳುವವರು; Narrators of tradition, History; (SII, IX, II, 564, 1534).

ಉಪಾಧ್ಯ; ಉಪಾಧ್ಯಾಯ; Upādhya; Upādhyāya: ಶಿಕ್ಷಕ, ಗುರು; Teacher, preceptor (SII, IX, II, 433, 1408) ಕೇತಮಲ್ಲನನೋದಿಸಿದ ಉಪಾಧ್ಯಾಯಂ; (EI. XIX, 29D, 1085). ವ್ಯಾಕರಣಮಂ ಪೇಳ್ವುಪಾಧ್ಯಾಯರ ಜೀವಿತಕ್ಕಂ; (SII. XX, 83, 1123).

ಓಝ; Ōjha: s.a. ಉಪಾಧ್ಯಾಯ; Teacher; ಮಾಣಿಯರನೋದಿಸುವ ಓಝರ್ಗ್ಗೆ; (EI. XV, 6F, 1060).

ಓದುವ ಮಾಣಿ; Ōduva māṇi: ವಿದ್ಯೆ ಕಲಿಯುವ ಬಾಲಕ, ವಿದ್ಯಾರ್ಥಿ; A student, a pupil; ಅಲ್ಲಿಯೋದುವ ಮಾಣಿಗಳ್ಗಂ ವಕ್ಖಾಣಿಸುವುಪಾಧ್ಯಾಯರ್ಗ್ಗಂ; (SII. XV, 2, 1074).

ಕನ್ನಡದುಪಾಧ್ಯಾಯ; Kannaḍad-upādhyāya: ಕನ್ನಡ ಕಲಿಸುವ ಉಪಾಧ್ಯಾಯ; Teacher teaching Kannada language; (EC. VII(O), Sk.185, 1157).

ಕಾಪಿನ ಘಟಿಯಾರರು; Kāpina ghaṭiyāraru: ಘಳಿಗೆ ಬಟ್ಟಲನ್ನಿಟ್ಟ ಮನೆಯನ್ನು ಕಾಯುವವರು; Guards of the place where time indicating vessel was kept; (APGAS. III, Gb.3, 11th cent.).

ಖಂಡಿಕೆಯ ಉಪಾಧ್ಯಾಯ; Khaṇḍikeya ūpādhyāya: ಅಗ್ರಹಾರದಲ್ಲಿ ಯಾವದೊಂದು ವಿಷಯವನ್ನು ಕಲಿಸುವ ಉಪಾಧ್ಯಾಯ; A teacher teaching a particular subject in an agrahāra; ಧರ್ಮವತ್ತಳೆಯಾಗಿ ತಿಱುವ ಸಿದ್ಧಾಯದ ಪೊಂನೊಳಗೆ ..... ರಿಗ್ವೇದ ಯಜುರ್ವೇದವನ್ತೆರಡು ಖಣ್ಡಿಕೆಯುಪಾಧ್ಯಾಯರಿಗೆ; (SII. IX, I, 175, 1107).

ಗಣಿತವಂತ; Gaṇitavanta: ಗಣಿತಜ್ಞ; Mathematician; (ಕು.ವ್ಯಾ.ಭಾ. ಆದಿ ಪ, Ku.Vyā.Bhā. Ādi Pa. XII, 23, c.1400).

ಘಟಿಕಾಪ್ರಹಾರಿ; Ghaṭikā-prahāri: ಘಟಿಕಾ ಸ್ಥಾನಗಳಲ್ಲಿ ಗಂಟೆಬಾರಿಸಿ ವೇಳೆಯನ್ನು ಸೂಚಿಸುವವ; The time-keeper indicating the time by ringing the bell; (APGAS. III, Gb.2, 1058).

ಘಟಿಕಾಸಾಹಸ, ಘಟಿಕಾಸಾಹಸಿ, ಘಟಿಕಾಸಾಹಸಿಗ; Ghaṭikā-sāhasa, Ghaṭikā-sāhasi, Ghaṭikā-sāhasiga: ಘಟಿಕಾಸ್ಥಾನಕ್ಕೆ ಸೇರಿದ ವಿದ್ವಾಂಸ; ಉಪಾಧ್ಯಾಯ; Scholar attached to a Ghaṭikā-sthāna, a teacher; (EC. VII(R), Md.35, 713). See ಘಟಿಕಾಸ್ಥಾನ, Ghaṭikā-sthāna above.

ಘಟಿಸಾಸಿ; Ghaṭisāsi: s.a. Ghaṭikā-sāhasi; (SII. XX, 119, 1148).

ಘಳಿಗೆಯ ಮಾಣಿ; Ghaḷigeya māṇi: ಘಟಿಕಾ ಸ್ಥಾನದಲ್ಲಿ ವೇಳೆಯನ್ನು ಸೂಚಿಸಲು ನಿಯಮಿಸಲ್ಪಟ್ಟ ಬಾಲಕ; A pupil entrusted to announce time regularly in the ghaṭikāsthāna; ಘಳಿಗೆಯ ಮಾಣಿಗಳ್ನಾಲ್ವರ್ಗ್ಗಮೆಂಟು ಮತ್ತರ್; (SII. IX, I, 101, 1068).

ಘಳಿಸಾಸ; Ghaḷisāsa: s.a. ಘಟಿಕಾಸಾಹಸ; Ghaṭikā-sāhasa; ದಶಗ್ರಂಥ ಈಶ್ವರ ಘಳಿಸಾಸರು; (SII. XX, 144, 1166)

ಘೈಸಾಸ; Ghaisāsa: s.a. Ghaṭikā-sāhasa; (SII. IX, I, 267, 1156).

ತಕ್ಕರು; Takkaru: ತಾರ್ಕಿಕರು; Well versed in logic; ತಕ್ಕರು ಮಗ್ಗಿಗರ ಭೋಜನಕ್ಕೆ; (SII. XX, 82, 1122).

ದೇವರ ಪೂಜಾರಿ ಮಾಣಿಯರು; Dēvara pūjāri-māṇiyaru: ದೇವರ ಪೂಜೆಮಾಡುವ ಬಾಲಕರು; Boys appointed for worshipping god in the temple; (EC. VII(O), Sk.185, 1157).

ದೇಸಿಗ ಛಾತ್ರ; Dēsiga-chhātra: ಸ್ಥಳದಲ್ಲಿಯ ವಿದ್ಯಾರ್ಥಿ; Day scholar, Local student; (SII. IX, I, 80, 1018).

ದ್ವೇದಿ; (ದ್ವಿವೇದಿ); Dvēdi (Dvivēdi): ಎರಡು ವೇದಗಳಲ್ಲಿ ಪಾರಂಗತರಾದ ಪಂಡಿತ; An expert in two Vēdas; ಶ್ರೀಮತು ಕುಮಾರಸ್ವಾಮಿ ದ್ವೇದಿಯರ ಮಗ; (SII. I, 158, 1092).

ಧರ್ಮಜನ; Dharmajana: ಮಹಾಜನ; Mahājana; ಆ ಊರ ಧರ್ಮಜನಂಗಳ ಅನುಮತ; (SII. VII, 270, 1402). See Mahājana below.

ನಾಟ್ಯವ್ಯಾಕರಣಪಂಡಿತ; Nāṭya-vyākaraṇa-paṇḍita: ನಾಟ್ಯ-ನಿಯಮ ತಜ್ಞ; Person well-versed in dramaturgy; (ಕು.ವ್ಯಾ.ಭಾ.ವಿರಾಟ ಪ. Ku.Vyā.Bhā. Virāta Pa. IX, 23, c.1400).

ನ್ಯಾಸವ್ಯಾಖ್ಯಾತ; Nyāsa-vyākhyāta: ನ್ಯಾಸವನ್ನು ಕಲಿಸುವ ಉಪಾಧ್ಯಾಯ; A scholar for teaching Nyāsa; (APGAS. III, Gb.2, 1093).

ಪ್ರಭಾಕರವ್ಯಾಖ್ಯಾತ; Prabhākara-vyākhyāta: ಪ್ರಭಾಕರ ಅಂದರೆ ಪೂರ್ವಮೀಮಾಂಸೆಯನ್ನು ಕಲಿಸುವ ಉಪಾಧ್ಯಾಯ; A teacher for teaching Prabhākara or Pūrava-Mīmāṁsā; (APGAS. III, Gb.2, 1093).

ಪ್ರಾವಾಸಿಗ ಛಾತ್ರ; Prāvāsiga-chhātra: ಹೊರಗಿನ ವಿದ್ಯಾರ್ಥಿ; ದೂರದಿಂದ ಬಂದ ವಿದ್ಯಾರ್ಥಿ; Student from outside; Student from far off places; (EI. XV, 24, 1098)

ಪುರಾಣಭಟ್ಟ; Purāṇa-bhaṭṭa: ಅಗ್ರಹಾರಗಳಲ್ಲಿ ಪುರಾಣಗಳನ್ನು ಕಲಿಸುವ ವಿದ್ವಾಂಸ; A scholar teaching the purāṇas in agrahāras; ಧರ್ಮ ವತ್ತಳೆಯಾಗಿ ತಿಙುವ ಸಿದ್ಧಾಯದ ಪೊಂನ್ನೊಳಗೆ ...... ಪುರಾಣಭಟ್ಟರ್ಗ್ಗೆ ಗದ್ಯಾಣವೆಂಟು; (SII. IX, I, 175, 1107 A.D.).

ಪುಸ್ತಕಪಾಲ; Pustakapāla: ಗ್ರಂಥಪಾಲಕ; ದಾಖಲೆಗಳ ಅಧಿಕಾರಿ; Custodian of books, Librarian; Record-keeper; (EI. XXIX, 10, 786; EI. VI, 13B, 13th cent.)

ಪೂಜಿಸುವ ಮಾಣಿ; Pūjisuva māṇi: ದೇವರ ಪೂಜೆಗಾಗಿ ನೇಮಿಸಲ್ಪಟ್ಟ ಬಾಲಕ; A boy appointed for worshiping the god; (SII. XX, 51, 1077).

ಬಾಣಸಗಿತ್ತಿ; Bāṇasagitti: ಅಡಿಗೆ ಮಾಡುವವಳು; A female cook; ವಿದ್ಯಾರ್ಥಿ ಮಾಣಿಯರಿಪ್ಪತ್ತಕ್ಕಂ ಅಡುವ ಬಾಣಸಗಿತ್ತಿಯ ಜೀವಿತಗದ್ಯಾಣ; (EC. V(O), Ak.138, 1174).

ಬಾಲಶಿಕ್ಷೆಯ ಶಾಸ್ತ್ರದವರು; Bālaśiksheya Śāstradavaru: ಬಾಲಕರಿಗೆ ಶಿಕ್ಷಣವನ್ನು ಕೊಡುವ ಉಪಾಧ್ಯಾಯರು; Teachers, giving elementary education to children; (EC. VII(O), Sk.185, 1157).

ಭಟ್ಟಗುತ್ತ; Bhattagutta: ಹಿರಿಯ ವಿದ್ವಾಂಸರು; Senior scholars; (EC. VII(O), Sk.131, 1104)

ಭಟ್ಟೋಪಾಧ್ಯಾಯ; Bhaṭṭōpādhyāya: ಶಿಕ್ಷಕರಿಗಿರುತ್ತಿದ್ದ ಬಿರುದು; Title given for teachers; (KI. V, 23, 1129).

ಭರತನಿಪುಣರು; Bharata-nipuṇaru: ಭರತ ನಾಟ್ಯದಲ್ಲಿ ನಿಪುಣರು; ನರ್ತನ ನಿಪುಣರು; Experts in Bharatanāṭya, experts in dancing; (ಕು.ವ್ಯಾ.ಭಾ.ಉದ್ಯೋಗ ಪ. Ku.Vyā.Bhā. Udyōga Pa. II, 26, c.1400)

ಭಾಟ್ಟದರ್ಶನವ್ಯಾಖ್ಯಾತೃ; Bhāṭṭadarśana-vyākhyātṛi: ಕುಮಾರಿಲಭಟ್ಟರ ಮೀಮಾಂಸಾ ಸೂತ್ರಗಳನ್ನು ವಿವರಿಸುವ ವಿದ್ವಾಂಸ; A teacher teaching Mīmāṁsā Sūtras of Kumārilabhaṭṭa; (APGAS. III, Gb.2, 1053).

ಮಗ್ಗಿಗ; Maggiga: ಲೆಕ್ಕಿಗ; Scholar in arithmetic; ಮಹಾದೇವಪಣಂಗಿಯರ ಬ್ರಾಹ್ಮಣ ಕಂಚಿಕಬ್ಬೆಗಳು ತಕ್ಕರು ಮಗ್ಗಿಗರ ಭೋಜನಕ್ಕೆ; (SII. XX, 82, 1122).

ಮಹಾಜನ; Mahājana: ಗ್ರಾಮದ ಸಭೆಯ ಮುಖ್ಯ ಸದಸ್ಯರು; Important members of the sabhā or village assembly; (IEG. p.177; SII. XV, 463, 8th cent.). 'ಅಧಿಕಾರಿ, ಅಧಿಕಾರವಾಚಕ ಪದಗಳು' ವಿಭಾಗದಲ್ಲಿ ಮಹಾಜನ ನೋಡಿರಿ. See Mahājana under the section on Officers and Offices.

ಮಾಣಿ; Māṇi: ವಿದ್ಯಾರ್ಥಿ, ವಟು; Student; ರುಗ್ವೇದದ ಬಾಲಶಿಕ್ಷೆಯ ಖಂಡಿಕದಲ್ಲಿ ಸ್ವಾಧ್ಯಾಯಂ ಗೆಯ್ವ

ಮಾಣಿಯರ ಗ್ರಾಸಕ್ಕೆ ಬಿಟ್ಟ ಮತ್ತರು ೩೦; (SII. XI, II, 173, 1124).

ಮಾನಸ ಬ್ರಾಹ್ಮಣ; Mānasa-brāhmaṇa: ಧಾರ್ಮಿಕ ಪ್ರವೃತ್ತಿಯ ಬ್ರಾಹ್ಮಣ; A Brāhmaṇa of religious disposition; (SII. IX, I, 255, 1148).

ವಖ್ಖಾಣಿಜೀಯ; Vakkhāṇi-jīya: s.a. ವಕ್ಖಾಣಿಸುವ ಉಪಾಧ್ಯಾಯ; Vakkhāṇisuva Vupādhyāya below (SII. XI, I, 48, 1002).

ವಕ್ಖಾಣಿಸುವ ವುಪಾಧ್ಯಾಯ; Vakkāṇisuvavu-pādhyāya: ವ್ಯಾಖ್ಯಾನಿಸುವ ಉಪಾಧ್ಯಾಯ, ಗ್ರಂಥಗಳನ್ನು ವಿವರಿಸುವ ಗುರು; A teacher expounding the texts; (SII. XV, 2, 1074).

ವ್ಯಾಖ್ಯಾನದುಪಾಧ್ಯಾಯ; Vyākhyanad-upādhyāya: s.a. ವಕ್ಖಾಣಿಸುವ ವುಪಾಧ್ಯಾಯ, Vakkāṇisuva Vupādhyāya; (SII. IX, I, 175, 1107).

ವಿದ್ಯಾರ್ಥಿ; Vidyārthi: ವಿದ್ಯೆಯನ್ನು ಗಳಿಸುವ ಬ್ರಹ್ಮಚಾರಿ; A student studying a subject; ಕೆರೆಹಳ್ಳಿಯ ಮೂಲಸ್ಥಾನದ ಗರುಡೇಶ್ವರ ದೇವರ್ಗ್ಗೆ ಸ್ತಾನ ನಿವೇದ್ಯಕ್ಕೆ ವಿದ್ಯಾರ್ಥಿಗಳು ಬಿಟ್ಟ; (EC. VIII(O), Na. 30, 1073).

ವಿದ್ಯಾರ್ಥಿ ಮಾಣಿ; Vidyārthi-māṇi: ವಿದ್ಯೆಯನ್ನು ಕಲಿಯುವವ; ವಿದ್ಯಾರ್ಥಿ; A student; a pupil; ಅಲ್ಲಿಯವಾರಿಸತ್ರಕ್ಕಂ ಓದುವ ವಿದ್ಯಾರ್ತ್ಥಿಮಾಣಿಗಳಿಗವೆಂದು; (SII. XX, 58, 1085).

ವಿದ್ಯಾಮಂಡಳ; Vidyā-maṇḍaḷa: ವಿದ್ಯೆಯನ್ನು ಕಲಿಸುವ ಶಿಕ್ಷಕರ ಗುಂಪು; Group of teachers; ವಿದ್ಯಾಮಂಡಳ ಗುರುಮಂಡಳ ಶಿವಮಂಡಳವೆಂಬ ಮಂಡಳತ್ರಯ; (EC. VII(O), Sk.185, 1157).

ವಿದ್ಯಾಶಿಷ್ಯ; Vidyā-śishya: ವಿದ್ಯೆಯನ್ನು ಕಲಿಯುವ ಶಿಷ್ಯ; ವಿದ್ಯಾರ್ಥಿ; Student receiving education; Disciple; (SII. XI, I, 48, 1002).

ವೇದದ ವುಪಾಧ್ಯಾಯ; Vēdada Vupādhyāya: ವೇದಗಳನ್ನು ಕಲಿಸುವ ಉಪಾಧ್ಯಾಯ; Teacher for teaching Vēdas; (SII. IX, II, 1392).

ಶಾಸ್ತ್ರದುಪಾಧ್ಯಾಯ; Śāstrad-upādhyāya: ವಿವಿಧ ಶಾಸ್ತ್ರಗಳನ್ನು ಕಲಿಸುವ ಉಪಾಧ್ಯಾಯ; Teacher, teaching different Śāstras; (EC. VII(O), Sk.185, 1157).

ಶಿಕ್ಷಕ; Śikshaka: ಉಪಾಧ್ಯಾಯ; Teacher; ವಿನುತರ್ ಶ್ರೀವಿಜಯರ್ ಸುಶಿಕ್ಷಕರೆನಲ್; (EC. VIII(O), Na. 35, 1077).

ಶಿಕ್ಷೆಯ ಸೂನು; Śiksheya sūnu: ಶಿಕ್ಷಣವನ್ನು ಪಡೆಯುವ ಶಿಷ್ಯ; ವಿದ್ಯಾರ್ಥಿ; Disciple receiving education; pupil; ಬಾಚಲೆನಾರಿಗೆ ಬಾಚಿಸೆಟ್ಟಿಗುದ್ಭವಿಸಿದ ಸೂನು ದಾನರವಿಸೂನು ವಚೋಂಬುಜಸೂನು ಸದ್ಗುಣಪ್ರವರನ ನಾಗರಾಶಿಮುನಿರಾಜನ ಶಿಕ್ಷೆಯ ಸೂನು; (SII. V, 847, 12th cent.).

ಷಡಂಗಿ, ಷಣಂಗಿ; Shaḍangi, Shaṇangi: ಆರು ವೇದಾಂಗಗಳನ್ನು ಅಭ್ಯಾಸ ಮಾಡಿದವ (ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ಜ್ಯೋತಿಷ, ನಿರುಕ್ತ ಇವು ಆರು ವೇದಾಂಗಗಳು). One who studies the six vēdāngas (Shikshā, Kalpa, Vyākaraṇa, Chhandas, Jyōtishas and Nirukta); (SII. IX, I 91, 1036; APGAS, III, Gb.3, 1062).

ಸರಸ್ವತೀಭಂಡಾರಿಗ; Sarasvatī-bhandāriga: ಗ್ರಂಥಾಲಯದ ಅಡಳಿತಗಾರ; Librarian; person in charge of the Library; (APGAS, III, Gb.2, 1058). See ಪುಸ್ತಕಪಾಲ; Pustakapāla above.

ಸಾಹಿತ್ಯ ವುಪಾಧ್ಯಾಯ; Sāhitya-upādhyāya: ಸಾಹಿತ್ಯವನ್ನು ಕಲಿಸುವ ಉಪಾಧ್ಯಾಯ; A teacher of literature; (EC. VI(O), Tk.88, 1297).

ಸ್ನಾತಕ; Snātaka: ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದವ; One who has completed his studies at the Gurukula; (APGAS. III, Gb.3, 1062).

ಸೆಣಂಗಿ; Seṇangi: s.a. ಷಡಂಗಿ; Shaḍangi above; (SII. IX, I, 92, 1036).

೪. ಶಿಕ್ಷಣ ವಿಷಯಕ ದಾನ-ದತ್ತಿಗಳು

4. DONATIONS AND GIFTS RELATING TO EDUCATION

ಅಶನಾಚ್ಛಾದನ; Aśan-āchchhādana: ಊಟ ಮತ್ತು ಬಟ್ಟೆಯ ವ್ಯವಸ್ಥೆ; Arrangement for food and clothing; ತಪೋಧನರ್ಕ್ಕ ವಿದ್ಯಾರ್ಥಿಗಳಶನಾಚ್ಛಾದನಕ್ಕಂ; (SII. IX, I, 135, 1071).

ಆಹಾರದಾನ; Āhāra-dāna: ದಾನವಾಗಿ ಆಹಾರಧಾನ್ಯಗಳ ಪೂರೈಕೆಯ ವ್ಯವಸ್ಥೆ; Free supply of food grains; (APGAS. III, Vēmulavāḍa 5, 1108).

ಖಂಡಿಕವೃತ್ತಿ; Khaṇḍika-vṛitti: ಯಾವದೊಂದು ವಿಷಯದ ವಿದ್ಯಾಭ್ಯಾಸವನ್ನು ಮಾಡಿಸುವ ಉಪಾಧ್ಯಾಯರಿಗೆ ಕೊಟ್ಟ ದತ್ತಿ; Grants made to a teacher for teaching a particular subject; (EC. XII(O), Ck.2, 1261).

ಚಟ್ಟವೃತ್ತಿ; Chaṭṭa-vṛitti: ಛಾತ್ರವೃತ್ತಿ; Chhātra-vṛitti; ವಿದ್ಯಾರ್ಥಿಗಳಿಗೆ ಉಪಜೀವನಕ್ಕೆ ಕೊಟ್ಟ ಭೂಮಿ; Land granted for the maintenance of students; ಶ್ರೀ ಸ್ವಯಂಭು ಕಲಿದೇವಸ್ವಾಮಿದೇವರ ಅಂಗಭೋಗಕ್ಕಂ ದೇಗುಲಕ್ಕಂ ಮಾಟಕ್ಕಂ ಚಟ್ಟವೃತ್ತಿ ಬಾಲಶಿಕ್ಷೆಯನಿತುಮಂ ನಡೆಯಿಸುವಂತಾಗಿ; (SII. XI, II, 171, 1121).

ಜೀವಿತ; Jīvita: ಉಪಜೀವನಕ್ಕಾಗಿ ಕೊಡುವ ಸಂಭವನಾದ್ರವ್ಯ; Payment of money for maintenance; ಶಾಸ್ತ್ರವ್ಯಾಖ್ಯಾನಮಂ ಮಾಡಲುಂ ಪುರಾಣಮಂ ಹೇಳಲು ವೊಬ್ಬುಪಾಧ್ಯಾಯರ್ಗ್ಗೆ ವರ್ಷವರ್ಷಕ್ಕೆ ಬಾಗುಳಿಯೇಳು ಗದ್ಯಾಣ ಪೊಂನು ಜೀವಿತಕ್ಕಂ; (SII. IX, I, 267, 1160).

ನ್ಯಾಸದೆರೆ; Nyasa-dere: ನ್ಯಾಸವನ್ನು ಕಲಿಸುವದಕ್ಕಾಗಿ ದಾನವಾಗಿ ಕೊಟ್ಟ ಭೂಮಿ; Land granted for teaching Nyāsa; ಭಟ್ಟವೃತ್ತಿ ನ್ಯಾಸದರೆ ಮತ್ತರು ೧೫; (SII. XX, 300, 12th cent.).

ಪುರಾಣದೆರೆ; Purāṇadere: ಪುರಾಣ ಹೇಳುವವರಿಗೆ ಬಿಟ್ಟ ದತ್ತಿ; Grant of land to the reciters of Purāṇas; (SII. XX, 300, 12th cent.).

ಪುರಾಣದ ಭಟ್ಟವೃತ್ತಿ; Purāṇada bhaṭṭa-vṛitti: s.a. ಪುರಾಣದೆರೆ; Purāṇa-dere; (SII. XX, 72, 1111).

ಪುರಾಣವೃತ್ತಿ; Purāṇa-vṛitti: s.a. ಪುರಾಣದೆರೆ; Purāṇadere; (KI. V, 17, 1118).

ಪ್ರಭಾಕರದೆರೆ; Prabhākaradere: ಪ್ರಭಾಕರ ಭಾಷ್ಯವನ್ನು ಕಲಿಸುವವರಿಗೆ ಕೊಟ್ಟ ಭೂಮಿ; Land granted for a teacher teaching prabhākara-bhāshya; (SII. XX, 300, 12th cent.).

ಬ್ರಹ್ಮದಾಯ; Brahmadāya: ಬ್ರಾಹ್ಮಣರಿಗೆ ಹಾಕಿಕೊಟ್ಟ ಉಂಬಳಿ; Grant given to the Brāhmaṇas; (SII. IX, II 430, 1406); ಹೊಸಕೆರೆಯ ಕೆಳಗಣ ದೇವದಾಯ ಬ್ರಹ್ಮಾದಾಯಕೆ ಸಲುವ ಮಾನ್ಯಗಳ ಗದ್ದೆಗಳು; (SII. IX, II, 561, 1534).

ಭಟ್ಟವೃತ್ತಿ; Bhaṭṭavṛitti: ವಿದ್ಯಾವಂತರ, ಶಿಕ್ಷಕರ ಉಪಜೀವನಕ್ಕಾಗಿ ಕೊಟ್ಟ ಉಂಬಳಿ; Land given for tha maintenance of the learned men, teachers; ನ್ಯಾಸಂ ಪ್ರಾಭಾಕರವುವಂ ವಖ್ಯಾಣಿಸಿ ಗುಣಶಾಸನದಿನುಂಬ ಭಟ್ಟವೃತ್ತಿ ಮತ್ತರಯ್ವತ್ತು ಮನೆಯೊಂದು; (EI. XX, 6, 1012; EC. VII(O), Sk.185, 1158).

ಭಟ್ಟವಿರುತ್ತಿ; Bhaṭṭa-virutti: s.a. ಭಟ್ಟವೃತ್ತಿ; Bhaṭṭavṛitti; (EC. X(O), Ml.184, 1297).

ಬ್ರಹ್ಮಪುರಿವೃತ್ತಿ; Brahmapuri-vritti: ಬ್ರಹ್ಮಪುರಿಗೆ ಕೊಟ್ಟ ಭೂದಾನ; Land gift to Brahmapuri; (SII. XV, 187, 1248). See Brahmapuri above.

ವೇದಾನ್ತದೆರೆ; Vēdanta-dere: ವೇದಾಂತವನ್ನು ಕಲಿಸುವವರಿಗೆ ದಾನವಾಗಿ ಕೊಟ್ಟ ಭೂಮಿ; Gift of land for teachers of vēdānta; (SII. XX, 300, 12th cent.).

ಶ್ರೋತ್ರಗುತ್ತಗೆ; Śrōtra-guttage: ಶ್ರೋತ್ರಿಯರಿಗೆ ಅಥವಾ ವಿದ್ವಾಂಸರಿಗೆ ದಾನವಾಗಿ ಕೊಟ್ಟ ಭೂಮಿಯ ಮೇಲಿನ ಎಲ್ಲ ಹಕ್ಕುಗಳು; Monopoly of rights over the lands granted to the learned scholars; (EC. VIII(O), Tl.148, 1417).

ಶ್ರೋತ್ರಿಯ ಗುತ್ತಗೆ; Śrōtriya-guttage: s.a. ಶ್ರೋತ್ರಗುತ್ತಗೆ; Śrōtra-guttage; (EC. III(R), Hg.160, 1520).

ಅಧ್ಯಾಯ ೯ CHAPTER IX

ಸೈನ್ಯದ ಆಡಳಿತ
MILITARY ADMINISTRATION

೧. ಅಧಿಕಾರಿ, ಅಧಿಕಾರ ಸೂಚಕ ಪದಗಳು
1. TERMS RELATING TO OFFICERS, OFFICES

ಅಣುಗಸಾಹಣಾಧಿಪತಿ; Aṇuga-sāhaṇādhipati: ಸೈನ್ಯದಲ್ಲಿಯ ಕಿರಿಯ ಅಧಿಕಾರಿ; Junior officer of the army; (ಅಣುಗ = ಕಿರಿಯ) (SII. XV, 126, 1174; Ibid. XX, 154, 1172).

ಅಮರ; Amara: ಶಾಶ್ವತ; Permanent; ವಿಶೇಷವಾಗಿ ವಿಜಯನಗರ ಕಾಲದ ಶಾಸನಗಳಲ್ಲಿ ಈ ಶಬ್ದವನ್ನು ಒಂದು ನಿರ್ದಿಷ್ಟ ಅರ್ಥದಲ್ಲಿ ಬಳಸಲಾಗಿದೆ. ಅರಸನಿಗೆ ನಿರ್ದಿಷ್ಟ ಸಂಖ್ಯೆಯಲ್ಲಿ ಕಾಲಾಳುಗಳನ್ನು, ಆನೆಕುದುರೆಗಳನ್ನು ಪೂರೈಸುವ ಕರಾರಿನ ಮೇಲೆ ಒಂದು ಅಥವಾ ಹಲವು ಗ್ರಾಮಗಳನ್ನು ಉಂಬಳಿ ಹಾಕಿಕೊಡುವ ಪದ್ಧತಿಗೆ ಅಮರ ಎಂಬ ಹೆಸರು ಬಂದಿತು; ಶಾಶ್ವತವಾದ ಉಂಬಳಿ ಎಂಬ ಅರ್ಥದಲ್ಲಿ ಈ ಶಬ್ದವನ್ನು ಬಳಸುತ್ತಿದ್ದಿರಬೇಕು. ಈ ಕಾಲದ ಕನ್ನಡ, ತೆಲಗು, ತಮಿಳ ಭಾಷೆಗಳ ಶಾಸನಗಳಲ್ಲಿ ಅಮರ ಶಬ್ದವನ್ನು ಈ ಅರ್ಥದಲ್ಲಿ ಬಳಸಲಾಗಿದೆ. ಆದ್ದರಿಂದ ಅಮರ ಅಂದರೆ ನಿಯಮಿತವಾಗಿ ಸರಕಾರಕ್ಕೆ ಸೈನ್ಯವನ್ನು ಪೂರೈಸುವದಕ್ಕಾಗಿ ಹಾಕಿಕೊಟ್ಟ ಉಂಬಳಿ ಎಂದು ಅರ್ಥವಾಗುತ್ತದೆ. ಮುಂದಿನ ಶಬ್ದಗಳನ್ನು ನೋಡಿರಿ. Amara literally means permanent; Particularly in the inscriptions of the Vijayanagara period it acquired a particular specific meaning. It stood for a grant of a village or villages for a person on condition of supplying regularly soldiers, horses and elephants to the State. This word seems to have been used in the sense of permanent fief. It is used in this sense in the Kannada, Telugu and Tamil inscriptions of this period. Therefore amara would mean permanent fief granted for the regular supply of army to the State. See the following entries. ನಮಗೆ ಅಮರಕ್ಕೆ ಪಾಲಿಸಿದ ಆದವಾನಿ ದುರ್ಗ್ಗದೊಳಗಣ ಕೆಱೆಬೆಳಗಲ್ಲಲಿ; (SII. IX, II, 251, 1527).

ಅಮರದಣ್ಣಾಯಕ; Amaradaṇṇāyaka: ಅಮರದಂಡನಾಯಕ; Amara-daṇḍanāyaka; ಸರಕಾರಕ್ಕೆ ನಿಯಮಿತವಾಗಿ ಸೈನ್ಯವನ್ನು ಪೂರೈಸುವುದಕ್ಕಾಗಿ ಉಂಬಳಿಯನ್ನು ಪಡೆದ ದಂಡನಾಯಕ ಅಥವಾ ಸೈನ್ಯಾಧಿಕಾರಿ; A general, military officer receiving a fief for regular supply of army to State; ಬಸ್ವಪಯ್ಯನವರಿಗೆ ಆಲಂಪೂರಿ ಶೀಮೆನು

ಅಮರದಣಂಯಕ ಪಾಲಿಸ್ತ ಸಂಮ್ಮಂಧ; (APGAS. IX, 4, 1521).

ಅಮರದ ಪಡೆಯ ನಾಯಕತನ; Amarada paḍeya nāyakatana: sa ಅಮರ ನಾಯಕತನ; Amaranāyakatana below; ನಾಲು ನಂಮ ಅಮರದ ಪಡೆಯ ನಾಯಕತನಕೆ ಸಲುವ; (EC. VIII(R), 219, 1516).

ಅಮರನಾಯಕತನ; Amaranāyakatana: ನಿಯಮಿತವಾಗಿ ಸರಕಾರಕ್ಕೆ ಸೈನ್ಯವನ್ನು ಪೂರೈಸುವದಕ್ಕಾಗಿ ಕೊಟ್ಟ ಉಂಬಳಿ ಮತ್ತು ಅಧಿಕಾರ; Permanent fief and authority granted for the regular supply of the army to the State; ನಮಗೆ ಅಮರನಾಯಕತನಕ್ಕೆ ಪಾಲಿಸಿದ; (EC. XI(O), Dg.28, 1530; SII. IX, II 463, 1470; EC. VI(O), Tk.41, 1547; SII. IX, II, 633, 1548).

ಅಮರಪ್ರಧಾನಿ; Amarapradhāni: ಅಮರ ಮಾಗಣಿಯನ್ನು ಹೊಂದಿದ ಅಧಿಕಾರಿ; Officer holding amaramāgaṇi; (SII. VII, 256, 1539). See ಅಮರಮಾಗಣಿ below.

ಅಮರಪೆರ್ಗ್ಗಡೆ; Amara-perggade: ಶಾಶ್ವತ ಉಂಬಳಿಯನ್ನು ಪಡೆದ ಅಧಿಕಾರಿ; ಬಹುಶಃ ಅಮರ ನಾಯಕನಿಗಿಂತ ಕೆಳಗಿನವ; Officer, holding permanent fief; perhaps lower in cadre than amaranāyaka; (EC. XI(O), Dg.141, 1065).

ಅಮರಮಾಗಣಿ; Amara-māgaṇi: ನಿಯಮಿತವಾಗಿ ಸರಕಾರಕ್ಕೆ ಸೈನ್ಯವನ್ನು ಪೂರೈಸುವುದಕ್ಕಾಗಿ ಹಾಕಿಕೊಟ್ಟ ಉಂಬಳಿ; Estate or fief granted for the regular supply of army to the State; ಕೆಳದಿಯ ಸದಾಸಿವನಾಯಕರಿಗೆ ಅಮರಮಾಗಣಿಯಾಗಿ ಕೊಟ್ಟ ಯೀ ಹೊನ್ನಾಳಿ ಸೀಮೆಯೊಳಗಣ ..... (EC. VII(O), Hl.9, 1557; SII. IX, II, 640, 1550; Ibid. 671, 1560); See ಅಮರ; Amara above.

ಅಮರಮಾಗಳೆ; Amara-māgaḷe: s.a. ಅಮರಮಾಗಣಿ; Amara-māgaṇi; (SII. IX, II, 674, 1552).

ಅಶ್ವಪತಿ; Aśvapati: ಕುದುರೆಯ ದಳದ ಅಧಿಪತಿ; Chief of the cavalry; (APGAS. III, Gb.2, 1158; EC. VII(R), Ng.64, 1145; Ibid. V(O), Ak.108, 1255).

ಅಶ್ವಾಧ್ಯಕ್ಷ; Aśvādhyaksha: s.a. (1) ಅಶ್ವಪತಿ; Aśvapati; (2) ಅಶ್ವಾಧ್ಯಕ್ಷನ ಕಾರ್ಯಾಲಯ; Office or estabilishment of Aśvādhyaksha; ಅಶ್ವಾಧ್ಯಕ್ಷದ ಹೆಗ್ಗಡೆ ಹರಿಯಣ್ಣಂ; (EC. II(R). 512, 12th cent.).

ಅಶ್ವಾಧ್ಯಕ್ಷದ ಹೆಗ್ಗಡೆ; Aśvādhyakshada heggaḍe: ಅಶ್ವಾಧ್ಯಕ್ಷನ ಕಾರ್ಯಾದಲ್ಲಿಯ ಅಧಿಕಾರಿ; Officer in the establishment of the chief of cavalry; ಅಶ್ವಾಧ್ಯಕ್ಷದ ಹೆಗ್ಗಡೆ ಹರಿಯಣ್ಣ; (EC. II(R), 572, 12th cent.).

ಅಟವಿಕರು; Āṭavikaru: ಬೇಡರು, ಕಿರಾತರು; ಸೈನ್ಯದ ಕಾಲ್ದಳದಲ್ಲಿಯ ಗುಡ್ಡಗಾಡು ಜನರ ಒಂದು ಘಟಕ; Tribals, Hunters; A unit in the infantry of the army consisting of tribals; (EC. VIII(O), Na.35, 1077). Cf. *Artha* IX, ii: ಮೌಲಭೃತಕ ಶ್ರೇಣೀ ಮಿತ್ರಾಮಿತ್ರಾಟವೀಬಲಾನಾಂ.

ಆನೆಯ ಸಾಹಣಿ; Āneya sāhaṇi: ಆನೆಯ ದಂಡಿನ ಮುಖ್ಯಸ್ಥ; Chief of the elephant squard; (SII. IX, I, 206, 1122; Ibid, XX, 74, 1112) Sk. ಗಜಸಾಧನಿಕ; Gajasādhanika; ಹಸ್ತಿಸಾಧನಿಕ; Hastisādhanika.

ಆಯುಧಾಧ್ಯಕ್ಷ; Ayudh-ādhyaksha: ಆಯುಧಾಗಾರದ ಮುಖ್ಯಾಧಿಕಾರಿ; Officer in-charge of the armoury; ತತ್ಪುರೋಹಿತಾಯುಧಾಧ್ಯಕ್ಷ ಅಂತಃಪುರವೃದ್ಧ ಕಂಚುಗಿಳ್ ಬಂದು; (ಆದಿ ಪು. Ādi.Pu. X, 47 ವ, Pr. 10th cent.; also ಶಾಂ.ಪು. Sāṁ.Pu. X, 123 ವ, Pr. 10th cent.). Cf. ಆಯುಧಗಾರಾಧ್ಯಕ್ಷ; Āyudha-gārādhyaksha; Artha, II, 18.

ಆಳು; Āḷu: ಕಾಲಾಳು; Foot soldier; ಜಗಜಟ್ಟಿ ಸಿಂದದ ಬೊಮ್ಮಯನಾ ಹಲವಾಳು ಕುದುರೆಯಂ ಕಂಡು; (KI. V, 58, 12-13th cent.); ಮೂರುಸಾವಿರ ಆಳು; (SII. VII, 262, 1502). Cf. ಕಾಲಾಳು, ಬಿಲ್ಲಾಳು; Kālāḷu, Billāḷu; below.

ಕರ್ಣಾಟಕ ಸಂಧಿವಿಗ್ರಹಾಧಿಪತಿ; Karnāṭaka-sandhi-vigrahādhipati: s.a. ಕನ್ನಡಸಂಧಿವಿಗ್ರಹಿ; Knnada-sandhi-vigrahi; (APGAS. III, Gb.2, 1058).

ಕನ್ನಡಸಂಧಿವಿಗ್ರಹಾಧಿಪತಿ, ಕನ್ನಡಸಂಧಿವಿಗ್ರಹಿ; Kannaḍa-sandhi-vigrahādhipati, Kannaḍa-sandhi-

vigrahi: ಸಂಧಿ ವಿಗ್ರಹಿ ಎಂಬುದು ಸೈನ್ಯದಾಡಳಿತದಲ್ಲಿ ಒಂದು ಉಚ್ಚ ಅಧಿಕಾರಪದವಾಗಿದ್ದಿತೆಂಬುದು ಸ್ಪಷ್ಟವಿದ್ದರೂ ಅದರ ಖಚಿತವಾದ ಸ್ವರೂಪವೇನೆಂಬುದು ಗೊತ್ತಾಗುವದಿಲ್ಲ. ಸಾಮಾನ್ಯವಾಗಿ ಇದನ್ನು ಯುದ್ಧ ಮತ್ತು ಒಪ್ಪಂದಗಳಿಗೆ ಸಂಬಂಧಿಸಿದ ಅಧಿಕಾರಿಯೆಂದು ಬಗೆಯಲಾಗುತ್ತದೆ. ಅಲ್ಲದೆ, Minister for war and peace ಎಂದು ಭಾಷಾಂತರಿಸಲ್ಪಡುತ್ತದೆ. ಆದರೆ ಶಾಸನಗಳಲ್ಲಿ ಹಲವು ವಿಧದ ಸಂಧಿವಿಗ್ರಹಿಗಳ ಉಲ್ಲೇಖ ಬರುತ್ತಿದ್ದು ಅವುಗಳ ನಿಶ್ಚಿತ ಕಾರ್ಯವ್ಯಾಪ್ತಿಯ ಬಗ್ಗೆ ವಿವರಗಳು ಸಿಗುವುದಿಲ್ಲ. ಉದಾಹರಣೆಗೆ ಲಾಳ ಸಂಧಿವಿಗ್ರಹಿ ಎಂಬ ಪದಕ್ಕೆ Minister for war and peace for Lāṭa country ಎಂದರೆ ಲಾಟ ದೇಶಕ್ಕೆ ಸಂಬಂಧಿಸಿದ ಇಂಥ ಅಧಿಕಾರಿ ಎಂದು ವಿವರಿಸಲಾಗುತ್ತದೆ. ಲಾಟ (ಇಂದಿನ ದಕ್ಷಿಣ ಗುಜರಾತ) ಅಂದಿನ ಸಾಮ್ರಾಜ್ಯದ ಒಂದು ಭಾಗವಾಗಿದ್ದು ಆ ಪ್ರದೇಶಕ್ಕೆ ಸಂಬಂಧಿಸಿದ ಅಧಿಕಾರಿ ಎನ್ನಬಹುದು. ಆದರೆ ಕನ್ನಡ ಸಂಧಿವಿಗ್ರಹಿ ಎಂಬ ಪದವನ್ನು Minister for war and peace in the Kannada country ಎಂದು ಭಾಷಾಂತರಿಸಲಾಗಿದ್ದರೂ (EI. XVI, p.80) ಇಡೀ ಸಾಮ್ರಾಜ್ಯವೇ ಕನ್ನಡ ಅರಸರದಿದ್ದಾಗ ಕನ್ನಡದೇಶಕ್ಕಾಗಿ ಪ್ರತ್ಯೇಕ ಅಧಿಕಾರಿ ಎಂದರೆ ಏನೆಂಬುದು ಸ್ಪಷ್ಟವಾಗುವುದಿಲ್ಲ.

ಇನ್ನೊಂದು ವಿವರಣೆ ಹೀಗಿದೆ: ಸಂಧಿವಿಗ್ರಹಿಯು ಶಾಸನಗಳ ಲೇಖಕನೂ ಆಗಿರುತ್ತಿದ್ದನು. ಹೀಗಾಗಿ ಕನ್ನಡ ಸಂಧಿವಿಗ್ರಹಿ ಎಂಬ ಪದವನ್ನು ಕನ್ನಡ ಶಾಸನಗಳನ್ನು ಬರೆಯುವ ಸಂಧಿವಿಗ್ರಹಿ ಎಂದು ಭಾವಿಸಬಹುದು. ಆಗ ಇದಕ್ಕನುಗುಣವಾಗಿ ಲಾಳಸಂಧಿವಿಗ್ರಹಿಯನ್ನು ವಿವರಿಸುವದು ಕಠಿಣವಾಗುತ್ತದೆ. ಒಟ್ಟಿನಲ್ಲಿ, ಸಂಧಿವಿಗ್ರಹಿಯು ಮುಖ್ಯವಾಗಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗಳಿಗೆ ಮತ್ತು ನೆರೆ ರಾಜ್ಯಗಳೊಂದಿಗೆ ಸರಿಯಾದ ಸಂಬಂಧವನ್ನು ಏರ್ಪಡಿಸುವುದಕ್ಕೆ ಸಂಬಂಧಿಸಿದ ಅಧಿಕಾರಿಯಾಗಿದ್ದು ಅವನ ಕಾರ್ಯ ವ್ಯಾಪ್ತಿಯು ವಿವಿಧ ಬಗೆಯದಾಗಿದ್ದಿತೆಂದು ತಿಳಿಯಬಹುದು.

Sandhi-vigrahi was a high officer in the army. But the exact nature of this office is not known. It is generally believed that he was an officer concerning war and peace and is translated as a minister in charge of war and peace. Though there are several references to different types of Sandhi-vigrahi, it is difficult to understand the exact nature of their function. For, the term Lāḷa-sandhi-vigrahi is understood to be an officer in charge of war and peace for the Lāṭa (modern South Gujarat) country. Lāṭa being a part of the contemporary kingdom, he may be considered as an officer pertaining to that region. But though the term Kannada Sandhi-vigrahi is translated as Minister for war and peace in the Kannada country (EI. XVI, p.80), it cannot be known as for which particular region he was an officer, since the whole kingdom belonged to Kannada rulers.

There is another explanation. It is known that Sandhi-vigrahi used to draft inscriptions. Thus Kannada Sandhi-vigrahi could be understood to be a Sandhi-vigrahi who wrote Kannada inscriptions. But then in the same strain it is difficult to explain the term Lāḷa-Sandhi-vigrahi.

It can be however suggested that generally the office pertained to maintenance of law and order in the kingdom and maintaining proper relationship with neighboring kingdoms.

ಶ್ರೀ ಮತ್ಕನ್ನಡಸಂಧಿವಿಗ್ರಹಿ ದಂಡನಾಯಕಂ ಚಾವರಸರ್; (EI. XVI, 11, 1057; KI. IV, 22, 1025; SII. XVIII, 74, 1069; SII. XX, 74, 1112); ಈ ಪದವು ಅಸಂಖ್ಯ ಶಾಸನಗಳಲ್ಲಿ ಬರುತ್ತದೆ. This term figures in numerous inscriptions.

ಕನ್ನಡಿಗ ಮೊನೆಯಾಳು; Kannadiga-moneyāḷu: ಕನ್ನಡ ಸೈನಿಕ; Kannada Soldier; ಕನ್ನಡಿಗ ಮೊನೆಯಾಳ್ತನಂಗೆಯ್ವರಿಗೆ; (EC. VI(R), Kr.78, 1224).

ಕಪಿತ; Kapita: ಕಪ್ತಾನ; Captain; ಸಮಸ್ತ ಪರಿವಾರ ಸಮನ್ವಿತರಾಗಿ ಗೋವೆಯ [ಪೆ]ರಂಗದ ಕಪಿತನ ಮೇಲೆ ದಂಡೆತ್ತಿ ಹೋದಲ್ಲಿ ಕಪಿತ ಮೋಹರನವರು ಮಡಗೋವೆಯಲ್ಲಿ [ಬಂದು] ತಾಗಲಾಗಿ; (KI. I, 69, 1522).

ಕರಿತುರಗಭಟ; Kari-turuga-bhaṭa: ಆನೆ, ಕುದುರೆಗಳ ದಳದ ಸೈನಿಕ; Soldier in elephants squad and the

cavalry; ಕುರಿತುರಗಭಟಾಂಸ್ತತ್ರ ವೀಕ್ಷ್ಯಾಪಿ; (KI. V, 42, 1339).

ಕರಿತುರಗ ಪಟ್ಟಸಾಹಣಿ; Karituraga-paṭṭasāhaṇi: ಆನೆ ಕುದುರೆಗಳನ್ನು ಪಳಗಿಸುವ ಅಧಿಕಾರಿ; ಆನೆ ಕುದುರೆಗಳ ಮೇಲಿನ ಅಧಿಕಾರಿ; Senior Trainer of elephants and horses; Senior officer in charge of elephant squard and cavalry; (SII. XVIII, 145, 1141).

ಕರಿತುರಯ ಪಟ್ಟಸಾಹಣಿ; Karituraya-paṭṭasāhaṇi: s.a. ಕರಿತುರಗ ಪಟ್ಟಸಾಹಣಿ; Karituraga-paṭṭa-sāhaṇi;

(1) ಆನೆ ಕುದುರೆಗಳನ್ನು ಪಳಗಿಸುವಿಕೆ; Training of elephants and horses; (2) ಆನೆ ಕುದುರೆಗಳ ದಳದ ಮುಖ್ಯಸ್ಥ; Officer incharge of the cavalry and the elephant squard. (SII. XVIII, 157, 1152; EI. V, 25D, 1153).

ಕರಿತುರಗ ಸಾಹಣಿ; ಕರಿತುರಯಸಾಹಣಿ; Karituraga-sāhaṇi; Karituraya-sāhaṇi: s.a. ಸೈನ್ಯದಲ್ಲಿ ಆನೆ, ಕುದುರೆಗಳ ದಳಗಳಲ್ಲಿಯ ಸೈನಿಕ; ಅವುಗಳನ್ನು ಪಳಗಿಸುವವ; Soldier in the elephant squard and cavalry; their trainer; (EI. XVI, 86, 1147).

ಕರಿತುರಂಗ ಪಟ್ಟಸಾಹಣಿ; Kari-turanga-paṭṭasāhaṇi: s.a. ಕರಿತುರಗ ಪಟ್ಟಸಾಹಣಿ; Kari-turaga-paṭṭasāhaṇi; ಮಹಾಮಂಡಲೇಶ್ವರಂ ಕರಿತುರಂಗಪಟ್ಟಸಾಹಣಿ ಮಲ್ಲಿಯಂಣನ ಪ್ರಧಾನ; (APGAS. III, Hd.1, 1126-27).

ಕರಿತುರಗಶಿಕ್ಷಕ; Kari-turaga-sikshaka: ಆನೆ ಕುದುರೆಗಳನ್ನು ಯುದ್ಧಕ್ಕೆ ತಯಾರು ಮಾಡುವವ; ತರಬೇತುದಾರ; Trainer of war elephants and horses; (ಕು.ವ್ಯಾ.ಭಾ. ಉದ್ಯೋಗ ಪ. Ku.Vyā.Bhā. Udyōga Pa. II, 26, c.1400).

ಕರಿಹಯಾಧ್ಯಕ್ಷ; Kari-hayādhyaksha: ಆನೆ ಕುದುರೆ ದಳಗಳ ಮೇಲ್ವಿಚಾರಕ; Officer in charge of the elephant squard and cavalry; (ಕು.ವ್ಯಾ.ಭಾ.ಉದ್ಯೋಗ ಪ. Ku.Vyā.Bhā. Udyōga Pa. II, 47, c.1400).

ಕಾಪಿನ ಕಡಿತ[ಲೆ]ಕಾಱ; Kāpina kaḍita[le]kāṟa: ಖಡ್ಗಧಾರಿಯಾದ ಕಾವಲುಗಾರ; Watchman with sword; ನಡುವಿರುಪ್ಪಾಗಳ್ ಕಾಪಿನ ಕಡಿತ[ಲೆ]ಕಾಱರ್ ಮರೆದು ನಿದ್ರೆಗೆಯ್ದುದನಱೆದು ಮೆಲ್ಲನೆಯ್ದಿ; (ಧರ್ಮಾ, VI, 77, 1112) See ಕನ್ನಡ ನಿಘಂಟು; Kannaḍa Nighantu; II, p.1411, ಕಡಿತಲೆ ಪದಾತ; Cf. ಕಡಿತಲೆಯಾಳ್, ಪಂಪ ರಾ. Paṁ.Rā. IV, 9, 12th cent.

ಕಾಲಾಳು; Kālāḷu: ಕಾಲುನಡೆಯ ಸೈನಿಕ; ಕಾಲ್ದಳದ ಸೈನಿಕ; Foot soldier; Soldier of the infantry; ಎತ್ತಿದ ಕುದುರೆಯ ದಳವಂ ಸುತ್ತಿಹ ಕಾಲಾಳನಾಂಕೆಯ ಮಾಡಿ (EC. VIII(O), Sa.58, 1143); ಹಲವು ಕಾಲಾಳ್ಗಳ ಕೊಂದು; (Ibid. Sb.256, 13th cent.).

ಕಾಹಿನ ಬಂಟರು; Kāhina baṇṭaru: ಕಾವಲಿನ ಸೈನಿಕರು; The soldiers on guard; ದೇವರ ಕಾಹಿನ ಬಂಟರು ಇಬ್ಬರ್ಗ್ಗೆ; (KI. II, 16, 1122).

ಕಾಹಿನವರು; Kāhinavaru: s.a. ಕಾಹಿನ ಬಂಟರು; (ಕು.ವ್ಯಾ.ಭಾ.ವಿರಾಟ ಪ. Ku.Vyā.Bhā. Virāṭa Pa. III, 94, c.1400).

ಕುದುರೆಯ ಮೇಲಾಳು; Kudureya mēlāḷu: ಕುದುರೆಯ ದಳದ ಸೈನಿಕ, ಸವಾರ; Soldier on horse, horse rider; Soldier in the cavalry; Mounted soldier; ದಾಳಿಯಲು ಕುದುರೆಯ ಮೇಲಾಳಂ ಪಲರಂ ಕೊಂದು ಸುರಲೋಕ ಪ್ರಾಪ್ತನಾದ; (SII. XVIII, 168, 1130).

ಕೈದುಕಾರರು; Kaidukāraru: ಆಯುಧಧಾರಿ ಸೈನಿಕರು; Armed soldiers; (ಕು.ವ್ಯಾ.ಭಾ.ದ್ರೋಣ ಪ. Ku.Vyā.Bhā. Drōṇa Pa. I, 3, c.1400) (ಕೈದು = ಆಯುಧ, ಖಡ್ಗ).

ಕೋಟೆಯ ನಾಯಕ; Kōṭeyanāyaka: ಕೋಟೆಯ ಅಧಿಕಾರಿ; Chief of the fort; ಕೋಟೆಯ ನಾಯ್ಕರು ಮುಂತಾಗಿ; (EC. IV(R), Hs.33, 1430).

ಕೋಲಾಳು; Kōlāḷu: ಬಿಲ್ಲುಗಾರ; Archer; (SII. XVIII, 217, 1235).

ಖಂಡೆಯಕಾರ; Khaṇḍeyakāra: ಅಂಗರಕ್ಷಕ; ಖಡ್ಗದಾರಿ ಸೈನಿಕ; A body guard, a soldier with a sword; ತತ್ಪಾದಪದ್ಮೋಪಜೀವಿಯೆನಿಪ ಖಂಡೆಯಕಾಱ ಕಾಮೆಯನಾಯಕಂ; (SII. XVIII, 299, 1192).

ಗಜಪತಿ; Gajapati: ಸೈನ್ಯದಲ್ಲಿ ಆನೆದಳದ ಅಧಿಪತಿ; Chief of the elephant squad in the army; (APGAS. III, Gb.2, 1058; Ibid. Alampur 36, 1101).

ಗಜಸಾಹಣವೆರ್ಗ್ಗಡೆ; Gaja-sāhaṇa-verggaḍe: ಸೈನ್ಯದಲ್ಲಿ ಆನೆದಳದ ಅಧಿಕಾರಿ; Officer in the elephant squad in the army; (SII. XVIII, 82, 12th cent.).

ಗಜಸಾಹಣಿ; Gajasāhaṇi: ಸೈನ್ಯದಲ್ಲಿ ಆನೆಯದಳದ ಹಿರಿಯ ಅಧಿಕಾರಿ; Senior officer of the elephant squad in the army; (SII. XVIII, 82, 12th cent.).

ಗಡಿನಾಯಕ; Gaḍināyaka: ಗಡಿರಕ್ಷಣೆಯ ಅಧಿಕಾರಿ; Border police; Border guard; (ಧರ್ಮಾ, Dharmmā. V, 125, VII, 97, 12th cent.).

ಘರವಟ್ಟಿಗೆಯಾಳು; Gharavattigeyāḷu: ಸೈನ್ಯದ ಬೀಡಿನ ಸುತ್ತಲೂ ಇದ್ದ ಕಾವಲಿನವರು; Pickets round a camp; ಉಕ್ಕಡದಾಳ್ ಘರವಟ್ಟಿಗೆಯಾಳ್ ಪುರವಟ್ಟಿಗೆಯಾಳು ಮೇಲಕ್ಕಿ; (ಗ.ಯು. Ga.Yu. IX, 32 ವ. Pr. 10th cent.).

ಘೋಡೆಯರಾಯ; Ghōḍeya-rāya: ಕುದುರೆಯ ದಳದ ಅಧಿಕಾರಿ; Officer of the cavalry; (EI. XV, 3B, 1189; SII. XV, 609, 1225).

ಚಮೂನಾಥ; Chamūnātha: ಸೈನ್ಯದ ಮುಖ್ಯಾಧಿಕಾರಿ; Chief of the army; (APGAS. III, Gb.4, 1093; SII. XX, 115, 1146).

ಚಮೂಪ; Chamūpa: s.a. ಚಮೂನಾಥ; Chamūnātha; (SII, XX, 107, 1138; EC. VIII(O), Sb.140, 1197).

ಚಮೂಪತಿ; Chamūpati: s.a. ಚಮೂಪ; Chamūpa; (KI. V, 24, 1138; APGAS. III, Rc.12, 1168).

ಚಾಟ; Chāṭa: ರಕ್ಷಾದಳದ ಅಧಿಕಾರಿ; Policeman or soldier; ಅಚಾಟ ಭಟ ಪ್ರವೇಶ್ಯ; (EI. XXXV, 37, 819); ರಾಜಸಾಮಂತ ವಿಷಯಪತಿ ಗ್ರಾಮಭೋಗಿಕ ಪುರಿಲ್ಲಕ ಚಾಟ ಭಟ ಸೇವಕಾದೀನ್; (EI. XXIX, 14, 693).

ತಲೆನಾಯಕ; Talenāyaka: ಮುಖ್ಯ ಅಧಿಕಾರಿ, ಸೈನ್ಯದ ಮುಖ್ಯಾಧಿಕಾರಿ; Leader, commander of the army; ಕರ್ಣಂ ತಲೆ ನಾಯಕಂ; (ಗ.ಯು. Ga.Yu. 364, 10th cent.).

ತಂತ್ರಪಾಳ, ತಂತ್ರಹಾಳ; Tantrapāḷa, Tantrahāḷa: ಸೈನ್ಯದ ಪ್ರಮುಖ ಆಡಳಿತಾಧಿಕಾರಿ; Chief of the army; Administrative officer; ತಂತ್ರಪಾಳ ಚಾಮುಣ್ಡಮಯ್ಯಂ; (SII. XX, 38, 1058; Ibid. 107, 1138); ತಂತ್ರಹಾಳ ವಿಟ್ಟಯ್ಯಂಗಳು; (Ibid. XVIII, 164, 12th cent.).

ತಂತ್ರಪಾಳರಧಿಷ್ಠಾಯಕ; Tantrapāḷar-adhisṭhāyaka: ತಂತ್ರಪಾಳರ ಮುಖ್ಯಸ್ಥ; Chief of the Tantrapāḷas; ತಂತ್ರಪಾಳರಧಿಷ್ಠಾಯಕಂ ಶ್ರೀಮನ್ಮಹಾಪ್ರಧಾನಂ ಪಸಾಯಿತಂ ಸುರಿಗೆಯ ನಾಗರಸರು; (SII. XI, II, 173, 1124).

ತಂತ್ರವೆರ್ಗ್ಗಡೆ; Tantravergeḍe: s.a. ತಂತ್ರಪಾಳ; Tantrapāḷa; (EC. VII(R), Ng.64, 1165).

ತಂತ್ರಾಧಿಕಾರಿ; Tantr-ādhikāri: s.a. ತಂತ್ರಪಾಳ; Tantrapāḷa; (EI. XXXIII, 28, 10th cent.).

ತಂತ್ರಾಧಿಪ; Tantr-ādhipa: s.a. ತಂತ್ರಪಾಳ; Tantrapāḷa; (EI. XXIX, 3, 10th cent.).

ತೋಟಿಕಾಱ; Tōṭikāṟa: ಕೈಗೆ ಕೈಹಚ್ಚಿ ಯುದ್ಧಮಾಡುವವ; A hand to hand fighter; ಕಟಿಕ ತೋಟಿಕಾಱ ಮಱವೊಕ್ಕಡೆ ಕಾವ ಲಿಂಗದಹಳ್ಳಿಯ ಬಲಗೌಡನ ಮಗ; (EC. V(O), Ak.31, 1331).

ದಣಾಯಕ; ದಣ್ಣಾಯಕ; Daṇāyaka; Daṇṇāyaka: ದಂಡನಾಯಕ ಪದದ ಅಶುದ್ಧ ರೂಪ; Mistake for daṇḍanāyaka; ಕಾಲದೊಳು ಅ ರಾಯ(ರಾ) ದಣಾಯಕರ ನಿರೂಪದಿಂ (SII. VII, 373, 1476; Ibid. 228, 1512).

ದಣ್ಣಾಯಕಿತ್ತಿ; Daṇṇāyakitti: s.a. ದಂಡನಾಯಕಿತಿ; Daṇḍanāyakiti below; ಕಾಳವ್ವೆದಣ್ಣಾಯಕಿತ್ತಿಯರ ಮನೆಯ ಬಡಗಣ ಬೇಲಿಯಾದಿಯಾಗಿ; (EC. VI(O), Tk.43, 13th cent.).

ದಳದಧಿಕಾರಿ; Daḷad-adhikāri: ಸೈನ್ಯದ, ಬಹುಶಃ ಕಾಲ್ದಳದ ಅಧಿಕಾರಿ; Officer of the army, probably of the infantry; (EC. XII, Tm.71, 1537).

ದಳನಾಯಕ; Daḷa-nāyaka: s.a. ದಳದಧಿಕಾರಿ; Dalad-adhikāri; (ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. XII, 8, c.1400).

ದಳಪತಿ; Daḷapati: s.a. ದಳದಧಿಕಾರಿ; Daḷad-adhikāri; (ಕು.ವ್ಯಾ.ಭಾ. ಸಭಾ.ಪ. Ku.Vyā.Bhā. Sabhā Pa. X, 4, c.1400).

ದಳಮುಖ್ಯ; Daḷa-mukhya: ಸೈನ್ಯದ ಮುಖ್ಯಾಧಿಕಾರಿ; Chief of the army; ರಾಜಧಾನಿ ದೋರಸಮುದ್ರಕ್ಕೆ ಸೇವುಣದಳಮುಖ್ಯ ತಿಕ್ಕಮ ..... ಬಂದು ಬಿಟ್ಟಲ್ಲಿ; (EC. IX(R), Bl.430, 1276).

ದಳವಯ; ದಳವಯ್ಯ; Daḷavaya, Daḷavayya: s.a. ದಳವಾಯಿ; Daḷavāyi below; ಪ್ರತಾಪಚಕ್ರವರ್ತಿ ಮಹಾದೇವರಾಯನ ದಳವಯ ಬಲಿಗೆದೇವ; (EC. VII(O), Sk.41, 1268; Ibid. VIII(O), Tl.1254).

ದಳವಾಯಿ; Daḷavāyi: ದಳದ ಮುಖ್ಯಸ್ಥ; Chief of the army; s.a. ದಳದಧಿಕಾರಿ; Daḷad-adhikāri above; ಗಂಗನಾಯಕರ ಕುಮಾರ ದಳವಾಯಿಗಳಹ ರಂಗನಾಯಕರು; (EC. IV(R), Ch.89, 1531; SII. IV, 265, 1545; Ibid. VII, 386, 1568).

ದಳವಾಱ; Daḷavāṟa: ದಳವಾಯಿ ಪದದ ಅಶುದ್ಧ ರೂಪ; Mistake for Daḷavāyi; (EC. VII(O), Ci.65, 14th cent.).

ದಂಡನಾಥ; Daṇḍanātha: ಸೈನ್ಯದ ಮೇಲಧಿಕಾರಿ: Head of the army; (KI. V, 99, 1197; EI. XII, 32B, 1077; SII. XX, 142, 1165; ನೇ.ಪು. Nē.Pu. VIII, 66, 12th cent.).

ದಂಡನಾಯಕ; Daṇḍanāyaka: s.a. ದಂಡನಾಥ; Daṇḍanātha; (EI. VI, 11, 866; SII. XX, 15, 904-05; Ibid. XI ,I, 65, 1028; Ibid. XVIII, 65, 1059; APGAS. III, Gb.1, 1092). ಈ ಪದ ಅಸಂಖ್ಯ ಶಾಸನಗಳಲ್ಲಿ ಕಾಣಸಿಗುತ್ತದೆ; This term figures in large number of inscriptions.

ದಂಡನಾಯಕಿ, ದಂಡನಾಯಕಿತಿ; Daṇḍanāyaki, Daṇḍanāyakiti: (1) ದಂಡನಾಯಕ ಪದದ ಸ್ತ್ರೀಲಿಂಗರೂಪ; Faminine form of the word Daṇḍanāyaka; ಸೇನಾಪತಿ ದಂಡನಾಯಕನ ವಲ್ಲಭೆ ಮಹದೇವಿ ದಂಡನಾಯಕಿ; (EC. XI(O), Dg.84, 1146) (2) ಸೈನ್ಯದ ಮುಖ್ಯಾಧಿಕಾರಿಣಿ; Female head of the army; ಶ್ರೀಮನ್ಮಹಾನಾಯಕಿ ದಂಡನಾಯಕಿತಿ ರತ್ನದೇವಿಯಕ್ಕಂಗಳು; (SII. IX, I, 223, 1127) ದಂಡನಾಯಕಿತ್ತಿ ರಬ್ಬಲದೇವಿಯವರುಮಿಬ್ಬು; (SII. IX, I, 150, 1092).

ಸೈನ್ಯಾಧಿಕಾರಿಗಳಾಗಿದ್ದ ಸ್ತ್ರೀಯರ ಉದಾಹರಣೆಗಳು ತೀರ ವಿರಳ. ದಂಡನಾಯಕನ ಹೆಂಡತಿಯಾದ್ದರಿಂದ ಆಕೆಗೆ ಈ ಬಿರುದು ಇದ್ದರೂ ಇದ್ದಿರಬಹುದು; References to lady army officers is very rare. It is also likely that a lady got this title because of being the wife of a daṇḍanāyaka.

ದಂಡಪತಿ; Daṇḍapati: s.a. ದಂಡನಾಥ; Daṇḍanātha; (EI. XXXVI, 8, 10th cent.).

ದಂಡಾಧಿನಾಥ; Daṇḍādhinātha: s.a. ದಂಡನಾಥ; Daṇḍanātha; (EI. XVI, 8A, 1102; IAP(W). 22, 1117 A.D.).

ದಂಡಾಧಿಪ; Daṇḍādhipa: s.a. ದಂಡನಾಯಕ; Daṇḍanāyaka; (EC. VII(O), Sk.114, 1096; SII. XX, 107, 1138; KI. V, 99, 1187; SII. VII, 212, 1515).

ದಂಡಾಧೀಶ, ದಂಡಾಧೀಶ್ವರ; Daṇḍādhīśa, Daṇḍādhīśvara: s.a. ದಂಡನಾಯಕ; Daṇḍanāyaka; (EC. III(R), Nj.142, 8th cent.; SII. XI, I, 101, 1068;).

ದಂಡೇಶ; Daṇḍēśa: s.a. ದಂಡಾಧೀಶ; Daṇḍādhiśa; (SII. XX, 137, 1161).

ದುರ್ಗಾಧಿಪ; ದುರ್ಗಾಧಿಪತಿ; Durgādhipa, Durgādhipati: ಕೋಟೆಯ ರಕ್ಷಣಾಧಿಕಾರಿ; Commander of the fort; (APGAS. III, 4, Sedam 12th cent.) ದುರ್ಗಾಧಿಪತಿ ಮಹಾದೇವಿ; (EC. VIII(O), Sb.137, 13th cent.) ಶ್ರೀಮತು ಕಾಶ್ಯಪಗೋತ್ರದ ತೊಱಗಲೆಯ ದುರ್ಗಾಧಿಪತಿ ರಾಮಪ್ಪರಾವುತ; (EC. VII(R), Ng.91, 1520; SII. XV, 250, 1529).

ದೇಶರಕ್ಷಕ; Dēśa-rakshaka: ದೇಶರಕ್ಷಕ, ಆಡಳಿತ ವಿಭಾಗದ ರಕ್ಷಣಾದಳದ ಅಧಿಕಾರಿ; Police officer of an administrative division; (SII. XI, I, 41, 969).

ದೇಶಿಯ ದಂಡನಾಯಕ; ದೇಸಿಯ ದಂಣ್ನಾಯಕ; Dēśiya-daṇḍanāyaka; Dēsiya-dannāyaka: ಪ್ರಾದೇಶಿಕ ಸೈನ್ಯಾಧಿಕಾರಿ; Army officer of the region; (SII. XV, 58, 1184; Ibid. 147-48, 1189-90).

ನಾಯಕ; Nāyaka: ಸೈನ್ಯದಲ್ಲಿ ಒಬ್ಬ ಅಧಿಕಾರಿ; An officer in the army; ಕೊಂಗಜರಸರುಂ ಮಂಡಳಿಕ ಭೋಜನುಂ ಕಾದುವಲ್ಲಿ ಕೊಂಗಜರಸನ ನಾಯಕಂ ಚಂಡರಸ (EI. XXXVIII, 19, 1077; EC. VII(O), Sk.236, 1174) ಸಾತಳಿಗೆನಾಡ ನಾಯಕರ ಕೂಡಿಕೊಂಡು ಹತ್ತು ಸಾವಿರ ಆಳು ಸಾಸಿರ ಕುದುರೆವೆರಸಿ ನಡೆದು ಬಂದು; (EI. V, 25G, 1219).

ನಾಯಕತನ; Nāyakatana: s.a. ಅಮರನಾಯಕತನ; Amaranāyakatana above; (EC. X(O), Ci. 39, 1429; Ibid. VII(O), Sk.25, 1515; APGAS. III, Rc.9, 1521; SII. IX, II, 576, 1536).

ಪಟ್ಟಸಾಹಣ; Paṭṭasāhaṇa: ಸೈನ್ಯದಲ್ಲಿಯ ಅಧಿಕಾರ ಸ್ಥಾನ; ಸೈನ್ಯದ ತರಬೇತಿಯ ಅಧಿಕಾರ ಸ್ಥಾನ; An office in the army; An officer for training the army; ಶ್ರೀಮತ್ ಪಟ್ಟಸಾಹಣದ ಕಂಭಯನಾಯಕ; (EI. XV, 20, 1172); ಪಟ್ಟಸಾಹಣದ ಗಂಗೆಯಸಾಹಣಿಯರಳಿಯ ಐಚಯ; (EC. VII(O), Hl.55, 1257).

ಪಟ್ಟಸಾಹಣಾಧಿಪತಿ; ಪಟ್ಟಸಾಹಣಾಧೀಶ; Paṭṭasāhaṇādhipati; Paṭṭasāhaṇādhīśa: ಸೈನ್ಯದಲ್ಲಿಯ ಅಧಿಕಾರಿ, ಸೈನ್ಯದ ತರಬೇತಿಯ ಅಧಿಕಾರಿ; An officer in the army; An officer in-charge of training the army; (EI. XV, 3B, 1189; SII. XV, 166, 1222). Cf. ಸಂ. ಸಾಧನಿಕ; ಪಟ್ಟಸಾಧನಿಕ; Sk. Sādhanika, Pattasādhanika.

ಹಾಲುಮಂಡಗೆ; Hālu-maṇḍage: ಹಾಲು ಬೆರಸಿದ ಮಂಡಗೆ; Maṇḍage mixed with milk; ಶ್ರೀ ಸ್ವಯಂಭು ರಾಮೇಶ್ವರದೇವರ ಹಾಲುಮಂಡಗೆಗೆ ಹಿರಿಯ ಕೋಲ ಎಂಟುಮತರ್ಕ್ಕೆಯ್ಯಮಂ (KI. II, 24, 1167); ಹಾಲು ಮಂಡಗೆಗೆ ಮಾಣಿಕೇಶ್ವರದ ಕೋಲಲು; (SII. XX, 178, 1192); ಕಲಿದೇವರಿಗೆ ಹಾಲುಮಂಡಗೆಗೆ ಕೊಟ್ಟ ಮತ್ತರು; (SII. XX, 208, 13th cent.); ಶ್ರೀ ಕೇಶವದೇವರ ಹಾಲುಮಂಡಗೆಗೆ ಸರ್ವ್ವಬಾಧೆ ಪರಿಹಾರವಾಗಿ ಕೊಟ್ಟ ಮತ್ತ ೨; (SII. XV, 177, 1242); ಹಾಲುಮಂಡಗೆ ಮ ೧೮; (Ibid. XX, 226, 1306)

೪. ಸೇವೆಗಳು

4. SERVICES

ಅಂಗ ಭೋಗ; Anga-bhōga: ದೇವರ ವಿಗ್ರಹದ ಅಭಿಷೇಕ, ಅರ್ಚನೆ, ಹೂವು, ಆಭರಣಗಳಿಂದ ಅಲಂಕಾರ ಮುಂತಾದವು; Ceremonial bath, worship, decoration with flowers, ornaments etc., of the deity; ಶ್ರೀ ಮಾರಸಿಂಘೇಶ್ವರ ದೇವರಂಗಭೋಗಕ್ಕಂ; (SII. XX, 23, 1029).

ಅಂಗರಂಗಭೋಗ; Anga-ranga-bhōga: see ಅಂಗ ಭೋಗ, above; and ರಂಗಭೋಗ, Ranga-bhōga below; ಶ್ರೀಮಂತು ಸೋಮನಾಥದೇವರ ಅಂಗರಂಗ ಭೋಗಕ್ಕಂ; (SII. XX, 98, 1127).

ಅಂಗರಂಗವೈಭೋಗ; Angaranga-vaibhōga: s.a. ಅಂಗರಂಗಭೋಗ; Anga-ranga-bhōga; (SII. XV, 671, 15th cent.).

ಅಂಗಾಂಗಭೋಗ; Angānga-bhōga: s.a. ಅಂಗಭೋಗ; Angabhōga; ದುರ್ಗ್ಗಾದೇವತೆಯ ಅಂಗಾಂಗ ಭೋಗಾರ್ತ್ಥವಾಗಿ; (SII. XX, 199, 1240).

ಕಂಚು; Kanchu: ಒಂದು ಬಗೆಯ ಕಂಚಿನ ವಾದ್ಯ; A kind of musical instrument made of bronze; (SII. IX, II, 471, 1482).

ಕಿರುಗಾಳೆ; Kirugāḷe: ಚಿಕ್ಕ ಆಕಾರದ ಕಹಳೆ; Small musical horn; (SII. IX, II, 470, 1482).

ಕೇಸೆ; Kēse: ಒಂದು ಬಗೆಯ ವಾದ್ಯ; A kind of musical instrument; (SII. IX, II, 471, 1482).

ಜೇಗಟೆ; Jēgaṭe: ಕಂಚಿನಿಂದ ಮಾಡಿದ ವಾದ್ಯ; ಜೇಗಂಟೆ, ಜಾಗಟೆ, ಜೇಗಳೆ ಎಂದೂ ಉಕ್ತವಾಗಿದೆ; A musical instrument made of bronze; a gong; also known as Jēgaṇṭe, Jāgaṭi, Jēgaḷe etc.; (SII. IX, I, 471, 1482).

ತಾಳಮದ್ದಲೆಸೇವೆ; Tāḷa-maddale-sēve: ದೇವಾಲಯಗಳಲ್ಲಿ ತಾಳ ಮದ್ದಲೆಗಳ ಜೊತೆಗೆ ಸಂಗೀತ ಸೇವೆ; Services of music in the temple with cymbals and drums; (SII. IX, II, 662, 1556).

ದಿಂಡಿಗೆ; Diṇḍige: ಪೂಜಾಸಮಯದಲ್ಲಿ ಉಪಯೋಗಿಸುವ ಒಂದು ಬಗೆಯ ವಾದ್ಯ; A kind of musical instrument used at the time of worship; ತ್ರಿಕಾಲದ ಭೋಗವು ದಿಂಡಿಗೆವು ವಾದ್ಯವನು ಬಾರಿಸುವಂತಾಗಿ; (SII. XVIII, 271, 1304).

ಧೂಪಜೇಗಳೆ; Dhūpa-jēgaḷe: ದೇವರಿಗೆ ಧೂಪಾರತಿ ಮಾಡುವಾಗ ಬಾರಿಸುವ ಜಾಗಟೆ; A gong to be sounded at the time of offering insence to the god; ಮಸಣೋಜಂಗೆ ಧೂಪ ಜೇಗಳೆಯಂ ಬಾರಿಸಲು; (KI. II, 16, 1122).

ನಿತ್ಯಮಾಂಗಲ್ಯಶೋಭೆ; Nitya-māngalya-śōbhe: ಪ್ರತಿದಿನ ದೇವಾಲಯದಲ್ಲಿ ನಡೆಯುವ ಮಂಗಲವಾದ್ಯಗಳ ಸೇವೆ; Every day service of auspicious musical instruments in the temple; ನಿತ್ಯ ಮಾಂಗಲ್ಯಸೋಭೆಯ ಪಂಚಮಹಾಶಬ್ದಕ್ಕೆ ..... ಧವಳ ಶಂಖ ಗೀತನಾದಕ್ಕೆ; (SII. XX, 111, 1140).

ನಿಯೋಗ; Niyōga: ದೇವಾಲಯಗಳಲ್ಲಿ ವಿವಿಧ ಸೇವೆ ಸಲ್ಲಿಸುವವರು; Groups of people offering services in the temple; ಆ ದೇವರುಗಳ ಊಳಿಗಕ್ಕೆ ನಡೆವ ನಂಬಿಯರಿಗೆ ಜೀವಿತಗದ್ಯಾಣವಾಱು ಸಿಂಗಾರಿಗಳಿಗೆ ಜೀವಿತಗದ್ಯಾಣವಾಱು ಪರಿಚಾರಕರಿಗೆ ಜೀವಿತಗದ್ಯಾಣಂ ನಾಲ್ಕು ಬಾಣಸಿಗರಿಗೆ ಜೀವಿತಗದ್ಯಾಣಂ ನಾಲ್ಕು ಅಗ್ಘಣಿಯ ತಹ ಪರಿಚಾರಕರಿಗೆ ಜೀವಿತಗದ್ಯಾಣಂವೆರಡು ಅಂತು ನಿಯೋಗವೈದಕ್ಕಂ . . . . (EC. XII(O), Ck.2, 1272).

ಪಲ್ಲಕ್ಕಿಸೇವೆ; Pallakki-sēve: ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಕೂಡಿಸಿ ಗುಡಿಯ ಪ್ರದಕ್ಷಿಣೆ ಹಾಕುವ ಉತ್ಸವ; Carrying the idol of god seated in a palanquin round the temple; (SII. IX, II,662, 1556).

ಪಂಚಾಂಗಮರ್ಯಾದೆ: Panchānga-maryāde: ಪಂಚಾಂಗ ಹೇಳುವವರಿಗೆ (ವಾರ, ತಿಥಿ, ನಕ್ಷತ್ರ, ಯೋಗ, ಕರಣ) ಕೊಟ್ಟ ಭೂಮಿ ದಾನ; Gift of land to the readers of panchānga-calender; (EI. XXVII, 28, 1256).

ಪಾತ್ರಭೋಗ; Pātra-bhōga: ದೇವಾಲಯದಲ್ಲಿ ನೃತ್ಯಸೇವೆ; Services to god in the form of dance; ವಿಜಯಪುರದ . . . . .ಥದೇವರ ಪಾತ್ರಭೋಗಕ್ಕೆ ಮಾಡಿದ ಧರ್ಮ್ಮಕ್ರಮವೆಂತೆಂದಡೆ; (EC. III(R), Gu.17, 1372).

ಭೇರಿ; Bhēri: ಪೂಜೆಯ ಸಮಯದಲ್ಲಿ ಬಾರಿಸುವ ದೊಡ್ಡ ನಗಾರಿ; Kettle drum sounded at the time of worship; (KI. V, 42, 1239).

ಭೋಗ; Bhōga: ದೇವರ ಸೇವೆ; Service to the god; ವರ್ಷಂಪ್ರತಿ ಸ್ವಯಂಭುದೇವರ ಭೋಗಕ್ಕೆ ಕುಡುವ ಗದ್ಯಾಣ ಆಱು; (SII. XX, 71, 1109; EC. III(R), Gu.12, 1372).

ಮದ್ದಳೆ; Muddaḷe: ಹಲಗೆ; Musical drum; (SII. IX, II, 470,1482).

ಮಂತ್ರಪುಷ್ಪ; Mantrapushpa: ದೇವಾಲಯದಲ್ಲಿ ಪೂಜಾಸಮಯದಲ್ಲಿ ಮಂತ್ರ ಪಠಣ; Recitation of mantras at the time of worship in the temple; (SII. IX, II, 564, 1534).

ರಂಗಪೂಜೆ; Rangapūje: ದೇವಾಲಯದಲ್ಲಿ ನೃತ್ಯ ಸೇವೆ; Offering of services of dancing in the temple; ಪಂಚೋತ್ತರಸಹಿತಂ ಮಾಱುಗೊಂಡು ದಿವ್ಯ . . . . . ದಕ್ಷಿಣ ವಾರಣಾಸಿ ದಿವ್ಯತೀರ್ತ್ಥದಮೃತೇಶ್ವರದೇವರ್ಗ್ಗೆ ವ್ಯತೀಪಾತದಲು ರಂಗಪೂಜೆಗೆ; (SII. XV, 100, 1161; Ibid. IX, II, 448, 1442).

ರಂಗಭೋಗ; Rangabhōga: ದೇವಸ್ಥಾನದ ರಂಗಮಂಟಪದಲ್ಲಿ ನಡೆಯುವ ನೃತ್ಯ, ಗೀತ, ನಾಟಕ, ಮುಂತಾದ ಸೇವೆ; Dance, music, drama, etc., staged in the front hall of the temple; ಅನೇಕ ಶಾಸನಗಳಲ್ಲಿ ಬರುತ್ತದೆ; Figures in several inscriptions.

ರಂಗಶೋಭೆ; Rangashōbhe: ದೇವಾಲಯದಲ್ಲಿ ನೃತ್ಯಸೇವೆ; Service of dance in the temple; ನೃತ್ಯವಿದ್ಯಾಧರಿ ವಿಳಾಸಿನಿಯರಿಂದೆಸೆವ ರಂಗಶೋಭೆ; (SII. XX, 111, 1140).

ರಂಗಾಧಿಭೋಗ; Rangādhibhōga: s.a. ರಂಗಭೋಗ; Rangabhōga above; (SII. XX, 179, 12th cent.).

ರಂಗಾಂಗಭೋಗ; Rangānga-bhōga: s.a. ಅಂಗರಂಗ ಭೋಗ; Anga-Ranga-bhōga; (SII. XX, 163, 12th cent.).

ಶಂಖ; Śankha: ದೇವರ ಪೂಜೆಯ ಕಾಲದಲ್ಲಿ ಬಳಸುವ ಒಂದು ವಿಧದ ವಾದ್ಯ; A counch used for blowing at the time of the worship of the god; (KI. V, 42, 1239).

ಹಳಗೆ; Haḷage: ಹಲಗೆ; Tabor; ಒಂದು ವಿಧದ ಚರ್ಮದ ವಾದ್ಯ; A kind of musical instrument made of animal skin; (SII. IX, II, 470, 1482).

೫. ಪರಿಚಾರಕ ವರ್ಗ

5. SERVICE PERSONEL

ಅಡಿಗೆ ಮಾಡುವ ಬ್ರಾಹ್ಮರು; Aḍige māḍuva brāhmaru: ಅನ್ನಛತ್ರಗಳಲ್ಲಿ ಅಡಿಗೆ ಮಾಡುವ ಬ್ರಾಹ್ಮಣರು; The brāhmaṇas in-charge of cooking in the feeding houses; ಮಠದಲ್ಲಿ ಉಂಬ ಬ್ರಾಹ್ಮರು ಅಡಿಗೆ ಮಾಡುವ ಬ್ರಾಹ್ಮರು; (SII. IX, II, 417, 1377).

ಅರಣಿಗುತ್ತಗೆ; Araṇi-guttage: ಪ್ರತಿದಿನ ದೇವಾಲಯದ ತೋಟದೊಳಗಿನ ಹೂಗಳ ಮಾಲೆಗಳನ್ನು ಕಟ್ಟಿ ದೇವರಿಗೆ ಸಲ್ಲಿಸುವ ಕೆಲಸದ ಗುತ್ತಿಗೆ; A contract for daily supply of garlands to the deity, made of the flowers from the temple garden; ದೇವರ ತೋಂಟದ ಅರಣಿಗುತ್ತಿಗೆ ಬೀಚಣನು; (SII. XV, 99, 1159); ಈ ತೋಟದರಣಿಗುತ್ತಗೆತನವನಾ ದೇವರ ಬ್ರಹ್ಮಪುರಿಯ ಮಹಾಜನಂಗಳ ಕೈಯಲು ಹೊಟ್ಟೆಯ ಬಮ್ಮಣನು ಪಡೆದು ದೇವರ್ಗ್ಗೆ ನಿಚ್ಚವಿಕ್ಕುವ ಹೊಸ ಹೂವಿನ ಹಿರಿಯ ಮಾಲೆಯ ಸರ ಇಪ್ಪತ್ತನಾಲ್ಕು; (SII. XV, 454, 1165).

ಕಂಬದ ನಾಲ್ವರು; Kambada nālvaru: s.a. ಕಂಭದ ಸೂಳೆಯರು; Kambhada Sūḷeyaru; below (SII. XX, 300, 12th cent.).

ಕಂಬದ ಸೂಳೆ, ಕಂಭದ ಸೂಳೆ; Kambada sūḷe, Kambhada sūḷe: ದೇವಸ್ಥಾನದ ರಂಗಮಂಟಪದಲ್ಲಿ ಕಂಬದ ಮುಂದೆ ನಿಂತು ಸೇವೆಯನ್ನು ಸಲ್ಲಿಸುವ ನೃತ್ಯಗಾತಿ; A dancing girl offering her service standing by the side of a pillar of a temple; ಕಂಬದ ಸೂಳೆಯರೆನಿಬರಾದಡಂ; (SII. XV, 38, 1148); ಕಂಬದ ಸೂಳೆಯರ್ನ್ನಾಲ್ವರ್ಗ್ಗಂ ಮತ್ತ ೩೬; (APGAS. III, Gb.3, 1086). See ಸೂಳೆ below.

ಕಾಪಿನ ಘಟಿಯಾರ; Kāpina ghaṭiyāra: ಘಂಟೆ ಹೊಡೆಯುವ ಕಾವಲುಗಾರ; A watchman to ring the bell at regular intervals; (APGAS. III, Gb.3, 1086).

ಗಂಡುಮೇಳ; Gaṇḍu-mēḷa: ದೇವಾಲಯದಲ್ಲಿ ಸಂಗೀತಸೇವೆ ಸಲ್ಲಿಸುವ ಗಂಡಸರ ಗುಂಪು; Troupe of male musicians offering services in the temple; ಕೋವಿಲೆಯ ವಾದ್ಯದವರು ಗಂಡುಮೇಳ ಹೆಣ್ಣುಮೇಳ ಸಹ; (SII. IX, II, 668, 1559).

ಗಾಯಕಸಂಘ; Gāyaka-saṁgha: ಗಾಯಕರ ಮೇಳ; An association of musicians; (ಸೂ. ಸು. Sū.Su. V, 22, 13th cent.).

ಗಾಂಧರ್ವ್ವಿಗ; Gāndharvviga: ಗಾಯಕ, ದೇವಾಲಯದಲ್ಲಿ ಹಾಡಿನ ಸೇವೆ ಸಲ್ಲಿಸುವವ; Musician who offered services to god in the form of music; (EI. XIII, 14, 1055; KI. I, 17, 1055; SII. IX, I, 155, 1086).

ಚಾಮರವನಿಕ್ಕುವ ಹೆಮ್ಮಕ್ಕಳು; Chāmaravanikkuva hemmakkaḷu: ದೇವರಿಗೆ ಚೌರಿ ಬೀಸುವ ಸೇವೆ ಮಾಡುವ ಹೆಂಗಸರು; Women offering services of Chauri, in the temple; (SII. IX, II, 417, 1377).

ಜೋತಿಷಭ; Jotishabha: ಜೋತಿಷಿ; Astrologer; ಜೋತಿಷಭ ಚಾವುಣ್ಡಯ್ಯಙ್ಗೆ; (SII. IX, I, 60, 931).

ತಂಮಡಿ; Taṁmaḍi: ಶೈವದೇವಾಲಯದ ಪೂಜಾರಿ; Worshipper of a Śaiva temple; ಆ ತಮ್ಮಡಿಗಳು ತೆಱುವ ದೇವದಾನದರಳದೊಳಗೆ ಗ ೨೦ ನೂ; (EC. III(R), Nj.258, 1368).

ತೋಂಟಿ; Tōṇti: ದೇವಾಲಯದ ತೋಟವನ್ನು ಮಾಡುವವ; Keeper of temple garden; ತೋಣ್ಟಿಗಳ್ಗೆ ನಾಲ್ಕು ಮತ್ತರ್ ನಿವೇದ್ಯಕ್ಕೆ ನೆಲ್ಲ ಮಡಿ ಎರಡು; (SII. IX, I, 60, 931).

ದಿವಸವಳ; Divasavaḷa: ಪ್ರತಿದಿನ ದೇವಾಲಯದಲ್ಲಿ ಸೇವೆಯನ್ನು ಸಲ್ಲಿಸುವವ; Person offering services in the temple every day; ತಪ್ಪದೆ ದೇವರ್ಗ್ಗೆ ದಿವಸವಳವಿಕ್ಕುವ ಹೂವಿನ ಸರ ೧೨; (SII. XV, 99, 1159).

ದೆವಸವಳ; Devasavaḷa: s.a. ದಿವಸವಳ; Divasavaḷa; (ಪಂ. ಭಾ. Paṁ.Bhā. XII, 52 ವ, Pr. 10th cent.).

ದೇವರ ಪೂಜಾಹಾರಿ; Dēvara pūjāhāri: ಪೂಜಾರಿ, ಅರ್ಚಕ; Priest appointed for worshipping god; ದೇವರ ಪೂಜಾಹಾರಿಗೆ ಗದ್ದೆ ಕಮ್ಮ ವಿನ್ನೂಱು; (SII. IX, I, 87, 1034).

ದೇವರ ಹಾಡುವಾತ; Dēvara hāḍuvāta: ದೇವಸ್ಥಾನದಲ್ಲಿ ಗಾಯನ ಸೇವೆ ಮಾಡುವವ; A singer who offers the service of music in the temple; ದೇವರ ಹಾಡುವಾತಂಗೆ ಕಂಬ; (SII. IX, I, 296, 1176).

ದೇವರಾಳು; Dēvar-āḷu: (1) ದೇವಸ್ಥಾನದಲ್ಲಿಯ ಸೇವಕ; (2) ದೇವರ ಭಕ್ತ; (1) Temple servant; (2) Devotee; ಸ್ವಯಂಭು ದೇವರಿಗೆ ಸೋಮವಾರ ತಪ್ಪದೆ ದೇವರಾಳು ಸೋಮಯ ಕೊಟ್ಟ ಪಣವೊಂದಕ್ಕಂ; (SII. XV, 218, 1205).

ನಟ್ಟುವ; Naṭṭuva: ದೇವಾಲಯದ ನರ್ತಕ; ನೃತ್ಯಗಾರ; Dancer in the temple; ನಟ್ಟುವಂಗೆ ಮತ್ತರಯ್ದು; (EI. XIII, 14, 1055).

ಪಡಿಯರ; Paḍiyara: ಪ್ರತೀಹಾರ; Pratīhāra; ದೇವಾಲಯದ ಬಾಗಿಲು ಕಾಯುವವ; A servant at the door of a temple; ದೇವರಂಗಭೋಗಕ್ಕೆ ..... ಪಡಿಯರಂಗೆ ಮತ್ತರು ೫; (SII. IX, I, 133, 1068).

ಪಡಿಹಱ; ಪಡಿಹಾಱ; Paḍhihaṟa; Padihāṟa: s.a. ಪಡಿಯರ; Paḍiyara; ಶ್ರೀಯಮ್ರಿತೇಶ್ವರದೇವರ ಪಡಿಹಾಱ ಚಾವಣನ; (SII. XV, 122, 1173; Ibid. XV, 143, 1181). ಸಂ. ಪ್ರತೀಹಾರ; Sk. Pratīhāra.

ಪರಿಚಾರಕಗಣ; Parichāraka-gaṇa: ದೇವಾಲಯದಲ್ಲಿಯ ಪರಿಚಾರಕರ ಗುಂಪು; Group of temple servants; (ಅಜಿ.ಪು. Aji.Pu. VI, 108, Pr.993).

ಪಱೆಕಾಱ; ಪರೆಕಾರ; Paṟekāṟa; Parekāra: ದೇವಾಲಯದಲ್ಲಿ ಹಲಗೆ ಬಾರಿಸುವವ; A tabor player in the temple; (SII. IX, I, 60, 931; Ibid. 135, 1071).

ಪಂಚಾಂಗದವರು; Pañchāngadavaru: ದೇವಾಲಯದಲ್ಲಿ ಪಂಚಾಂಗವನ್ನು ಹೇಳುವವರು; Reciters of pañchānga in the temple; (EC. X(O), Bowringpet, 19, 1472).

ಪಾಡಾವಿಗ; Pāḍāviga: ದೇವಾಲಯದಲ್ಲಿಯ ಗಾಯಕ; A singer in the temple; (SII. IX, I, 155, 1086).

ಪಾಡುವರ್; Pāḍuvar: ದೇವಾಲಯದಲ್ಲಿಯ ಗಾಯಕರು; Singers in the temple; (SII. IX, I, 135, 1071).

ಪಾತ್ರ; Pātra: ದೇವಾಲಯದಲ್ಲಿಯ ನೃತ್ಯ ಸೇವೆ; Service of dancing in the temple; (SII. IX, I, 135, 1071). ಪಾತ್ರಕ್ಕೆ ಧಾರಾಪೂರ್ವಕವಾಗಿ ಪಾತ್ರದ ಕೇತವ್ವೆಯ ಜೀವಿತಕ್ಕೆ; (EC. III(R), Gu.17, 1372).

ಪಾತ್ರಿಗ; Pātriga: ದೇವಾಲಯದಲ್ಲಿ ನೃತ್ಯ ಸೇವೆಗೈಯ್ಯುವವ; Person offering the service of danne in the temple; (SII. XV, 156, 1207).

ಪಾದಮೂಲಪರಿವಾರ; Pādamūla-parivāra: ದೇವರ ಸೇವೆಯಲ್ಲಿ ತೊಡಗಿದ ಪರಿಚಾರಕ ವರ್ಗ; Attendants in the service of god; ದೇವರುಪಭೋಗಕ್ಕಂ ಪಾದಮೂಲಪರಿವಾರಕ್ಕಂ ಮಠದ ವಿದ್ಯಾದಾನಕ್ಕವೆಂದು; (SII. IX, I, 104, 1046).

ಪಾದಮೂಲಿಗಳು; Pāda-mūligaḷu: s.a. ಪಾದಮೂಲ ಪರಿವಾರ; ಯೆರ್ಮಾಳದೇವರ ಪಾದಮೂಲಿಗಳು; (SII. IX, II, 456, 1402).

ಪಾವುಳ ಪರಿವಾರ; Pāvuḷa-parivāra: ದೇವಾಲಯದಲ್ಲಿ ದೇವರ ಉಡುಪಿನ ಏರ್ಪಾಡು ಮಾಡುವವರು, ವ್ಯವಸ್ಥಾಪಕರು; Temple servants in charge of costumes of the god; (IND. 3, 1047).

ಪಾಳವಿಗ; Pāḷaviga: ಪಾಳಿಯಿಂದ (ಸರತಿಯ ಮೇಲೆ) ದೇವರ ಸೇವೆ ಮಾಡುವವರು; Offering services to the god by turns; ತ್ರಿಕಾಳಭೋಗಂ ಮಾಡುವ ಪಾಳವಿಗಳಿರ್ವ್ವರು; (APGAS. III, Gb.3, 1086; SII. IX, I, 133, 1068).

ಪಾಳಿಯವರು; Pāḷiyavaru: ದೇವಾಲಯದಲ್ಲಿ ಸರತಿಯ ಮೇಲೆ ಸೇವೆಯನ್ನು ಮಾಡುವವರು; Servants carrying out their assignments by turns; ಸಾದನೂರ ಮುರುಗದಗಳದಾ ದೇಗುಲದುಳ್ ವೋಲಗದ ಪಾಳಿಯವರಂ; (EI. XXXVIII, 3, 9th cent.).

ಪುರಾಣಿಕ; Purāṇika: ದೇವಾಲಯದಲ್ಲಿ ಪುರಾಣ ಹೇಳುವವ; Person narrating the Purāṇas in the temple; (SII. IX, II, 564, 1534).

ಪೂಜಾರಿಕೆ; Pūjārike: ಪೂಜಾರಿಯ ಕೆಲಸ; Duty of a temple priest; (HAS. XVIII, 13, 1178)

ಪೂಜಿಗ; Pūjiga: ಭಕ್ತ, ಪೂಜಾರಿ, ದೇವರ ಸೇವೆ ಮಾಡುವವ; Devotee; worshipper at the temple; ಕವಿಲೆಯ ಗೌರಿಗೆ ಮೊಗೆ ಮತ್ತ . . . . ಆ ಪೂಜಿಗಂಗೆ; (SII. XX, 300, 12th cent.).

ಪೂವಡಿಗ; Pūvaḍiga: ದೇವಾಲಯಕ್ಕೆ ಹೂವುಗಳನ್ನು ಪೂರೈಸುವವ; Person supplying flowers to the temple; (EC. III(R), Nj.258, 1368).

ಬಾಣಸಿಗ; ಭಾಣಸಿಗ; Bāṇasiga; Bhāṇasiga: ದೇವಾಲಯದ ಛತ್ರದಲ್ಲಿ ಅಡಿಗೆ ಮಾಡುವವ; A cook in a free feeding house of the temple; (APGAS. III, Gb.3, 1086).

ಬಾಜಂತ್ರಿ; Bājantri: ಬಜಂತ್ರಿ; Bajantri; ದೇವಾಲಯದಲ್ಲಿ ಪೂಜಾಸಮಯದಲ್ಲಿ ಬಾರಿಸುವ ವಾದ್ಯ; Musical pipe played at the time of worship in the temple; (HAS. XVIII, 13, 1178).

ಬಾಸಿಕಾಱ; Bāsikāṟa: ದೇವಸ್ಥಾನದಲ್ಲಿ ಕೊಳಲು ಊದುವವ; Player on flute in the temple; ಬಾಸಿಕಾಱ ಪ ೧; (SII. XV, 38, 1148). ಸಂ. ವಂಶಕಾರ; Sk. Vaṁśakāra.

ಭಾಗವತ; Bhāgavata: ದೇವಸ್ಥಾನದಲ್ಲಿ ಹರಿಕೀರ್ತನೆ ಮಾಡುವವ; A person who conducts religious discourses in the temple; (SII. IX, II, 546, 1534).

ಭಾಣಸಿತ್ತಿ (ಭಾಣಸಗಿತ್ತಿ); Bhāṇasitti (Bhāṇasagitti): ದೇವಾಲಯದ ಛತ್ರದಲ್ಲಿ ಅಡಿಗೆ ಮಾಡುವ ಸ್ತ್ರೀ; Female cook in the free feeding house of the temple; (EC. VII(O), 185, 1157).

ಭೋಗದ ಸೂಳೆ; Bhōgada sūḷe: ದೇವರ ಸೇವೆಗೆ ಇರುವ ನೃತ್ಯಗಾತಿ; A dancer in the service of god; ಭೋಗದ ಸೂಳೆಯರ್ಗ್ಗೆ ಸರ್ವ್ವಬಾಧಾಪರಿಹಾರಮಾಗೆ ಬಿಟ್ಟ ಮನೆ ಪನ್ನೆರಡು; (SII. XX, 35, 1055).

ಭೋಗಪಾತ್ರ; Bhōgapātra: ದೇವಾಲಯದಲ್ಲಿ ನರ್ತನ, ಸಂಗೀತ ಸೇವೆ ಮಾಡುವುದು; Offering of services of dance and music in the temple; (SII. IX, II, 456, 1451).

ಮದ್ದಳೆಕಾಱ; ಮದ್ದಳೆಯವ; Maddaḷekāṟa; Maddaḷeyava: ದೇವಾಲಯದಲ್ಲಿ ಪೂಜಾ ಸಮಯದಲ್ಲಿ ಮದ್ದಳೆ ಬಾರಿಸುವವ; Person playing on drum at the time of worship in the temple; ಮದ್ದಳೆಕಾಱರು ನಾಲ್ವರ್ಗ್ಗಂ; (APGAS. III, Gb.3, 1086; SII. IX, I, 155, 1086; Ibid. XX, 300, 12th cent.).

ಮಾಲಕಾಱ; ಮಾಲೆಗಾಱ; Mālakāṟa; Mālegāṟa: ದೇವಾಲಯಕ್ಕೆ ಹೂವುಗಳ ಮಾಲೆಗಳನ್ನು ಒದಗಿಸುವ ಸೇವಕ; Servant supplying flower-garlands to the temple; ಪೂನಿಱುವ ಮಾಲಕಾಱರ್ಗ್ಗೆ; (IA. X, 60, 6th cent.); ಹೂದೋಟದ ಮಾಲೆಗಾಱಗೆ; (EC. VII(O), Sk. 185, 1157).

ಮೊಖರಿ; Mokhari: ಗಾಯಕ; Singer; ಹಾಡುವ ಮೊಖರಿಗಂ; (SII. XX, 300, 12th cent.); ಮೊಖರಿಗಾಳೆಯ ವಾಸಿಕಾರ; (Ibid. XVIII, 206, 1227).

ಮೊಖರಿತಿ; Mokhariti: ಗಾಯಕಿ; Female singer; (SII. XV, 38, 1148).

ವಂಚಿಗ; Vaṁchiga: s.a. ವಂಶಿಗ; Vaṁśiga below; ವಂಚಿಗಂಗಂ ಪಡೆಕಾಱರ್ಗ್ಗಂ; (SII. IX, I, 80, 1018).

ವಂಸಕಾಱ; Vamsakāṟa: ವಂಶಕಾರ; Vaṁśakāra; s.a. ವಂಶಿಗ; Vaṁśiga; (SII. IX, I, 133, 1068).

ವಂಸಿಗ, (ವಂಶಿಗ); Vaṁsiga, (Vaṁśiga): ದೇವಾಲಯದಲ್ಲಿ ಕೊಳಲೂದುವ ಸೇವೆಯನ್ನು ಸಲ್ಲಿಸುವವ; Offering services of playing on flute at the time of worship in temples; ವಂಶಿಗರ್ಗ್ಗೆ ೨೦ ಕಮ್ಮ; (EI. XV, 21, 1028).

ವಾರಿಕಾಱ; Vārikāṟa: ಸರತಿಯಿಂದ ದೇವಾಲಯದ ವ್ಯವಸ್ಥೆಯನ್ನು ನೋಡಿಕೊಳ್ಳುವವ; Person conducting management of the temple by turns; ಇ ಧರ್ಮ ವಾರಿಕಾಱರೆತ್ತಿ ನಡಸುವರು; (SII. IX, I, 344, 1332).

ವೇಣಿಕ: Vēṇika: ವೀಣಾವಾದಕ; Player on Vīṇā; (ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. III, 51, c.1400).

ವೇಳೆಕಾಱ; Vēḷekāṟa: ಸೇವಕ; Servant; (SII. I, 118, 1057). ತ. ವೇಲೈಕ್ಕಾರನ್; Ta. Velaikkāran

ಸಂಜೆವಱೆ; Sanjevaṟe: ದೇವಾಲಯದಲ್ಲಿ ಸಂಜೆಯ ಪೂಜೆಯ ಕಾಲಕ್ಕೆ ಹಲಗೆಯನ್ನು ಬಾರಿಸುವದು; Playing on a tabor at the time of evening worship in the temple; (HAS. XVIII, 13, 1178).

ಸಾರವಣೆಯವ; Sāravaṇeyava: ದೇವಾಲಯಕ್ಕೆ ಸುಣ್ಣ ಮುಂತಾದವನ್ನು ಬಳಿಯುವವ; Person in charge of white washing of the temple; ಪೂಜಾರಿ ಸಾರವಣೆಯವರುಮಿನ್ತಿತರ್ಕ್ಕೆ; (SII. XVIII, 91, 1083).

ಸಾಸನದೆತ್ತು (ಶಾಸನದೆತ್ತು); Sāsanad-ettu, (śāsanad-ettu): ದೇವಾಲಯದ ವಸ್ತುಗಳನ್ನು ಸಾಗಿಸುವ ಎತ್ತು; Ox meant for the transport of temple goods; ಹೇರುವ ಸಾಸನದೆತ್ತು; (SII. XVIII, 381, 1278).

ಸುಂನವೆಸದವ, (ಸುಣ್ಣವೆಸದವ); Suṁnavesadava, (Suṇṇavesadava): ಸುಣ್ಣದ ಕೆಲಸದವ; ಸುಣ್ಣ ಬಳಿಯುವವ; Person meant for white washing; (APGAS. III, Gb.3, 1086).

ಸೂಳೆ; Sūḷe: ದೇವಸ್ಥಾನದಲ್ಲಿ ಪ್ರತಿದಿನ ಪೂಜೆಯ ವೇಳೆಗೆ ನೃತ್ಯ, ಸಂಗೀತಗಳ ಸೇವೆಯನ್ನು ಸಲ್ಲಿಸುವ ಯುವತಿಯರು; Young girls employed for offering services of music and dance regularly at the time of worship in temple; ಓಲಗದ ಸೂಳೆಯರರುವಗ್ಗ್ರ ಮತ್ತರಿರ್ಪ್ಪತ್ತನಾಲ್ಕು; (EI. XIII, 14, 1055).

ಸೂಳೆ ಎಂಬ ಶಬ್ದವು ಈಗ ವೇಶ್ಯೆ ಎಂಬ ಅರ್ಥದಲ್ಲಿ ಬಳಸಲ್ಪಡುತ್ತಿದೆ. ಆದರೆ ಪ್ರಾಚೀನ ಕಾಲದಲ್ಲಿ ಈ ಅರ್ಥವಿರಲಿಲ್ಲ. ದೇವಾಲಯಗಳಲ್ಲಿ ಪ್ರತಿದಿನವೂ ನೃತ್ಯ, ಸಂಗೀತಗಳ ಸೇವೆ ಸಲ್ಲಿಸುವವರಿಗೆ ಸೂಳೆ ಎಂಬ ಹೆಸರಿದ್ದಿತು. ಸೂಳೆ ಶಬ್ದವು ಸೂಳ್ ಎಂಬ ಪದದಿಂದ ಬಂದಿದೆ. ಸೂಳ್ ಎಂದರೆ, ಸರದಿ ಪ್ರಕಾರ, ಮತ್ತೆ ಮತ್ತೆ ಮಾಡುವದು ಎಂದು ಅರ್ಥ. ಈ ಅರ್ಥದಲ್ಲಿ ಈ ಪದವು ಶಾಸನಗಳು ಮತ್ತು ಸಾಹಿತ್ಯದಲ್ಲಿ ಅನೇಕ ಕಡೆಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ದೇವಾಲಯಗಳಲ್ಲಿ ಸ್ತ್ರೀಯರು ಪ್ರತಿದಿನ ಅಥವಾ ದಿನದಲ್ಲಿ ಎಷ್ಟೋಬಾರಿ ಪೂಜಾಸಮಯಗಳಲ್ಲಿ ಇಂಥ ಸೇವೆಯನ್ನು ಸೂಳ್, ಸೂಳಾಗಿ ಅಂದರೆ ಮತ್ತೆ ಮತ್ತೆ ಸಲ್ಲಿಸುತ್ತಿದ್ದುದರಿಂದ ಅವರಿಗೆ ಸೂಳೆ ಎಂಬ ಹೆಸರು ಬಂದಿತು. ದೇವಾಲಯಗಳ ರಂಗಮಂಟಪದಲ್ಲಿ ಕಂಬಕ್ಕೊಬ್ಬರು ನಿಂತು ಈ ಸೇವೆ ಸಲ್ಲಿಸುತ್ತಿದ್ದ ಕಾರಣ ಅವರಿಗೆ ಕಂಬದ ಸೂಳೆಯರು ಎಂಬ ಹೆಸರೂ ಬಂದಿತು. ಇದು ಗೌರವಾನ್ವಿತ ಹೆಸರಾಗಿದ್ದು ಅವರ ಸೇವೆಯೂ ಗೌರವಾನ್ವಿತವೇ ಆಗಿದ್ದಿತು. ಮುಂದೆ ಬರಬರುತ್ತ ಇಂಥ ಸೇವೆಗಳ ಮಹತ್ವ ಕಡಿಮೆಯಾಗುತ್ತ ಕಾಲಾನುಕ್ರಮದಲ್ಲಿ ಇದರಿಂದ ವೇಶ್ಯಾವೃತ್ತಿಗೆ ಅನುವಾದ್ದರಿಂದ ಸೂಳೆ ಎಂಬ ಪದಕ್ಕೆ ಈಗಿನ ಅರ್ಥ ಬಂದಿತು.

The word Sūḷe is now used in the sense of a prostitute. But in ancient times the word did not have this connotation. Young ladies offering services of music and dance in the temples every day were known as Sūḷe. The word can be derived from Sūḷ which means repeat, again and again, by turns, and the like. This word occurs in this sense many times in inscriptions and literature. Since these ladies used to offer these services repeatedly everyday or even many times in a day at the time of worship, they came be known as Sūḷe. Since they used to stand against the pillars in the ranga mantapa or the front hall in the temple, while offering such services, they came to be known also as Kambada Sūḷeyaru, i.e., Sūḷe standing against a pillar. These girls as well as their profession were held in respect. In due course when such services lost their importance, the profession gradually degenerated into prostitution and the term acquired the meaning as such.

ಸೂಳೆವಳ; Sūḷevaḷa: ದೇವಾಲಯಗಳಲ್ಲಿ ಗೀತ, ನೃತ್ಯಗಳ ಸೇವೆಯನ್ನು ಸಲ್ಲಿಸುವ ಸ್ತ್ರೀಯರ ಮೇಲಿನ ಅಧಿಕಾರಿ; An officer in charge of the women offering regular services of dance and music in the temple; ಶ್ರೀ ಮೂಲಸ್ಥಾನದೇವರ ಸೂಳೆವಳ ಸೋವಿನಾಯಕನ ಮಗ ಸೂಳೆವಳ ಬಸವಣಂಗೆ; (HAS. XVIII, 13, 1178).

ಸೂಳೆವಳಿಕೆ; Sūḷevaḷike: ಸೂಳೆವಳೆತನ; ಸೂಳೆವಳನ ಅಧಿಕಾರ; Office of a Sūḷevaḷa; (SII. XVIII, 82, 11th cent.).

ಹಱೆಕಾಱ; Haṟekāṟa: s.a. ಪಱೆಕಾಱ; Paṟekāṟa; ಹಲಗೆ ಬಾರಿಸುವವ; (HAS. XVIII, 13, 1178).

ಹಾಡುವ ಮೊಖರಿ; Hāḍuva mokhari: s.a. ಮೊಖರಿ; Mokhari above; (SII. XX, 300, 12th cent.).

ಹಾಡುವ ಸಮುದಾಯ; Hāḍuva samudāya: ದೇವಾಲಯದಲ್ಲಿ ಹಾಡುವವರ ಗುಂಪು; Group of singers in the temple; ಹಾಡುವ ಸಮುದಾಯವೆರಡಕ್ಕರ್ಂ; (APGAS. III, Gb.3, 1086).

ಹಾಡುವೋನ್; Hāḍuvōn: ದೇವಾಲಯದಲ್ಲಿ ಹಾಡುವವ; A singer in the temple; (SII. IX, I, 60, 931).

೬. ದಾನ-ದತ್ತಿಗಳು

6. GRANTS AND GIFTS

ಅಕ್ಷಯ ನಿಧಿ; Akshaya-nidhi: ದೇವಾಲಯಗಳಲ್ಲಿ ವಿವಿಧ ಸೇವೆಗಳಿಗಾಗಿ ಕೊಟ್ಟ ಶಾಶ್ವತ ನಿಧಿ, ಶಾಶ್ವತ ದತ್ತಿ; Permanent endowment granted for different services in the temples; ಅಕ್ಷಯನಿಧಿಧರ್ಮೇಣ ಅಕರತ್ವೇನ ಪ್ರತಿಪಾದಿತಃ; (EI. XI, 21, 9th cent.).

ಅಕ್ಷಯ ಭಂಡಾರ; ಅಕ್ಷಯನಿಧಿ ಭಂಡಾರ; Akshaya-bhaṇḍāra; Akshayanidhi-bhaṇḍāra: s.a. ಅಕ್ಷಯ ನಿಧಿ; Akshaya-nidhi ಶ್ರೀಮತ್ ಕತ್ತಮೇಶ್ವರದೇವರ ನಂದಾದೀವಿಗೆಗಳ್ ಚಂದ್ರಾರ್ಕತಾರಂ ಬಡ್ಡಿಯಿಂ ನಡೆವಂತು . . . . . . ಅಕ್ಷಯಭಂಡಾರವಾಗಿ ಸಕಲ ಭಕ್ತ ಜನಂಗಳ್; (EC. V(O), Ak.70, 1220); ಮೇಳೇಶ್ವರದೇವರಿಗಯಕ್ಷಯಭಂಡಾರವಾದ ಹೊನ್ನ ಬಡ್ಡಿಯಿಂದ; (EC. V(O), Ak.92, 1223).

ಆನಂದನಿಧಿ; Ānanda-nidhi: ದೇವಾಲಯಗಳಿಗೆ ಕೊಟ್ಟ ವಿಶಿಷ್ಟವಾದ ದತ್ತಿ; ಬಹುಶಃ ದೇವಾಲಯಗಳಲ್ಲಿಯ ವಿವಿಧ ಸೇವೆಗಳಿಗಾಗಿ ಕೊಟ್ಟ ಶಾಶ್ವತ ದತ್ತಿ; ವಿಶೇಷವಾಗಿ ವಿಜಯನಗರದ ಅರಸನಾದ ಅಚ್ಯುತದೇವರಾಯನು ಈ ದಾನವನ್ನು ಮಾಡಿದ ಉಲ್ಲೇಖಗಳು ದೊರೆಯುತ್ತವೆ; A special type of gift made for regular services in the temple. Probably it was a permanent endowment. This gift specially figures in the inscriptions of the Vijayanagara ruler Achyutadēvarāya; (SII. XV, 252, 1539; Ibid. XVIII, 283, 1539).

ಏಕಭೋಗ; ಏಕಭೋಗ್ಯ; Ēka-bhōga; Ēka-bhōgya: ಯಾವುದೇ ಒಂದು ಧಾರ್ಮಿಕ ಸಂಸ್ಥೆ ಅಥವಾ ವ್ಯಕ್ತಿಗೆ ಹಲವು ಕರಾರುಗಳ ಮೇಲೆ ಅನುಭವಿಸಲು ಬಿಟ್ಟ ಭೂಮಿ ದಾನ; Land granted for religious purpose or to an individual on certain conditions and limitations of enjoying particular right or privilege; ತ್ರಿಯಂಬಕದೇವರು ಪ್ರೀತಿಯಾಗಿ ಏಕಭೋಗವಾಗಿ ಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಧಾರೆಯನೆರದು ಕೊಟ್ಟೆವು; (EI. XVI, 15, 1414); ಸರ್ವ್ವಮಾನ್ಯೈಕಭೋಗ್ಯವಾಗಿ ಕೊಟ್ಟು; (SII. XV, 244, 1379).

ಏಕಸ್ವಾಮ್ಯ; Ēka-svāmya: ದತ್ತಿಯ ಮೇಲಿನ ಸಂಪೂರ್ಣ ಅಧಿಕಾರ; Sole right over a property; (EC. VIII(O), Tl.1424).

ಕೊಡಗಿ; Koḍagi: ದಾನ, ದತ್ತಿ; Grant; ಧಾರಾಪೂರ್ವ್ವಕವಾಗಿ ಕೊಡಗಿಯಾಗಿ ಕೊಟ್ಟು; (EC. VII(R), Ng.76, 1254)

ಘಂಟಾರೋಹಣ; Ghaṇṭārōhaṇa: ದೇವಾಲಯಕ್ಕೆ ಘಂಟೆ ದಾನ; Donation of a bell to a temple; ಶ್ರೀ ಭೀಮೇಶ್ವರದೇವರ್ಗ್ಗೆ ಘಂಟಾರೋಹಣಂ ಮಾಡಿ; (SII. IX, I, 318, 1179).

ಜನಮೇಜಯದತ್ತಿ; Janamējaya-datti: ಪೌರಾಣಿಕ ಅರಸನಾದ ಜನಮೇಜಯನು ದಾನವಾಗಿ ಕೊಟ್ಟದ್ದು; Grant made by Purānic king Janamējaya; ಜನಮೇಜಯ ದತ್ತಿಯಗ್ರಹಾರಂ ದೆಯ್ವದ ಪೊಸವೂರು; (SII, XVIII, 152, 1149); ಗದಗ ಎಂಬ ಗ್ರಾಮವು ಜನಮೇಜಯದತ್ತಿ ಅಗ್ರಹಾರ ಎಂದು ಶಾಸನಗಳಲ್ಲಿ ಹೆಸರಾಗಿದೆ. ಅವನು ಸರ್ಪಯಾಗ ಮಾಡುವಾಗ ಋತ್ವಿಜರಿಗೆ ಈ ಅಗ್ರಹಾರವನ್ನು ದಾನವಾಗಿತ್ತನೆಂಬ ಐತಿಹ್ಯ ಶಾಸನಗಳಲ್ಲಿ ಉಕ್ತವಾಗಿದೆ; A place called Gadag is mentioned in inscriptions as Janamējeya-datti-agrahāra. It is stated that Janamējaya gave this agrahāra to the priests at the sacrifice, sarpayāga, performed by him; ಕ್ರತುಕೋ ನಾಮ ಮಹಾಗ್ರಹಾರಃ . . . . . . ಮಹಾರಾಜ ಜನಮೇಜಯೇನ ಸರ್ಪಯಾಗೇ . . . . ಬ್ರಾಹ್ಮಣೇಭ್ಯೋ ದತ್ತಃ (SII. XV, 159, 1213).

ತಳಭೋಗ; Taḷabhōga: ದೇವಾಲಯದ ಉಪಯೋಗಕ್ಕಾಗಿ ಕೊಟ್ಟ ಭೂಮಿದಾನ; Land granted for the maintenance of a temple; (SII. XVIII, 253, 1269). ಸಂ. ಸ್ಥಳಭೋಗ; Sk. Sṭhala-bhōga.

ತುಲಾಪುರುಷ; Tulāpurusha: s.a. ತುಲಾಪುರುಷ ಮಹಾದಾನ; Tuḷapurusha-mahadana below; (SII. IX, II, 500, 1515).

ತುಲಾಪುರುಷ; ತುಳಾಪುರುಷ ಮಹಾದಾನ; Tulāpurusha; Tuḷāpurusha-mahādāna: ಮನುಷ್ಯನು ತನ್ನ ತೂಕದಷ್ಟು ಭಂಗಾರ, ಮುತ್ತು, ರತ್ನಾದಿಗಳನ್ನು ದೇವರಿಗೆ ದಾನಕೊಡುವುದು; Grant to the god, of gold and other precious articles equal to one's weight.

ತುಲಾ, Tulā = ತಕ್ಕಡಿ, Weighing instrument; ತುಳಾಪುರುಷ ಮಹಾದಾನ ಹಿರಣ್ಯಗರ್ಬ್ಬತ್ರಯಾಧಿಕ ದಾನ; (EC. VIII(O), Tl.192, 1103; SII. IX, II, 500, 1513).

ದೇವಗಾಣ; Dēvagāṇa: ದೇವರ ನಂದಾದೀವಿಗೆಯ ಸಲುವಾಗಿ ಮುಡುಪಿಟ್ಟ ಗಾಣ; An oil mill dedicated for the supply of oil for the perpetual lamp in the temple; (SII. IX, I, 231, 1134).

ದೇವಗೆಯ್; Dēvagei: ದೇವರಿಗೆ ಬಿಟ್ಟ ಒಕ್ಕಲುತನದ ಭೂಮಿ; Agricultural land granted to the god; (SII. IX, I, 296, 1176).

ದೇವದತ್ತಿ; Dēvadatti: ದೇವಾಲಯಕ್ಕೆ ಕೊಟ್ಟ ದಾನ; Grant made to the temple; ಮಾರ್ತ್ತಣ್ಡೇಶ್ವರದೇವರಿಗೆ ದೇವದತ್ತಿಯಾಗಿ; (EC. XI(O), Dg.135, 1110).

ದೇವದಾನ; Dēvadāna: ದೇವಾಲಯಕ್ಕೆ ಬಿಟ್ಟ ದತ್ತಿ; Donation made to a temple; (EC. XII(O), Ck.2, 1261; Ibid. II, 456, 1282; SII. IX, II, 701, 1512).

ದೇವದಾಯ; Dēvadāya: s.a. ದೇವದಾನ ; Dēvadāna; (EC. V, Bl.115, 1221-22; SII. IX, I, 506, 1516).

ದೇವಧನ; Dēvadhana: ದೇವಸ್ಥಾನದ ಭೂಮಿಯ ಉತ್ಪನ್ನ; The income from the land gifted to the temple; ದೇವಿಯ ಕಂಮತದ ಭತ್ತ ದೇವಧನ ಮಾಱಿದಡಂ ಯಾಯಮಾಂನ್ಯ ; (SII. XVIII, 381, 1278).

ದೇವಭಾಗ; Dēvabhāga: ಉತ್ಪನ್ನದಲ್ಲಿ ದೇವಾಲಯದ ಭಾಗ; Share of the temple in the income; (SII. XX, 23, 1029).

ದೇವಭೋಗ; Dēvabhōga: ದೇವಸ್ಥಾನದ ವಿನಿಯೋಗಕ್ಕಾಗಿ ದತ್ತಿ ಬಿಟ್ಟ ಕರವಿಲ್ಲದ ಭೂಮಿ; Rent free land granted to the temple; ತನ್ನ ವಿಷ್ಣುಗ್ರಿಹಕ್ಕೆ ಕೊಟ್ಟಂ ಇ ದೇವಭೋಗವಂ; (SII. IX, I, 28, 959).

ದೇವಭೋಗಮಾನ್ಯ; Dēvabhōga-mānya: s.a. ದೇವಭೋಗ; Dēvabhōga; ಮತ್ತ ಕೊಡಂಗೆಯಿಂ ದೇವಭೋಗಮಾನ್ಯಂ ಬೆಸವೆಸನೆನ್ನದೆ ಸಕಲಸಾಸಿರ್ವ್ವರು; (KI. II, 8, 1072).

ದೇವಮಾನ್ಯ; Dēvamānya: s.a. ದೇವಭೋಗ; Dēvabhōga; ಕಡುಗನಾಡ ಗಡಿಯ ಆಲತೂರನು ದೇವಮಾನ್ಯವಾಗಿ; (EC. III(R), Gu.24, 1430).

ದೇವಸ್ವ; Dēvasva: ದೇವರಿಗೆ ಕೊಟ್ಟ ದತ್ತಿ; Grants given to god; (SII. IX, II, 465, 1472).

ದೈವಶಾಸನ; Daiva-śāsana: ಧಾರ್ಮಿಕ ಉದ್ದೇಶಗಳಿಗಾಗಿ ದತ್ತಿಗಳನ್ನು ಕೊಟ್ಟ ವಿಷಯಗಳನ್ನು ವಿವರಿಸುವ ಶಾಸನ; Document recording grants for religions porposes; (EC. IX(O), Bn.12, 13th cent.). ಈ ಶಾಸನವು ತಮಿಳು ಭಾಷೆಯಲ್ಲಿದೆ. This inscription in Tamil langauge.

ಧರ್ಮಕೊಡಗೆ; Dharma-koḍage: ಧಾರ್ಮಿಕ ಕಾರ್ಯಗಳಿಗಾಗಿ ಕೊಟ್ಟ ದತ್ತಿ; Grant made for religious purposes; (EC. III(R), Nj.277, 1517).

ಧರ್ಮದ ಕಲ್ಲು; Dharmada kallu: ಧರ್ಮಶಾಸನ; ಧಾರ್ಮಿಕ ದತ್ತಿಯ ಶಿಲಾಶಾಸನ; Dharma-śāsana; Stone inscription relating to religions grants; (SII. VII, 213, 12th cent.).

ಧರ್ಮದ ಮೊದಲ ದ್ರವ್ಯ; Dharmada modala-dravya: ಧರ್ಮದ ಸಲುವಾಗಿ ಮೊದಲಿಗೆ ಮುಡುಪಿಟ್ಟ ಹಣ; Money reserved for religious purposes; ವರ್ಷಂಪ್ರತಿ ಕುಡುತಿರ್ಪ್ಪ ಗದ್ಯಾಣ ೧೬ ಇನ್ತೀ ಧರ್ಮ್ಮದ ಮೊದಲ ದ್ರವ್ಯಮನೊಡೆಯರುಂ ಬೇಡಲಾಗದು ಅವರುಂ ಕುಡಲಾಗದನ್ತೀ ಧರ್ಮಮಂ; (KI. V, 17, 1118).

ಧರ್ಮವಣ್ಣಿಗೆ; Dharmavaṇṇige: ಧಾರ್ಮಿಕ ಕಾರ್ಯ; Religious deed; ಸಮಸ್ತ ಪ್ರಾಣಿಗಳ್ಗೆ ಬಿಟ್ಟ ಧರ್ಮವಣ್ಣಿಗೆಗೆ ಕಂಬ ೪೫೦; (SII. IX, I, 296, 1176).

ಧರ್ಮವತ್ತಳೆ; Dharma-vattaḷe: ದಾನಶಾಸನ; Inscription relating to grants; (SII. IX, I, 175, 1107).

ಧರ್ಮಶಾಸನ; Dharma-śāsana: ಧಾರ್ಮಿಕ ಉದ್ದೇಶಗಳಿಗಾಗಿ ಕೊಟ್ಟ ದತ್ತಿಯ ವಿಷಯಕವಾದ ಶಾಸನ; Inscription recording the grant for religious purpose; ಕಾಮೇಶ್ವರದ ಧರ್ಮಶಾಸನದ ದತ್ತಿಯಂ; (SII. IX, I, 60, 931).

ಧರ್ಮಶಾಸನಪತ್ರ; Dharma-śāsana-patra: s.a. ಧರ್ಮಶಾಸನ; Dharma-śāsana; ಬಹುಶಃ ತಾಮ್ರ ಪತ್ರ

ಶಾಸನ; Probably a copper-plate inscription; (EC. VII(O), Sa.145, 1490).

ಧರ್ಮಸಾಧನ; Dharma-sādhana: s.a. ಧರ್ಮಶಾಸನ; Dharma-sāsana; (SII. VII, 15, 1509).

ಧರ್ಮಸ್ಥಿತಿ; Dharma-sthiti: ಧಾರ್ಮಿಕ ದತ್ತಿಯ ವಿವರಗಳು; Details of grant pertaining to religious purposes; ಸಮೆಯಮುಮಿಟ್ಟು ಬಿಟ್ಟ ಧರ್ಮ್ಮಸ್ಥಿತಿಯ ಕ್ರಮಮೆಂನ್ತೆನ್ದಡೆ; (EC. III(R), Nj.215, 1032).

ಧರ್ಮ್ಮಾದಾಯ; Dharmmādāya: ಧರ್ಮಕಾರ್ಯಗಳನ್ನು ನಡೆಸುವ ಸಲುವಾಗಿ ಕೊಟ್ಟ ದತ್ತಿ; Religious endowment; ಶ್ರೀಮತು ಮಹಾರಾಜ ಚಿಕ್ಕರಾಯ.... ರಾಜಯ್ಯನವರು ಕೊಟ್ಟ ಧರ್ಮ್ಮಾದಾಯ; (EC. X(O), Kl. 2, 1452)

ಪರಮೇಶ್ವರದತ್ತಿ; Paramēśvara-datti: ಪರಮೇಶ್ವರನಿಂದ ಕೊಟಲ್ಪಟ್ಟದ್ದೆಂದು ತಿಳಿಯಲಾದ ದತ್ತಿ; ದೇವರಿಂದಲೇ ಕೊಡಲ್ಪಟ್ಟ ದತ್ತಿ; Grant supposed to have been given by god Paramēśvara himself; ಪರಮೇಶ್ವರ ದತ್ತಿ ಮಾಡಿ ಬಿಡಿಸಿದ ಗ್ರಾಮ; (EC. IX(R), Bl.106, 1136).

ಪರಿಚಾರಕವೃತ್ತಿ; Parichāraka-vṛitti: ದೇವಾಲಯದ ಪರಿಚಾರಕರಿಗೆ ಕೊಟ್ಟ ದತ್ತಿ; Grants made for the attendants of the temple; (EC. VI(O), Cm.137, 1130).

ಪಾರಮೇಶ್ವರದತ್ತಿ; Pārameśvaradatti: s.a. ಪರಮೇಶ್ವರದತ್ತಿ; Paramēśvaradatti; (SII. XI, II, 119, 948).

ಪೂಜಾರಿವೃತ್ತಿ; Pūjāri-vṛitti: ದೇವರ ಪೂಜಾರಿಗೆ ಕೊಟ್ಟ ದತ್ತಿ; Grants made for the worshipping priest of the deity; (EC. VI(O), Cm.137, 1130).

ಪೂರ್ವಧರ್ಮೋತ್ತಾರ; Pūrva-dharmōttāra: ಮೊದಲಿನಿಂದ ನಡೆದು ಬಂದ ದತ್ತಿ; Grant in vogue since long; ಪೂರ್ವಧರ್ಮ್ಮೋತ್ತಾರದ ಹನ್ನೊಂದು ಹೊಂನಿಂದ; (KI. I, 58, 1446).

ಪೂರ್ವಮರ್ಯಾದೆ; Pūrva-maryāde: ಮೊದಲಿನಿಂದ ನಡೆದು ಬಂದ ನಿಯಮಾವಳಿ; Rules and regulations already in vogue; (SII. XV, 547, 1184; Ibid. IX, II, 457, 1455).

ಪೂರ್ವವೃತ್ತಿ; Pūrva-vṛitti: ಮೊದಲೇ ಕೊಟ್ಟ ದತ್ತಿ; Grant made earlier; (SII. XVIII, 50, 1034; Ibid. XV, 83, 1129).

ಪೂರ್ವಶಾಸನಮರ್ಯಾದೆ; Pūrva-śāsana-maryāde: ಪೂರ್ವಕಾಲದಿಂದ ಶಾಸನದ ಮೂಲಕ ಬಂದ ಅಧಿಕಾರ; Right conferred from earlier days through a record; (SII. XX, 60, 1088).

ಬಲಿ; Bali: ದಾನ; Offering as a gift; ಶ್ರೀ ಗುಂಮಟನಾಥಸ್ವಾಮಿಯ ಪೂಜೆಗೆ ಸಂಪಗೆಯ ಮರನ ಬಲಿ ಸಮರ್ಪಿಸಿದ ಪಲದಿಂದ; (EC. II(R), 353,14th cent.).

ಭಟ್ಟಗುತ್ತಿಕೆ; Bhaṭṭaguttike: ದೇವಾಲಯದಲ್ಲಿಯ ಸೇವೆಯ ಗುತ್ತಿಗೆ; Monopoly of temple service; ದೇವರ ಭಟ್ಟಗುತ್ತಿಕೆಯ ನಿಯೋಗ ೧ಕೆ ಜೀವಿತ ಗ ೫; (EC. VII(R), Ng.76, 1284).

ಭಾಣಸುವೃತ್ತಿ; Bhāṇasu-vṛitti: ದೇವಾಲಯದ ಛತ್ರದಲ್ಲಿ ಅಡುಗೆ ಮಾಡುವವರಿಗೆ ಕೊಟ್ಟ ದತ್ತಿ; Grants made for the cooks in the free feeding house of the temple; (EC. VI(O), Cm.137, 1130).

ಮಹಾಭೂತಘಟದಾನ; Mahābhūta-ghaṭa-dāna: ಒಂದು ವಿಧದ ದಾನ; A type of gift; (EC. III(R), Gu.26, 1506).

ಮಾನ್ಯಗ್ರಾಸ; Mānyagrāsa: ಧರ್ಮಾರ್ಥವಾಗಿ ಕೊಡುವ ಆಹಾರ; Providing free food; ಮಾನ್ಯಗ್ರಾಸಕ್ಕೆ ಕೊಂಬ ೫೦ ವರಹ; (SII. IX, II, 664, 1556).

ಮುಡುಪು; Muḍupu: ದೇವರಿಗೆ ಇಟ್ಟ ಮೀಸಲು; Gift meant for god; (SII. IV, 277, 1513).

ರತ್ನಧೇನುಮಹಾದಾನ; Ratna-dhēnu-mahādāna: ರತ್ನದ ಆಕಳನ್ನು ದಾನವಾಗಿ ನೀಡುವ ವಿಧಿ; Gifting away a cow made of precious gems; (SII. IX, II, 498, 1513; See also SII. VI, 248, 1437; Also HD, II, Pt.II, p.877).

ರಾಜದತ್ತಿ; Rāja-datti: ದೇವಸ್ಥಾನಕ್ಕೆ ರಾಜನು ಕೊಟ್ಟ ದತ್ತಿ; Endowment to the temple by a king; ಗುರುಭಕ್ತ ದೇವರ ಪಾದಪ್ರಕ್ಷಾಲನಂ ಗೆಯ್ದು ಧಾರಾಪೂರ್ವ್ವಕಂ ಮಾಡಿ ರಾಜದತ್ತಿಯಾಗಿ ಸರ್ವ್ವನಮಸ್ಯಂ ಮಾಡಿ ಕೊಟ್ಟ ಕೆಯಿ ಮತ್ತರು ಹಂನೆರಡು; (EI. XIX, 38B, 1179).

ಶೃಂಗಾರವೃತ್ತಿ; Śringāra-vṛitti: ದೇವಾಲಯವನ್ನು ಅಲಂಕರಿಸುವವನಿಗೆ ಕೊಟ್ಟ ದತ್ತಿ; Grants made to the temple decorator; (EC. VI(O), Cm.137, 1130).

ಶ್ರೀಮಾನ್ಯ; Śrīmānya: ದೇವಾಲಯಕ್ಕೆ ಬಿಟ್ಟದತ್ತಿ, ಉಂಬಳಿ; Grant given to a temple; (SII. XX, 130, 1187).

ಷೋಡಶಮಹಾದಾನ; Shōḍaśa-mahādāna: ಹದಿನಾರು ವಿಧದ ದಾನಗಳು; Sixteen types of gifts; (EC. III(R), Gu.26, 1506; See HD, Vol.II, 869-70).

ಸುರದತ್ತಿ; Suradatti: ದೇವರಿಗೆ ದಾನವಾಗಿ ಕೊಟ್ಟ ಭೂಮಿ; Land granted to a temple; (SII. IX, I, 51, 8th cent.).

ಹಸ್ತೋದಕ; Hastōdaka: ದಾನವನ್ನು ಕೊಡುವಾಗ ಕೈಯಿಂದ ನೀರು ಬಿಟ್ಟು ದಾನ ಖಚಿತಗೊಳಿಸುವ ವಿಧಾನ; Pouring of water over the palm to indicate the confirmation of a donation; ಅನೇಕ ಪಣ್ಡಿತರ ಸನ್ನಿಧಿಯೊಳು ಪಾದ ಪ್ರಕ್ಷಾಳನೆಯಂ ಮಾಡಿ ಹಸ್ತೋದಕಂ ಮಾಡಿ ಕೊಟ್ಟೆವು; (EC. XI(O), Dg.113, 1160).

೭. ದೇವಾಲಯಗಳಿಗೆ ಸಂಬಂಧಿಸಿದ ಇತರ ಪದಗಳು

7. OTHER TERMS RELATING TO TEMPLES

ಅಂಬಲಿಯ ಸತ್ರ; Aṁbaliya satra: ದೇವಾಲಯದಲ್ಲಿ ಉಚಿತವಾಗಿ ಅನ್ನ ನೀಡುವ ಛತ್ರ; Free feeding house in the temple; ಪಸಿದು ಬಂದವರ್ಗ್ಗಂಬಲಿಯ ಸತ್ರವಂ ನಡೆಯಿಸುವರು; (SII. XX, 101, 1129).

ಕಲ್ಲುಮಸೀತಿಯ ದೇವಸ್ಥಾನ; Kallu-masītiya dēvasthāna: ಕಲ್ಲಿನಿಂದ ಕಟ್ಟಿದ ಮಸೀದೆ; A mosque built of stone; ರಂಗೈನಾಯಕಯ್ಯನವರು ಬಾಬುಸೆಟ್ಟಿಯರು ಸಿಂದಗಟ್ಟದಲ್ಲಿ ಕಟಿಸ್ತ ಒಳಕೆರಿಯ ಕಲ್ಲ ಮಸೀತಿಯ ದೇವಸ್ಥಾನಕ್ಕೆ ಧರ್ಮವಾಗಬೇಕೆಂದು ನಾಉ ಸರ್ವಮಾನ್ಯವಾಗಿ ಬಿಟ್ಟ ಶಿವಪುರದ ಗ್ರಾಮ ೧; (EC. VI(R), Kr. 92, 1537) ಮಸೀದಿಯನ್ನು ದೇವಸ್ಥಾನ ಎಂದು ಕರೆದುದು ಗಮನಾರ್ಹವಾಗಿದೆ. Calling a mosque as dēvasthāna is noteworthy.

ಕಳಸ; Kaḷasa: ಕಲಶ, ದೇವಾಲಯದ ಶಿಖರದ ತುದಿ; Pinacle of the tower of the temple; (SII. IX, II, 499, 1514).

ಕೆಸರ್ಕ್ಕಲ್; ಕೆಸರ್‌ಕಲ್; Kesar-kal: ಕೆಸರು ಮತ್ತು ಕಲ್ಲು, ಅಡಿಪಾಯ; Mud and stone, Foundation; ನಾಜೆಸೆಟ್ಟಿ ಸಹದೇವಯ್ಯಂ ತಂನ ದೇಗುಲಕ್ಕೆ ಕೆಸರ್ಕ್ಕಲ್ಲಿಕ್ಕಿದಂದ ಜೀರ್ಣೋದ್ಧಾರಣ ಸತ್ರಚರುಕ ನಿಮಿತ್ತದಿಂ; (SII. XVIII, 44, 1019); ಉರ್ವ್ವೀತಿಳಕಮೆನಿಸಿದ ಪಂಚವಸದಿಗುನ್ನತಮಪ್ಪ . . . . ಕೆಸರ್ಕ್ಕಲ್ಲಿಕ್ಕಿದ ರವರಾಚಾರ್ಯ್ಯಾವಳಿಯದೆನ್ತೆನೆ; (EC. VIII(O), Na.35, 1077).

ಕೋವಿಲೆ; Kōvile: ಗುಡಿ, ದೇವಸ್ಥಾನ; Temple; (SII. IX, II, 668, 1559). ತ. ಕೋವಿಲ್; Ta. Kōvil.

ಖಂಡಸ್ಫುಟಿತ; Khaṇḍa-sphuṭita: ದೇವಾಲಯದ ಒಡೆದ, ಮುರಿದ ಭಾಗಗಳನ್ನು ದುರಸ್ತಿ ಮಾಡುವುದು; Effecting repairs to the broken and damaged parts of the temple; (SII. IX, I, 204, 1122); ಈ ಪದ ಅಸಂಖ್ಯ ಶಾಸನಗಳಲ್ಲಿ ಸಿಗುತ್ತದೆ. This term figures in numerous inscriptions.

ಗರ್ಬ್ಬಗೃಹ; Garbbagṛiha: ಗರ್ಭಗೃಹ; ದೇವರ ಮೂಲ ಮೂರ್ತಿ ಇರುವ ಗುಡಿಯ ಒಳಭಾಗ; The inner room where the main idol of the god is installed; Sanctum sanctorum; (SII. XX, 84, 1123).

ಗಂಡಭೇರುಂಡಸ್ತಂಭ; Gaṇḍabhēruṇḍa-sthaṁbha: ಗಂಡಭೇರುಂಡ ಚಿಹ್ನವುಳ್ಳ ದೇವಸ್ಥಾನದ ಮುಂಭಾಗದಲ್ಲಿರುವ ಕಂಭ; Stone pillar with the figure of the mythical bird Gaṇḍabhēruṇḍa, in front of the temple; ಶ್ರೀಮಜ್ಜಗದೇಕಮಲ್ಲೇಶ್ವರ ದೇವರ ಮುನ್ತೆ ಗಂಡಭೇರುಂಡಸ್ತಂಭಮಂ ನಿಲಿಸಿ; (EC. VII(O), Sk.151, 1047).

ಗ್ರಾಸ; Grāsa: ದೇವಾಲಯಕ್ಕೆ ಬರುವ ಅತಿಥಿ, ಯಾತ್ರಿಕ, ಸಂನ್ಯಾಸಿ ಮುಂತಾದವರಿಗೆ ದೇವಾಲಯದಲ್ಲಿ ನೀಡುವ ಆಹಾರ; Free food for guests, visitors, ascetics etc., in the temple; ಮಾನಸರ ಅತಿಥಿ ಅಭ್ಯಾಗತ ತಪೋಧನರ ಗ್ರಾಸಕ್ಕಂ; (SII. IX, I, 204, 1122).

ಚೈತ್ಯಾಲಯ; Chaityālaya: ಬಸದಿ; Jaina temple; (ಪಂ.ರಾ. Paṁ.Rā. VII, 47, ಪ. Pr. 12th cent.;

EC. VIII(O), Na. 37, 1147); ಈ ಪದ ಅಸಂಖ್ಯ ಶಾಸನಗಳಲ್ಲಿ ಬರುತ್ತದೆ. This term figures in numerous inscriptions.

ಜಲಮಂಟಪ; Jala-maṇṭapa: ನೀರಿಂದ ಸುತ್ತುವರಿಯಲ್ಪಟ್ಟ ಮಂಟಪ; ದೇವಾಲಯದ ಮುಂದಿನ ನೀರಿನ ಪುಷ್ಕರಿಣಿಯ ನಡುವೆ ಇರುವ ಮಂಟಪ; A maṇḍapa surrounded by water. A structure in the middle of the pushkariṇi pond in front of the temple; ಜಲಮಂಟಪದ ಶ್ರೀ ನರಸಿಂಹದೇವರ್ಗ್ಗೆ ಆನಂದಪಾಳದೇವದಂಣ್ನಾಯ್ಕರು ಜೀರ್ಣ್ನೋದ್ಧಾರವಾಗೆ ಮಾಡಿಸಿದ ರಂಗಮಂಟಪ; (SII. XVIII, 51, 1033).

ಜೀರ್ಣೋದ್ಧಾರ; Jīrṇōddhāra: ದೇವಾಲಯದಲ್ಲಿ ಜೀರ್ಣವಾದ ಭಾಗವನ್ನು ಕೆಡವಿ ನವೀಕರಿಸುವದು, ದುರಸ್ತಿ; Renovation of the dilapidated parts of the temple; Repairs; (SII. IX, I,199,1120); ಈ ಪದ ಅಸಂಖ್ಯ ಶಾಸನಗಳಲ್ಲಿ ಬರುತ್ತದೆ. This term figures in numerous inscriptions.

ತೇರಬೀದಿ; Tēra-bīdi: ತೇರು ಹಾಯುವ ಬೀದಿ; A street through which the temple cart passes; (SII. IX, II, 500, 1515); ತೇರಬೀದಿಯ ಶ್ರೀ ಪರಾಂಕುಶ ಮಂಟಪದ ಮುಂದೆ; (Ibid, 668, 1559)

ದಾನಶಾಲೆ; Dānaśāle: ಧರ್ಮಶಾಲೆ; Free feeding house; ಶ್ರೀಶಂಖಜಿನೇಂದ್ರನಿತ್ಯನೈಮಿತಿಕಪೂಜಾನಿಮಿತ್ತಂ ತದ್ದಾನಶಾಲಾಪ್ರವರ್ತನಾರ್ತ್ಥಂ; (SII. XX, 6, 730); ದೇವರ ಅಷ್ಟವಿಧಾರ್ಚನೆ ಆಹಾರದಾನ ನಡವನ್ತಾಗಿ ದಾನಶಾಲೆಗೆ; (KI. V, 21, 1125).

ದೀಪದಾನಸ್ತಂಭ; Dīpadāna-staṁbha: s.a. ದೀಪಮಾಲೆಕಂಬ; Dīpamāle-kaṁba below; (SII. IX, I, 453, 1450).

ದೀಪಮಾಲೆ ಕಂಬ; Dīpamāle-kaṁba: ದೇವಾಲಯದ ಎದುರಿಗೆ ನಿಲ್ಲಿಸುವ ಸಾಲುದೀಪ ಹಚ್ಚುವ ಕಂಬ; Pillar erected in front of the temple for lighting a series of oil lamps; (EC. VII(R), Ng.41, 15th cent); ಮಾಚರೂಶಸೆಟ್ಟಿಯರು ಮಾಡಿಸಿದ ದೀಪಮಾಲೆಯ ಕಂಭಕ್ಕೆ ಮಂಗಳಮಹಾಶ್ರೀ; (EC. IX(O), Bn.16, 1421).

ದೇವಉಗ್ರಾಣ; Dēva-ugrāṇa: ದೇವಸ್ಥಾನದಲ್ಲಿ ಸಾಮಾನುಗಳನ್ನು ಸಂಗ್ರಹಿಸಿಡುವ ಕೋಣೆ; Store-house of the temple; (SII. IV, 274, 1530).

ದೇವತಾಪ್ರಸಂಗ; Dēvatā-prasanga: ದೇವಾಲಯದಲ್ಲಿ ನಡೆಸುವ ಪುರಾಣಪಠಣ ಇತ್ಯಾದಿ ವಿಶೇಷ ಕಾರ್ಯಕ್ರಮಗಳು; Special programmes conducted in the temple such as recitation of purāṇa etc.; ಮಹಾವಡ್ಡೋಲಗಂಗೊಟ್ಟಿರ್ದ್ದು ದೇವತಾಪ್ರಸಂಗ ಮಾದುದೊನ್ದು ಪ್ರಸ್ತಾವದೊಳ್; (SII. IX, I, 128, 1065).

ದೇಹಾರ; Dēhāra: ದೇವಗೃಹ; ದೇವಾಲಯ; A temple; ದೇಹಾರದ ಒಡ್ಡೋಲಗದ ಧರ್ಮ್ಮಪ್ರಸಂಗದಲು; (EC. V(O), Ak.123, 1234); ದೇಹಾರದ ಮನೆಗೆ ಪೋಗಿ ದೇವರಂ ಕಂಡಿಂ ಬಳಕ್ಕೆ (ನೀ.ವಾ.ಕ.ವ್ಯಾಖ್ಯಾನ; Nī.Vā. Kan.Comm. 7, 23; ವ್ಯಾಖ್ಯಾನಕಾರನಾದ ನೇಮಿನಾಥನು ದೇವಾತಾಗಾರ ಎಂಬ ಶಬ್ದಕ್ಕೆ ದೇಹಾರದ ಮನೆ ಎಂದು ಅರ್ಥಮಾಡಿದ್ದಾನೆ.)

ಧರ್ಮಪ್ರಸಂಗ; Dharma-prasanga: ಧಾರ್ಮಿಕ ಕಾರ್ಯಗಳ ಆಚರಣೆಯ ಅವಕಾಶ; Occasion for religious performances; ರೇಚರಸಂ ಯುಕ್ತಿಯಿಂ ಧರ್ಮ್ಮಪ್ರಸಂಗಮಂ ಪುಟ್ಟಿಸಿದಂ; (EC. VII(O), Sk.185, 1157).

ನೃತ್ಯಮಂಟಪ; Nṛitya-maṇṭapa: ದೇವಾಲಯದಲ್ಲಿಯ ರಂಗಮಂಟಪ; ನರ್ತನ ಸೇವೆಗಾಗಿ ಉಪಯೋಗಿಸುತ್ತಿದ್ದ ಮಂಟಪ; Front hall in the temple for providing the service of dance; ಶ್ರೀ ಸೋಮನಾಥದೇವರ ನೃತ್ಯಮಂಟಪಕ್ಕೆ ದಾಸಾಚಾರಿಯ ಮಗ ನಾರಣಾಚಾರಿ ಮಾಡ್ಸಿದ ಕಂಭ; (EC. III(R), Nj.226, 1264; SII. XX, 111, 1140).

ನವಕರ್ಮ; Navakarma: ದೇವಾಲಯದ ನವೀಕರಣ; Renovation of the temple; (EC. VII(O), 185, 1157).

ನವಸುಧಾಕರ್ಮ; Nava-sudhā-karma: ಹೊಸದಾಗಿ ಸುಣ್ಣ ಬಳಿಯುವದು; White washing afresh; ಖಂಡಸ್ಫುಟಿತ ಜೀರ್ಣ್ನೋದ್ಧಾರ ನವಸುಧಾಕರ್ಮ್ಮಕ್ಕಂ; (EI. XII, 32B, 1077).

ನಾಟಕಶಾಲೆ; Nāṭakaśāle: ದೇವಾಲಯಕ್ಕೆ ಹೊಂದಿದ ರಂಗ ಮಂಟಪ, ನೃತ್ಯ ನಾಟಕಗಳಿಗಾಗಿದ್ದ ರಂಗಸ್ಥಳ; An open

hall attached to the temple for staging dance, drama etc.; ನಾಟಕಶಾಲೆ ರಮ್ಯಮಿದಱೊಳ್ ದೇವಾಪ್ಸರೋನೃತ್ಯವಿಂತಿಱಂತಾಗಿರೆ; (ಪಂಪ ಭಾ. Paṁ.Bhā. VI, 3, 10th cent.); ಮುವತ್ತೆರಡು ನಾಟಕಶಾಲೆ ಒಂದೊಂದು ನಾಟಕಂಗಳೊಳ್ ಮುವತ್ತಿರ್ವ್ವರು ನರ್ತ್ತಿಸುತಿರ್ಪ್ಪ ಸುರೇಂದ್ರ ಸುಂದರಿಯರಿಂದೊಪ್ಪುವ; (ಅಜಿ.ಪು. Aji.Pu. VII, 20 ವ, Pr. 10th cent.).

ನಾಟ್ಯಶಾಲೆ; Nāṭyaśāle: s.a. ನೃತ್ಯಮಂಟಪ; Nṛitya-maṇḍapa above; (ಮ.ಪು. Ma.Pu. II, 55, 12th cent.; ಅಜಿ.ಪು. Aji.Pu. VII, 19, 10th cent.; SII. XX, 179, 12th cent.).

ಪಟ್ಟಶಾಲೆ; Paṭṭaśāle: ಪುರಾಣ ಪ್ರವಚನಗಳಿಗೆ ಬಳಸುತ್ತಿದ್ದ, ದೇವಾಲಯಕ್ಕೆ ಅಥವಾ ಬಸದಿಗೆ ಹೊಂದಿದ ಮಂಟಪ; A hall attached to the temple or basadi and used for discourses etc.; (ಪಂ.ರಾ. Paṁ.Rā. VII, 47 ವ. Pr. 12th cent.; EC. VIII(O), Na.37, 1147; Ibid. II(R), 174, 1139); ಬಸದಿಯ ಪರಿಸೂತ್ರದ ತಂಮ ಮಾಡಿಸಿದ ಪಟ್ಟಶಾಲೆಯ; (Ibid. IX(R), Bl.394, 1315).

ಪರಿಸೂತ್ರ ಪ್ರಾಕಾರ; Parisūtra-prākāra: ದೇವಾಲಯದ ಸುತ್ತಲಿರುವ ಗೋಡೆ (ಪಾಗಾರಗೋಡೆ); The compound wall of the temple; ಶ್ರೀ ಸೋಮನಾಥದೇವೋತ್ತಮನ ಪರಿಸೂತ್ರ ಪ್ರಾಕಾರದಿಂದ ಮೊಳಗೆ; (SII. XX, 206, 12th cent.); ಆ ಶಾನ್ತಿನಾಥದೇವರ ಬಸದಿಯ ಪರಿಸೂತ್ರದೊಳಗಣ; (EC. IX(R), Bl.394, 1315).

ಪ್ರಭಾವಳಿ; Prabhāvaḷi: ದೇವರ ಮೂರ್ತಿಯ ಸೌಂದರ್ಯವನ್ನು ಹೆಚ್ಚಿಸಲು ಅದರ ಹಿಂದಿರುವ ಚಿತ್ರಫಲಕ; A circular or elongated decorated plate representing the halo, behind the deity; ಸ್ವಾಮಿಗೆ ಮಾಡಿಸಿಕೊಟ ಚಿಂನದ ಪ್ರಭಾವಳಿ; (KI. III, I, 14, 1545).

ಪಾಕಶಾಲೆ; Pākaśāle: ದೇವಾಲಯಕ್ಕೆ ಹೊಂದಿದ ಅಡಿಗೆ ಮನೆ; ಸತ್ರ; A kitchen and a free feeding hall attached to the temple; (EC. IV(O), Ch.390, 1482).

ಬಸದಿ; Basadi: ಜೈನ ಯತಿಗಳು ವಾಸಿಸುವ ಜಿನಾಲಯ; Jaina monastry where Jaina ascetics reside; ಬಸದಿಗೆ ಸೆಟ್ಟಿಯರ್ಪ್ಪನ್ನಸಿಗರ್ಗ್ಗವುಣ್ಡುಗಳ್ಮೊದಲಾಗಿ; (SII. IX, I, 77, 992). ಸಂ. ವಸತಿ, Sk. Vasati.

ಬಾಣಸದ ಮನೆ; Bāṇasada mane: ಅಡುಗೆ ಮಾಡುವ ಮನೆ; Kitchen; (EC. XII(O), Ck.2, 1272).

ಬೌದ್ಧರ ನೆರವಿ; Bauddhara neravi: ಬೌದ್ಧ ಯತಿಗಳ ಸಂಘ; Sangha of Bauddha ascetics (SII. XVIII, 199, 1196).

ಬೌದ್ಧವಾಡಿಗೆ; Bauddhavāḍige; s.a. ಬೌದ್ಧ ವಿಹಾರ; Bauddha Vihāra below; (SII. XV, 151, 1191).

ಬೌದ್ಧವಿಹಾರ; Bauddha-vihāra: ಬೌದ್ಧಬಿಕ್ಷುಗಳು ನಿತ್ಯಕರ್ಮ ಮಾಡುವ ಭವನ; A hall where Buddhist monks conducted their activities; ಶ್ರೀಮಂತ್ ಸಂಗವಸೆಟ್ಟಿಯರ್ ಮಾಡಿಸಿದ ಬೌದ್ಧವಿಹಾರಕ್ಕೆ ನಂದಾದೀವಿಗೆಗೆ; (SII. XI, II,144, 1098)

ಬೌದ್ಧಾಲಯ; Bauddhālaya; s.a. ಬೌದ್ಧವಿಹಾರ; Bauddhavihara above (SII. XVIII, 199, 1196).

ಭೋಗಮಂಟಪ; Bhōga-manṭapa: ರಂಗಮಂಟಪ; ದೇವರ ಸಲುವಾಗಿ ಸಮಾರಂಭಗಳನ್ನು ನಡೆಸುವದಕ್ಕಾಗಿ ಕಟ್ಟಿದ ಮಂಟಪ; Rangamanṭapa; A manṭapa erected to conduct special services in the temple; ಕ್ರಿಯಾಶಕ್ತಿಪಂಡಿತದೇವರು ಮಾಡಿಸಿದ ಬಾವಿಯ ಮೇಗಣ ಭೋಗಮಂಟಪದಲ್ಲಿ; (SII. XV, 560,12th cent.).

ಮಕರತೋರಣ; Makara-Tōraṇa: ಗರ್ಭಗೃಹದ ಚೌಕಟ್ಟಿನ ಮೇಲಿನ ಭಾಗ, ಸಾಂಪ್ರಾದಾಯಿಕವಾದ ಮಕರ, ಹೂ, ಬಳ್ಳಿಗಳು, ದೇವತೆಗಳ ಶಿಲ್ಪಗಳು ಇವುಗಳನ್ನೊಳಗೊಂಡಿರುತ್ತದೆ; Ornamental door jamb with figures of conventional makara, containing floral designs and sculptures of deities; ಮಾಟಜದೇವತೆಗಿನ್ದರಂ ಸುರತ್ನಾಳಿ ವಿರಾಜಿಸಲ್ನೆಱೆಯೆ ಮಾಡಿಸಿದಂ . . . . ಮಕರತೋರಣಮಂ; (SII. XVIII, 69, 1063).

ಮಾಟಕೂಟಪ್ರಾಸಾದ: Māṭa-kūṭa-prāsāda: ವಿವಿಧ ಅಲಂಕಾರಗಳಿಂದ ಕೂಡಿದ ಭವ್ಯ ಮಂಟಪ; A grand hall with decorations; (SII. XX, 84, 1123; APGAS. III, Md.4, 1156).

ಮಾನಸ್ತಂಭ; Mānastambha: ಜೈನ ಬಸದಿಯ ಅಥವಾ ದೇವಾಲಯದ ಮುಂದೆ ನೆಟ್ಟಿರುವ ಕಲ್ಲುಕಂಭ; A stone

pillar erected in front of a Jaina basadi or a temple; ಬಸವಯ್ಯನಂಕನಭಟ್ಟನ ಮಾಡಿಸಿದಾ ಮಾನಸ್ತಂಭ; (EC. X(O), Ml. 59, 10th cent.); ವಿಷ್ಣುದೇವ ಗುರುದ್ಧ ಮಾನಸ್ಥಂಭ ಪ್ರತಿಷ್ಠೆಯುಮಂ ಮಾಡಿ; (APGAS. III, Nb.2, 1056)

ಸಾಮಾನ್ಯವಾಗಿ ಜೈನ ಬಸದಿಗಳ ಮುಂದಿರುವ ಕಂಬಗಳಿಗೆ ಮಾನಸ್ತಂಭ ಎಂಬ ಹೆಸರಿದೆ. ಹಾಗೆಯೇ ದೇವಾಲಯಗಳ ಮುಂದಿರುವ ಕಂಬಗಳಿಗೆ ಗರುಡಗಂಬ, ದೀಪಮಾಲೆಕಂಬ ಎಂದು ಹೆಸರು. ಮೇಲೆ ಉಲ್ಲೇಖಿಸಿದ ಎರಡೂ ಶಾಸನಗಳು ಮಾನಸ್ತಂಭಗಳನ್ನು ಹೆಸರಿಸಿದ್ದು ಅವು ದೇವಾಲಯಗಳ ಗರುಡಗಂಬಗಳ ಮೇಲಿವೆ.

Generally the pillars in front of the Jaina basadis are called Mānasthambhas. Those in front of the temples are known as Garuḍagaṁba or Dīpamāle-kamba. Both the inscriptions cited here mention mānastaṁbha. They are engraved on what are known as Garuḍa-gaṁba, in front of the temples.

ರಂಗದ ಕಂಬ; Rangada kamba: ದೇವಾಲಯದಲ್ಲಿಯ ರಂಗಮಂಟಪದ ಕಂಬ; A pillar in the front hall of the temple; (EC. III(R), Gu.72, 1553).

ರಂಗಮಂಟಪ; Rangamaṇṭapa: ನೃತ್ಯಗಾಯನಾದಿಗಳನ್ನು ನಡೆಸಲು ದೇವಾಲಯದ ಗರ್ಭಗೃಹದ ಮುಂಭಾಗದಲ್ಲಿರುವ ಮಂಟಪ; Hall in front of the garbhagṛiha of the temple meant for services of music, dance etc.; (SII. XVIII, 51, 1033); ಶ್ರೀ ನಾರಸಿಂಹ್ಯಾದೇವರ ಸುಖನಿವಾಸ ರಂಗಮಂಟಪವನು; (Ibid. XX, 236, 1532).

ಲೋವೆ; Lōve: ದೇವಾಲಯದ ಗೋಪುರದ ತಳಭಾಗ; Lower part of the tower of the temple; ವಿಮಾನವ ಚಿಂನವ ಹಾಸುವದಕ್ಕೆ ಲೋವೆಯಿಂದ ಮೇಲೆ ಕಳಸಪರಿಯಂತಲೂ; (SII. IX, II, 499, 1514; ಹ.ಕಾ. Ha.Kā, IV, 6, 7, 13th cent; ಅ.ಪು. A.Pu. IX, 78, 13th cent.).

ವಾರಿಸತ್ರ; Vāri-satra: ದೇವಸ್ತಾನದ ಅರವಟ್ಟಿಗೆ; Arrangement of free supply of water in the temple; ತ್ರೈಳೋಕ್ಯಮಲ್ಲದೇವರು ತಪೋಧನರ್ಗ್ಗಂ ವಾರಿಶತ್ರಕ್ಕಂ ವಿದ್ಯಾದಾನ ನಿಮಿತ್ಯದಿಂ; (SII. IX, I, 121, 1057); ಅಲ್ಲಿಯ ವಾರಿಸತ್ರಕ್ಕಂ ಓದುವ ವಿದ್ಯಾರ್ತ್ಥಿ ಮಾಣಿಗಳಿಗೆ; (Ibid. XX, 58, 1085); ಅವಾರಿ ಸತ್ರ ಎಂಬ ಪ್ರಯೋಗವು; (SII, IX, I, 119, line 35, 1057) ವಾರಿಸತ್ರ ಎಂಬುದರ ಅಪಪ್ರಯೋಗ ವಾಗಿರಬಹುದಾಗಿದೆ; The expression, avāri-satra; (SII. IX, I, 119, line 35, 1057) seems to be a mistake for vāri-satra.

ವಿಮಾನ; Vimāna: ದೇವಾಲಯದ ಗರ್ಭಗೃಹದ ಮೇಲಿನ ಗೋಪುರ; The pyramidal structure over the sanctum; Tower; (SII. IX, II,499, 1514).

ಶಿಲಾಮಂಟಪ; Śilā-maṇṭapa: ದೇವಾಲಯದಲ್ಲಿಯ ಕಲ್ಲಿನ ಮಂಟಪ; A stone maṇḍapa (pavilian) in the temple; ಶ್ರೀಪರ್ವತಕ್ಕೆ ವಿಜೆಯಮಾಡಿ ಯಾ ದೇವರ ತೇರಬೀದಿ ಶಿಲಾಮಂಟಪವಾಗಿ ಕಟ್ಟಿಸಿ; (SII. IX, II,500, 1515).

ಸಜ್ಜಗೃಹ; Sajja-gṛiha: ದೇವಾಲಯದ ಗರ್ಭಗೃಹ; Sanctum sanctorum of the temple; ಶ್ರೀಮಧುಕೇಶ್ವರದೇವರ ಸಂನಿಧಿಯಲು ಪಾರ್ವತಾ ದೇವಿಯವರ ನಿವಾಸ ಸಜ್ಜಗ್ರುಹ ರಂಗಮಂಟಪ; (SII. XX, 236, 1552); ಸಜ್ಜಾಗೃಹದ ಬಾಗಿಲ ಬಾಗಿಲವಾಡಕ್ಕೆ ತಾಂಬ್ರದ ಮೇಲೆ ತೊಡದ ಚಿಂನ ಬಂಣ; (SII. XXIV, 417, 1534).

ಸತ್ರ; Satra: ದೇವಸ್ಥಾನದಲ್ಲಿ ಉಚಿತವಾಗಿ ಆಹಾರವನ್ನು ನೀಡುವ ಸ್ಥಳ; Free feeding house attached to the temple; (SII. IX, I, 101, 1045); ಅನೇಕ ಸಲ ಶತ್ರ ಎಂಬ ಪ್ರಯೋಗವೂ ಸಿಗುತ್ತದೆ; Many times it is spelt as Śatra; (SII. IX, I, 134, 1069).

ಸತ್ರದಡುಗೆವನೆ; Satrad-aḍugevane: ದೇವಾಲಯದ ಛತ್ರದ ಅಡುಗೆಮನೆ; Kitchen of the free feeding house of the temple; ಸತ್ರದಡುಗೆವನೆಮಂ ಕೊಟ್ಟಂ; (SII. XX, 174, 1187).

ಸಂಜೆಮಠ; Sanjemaṭha: s.a ಸಂಧ್ಯಾಮಠ; Sandhyāmaṭha below; (SII. IX, I, 158,1090).

ಸಂಧ್ಯಾಮಠ; Sandhyāmaṭha: ಒಂದು ಮಠದ ಹೆಸರು; Name of a Maṭha; (IND. 3, 1045).

ಸಂಧ್ಯಾಮಂಟಪ; Sandhyā-maṇṭapa: ಸಂಜೆ ವೇಳೆ ದೇವರ ಪೂಜೆಗೆ ಉಪಯೋಗಿಸುವ ಮಂಟಪ; Maṇṭapa used

for evening worship of the god; (SII. IX, II, 453, 1450).

ಸೀಬಾರ; Sībāra: ಶ್ರೀದ್ವಾರ, ಮಹಾದ್ವಾರ; Entrance gate; (SII. XV, 172, 1226-27).

ಸೀಯಬಾರ; Sīyabāra: s.a. ಸೀಬಾರ; Sībāra; ಶ್ರೀದ್ವಾರ; Śrīdvāra; (SII. XV, 213, 1197).

ಸುಕನಾಸಿ; ಸೊಖನಾಸಿ; Sukanāsi; Sokhanāsi: ದೇವಾಲಯದ ಗರ್ಭಗೃಹದ ಮತ್ತು ರಂಗಮಂಟಪಗಳ ನಡುವಿನ ಸ್ಥಳ; ಅರ್ಧಮಂಟಪವೆಂದೂ ಕರೆಯಲ್ಪಡುತ್ತದೆ; Portion in between garbhagṛiha of a temple and the rangamaṇṭapa; also known as ardhamaṇṭapa; ದೇವರ ಗಭ್ಬಗ್ರಿಹ ಸೊಖನಾಸಿಯ ಕೆಲಸಕ್ಕೆಂದು; (SII. XX, 84, 1123); ಶ್ರೀ ಕೃಷ್ಣರಾಯರಿಗೆ ಧರ್ಮ್ಮಕೀರ್ತಿಯಾಗಬೇಕೆಂದು . . . ಗರ್ಭಗೃಹ ಸುಕನಾಸಿ ಮೊದಲಾದ ಜೀರ್ನೋಧಾರವನೂ ಮಾಡಿಸಿದರೂ; (EC. IV(R), Ch.100, 1527).

ಪ್ರಾಚೀನದೇವಾಲಯಗಳಲ್ಲಿ ಸುಕನಾಸವು ದೇವಾಲಯದ ಪ್ರಮುಖ ಅಂಗವಾಗಿತ್ತು. ಶಾಸನಗಳಲ್ಲಿ ಇದು ಸುಕನಾಸ, ಸುಕನಾಸಿ, ಸೊಕನಾಸಿ, ಸೊಖನಾಸಿ ಎಂದು ಮುಂತಾಗಿ ಉಕ್ತವಾಗಿದೆ. ಇದು ಅರ್ಧಮಂಟಪ ಅಥವಾ ಅಂತರಾಳದ ಮಾಳಿಗೆಯ ಮೇಲ್ಭಾಗವೆಂದೂ, ಶಿಖರದ ಬುಡದ ಮುಂಚಾಚು ಎಂದೂ ಗ್ರಹಿಸಲ್ಪಟ್ಟಿದೆ. ಸುಕನಾಸವು ಸಂಸ್ಕೃತದಲ್ಲಿ ಶುಕನಾಸಿಕಾ ಎಂದು ರೂಪಾಂತರ ಹೊಂದಿ ಇಂಗ್ಲೀಷಿನಲ್ಲಿ parrot's nose ಎಂದು ಭಾಷಾಂತರಿಸಲ್ಪಟ್ಟಿದೆ. ಆದರೆ ಗಿಳಿಯ ಮೂಗಿನಂತೆ ಚಾಚಿದೆಯೆನ್ನಲಾದ ಈ ಭಾಗ ಎಲ್ಲ ದೇವಾಲಯಗಳಲ್ಲೂ ಕಾಣಸಿಗುವದಿಲ್ಲ. ಸುಮಾರು 14-16 ನೇ ಶತಮಾನಗಳ ಶಾಸನಗಳಲ್ಲಿ ಸುಖನಿವಾಸ ಎಂಬ ಪದವು ಕಾಣಸಿಗುತ್ತಿದ್ದು ಅದು ದೇವಾಲಯದ ಒಂದು ಪ್ರಮುಖ ಅಂಗವಾಗಿದ್ದಿತೆಂದು ಸೂಚಿತವಾಗುತ್ತದೆ. ಮತ್ತು ಗರ್ಭಗೃಹ, ಸುಖನಿವಾಸ, ರಂಗಮಂಟಪ ಎಂಬ ಕ್ರಮದಲ್ಲಿ ಬರುತ್ತದೆ. ಇದರಿಂದ ಸುಖನಿವಾಸವು ಗರ್ಭಗೃಹ ಮತ್ತು ರಂಗಮಂಟಪಗಳ ನಡುವಿನ ಭಾಗ ಅಂದರೆ ಅರ್ಧಮಂಟಪ ಅಥವಾ ಅಂತರಾಳ ಎಂದು ಕರೆಯಲ್ಪಡುವ ಭಾಗ ಎಂಬುದು ಸ್ಪಷ್ಟವಾಗುತ್ತದೆ. ದೇವಾಲಯದಲ್ಲಿ ಉತ್ಸವಗಳ ಕಾಲದಲ್ಲಿ ಉತ್ಸವಮೂರ್ತಿಯನ್ನು ಇಲ್ಲಿ ಕುಳ್ಳಿರಿಸಿ ಕಾರ್ಯಕ್ರಮಗಳು ನಡೆಸಲ್ಪಡುತ್ತಿದ್ದುದರಿಂದ ಇದಕ್ಕೆ ಸುಖನಿವಾಸವೆಂಬ ಹೆಸರು ಬಂದಿರಬೇಕು. ಈ ಸುಖನಿವಾಸವೇ ಮುಂದೆ ಸುಕನಾಸ ಎಂದು ರೂಪಾಂತರ ಹೊಂದಿರಬೇಕು.

ಮಲ್ಲಿಕಾರ್ಜುನ ದೇವರ ದೇವಾಲಯವನು ಗರ್ಭಗೃಹ. ಸುಕನಾಸ, ರಂಗಮಂಟಪ (EC. VII(R), Ng.58, 15th cent.).

In ancient temples, Sukanāsa was an important part of the temple. In inscriptions, this term figures as Sukanāsa, Sukanāsi, Sokanāsi, Sokhanāsi etc. It is normally suggested that this is the roof portion of the antarāḷa or ardhamaṇṭapa and that it represented the protruding portion of the bottom of the Śikhara. Sukanāsa was samskritised as Śukanāsikā and even translated into English as Parrot's nose. But this part, supposed to be protruding like the parrot's nose is not found in all the temples. In the inscriptions of the 14th-16th cent., we come across a word Sukhanivāsa, as an essential part of a temple. It is also mentioned in the order of Garbha-gṛiha, Sukhanivāsa, Rangamaṇṭapa. Mallikārjunadēvara dēvālayavanu garbha-gṛiha Sukhanivāsa rangamaṇṭapa. (EC. VII(R), Ng.58, 15th cent.). Thus it becomes clear that Sukhanivāsa represented the portion between garbhagṛiha and rangamaṇṭapa, viz. ardhamaṇṭapa or antarāla. On festive occasions the utsava-mūrti or the mobile idol of the god would be placed here to sit at ease (sukha) and watch the services rendered in the rangamaṇṭapa. Thus it came to be known as Sukhanivāsa. In course of time, locally it took the form of Sukanāsa, Sukanāsi etc.

ಸೋತೆಸುಣ್ಣ; Sōtesuṇṇa: ಸುಣ್ಣಬಣ್ಣ ಬಳಿಯುವದು; White washing; (SII. XX, 149, 13th cent.).

ಅಧ್ಯಾಯ ೧೧ CHAPTER XI

ಶಾಸನಗಳು ಮತ್ತು ಇತರ ದಾಖಲೆಗಳು
INSCRIPTIONS AND OTHER DOCUMENTS

೧. ಶಿಲಾಶಾಸನಗಳು
1. STONE INSCRIPTIONS

ಕಲ್ಲುಪಟ್ಟೆ; Kallupaṭṭe: ಶಿಲಾಶಾಸನ; ಕಲ್ಲಿನ ಮೇಲೆ ಬರೆದ ದಾಖಲೆ; Inscription; Document written on stone; ದಾನಮಾನ್ಯಾ ಪೂರ್ವ್ವಮರ್ಯಾದಿಯೆಂದು ಕೊಟ್ಟ ಶೋತ್ರಿಯದ ಕಲ್ಲುಪಟ್ಟೆ; (EC. III(R), Nj.217, 1530).

ಕಲ್ಲುಶಾಸನ: Kallu-śāsana: ಕಲ್ಲಿನ ಮೇಲೆ ಬರೆದ ಶಾಸನ; ದಾನ ಪತ್ರ, ಶಾಸನವನ್ನು ಬರೆದ ಕಲ್ಲು; A stone bearing inscription; Inscription on a stone; (SII. IX, II, 453, 1450).

ಕೂಟಲಿಖಿತ; Kūṭa-likhita: ಸುಳ್ಳು ದಾಖಲೆ; forgery, false document; (ನೀ.ವಾ. Nī.Vā. XXVIII, 12, 10th cent.).

ಪ್ರತಿಶಾಸನ; Pratiśāsana: ಕಳೆದುಹೋದ ಮೂಲ ಶಾಸನಕ್ಕೆ ಪ್ರತಿಯಾಗಿ ಕೊಟ್ಟ ಅದೇ ವಿವರಗಳುಳ್ಳ ಇನ್ನೊಂದು ಶಾಸನ; An inscription issued in lieu of the original which was lost, with all the earlier details; duplicate inscription; . . . . ಪಂಡಿತರ್ಗ್ಗೆ ಪುನರ್ದ್ದತ್ತಿ ಮಾಡಿ ಧಾರಾಪೂರ್ವ್ವಕಮ್ಮಾಡಿ ಪ್ರತಿಶಾಸನಮಂ ಕೊಟ್ಟರು; (SII. XI, I, 50, 1138). Cf. ಬರೆಯಿಸಿದಂ ನಿಜವಂಶದ ಪುರಾತನರ್ಪ್ಪಡೆದ ಶಾಸನಂ ಕಾಲಪರಂಪರೆಯಿಂ ಸ್ಫುಟಿಯಸೆ ಮುನ್ನಂ ಬರೆದರ್ತ್ಥ ಮನಿದಜೊಳದಱ ಲಿಖಿತಕ್ರಮದಿಂ; (IKD. 6, 12th cent.).

ಶಾಸನ; Śāsana: ಕಲ್ಲು ಅಥವಾ ತಾಮ್ರ ಮುಂತಾದ ಲೋಹಗಳ ಮೇಲೆ ಬರೆದ ದಾಖಲೆ; Document engraved on stone or other metal like copper; Record; ಲಿಖಿತ ಶಾಸನಂ; (EI. X, 22,674).

ಶಾಸನ ಅಂದರೆ ಮೂಲತಃ ಆಜ್ಞೆ, ರಾಜಾಜ್ಞೆ ಎಂದು ಅರ್ಥ. ಅರಸನು ತನ್ನ ಆಜ್ಞೆಗಳನ್ನು ಬರಹದಲ್ಲಿ ಇಳಿಸಬೇಕೆಂದು ಕೌಟಿಲ್ಯನಾದಿಯಾಗಿ ಎಲ್ಲ ರಾಜ್ಯಶಾಸ್ತ್ರಜ್ಞರು ಹೇಳುತ್ತಾರೆ. ಆಜ್ಞೆಗಳು ವ್ಯಕ್ತಿಗಳಿಗಾಗಲಿ, ಮಾಂಡಲಿಕ, ಸಾಮಂತ ಮುಂತಾದವರಿಗೆ ಸಾಮೂಹಿಕವಾಗಿಯಾಗಲಿ ಅಥವಾ ಸಾರ್ವಜನಿಕರಿಗಾಗಲಿ ಇರಬಹುದಾಗಿದ್ದಿತು. ವಿಶೇಷವಾಗಿ ಸಾರ್ವಜನಿಕರಿಗೆ ಸಂಬಂಧಿಸಿದವುಗಳನ್ನು ಕಲ್ಲು, ತಾಮ್ರ ಮುಂತಾದ ವಸ್ತುವಿನ ಮೇಲೆ ಬರೆಯುವದು ರೂಢಿಯಲ್ಲಿ ಬಂದಿತು. ವಿಶೇಷವಾಗಿ ಮುಂದಿನ ಪೀಳಿಗೆಯವರ ಮಾಹಿತಿಗಾಗಿ ಇದ್ದ ವಿಷಯಗಳನ್ನು ಇಂಥ ವಸ್ತುಗಳ ಮೇಲೆ ಬರೆಯಲಾಗುತ್ತಿದ್ದಿತು. ಹೀಗಾಗಿ ಅಶೋಕನ ಶಾಸನಗಳು ನಿರ್ಮಿತವಾದವು. ಅಶೋಕನು ಅವನ್ನು ಧರ್ಮಲಿಪಿ ಎಂದು ಕರೆದನು. ಯಾಕೆಂದರೆ ಅವು ತನ್ನ ಕಾಲದ ಮತ್ತು ಮುಂದಿನ ಪೀಳಿಗೆಗಳ ಜನರು ಅನುಸರಿಸಬೇಕಾದ ಧರ್ಮಕ್ಕೆ

ಸಂಬಂಧಿಸಿದವಿದ್ದವು. ವ್ಯಕ್ತಿಗಳಿಗೆ ಅಥವಾ ದೇವಾಲಯ ಮುಂತಾದ ಧಾರ್ಮಿಕ ಸಂಸ್ಥೆಗಳಿಗೆ ಮಾಡಿದ ದಾನ ದತ್ತಿಗಳ ವಿವರಗಳನ್ನು ಅವು ಶಾಶ್ವತವಾಗಿ ಉಳಿಯಲೆಂಬ ದೃಷ್ಟಿಯಿಂದ ತಾಮ್ರ ಮತ್ತು ಕಲ್ಲುಗಳ ಮೇಲೆ ಬರೆಯಲಾಗುತ್ತಿದ್ದಿತು. ಇವು ತಾಮ್ರ ಶಾಸನ ಮತ್ತು ಶಿಲಾಶಾಸನ ಎಂದು ಹೆಸರು ಪಡೆದವು. ಎಷ್ಟೋ ಸಲ ವ್ಯಕ್ತಿಗಳಿಗೆ ಕೊಟ್ಟ ದತ್ತಿಗಳ ವಿಷಯವನ್ನು ತಾಮ್ರ ಪಟ್ಟಗಳ ಮೇಲೆ ಬರೆದು ಸಾರ್ವಜನಿಕರ ಮಾಹಿತಿಗಾಗಿ ಆ ವಿವರಗಳನ್ನು ಕಲ್ಲುಗಳ ಮೇಲೆ ಬರೆದು ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದರು. ಹೀಗಾಗಿ ಕಲ್ಲಿನ ಮೇಲೆ ತಾಮ್ರ ಶಾಸನಗಳ ಪ್ರತಿಗಳು ಇದ್ದ ಅನೇಕ ಉದಾಹರಣೆಗಳು ಸಿಗುತ್ತವೆ.

ಇಂಥ ದಾಖಲೆಗಳನ್ನು ಶಾಸನ, ಶಿಲಾಶಾಸನ, ತಾಮ್ರ ಶಾಸನ ಎಂಬ ಹೆಸರುಗಳು ಶಾಸನಗಳಲ್ಲಿಯೇ ಉಕ್ತವಾಗಿದ್ದು, ಈಗಲೂ ರೂಢಿಯಲ್ಲಿವೆ.

Originally Śāsana meant an order or a royal order. Authorities on rājyaśāstra (polity) including Kauṭilya enjoin that royal orders should be issued in writing. Such orders could be for individuals or collectively for feudatories and subordinates or related to the general public. The procedure of writing those relating to the public on permanent material like stone and copper or other metal, came into vogue. Such practice was followed particularly in relation to those matters which were to be communicated to the future generations. That is how the edicts of Aśōka came into existence. Aśōka called them dharma-lipi since they related to dharma to be followed by the contemporaries as well as by posterity. Donation of land and the like, made to individuals as well as religious institutions like temples, were written on stone or copper and other metals so that they would last for ever. They came to be known as Śilā-Śāsana and tāmra-śāsana. Many times grants etc., given to the individuals were engraved on copper plates and their copies were engraved on stones for the information of the public and installed in public places. Thus there are many examples of copies of copper plate inscriptions engraved on stone.

Such documents are mentioned as Śilā-Śāsana and tāmra-śāsana in inscriptions and they are in vogue now also.

ಶಾಸನ ಕಲ್ಲು; Śāsana-kallu: ಶಾಸನವನ್ನೊಳಗೊಂಡ ಕಲ್ಲು; Stone with an inscription on it; ಅಲಿ ನಟ ಸಾಸನಗಲು; (KI. III, 7, 1527)

ಶಾಸನಗಂಭ; Sasana-gambha: ಶಾಸನವನ್ನು ಬರೆದ ಕಂಭ; Pillar with inscription; ವರುಣಪ್ರತಿಷ್ಠಾಕಾಲದೊಳ್ನಿಲಿಸಿದ ಶಾಸನಗಂಭ; (APGAS. III, Wg.19, 12th cent.).

ಶಿಲಾಲೇಖೆ; Śilālēkhe: ಶಿಲಾಲೇಖ; Śilālēkha; ಕಲ್ಲಿನ ಮೇಲಿನ ಬರಹ; Writing on stone; ಈ ಪದ್ಧತಿಯಂ ಶಿಲಾಲೇಖೆ ಮಾಡಿ ನಿಱಿಸಿದರ್; (KI. I, 13, 865).

ಶಿಲಾಶಾಸನ; ಶಿಳಾಶಾಸನ; Śilāśāsana; Śiḷāśāsana; ಕಲ್ಲಿನ ಮೇಲೆ ಬರೆದ ಶಾಸನ; Inscription engraved on stone; ಸಹಿರಣ್ಯವ ಕೊಂಡು ಆ ಶಿಳಾಶಾಸನ ಮರಿಯಾದೆಯ; (EC. V(O), Ak.121, 1299; Ibid. X(O), Mb. 7, 1416); ಬರಸಿದ ಶಿಲಾಶಾಸನದ ಕ್ರಮವೆಂತೆಂದರೆ; (SII. IX, II, 452, 1450).

ಶಿಲಾಶಾಸನ ಪತ್ರ; Śilāśāsana-patra: ಕಲ್ಲಿನ ಮೇಲೆ ಬರೆದ ದಾಖಲೆ; Document engraved on stone; ಬಾರಕೂರ ಕೊಡಂಗಿಯ ಸಂಖರನಾರಾಯಣದೇವರಿಗೆ ಕೊಟ್ಟ ಸಿಲಾಶಾಸನಪತ್ರದ ಕ್ರಮವೆಂತೆಂದಡೆ; (SII. IX, II, 405, 1357).

ಶೈಳಾಕ್ಷರ; Śaiḷ-ākshara: ಕಲ್ಲಿನ ಮೇಲಿನ ಬರಹ; ಶಿಲಾಶಾಸನ; Writing on stone; Stone inscription; ಸಾಱಿದಪವೀ ಶೈಳಾಕ್ಷರಂ ಧಾತ್ರಿಯೊಳು; (EC. IX(R), Bl.244, 1200).

೨. ತಾಮ್ರಶಾಸನಗಳು

(II) COPPER PLATE INSCRIPTIONS

ದಾನಶಿಲಾತಾಮ್ರಶಾಸನ; Dāna-śilā-tāmra-śasana: ಕಲ್ಲು ಮತ್ತು ತಾಮ್ರಗಳ ಮೇಲೆ ಬರೆದ, ದಾನಕ್ಕೆ ಸಂಬಂಧಿಸಿದ

ಶಾಸನ; Inscription related to a grant, written on stone and copper plates; ಧರ್ಮಸಾಕ್ಷಿಯಾಗಿ ಒಡಂಬಟ್ಟು ಕೊಟ್ಟ ದಾನತಾಮ್ರಶಿಲಾಶಾಸನ; (EC. VIII(O), Tl.130, 1405).

ತಾಮ್ರಕಶಾಸನ; ತಾಮ್ರಶಾಸನ; Tāmraka-śasana; Tāmra-śāsana: ತಾಮ್ರದ ಪಟ್ಟಿಗಳ ಮೇಲೆ ಬರೆದ ಶಾಸನ; ತಾಮ್ರ ಶಾಸನ; Inscription engraved on copper plates; ಶ್ರೀಮನ್ನತೇಶಶಿಷ್ಯೇಣ ಶಂಕರಾರ್ಯೇಣ ಧೀಮತಾ ತಾಮ್ರಕಂ ಶಾಸನಂ ದೃಷ್ಟ್ವಾ ಶಿಲಾಯಾಂ ಲಿಖಾಪಿತಂ; (KI. V, 63, 1172); ಧಾರೆಯನೆರದು ತಾಮ್ರಶಾಸನವ ಕೊಟ್ಟ; (SII. IX, II, 453, 1450; EC. V(O), Ak.62, 1177).

ತಾಮ್ರಪಟ್ಟಕ, ತಾಮ್ರಪಟ್ಟಿಕಾ; Tāmra-paṭṭaka, Tāmra-paṭṭikā: s.a. ತಾಮ್ರಶಾಸನ; Tāmraśāsana; ಲಿಖಿತಂ ಚೇದಂ ತಾಮ್ರಪಟ್ಟಕಂ; (EI. X, 21, 1197); ಲಿಖಿತೇಯನ್ತಾಮ್ರಪಟ್ಟಿಕಾ; (EC. X(O), Ml.72, 452).

ತಾಮ್ರಪತ್ರ; Tāmra-patra; s.a. ತಾಮ್ರಪಟ್ಟಕ; Tāmra-paṭṭaka; (SII. X, 155, 1204).

ಪತ್ರಶಾಸನ; Patra-śāsana: ತಾಮ್ರ ಪತ್ರದ ಮೇಲೆ ಬರೆದ ಶಾಸನ; Inscription engraved on a copper plate; ಯೀ ಪತ್ರಶಾಸನದ ಮರಿಯಾದೆಯಲಿ; (EC. X(O), Mb. 7, 1405).

ಭೂದಾನಪತ್ರಶಾಸನ; Bhūdāna-patra-śāsana: ತಾಮ್ರಪತ್ರದ ಮೇಲೆ ಭೂಮಿದಾನವನ್ನು ಕುರಿತು ಬರೆದ ಶಾಸನ; Inscription on the copper plate relating a grant of land; (EC. X(O), Mb. 7, 1405).

ರಾಜಮುದ್ರಾಸಹಿತ ತಾಮ್ರಸಾದನ (ಶಾಸನ); Rājamudrāsahita-tāmra-sādana (śāsana): ರಾಜನ ಅಧಿಕಾರ ಮುದ್ರೆಯುಳ್ಳ ತಾಮ್ರ ಶಾಸನ; A copper plate grant with royal seal; (EI. XXVII, 28, 1256).

ಶಾಸನಪಟ್ಟ; Śāsana-paṭṭa: ರಾಜಶಾಸನ, ತಾಮ್ರಪಟ; ಶಾಸನವನ್ನೊಳಗೊಂಡ ತಾಮ್ರಪಟ್ಟ, ತಾಮ್ರಶಾಸನ; Royal grant, copper plate with inscription; Copper plate-grant; ಲಿಖಿತಮಿದಂ ಶಾಸನಪಟ್ಟಂ ಸ್ಥಾನನಿಯಮೇನ ರಾಜನಿಯಮೇನ ಚ; (EI. II, 15, 1000).

ಶಿಲಾತಾಮ್ರಪತ್ರಶಾಸನ; Śilā-tāmra-patra-śāsana: ಕಲ್ಲು ಹಾಗೂ ತಾಮ್ರ ಪತ್ರಗಳ ಮೇಲೆ ಬರೆದ ಶಾಸನ; Inscription engraved on stone as well as copper plate; ಸ್ವರುಚಿಯಂದೊಡಂಬಟ್ಟು ಕೊಟ್ಟ ಶಿಲಾತಾಮ್ರಪತ್ರಶಾಸನ; (EC. VIII(O), Tl.22, 1405).

ಶಿಲಾತಾಮ್ರಶಾಸನ; Śilā-tāmra-śāsana: s.a. ಶಿಲಾತಾಮ್ರಪತ್ರ ಶಾಸನ; Śilā-tāmra-patra-śāsana; (EC. VIII(O), Tl.141, 1119).

೩. ದತ್ತಿಪತ್ರಗಳು

3. DOCUMENTS OF GRANTS

ಅಗ್ರಹಾರದ ಭೂದಾನದ ಶಾಸನ; Agrahāra-bhūdānada śāsana: ಅಗ್ರಹಾರಕ್ಕೆ ಭೂಮಿಯನ್ನು ದಾನವಾಗಿ ಕೊಟ್ಟ ಶಾಸನ; An inscription recording the grant of land to an Agrahāra; ವಿದ್ವನ್ಮಹಾಜನಂಗಳಿಗೆ ಕೊಟ್ಟ ಅಗ್ರಹಾರದ ಭೂದಾನದ ಕ್ರಮ . . . . (SII. IX, II, 484, 1511).

ಅಗ್ರಹಾರದಾನ ಶಿಲಾಶಾಸನ; Agrahāra-dāna-śilāśāsana; ಅಗ್ರಹಾರಕ್ಕೆ ದಾನ ಕೊಟ್ಟ ಅಥವಾ ಅಗ್ರಹಾರವನ್ನು ದಾನವಾಗಿ ಕೊಟ್ಟ ವಿಷಯವನ್ನು ಬರೆದ ಶಿಲಾ ಶಾಸನ; Inscription describing the grant made to an Agrahāra or the grant of an agrahāra; ಕೊಟ್ಟ ಶ್ರೋತ್ರಿಯ ಅಗ್ರಹಾರದಾನಶಿಲಾಶಾಸನದ ಕ್ರಮವೆಂತೆಂದರೆ (SII. IX, II, 440, 1419).

ಉಂಬಳಿಯ ಶಿಲಾಶಾಸನ; Uṁbaḷiya śilāśāsana: ಉಂಬಳಿಯನ್ನು ಕೊಟ್ಟ ಬಗ್ಗೆ ಬರೆಸಿದ ಶಾಸನ; A stone inscription relating to a grant of land; ಚಿಕ್ಕಪ್ಪರಸಗಳುಂಡಗೆ ಕೊಟ್ಟ ಉಂಬಳಿಯ ಸಿಲಾಶಾಸನದ ಕ್ರಮವೆಂತೆಂದಡೆ; (EC. IV(R), Ch.254, 1544).

ಕ್ಷೇತ್ರಧರ್ಮಶಾಸನ; Kshētra-dharma-śāsana: ಭೂದಾನಕ್ಕೆ ಸಂಬಂಧಿಸಿದ ಶಾಸನ; Inscription pertaining to land grant; ಚಿಕ್ಕ ಅಲ್ಲಪನಾಯಕರು ಕೊಟ್ಟಂಥಾ ಕ್ಷೇತ್ರಧರ್ಮಶಾಸನದ ಕ್ರಮವೆಂತೆದರೆ; (EC. VII (R), Ng.157, 1472).

ಜೀವಶಾಸನ; Jīvā-śāsana: ಜೀವವಿರುವವರೆಗೆ ಅಂದರೆ ಶಾಶ್ವತ ಉಂಬಳಿಯನ್ನು ಹಾಕಿಕೊಡುವ ಶಾಸನ;

Document recording life long or permanent endowment; ಇವರ್ಗ್ಗಳ್ ಜೀವಶಾಸನವಾಗೆ ನಾಗೂಳವಸದಿಗೆ ಕೊಟ್ಟ ಮಣ್ಣು; (KI. II, 5, 859).

ತ್ಯಾಗಶಾಸನ; Tyāga-śāsana: ದಾನಶಾಸನ; Dāna-śāsana; ತನ್ನ ಭೂಮಿಯನ್ನು ಇನ್ನೊಬ್ಬರಿಗೆ ದಾನವಮಾಡಿದ ವಿಷಯವನ್ನು ನಮೂದಿಸುವ ಶಾಸನ; Document recording the gift one's own land to another; ಮುಳುವಾಗಿಲರಾಜ್ಯದ ಸಾಜಿಕ್ಕಿಯ ಪೆಂಮೆಯನಾಯ್ಕರು ಬದ್ದಬಿಸಲಾಂಡೆಗೆ ಕೊಟ್ಟ ತ್ಯಾಗಶಾಸನದ ಕ್ರಮವೆಂತೆಂದಡೆ; (EC. IX(O), An.35, 1430).

ದಾನಪತ್ರಶಾಸನ; Dānapatra-śāsana: ತಾಮ್ರಪತ್ರದ ಮೇಲೆ ಬರೆದ ದಾನ ಶಾಸನ; Copper plate inscription with details of donation; ಯಿಂಮಡಿ ಬುಕ್ಕರಾಯ ಒಡೆಯರು ವಿದ್ಯಾಶಂಕರದೇವರಿಗೆ ಕೊಟ್ಟ ದಾನಪತ್ರಶಾಸನದ ಕ್ರಮವೆಂತೆಂದರೆ; (EC. X, Mb. 11, 1390).

ದಾನಶಿಲಾಶಾಸನ; Dāna-śilāśāsana: ದಾನವನ್ನು ಉಲ್ಲೇಖಿಸುವ ಕಲ್ಲಿನ ಮೇಲಿನ ಬರಹ, Inscription on stone describing a grant; ಭಿಕ್ಷಾಸ್ವಾಸ್ತಿಗೆ ಕೊಟ್ಟ ದಾನಶಿಲಾಶಾಸನದ ಕ್ರಮವೆಂತೆಂದಡೆ; (SII. IX, II, 520, 1526).

ದಾನಶಿಲಾತಾಮ್ರಶಾಸನ; Dāna-śilā-tāmra-śāsana: ದಾನವನ್ನು ಉಲ್ಲೇಖಿಸುವ ಕಲ್ಲು ಮತ್ತು ತಾಮ್ರಪತ್ರಗಳ ಮೇಲಿನ ಬರಹ; Inscription on stone and copper plates pertaining to grants; ಧರ್ಮಸಾಕ್ಷಿಯಾಗಿ ಒಡಂಬಟ್ಟು ಕೊಟ್ಟ ದಾನಶಿಲಾತಾಂಬ್ರಶಿಲಾಶಾಸನ; (EC. VIII(O), Tl.130, 1404).

ಧಾರೆಶಾಸನ; Dhāre-śāsana: ವಿಧಿಪೂರ್ವಕವಾಗಿ ಧಾರೆಯೆರೆದು ದಾನಗಳನ್ನು ಕೊಟ್ಟ ಶಾಸನ; Inscription relating to grants made in a ritualistic way; through libation of water; (ಹ.ಕಾ. V, 81, 13th cent.).

ಪತ್ರಶಾಸನ; Patra-śasana: ತಾಮ್ರಪತ್ರಗಳ ಮೇಲಿನ ಬರಹ; Writing on copper plates; ನಾಗಂಣ್ಣವೊಡೆಯರು ಆ ಪುರವರ್ಗ್ಗದ ಭಕ್ತರಿಗೆ ಕೊಟ ಪತ್ರಶಾಸನ; (EC. IX (R), Bl. 519, 1359); ಯಿ ಪತ್ರಶಾಸನದ ಮರಿಯಾದೆಯಲಿ ನಂಮ ಮುಳುವಾಯ ನಾಚಿಯರ ಮುಂದೆ ಶಿಲಾಶಾಸನವನೂ ಮಾಡಿ ಕೊಟೆವಾಗಿ; (EC. X(O), Mb.7, 15th cent.).

ಪ್ರಭುಗೊಡಗೆ; Prabhugoḍage: ಅರಸನು ಅಥವಾ ಅಧಿಕಾರಿಯು ಇನ್ನೊಬ್ಬನಿಗೆ ಕೊಟ್ಟ ದಾನ; Grant made to an individual by a king or other authority; ರಾಜಕಾರ್ಯಕೆ ಹಿತಾರ್ತನಾದ ಪೆರುಮಾಳ ಅಧಿಕಾರಿಗಳು . . . . . ವೀರಭದ್ರನಾಯಕರಿಗೆ . . . . ಗ್ರಾಮ ೧ ದನೂ ಪ್ರಭುಗೊಡಗೆಯಾಗಿ ಕೊಟ್ಟೆವಾಗಿ; (EC. IV(R), Ch.293, 1532).

ಪುನರ್ದ್ದತ್ತಿ; Punar-datti: ನಶಿಸಿಹೋದ ದತ್ತಿಯನ್ನು ಮತ್ತೆ ಹೊಸದಾಗಿ ಕೊಡುವದು; Renewal of a lapsed grant; ಆ ಶಾಸನವಂ ಸ್ಫುಟಿತವಾಗಲು . . . . ಅಮೃತರಾಸಿಪಂಡಿತರ್ಗ್ಗೆ ಪುನರ್ದ್ದತ್ತಿ ಮಾಡಿ ಧಾರಾಪೂರ್ವಕಂ ಮಾಡಿ ಪ್ರತಿಶಾಸನವಂ ಕೊಟ್ಟರು; (SII. XI, I, 50, 1138).

ಪುರಧರ್ಮಶಾಸನ; Pura-dharmaśāsana: ದೇವರಿಗೆ ಗ್ರಾಮವನ್ನು ದಾನವಾಗಿ ಕೊಟ್ಟ ಶಾಸನ; Inscription recording the grant of a village to the god; ಕಾಡನೂರು ಚೆನ್ನಕೇಶವದೇವರಿಗೆ ಕೊಟ್ಟ ಪುರಧರ್ಮಶಾಸನವೆಂತೆಂದರೆ; (EC. IX (O), Db.50, 1531).

ಬಿಡಾರುವಾರದ ಪತ್ರ; Biḍāruvārada patra: ಭೋಗ್ಯ ಮುಂತಾದ ಭೂಮಿಯ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ; Document relating to the land dealings like lease etc. ಅಂಣ ಉಡುಪರು ಕೊಟ್ಟ ಬಿಡಾರುವಾರದ ಪತ್ರದ ಕ್ರಮವೆಂತೆಂದರೆ; (SII. IX, II, 655, 1554).

ಭುಕ್ತಿಶಾಸನ; Bhuktiśāsana: ಭೋಗ್ಯಭೂಮಿಯ ವಿಷಯಕವಾದ ಶಾಸನ; Inscription giving details of a land given for enjoyment or lease; ಲೋಕಸಮರ್ತ್ಥನಿಂದಾದಿಯಾಗಿ ಭುಕ್ತಿಶಾಸನಮಾಗಿಯುಂಡ ಭೂಮಿಯಂ ಶಿಲಾಲಿಖಿತಮಾಗೆ ಪ್ರತಿಷ್ಠೆಮಾಡಿದರು; (APGAS. IX, 18, 1118).

ಭೂದಾನ ಧರ್ಮಶಾಸನ; Bhūdāna-dharma-śāsana: s.a. ಭೂದಾನಶಾಸನ; Bhūdāna-śāsana; (EC. IV(O), Kr. 79, 1543); (ಈ ಶಾಸನ ತೆಲುಗು ಭಾಷೆಯಲ್ಲಿದೆ; This inscription is in Telugu language).

ಭೂದಾನಪತ್ರಶಾಸನ; Bhūdāna-patra-śāsana: s.a. ಭೂದಾನಧರ್ಮಶಾಸನ; ; Bhūdāna-dharma-śāsana; ತವುಗೆ ವಿಷ್ಣುಲೋಕಪ್ರಾಪ್ತಿಯಾಗಬೇಕೆಂದು ಕೊಟ ಭೂದಾನಪತ್ರ ಶಾಸನ; (EC. VIII(O), Tl.22, 1405).

ಭೂದಾನಶಾಸನ; Bhūdāna-śāsana: ಭೂದಾನಕ್ಕೆ ಸಂಬಂಧಿಸಿದ ಶಾಸನ; Inscription relating to a grant; (EC. VIII(O), Tl.5, 1573).

ಮೂಲಶಾಸನ; Mūlaśāsana: ಮೂಲದಾನಪತ್ರ; Original document; ನಾರಣಸೆಟ್ಟಿಗೆ ಕೊಟ್ಟ ಮುಲ ಶಾಸನದ ಕ್ರಮವೆಂತೆಂದರೆ (SII. IX, II, 449, 1444).

ವಲಯ ಶಾಸನ, ವಳಯ ಶಾಸನ; Valaya-śāsana, Vaḷaya-śāsana: ಯಾವದೊಂದು ಪ್ರದೇಶದ ದತ್ತಿಗೆ ಸಂಬಂಧಿಸಿದ ಶಾಸನ; Inscription pertaining to a grant of a particular region or area; (EC. II(R), 456, 1282) ದೇವಸಮುದ್ರವೆಂಬ ಅಗ್ರಹಾರದ ವಲಯಶಾಸನ; (Ibid. III(R), Hg. 89, 1493).

ಶಾಸನಮರ್ಯಾದೆ; Śāsana-maryāde: ಶಾಸನ ಮೂಲಕವಾಗಿ ಕೊಟ್ಟ ಉಂಬಳಿ; Grant endowed by recording it in an inscription; (KI. V, 98, 1181).

ಶ್ರೋತ್ರಿಯ ದಾನ ಶಿಲಾಶಾಸನ; Śrōtriya-dāna-śilāśāsana: ಶ್ರೋತ್ರಿಯರಿಗೆ ಕೊಟ್ಟ ದಾನವನ್ನು ಕುರಿತ ಶಿಲಾಶಾಸನ; Stone inscription recording a grant to the learned men; (SII. IX, II, 440, 1419).

೪. ಕರಾರುಪತ್ರ-ಖರೀದಿಪತ್ರಗಳು

4. AGREEMENTS, SALE DEEDS

ಕೆಂಪೊತ್ತಿದ ವೋಲೆ; Kemp-ottida vōle; ಕೆಂಪು ಬಣ್ಣದಿಂದ ಗುರುತಿಸಿದ ಓಲೆ ಅಥವಾ ಪತ್ರ, ಅಧಿಕೃತ ದಾಖಲೆ; Document with red mark stamped on it; authorised document; ಅರಮನೆಗೆ ಕೆಂಪೊತ್ತಿದ ಓಲೆಯನ್ನು ಕೊಟ್ಟು; (EC. IV(R), Ch. 162, 1515).

ಇದನ್ನು Sealed letter ಎಂದು ಭಾಷಾಂತರಿಸಲಾಗಿದೆ; (EC. IV(R), Ch.162, p.640); ಬಹುಶಃ ಅದು ಅರಸನ ಮುದ್ರೆಯಿಂದ ಮುದ್ರಿತವಾದ ಓಲೆ ಅಥವಾ ಪತ್ರವಿದ್ದಿರಬಹುದು. This expression is translated as 'Sealed letter'? (EC. IV (R), Ch.162, p. 640); It could be a document with the seal of the king.

ಕ್ರಯದಾನಪತ್ರ; Kraya-dānada-patra: ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ಅದನ್ನು ದಾನಮಾಡಿದ ವಿಷಯದ ಪತ್ರ; A gift deed made after purchase of the gift land; ಆ ಕಂಪಣದ ನಾಡವರ ಕೈಯಲು ಮೂನೂರ ಐವತ್ತು ಹೊಂನಿಗೆ ಕ್ರಯವನು ಕೊಟ್ಟ ಆ . . . . . ಕಂಪಣದ ನಾಡವರು ಮೂರು ಪಟ್ಟಣದ ಹಲರು ನಮಗೆ ಕೊಟ್ಟ ಕ್ರಯದಾನ ಪತ್ರದ; (EC. VIII(O), Tl.104, 15th cent.); ಎಂಭತ್ತೈದು ಹೊಂನನು ಸಲ್ಲಿಸಿಕೊಂಡು ಸಹಿರಣ್ಯೋದಕದಾನಧಾರಾಪೂರ್ವಕವಾಗಿ ಧಾರೆಯನೆರೆದು ಕೊಟ್ಟೆವಾಗಿ; (EC. VI (O), Kp.27, 15th cent.); (EC. VIII(O), Tl.175, 14th cent.).

ಕ್ರಯದಾನಶಿಲಾತಾಂಬ್ರಶಾಸನ; Kraya-dāna-śilā-tāmbra-śāsana: ಕಲ್ಲು ಮತ್ತು ತಾಂಬ್ರಪತ್ರಗಳ ಮೇಲೆ ಕಂಡರಿಸಿದ ಕ್ರಯದಾನಪತ್ರ; Sale cum gift deed recorded on stone and copper-plates; (EC. VIII(O), Tl.31, 1400)

ಕ್ರಯಪತ್ರ; Kray-patra; ಖರೀದಿ ಪತ್ರ; Sale deed; (EC. VIII(O), Tl.32, 16th cent.).

ಕ್ರಯಪತ್ರಖಂಡಿಕ; Krayapatra-khaṇḍiika: ಭೂಮಿಯನ್ನು ಮಾರಲಿಕ್ಕೆ ತೆಗೆದುಕೊಂಡ ಪತ್ರದ ಭಾಗ; A sale deed; ಕ್ರಯಪತ್ರ ಖಂಡಿಕದ ಒಳಗೆ ನಮಗೆ ಉಳ ವಾಃಱಱವೊಳಗೆ ಬರದು ಪಾಲ್ಸಿ ಕೊಟ್ಟದನು ನಿಮಗೆ ಕ್ರಯವಾಗಿ ಕೊಟ್ಟ . ಲು ಯಾಸಿಕೊಂಡ ವರಹ ಗದ್ಯಾಣ ನೂಱಹತ್ತು ಹೊಂನು; (EC. VIII(O), Tl.32, 15th cent.).

ಕ್ರಯಮೂಲದಾನಪತ್ರ; Kraya-mūla-dāna-patra: ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ದಾನವಾಗಿ ಕೊಟ್ಟ ಬಗೆಗೆ ಮಾಡಿದ ಮೂಲ ಪತ್ರ; Original gift deed of a land, by getting it for money; ಸಮಸ್ತ ಮಹಾಜನಂಗಳು ಕೊಟ್ಟ ಕ್ರಯಮೂಲದಾನಪತ್ರದ ಕ್ರಮವೆಂತೆಂದರೆ ನಂಮ ಹಿರಿಯ ಹೊಳಲೂರಿಗೆ ಸಲುವ ಹಂಗರಬಯಲೊಳಗಣ ಭೂಮಿ ಖಂ ೧೫ ಆದರೊಳಗೆ ಕಾರು ಗದ್ದೆ ಖ ೫ ಉಭಯಂ ೨೦ ಅಕ್ಷರದಲ್ಲು ಯಿಪ್ಪತ್ತು ಸಲಗೆ ಐಗುಣ ಭೂಮಿಯನು ನಿಮಗೆ ಕ್ರಯವಾಗಿ ಕೊಟ್ಟು

ಮಧ್ಯಸ್ಥ ಪರಿಕಲ್ಪಿತ ತತ್ಕಾಲೋಚಿತ ಕ್ರಯದ್ರವ್ಯ ಪರಿವರ್ತನಕ್ಕೆ ಸಲುವ ವರಹ ಗಳ್ಳ ಅಕ್ಷರದಲ್ಲು ನಾಲವತ್ತನಾಕು ಹೊಂನು ಉಡುಗೊರೆ ವರಹ ಗಳ ಉಭಯಂ ನಾಲ್ವತ್ತೆಂಟು ಹೊಂನನೂ ಕೊಂಡು ಸಹಿರಂಣ್ಯೋದಕದಾನ ಧಾರಾಪೂರ್ವಕವಾಗಿ ಧಾರೆಯನೆರೆದು ಕೊಟ್ಟೆಉ; (EC. VIII, Tl.144, 1421).

ಕ್ರಯಶಾಸನ; Kraya-śāsaana; ಭೂಮಿಯ ಖರೀದಿಗೆ ಸಂಬಂಧಿಸಿದ ಪತ್ರ; A sale deed; (EC. X(O), Mb.259, 1442).

ದಾನಪಟ್ಟೆ; Dāna-paṭṭe: ದಾನಪತ್ರ; Gift deed; ತಿರುಮಲದೇವರಿಗೆ ಕೊಟ್ಟ ದಾನಪಟ್ಟೆ; (SII. IX, II, 555, 1533).

ಮೂಲಪತ್ರಸಾಧನ; Mūlapatra-sādhana: s.a. ಕ್ರಯಮೂಲಪತ್ರ; Krayamūlapatra; ಮೂಲಪತ್ರಸಾಧನವ ಬರೆದಾತ ಲೆಖದ ಸಂಗಯನು; (SII. IX, II, 582, 1537).

ಆಣೆಪತ್ರ; Āṇe-patra: ಆಣೆಮಾಡಿ ಕೊಟ್ಟ ಪತ್ರ, ಒಪ್ಪಿಗೆ ಪತ್ರ, ಕರಾರು ಪತ್ರ; affidavit, undertaking; ಚಕ್ರವರ್ತಿಗೆ ಬಿನ್ನಪಂಗೆಯ್ಯಲು ಕೇಳ್ದವಧಾರಿಸಿ ಬೊಪ್ಪನಂ ದಂಡಿಸಿ ಸಮಸ್ತ ಪ್ರಧಾನರ ಸಂನಿಧಾನದಲು . . . . . ನೀನುಂ ನಿನ್ನ ವಂಶದವರುಂ ಹೊಟಲ ಮನ್ನೆಯವು ಮಾಣ್ಬುದೆನ್ದು ಮಾಣಿಸಲಾತನುವನ್ತೆ=ಗೆಯ್ವನೆನ್ದು ಆಣೆಪತ್ರಮಂ ಕೊಟ್ಟು (SII. IX, I, 169, 1104).

ಆಣೆವೋಲೆ; ಆಣೆಭಾರದ ಓಲೆ; Āṇe-vōle, Āṇebhārada vōle: s.a. ಆಣೆಪತ್ರ; Āṇepatra; ನೀವು ಯಿತ್ತಂಡವು ವಿದ್ವಾಂಸುಗಳು ಹೇಳಿದ ಹಾಗೆ ಕೇಳುವೆಉ ಯೆಂದು ದಣ್ನಾಯ್ಕರ ಹೆಸರ ಆಣೆವೋಲೆಯನ್ನು ಕೊಟ್ಟಲ್ಲಿ . . . . ದಣ್ನಾಯ್ಕರ ಹೆಸರ ಆಣೆ ಭಾರದ ಒಲೆಯನು ಕೊಟ್ಟರು; (SII. XX, 232, 1412).

ಸಂಸ್ಥಾಪತ್ರ; Saṁsthāpatra: ಕರಾರುಪತ್ರ; Deed of settlement; ಕರ ಅಥವಾ ಇತರ ವ್ಯವಹಾರಗಳ ವ್ಯವಸ್ಥೆಯನ್ನು ತಿಳಿಸುವ ಪತ್ರ; A document of agreement dealing with taxes or any other transactions; ಕರಂಜೋಳದ ಊರೊಡೆಯ ಕೇತನಯ್ಯಂಗೆ ಕೊಟ್ಟ ಸಂಸ್ಥಾಪತ್ರವೆನ್ತೆನ್ದೊಡೆ; (SII. XVIII, 41, 996); ಶ್ರೀಮತ್‌ಗೋಯಿನ್ದಪಯ್ಯರಸರ್ ಕನ್ದಗಲೆಯೂರೊಡೆಯಗ್ಗ೯ಂ ಗಾವುಣ್ಡುಗಳ್ಗಂ ಕೊಟ್ಟ ಸಂಸ್ಥಾಪತ್ರಂ; (Ibid., XV, 525, 1014)

ಸಂಸ್ಥಾ ಶಾಸನ; Saṁsthā-śāsana: s.a. ಸಂಸ್ಥಾಪತ್ರ; Saṁsthāpatra; ಕಾಳಿಯಪ್ಪಸೆಟ್ಟಿಯರಿಗೂ ಹದಿನೆಂಟು ಸೀಮೆಯ ಕಯಲಿಕೊಟ್ಟ ಸಂಸ್ತ ಶಾಸನದ ಕ್ರಮವೆಂತೆಂದರೆ; (EC. IX(O), Cp. 37, 1396).

ಸಾಗುವಳಿಯ ಶಾಸನ; Sāguvalliya śāsana: ಸಾಗುವಳಿಗೆ ಕೊಟ್ಟ ಭೂಮಿಯ ಬಗೆಗಿನ ಕರಾರು ಪತ್ರ; Deed of agreement regarding the land given for cultivation; ಪ್ರಜೆಗಳಿಗೆ ಕೊಟ್ಟ ಗ್ರಾಮದ ಸಾಗುವಳಿಯ ಶಾಸನಕ್ರಮವೆಂತೆಂದರೆ; (SII. IX, II, 681, 16th cent.)

ಸಾಧನ; Sādhana: ಕರಾರು ಪತ್ರ; Document of agreement; (SII. XVI, 17, 1405).

೫. ಓಲೆಗಳು, ಕಡಿತಗಳು, ಇತರ ದಾಖಲೆಗಳು

5. DOCUMENTS ON PALM-LEAF AND CLOTH AND OTHER RECORDS

ಓಲೆ; Ōle; ಪತ್ರ, (1) ತಾಳೆಗರಿಯ ಮೇಲಿನ ಬರಹ; A document or letter written on palm-leaf; (EC. V(O), Ak.113, 1318); ಶ್ರೀಮದೇಕಾಂತದ ರಾಮಯ್ಯಂಗೆ ಸಂಕಗೌಂವುಂಡನೋಲೆಯಂ ಕುಡುವ ಠಾವು; (EI. XXIX, 19, 11th cent.) (2) ದಾಖಲೆ; Document; ಕಾಮರಸವೊಡೆಯರು ನಂದಿಯ ಸಿದೇದೇವರ ಸ್ತಾನಿಕರಿಗೆ ಕೊಟ್ಟ ಭಾಶಾಪತ್ರದ ವೋಲೆಯ ಕ್ರಮವೆಂತೆಂದರೆ (EC. VI(O), Tk.38, 16th cent.) (3) ಒಪ್ಪಿಗೆ ಪತ್ರ; Letter of undertaking; ಒಡ್ಡಮನೊಡ್ಡಿ ಓಲೆಯಂ ಕೊಟ್ಟಡವರು ಕೊಟ್ಟೋಲೆಯಂ ಕೊಂಡು; (EI. V, 25E, 1200) (4) ಪತ್ರ; message; ಓಲೆಯ ಚೆಟ್ಟಿಸೆಟ್ಟಿ; (SII. XX, 78, 1118).

ಕಡತ, ಕಡಿತ; Kaḍata, Kaḍita: (1) ಬರಹಕ್ಕೆಂದು, ವಿಶೇಷತಃ ಲೆಕ್ಕಗಳನ್ನು ಬರೆಯಲು ಮಾಡಿದ ಕಪ್ಪು ತೊಡೆದ ಬಟ್ಟೆ (ಮೇಣಗಮ್ಮಟ); A long piece of cloth smeared with black for the purpose of writing, especially accounts. (2) ದಾಖಲೆ, ಲೆಕ್ಕಪತ್ರ; Record, Accounts; ಕಡಿತವೆಗ್ಗ೯ಡೆ (APGAS. III,

Gb. 4, 1093); (3) ಹಲಗೆ, ಬಟ್ಟೆ, ಓಲೆ ಇತ್ಯಾದಿ ಬರಹದ ಸಾಧನ; Writing material such as board, cloth, palm-leaf etc.; ಬರೆವಂ ಬ್ರಹ್ಮಂ ಕಡಿತಂ ಧರೆ ಬಳಪಂ ಹಿಮಗಿರೀಂದ್ರವಾದೊಡವೇನುಂ ನಿರುತಂ ಲೆಕ್ಕಿಸನೆಱುಗುಮೆ; (SII. XX, 154, 1172).

ಕಾರ್ಯಪತ್ರ; Kārya-patra: ಮಾಡಬೇಕಾದ ಕಾರ್ಯವನ್ನು ನಿರೂಪಿಸುವ ಪತ್ರ; Letter indicating the work to be executed; Memorandum ಮುದ್ರಿಕೆಯ ಒಡೆದು ಅಂತಸ್ಥಿತ ಕಾರ್ಯಪತ್ರಮಂ ಬಾಚಿಸಿ ನೋಡಿ (ಆದಿ ಪು. Ādi Pu. IV, 86 ವ, Pr. 10th cent.).

ಕೂಚಿ; (ಕೂಚಿಪತ್ರ); Kūchi (Kūchi-patra): ಒಪ್ಪಿಗೆಪತ್ರ; Undertaking; ಹಡಿಕೆ ಹಾರಣೆಯನಾವುದುವಂ ಕೊಳ್ಳೆವೆಂದು ಕೊಟ್ಟ ಕೂಚಿ . . . . ಬ್ರಾಹ್ಮಣರಿಗೆ ಕೊಟ್ಟ ಕೂಚಿ; (KI. V, 67, 1216).

ಧಾರೆಯ ಓಲೆ; Dhāreya Ōle: ಧಾರೆಯೆರೆದು ಕೊಟ್ಟ ದಾನಪತ್ರ; Gift deed granted through libation of water; ಹರಿಯಕ ನಾಯಕಿತ್ತಿ ಕೊಟ್ಟ ಧಾರೆಯ ಓಲೆಯ ಕ್ರಮವೆಂತೆಂದರೆ; (EC. VI(O), Kp.27, 15th cent.).

ಪಟ; Paṭa: ಚಿತ್ರ; ನಕಾಶೆ; Drawing, map; ಆ ಭೂಮಿಯ ವನಯವನ್ನು ಪಟದಲ್ಲಿ ಬಂದು ನೋಡಿ; (SII. XX, 232, 1412).

ಪತ್ತಳೆ; ಪತ್ಥಳೆ; Pattaḷe; Patthaḷe: ಆಜ್ಞಾಪತ್ರ; Letter of order; ಶ್ರೀಮದಶೇಷಮಹಾಜನಂಗಳು ಕೊಟ್ಟ ಪತ್ತಳೆಯ ಕ್ರಮದಿಂ; (EC. IX(R), Bl. 244, 1200).

ಪತ್ರ; Patra: ಬಿನ್ನಹ ಪತ್ರ; Application, petition, document; (ಬ.ಪು. Ba.Pu. II, 5, 54, 14th cent.).

ಪತ್ರಪಟ; Patrapaṭa: ಬಟ್ಟೆಯ ಮೇಲೆ ಬರೆದ ದಾಖಲೆ; A document written on cloth; ಯೀ ಪತ್ರಪಟ ಅಡಕಕೆ ಬಾಳಿಸಿಕೊಡುವಂತಾಗಿ; (SII. IX, II, 517, 1525).

ಬಿನ್ನವತ್ತಳೆ; Binnavattaḷe: ಬಿನ್ನಹ ಪತ್ರ; Letter of request; ಸೋಮೇಶ್ವರದೇವಂ . . . . . . ಬಿನ್ನವತ್ತಳೆಯಂ ಬರಿಯಿಸಿ ಬರಸಿ (EI. V, 25, 1200).

ಭಾಷಾಪತ್ರದ ಓಲೆ; Bhāsha-patrada ōle: ವಾಗ್ದಾನ ಪತ್ರ; Letter of undertaking; ಕಾಮರಸವೊಡೆಯರು ನಂದಿಯ ಸಿದೇದೇವರ ಸ್ತಾನಿಕರಿಗೆ ಕೊಟ್ಟ ಭಾಷಾಪತ್ರದ ವೋಲೆಯ ಕ್ರಮವೆಂತೆಂದರೆ; (EC. VI(O), Tk.38, 16th cent.).

ಮಾನ್ಯದ ಓಲೆ; Mānyada Ōle: ಭೂಮಿದಾನಕ್ಕೆ ಸಂಬಂಧಿಸಿದ ಪತ್ರ; Document relating to grant of land; (EC. III(R), Nj.381, 16th cent.).

ಮುದ್ರಿಸಿದ ಓಲೆ; Mudrasida ōle: ರಾಜನ ಮುದ್ರೆಯಿದ್ದ ಪತ್ರ; Letter with royal seal; (ಆದಿ.ಪು. Ādi Pu. 4, 84, ವ. Pr. 10th cent.).

ಶಾಸನ ಪತ್ಥಳೆ; Śāsana-patthale: ಶಾಸನ ಪತ್ರ; ದಾನಗಳ ವಿವರಗಳನ್ನೊಳಗೊಂಡ ಪತ್ರ; A record with details of grants; (EC. II(R), 455, 13th cent.).

ವೋಲೆ; Ōle: s.a. ಓಲೆ; Ōle; ಯಿನ್ತಿವರುಗಳ ಸಮಕ್ಷದಲು ಕೊಟ್ಟ ವೋಲೆಯ ಕ್ರಮವೆಂತೆಂದಡೆ; ಭೂಮಿಯ ವಿಷಯವಾಗಿ ಹಳ್ಳಿ ಹಿರಿಯೂರಲು ಕರವಿಲ್ಲೆಂದು ಆ ಮಹಾಜನಂಗಳಿಗೆ ಆ ಸ್ಥಾನಿಕರು ಕೊಟ್ಟ ವೋಲೆ; (EC. V(O), Ak.49, 1215; Ibid. VII(R), Ng.151, 1521).

೬. ಜಯಪತ್ರಗಳು

6. DOCUMENTS OF VERDICT

ಜಯಪತ್ರ; Jayapatra: (1) ಭೂಮಿ ಇತ್ಯಾದಿ ವಿವಾದಗಳಲ್ಲಿ ಗೆದ್ದವರಿಗೆ ಕೊಡುವ ಪತ್ರ; A writ of victory granted to a disputant; Decree; ಶ್ರೀ ವೀರಪ್ರತಾಪ ದೇವರಾಯಮಹಾರಾಯರ ಅರಮನೆಯ ಪುರೋಹಿತ ಸಂಗಮದೇವಗಳು ವಿದ್ವಾಂಸುಗಳು ಹೇಮದೇವಾಚಾರ್ಯರಿಗೆ ನಿರ್ನೈಸಿ ಕೊಟ್ಟ ಜಯಪತ್ರ; (SII, XX, 232, 1412); ಕಾಳಗೌಡ ದಿವ್ಯವ ಹಿಡಿದು ಗೆಲ್ದುಕೊಂಡ ಜಯಪತ್ರ; (EC. VIII(O), Sb.387, 1249). (2) ಶಾಸ್ತ್ರಾದಿಗಳ ವಾದದಲ್ಲಿ ಗೆದ್ದವರಿಗೆ ರಾಜನು ಕೊಡುತ್ತಿದ್ದ ಗೆಲುವಿನ ಸೂಚಕ ಪತ್ರ; Letter indicating the victory of a debator in learned discourses, presented by the king. ಶ್ರೀ ವಾದಿರಾಜಸೂರಿಗೆ ಸಭೆಯೊಳ್ ಜಯಸಿಂಹ ಚಕ್ರವರ್ತಿಗೆ ಜಯಪತ್ರಂ ಬರೆದು ಕೊಡುತಮಿರ್ಪ್ಪುದೆ ಬಿನದಂ; (EC. VIII(O), Na.37, 1147). (3) ಪಂಥದಲ್ಲಿ ಗೆದ್ದವರಿಗೆ ಕೊಡುವ ಪ್ರಮಾಣಪತ್ರ; Certificate given to the person winning a challenge; ಬಿಜ್ಜಣದೇವನ ಕೈಯ್ಯಲು

ಜಯಪತ್ರವಂ ಪೂಜೆಸಹಿತಂ ಕೊಂಡುದುಮಂ; (EI. V, 25, 1200).

ಜಯಪತ್ರಿಕಾಕ್ರಮ; Jayapatrikā-krama: ಜಯಪತ್ರಿಕೆಯಲ್ಲಿ ತೋರಿಸಿದ ವಿವರಗಳ ಪರಿವಿಡಿ; Order of details contained in a Jayapatra; (SII. XX, 391, 1538).

ಜಯಪತ್ರಿಕೆ; Jayapatrike: s.a. ಜಯಪತ್ರ; Jayapatra; (SII. XX, 391, 1538).

೭. ಪ್ರಶಸ್ತಿಗಳು
7. EULOGIES

ಕೀರ್ತಿಶಾಸನ; Kīrti-śāsana: ಯಾವನೊಬ್ಬ ವ್ಯಕ್ತಿಯ ಕೀರ್ತಿಯನ್ನು ಬಣ್ಣಿಸುವ ಶಾಸನ; Inscription engraved for praising the greatness of an individual; (EC. VI(O), Mg.25, 14th cent.).

ಗುಣಶಾಸನ; Guṇa-śāsana: ಯಾವನೊಬ್ಬನ ಸದ್ಗುಣ ಮತ್ತು ವಿದ್ವತ್ತೆಗಳಿಗಾಗಿ ಕೊಟ್ಟ ದಾನ ಶಾಸನ; Record registering a grant given in appreciation of the virtues and scholarship of an individual; ನ್ಯಾಸಂ ಪ್ರಭಾಕರವಂ ವಕ್ಕಾಣಿಸಿ ಗುಣಶಾಸನದಿನುಂಬ ಭಟ್ಟವೃತ್ತಿ; (EI. XX, 6, 1012).

ಧರ್ಮಕೀರ್ತಿಪ್ರಶಸ್ತಿ; Dharmakīrti-praśasti: ಧರ್ಮಕಾರ್ಯಗಳನ್ನು ವರ್ಣಿಸುವ ಶಾಸನ; Inscription glorifying the religious deeds; (SII. XV, 254, 1539).

ಪ್ರಶಸ್ತಿ; Praśasti; ವ್ಯಕ್ತಿಯೊಬ್ಬನ ಗುಣ, ಕೀರ್ತಿಗಳನ್ನು ಬಣ್ಣಿಸುವ ಪ್ರಶಸ್ತಿಯ ಶಾಸನ; An inscription eulogising an individual for his virtues, greatness etc. ತುಯ್ಯಲ ಚಂದಯ್ಯಂ ಪ್ರಶಸ್ತಿಯಂ ಬರೆಯಿಸಿದಂ; (EI. XIX, 51, 963-64).

೮. ರಾಜಾಜ್ಞೆಗಳು
8. ROYAL ORDERS

ರಯಿಸ, ರಾಯ್ಸ; Rayisa, Rāysa: s.a. ರಾಯಸ; Rāyasa below; ಗಲುಡುಪ್ರಜೆಗಲುಡುಗಳಿಗೆ ದೇವರು ರಾಯ್ಸವ ಕೊಟ್ಟರಾಗಿ; (EC. XII(O), Ck.26, 1314); (ಇಲ್ಲಿ ದೇವರು ಅಂದರೆ ಹೊಯ್ಸಳ ವೀರಬಲ್ಲಾಳದೇವರಸರು; In this passage dēvaru stands for Hoysaḷa Vīra-Ballāḷadēvarasa).

ರಾಯಸ; Rāyasa: ರಾಜರ ಆಜ್ಞಾಪತ್ರ; Royal order, charter; (SII. IX, II, 429, 1405; ಸೂ.ಸು. XVII, 29, 13th cent.).

೯. ದಾಖಲೆಗಳಿಗೆ ಸಂಬಂಧಿಸಿದ ಇತರ ಪದಗಳು
9. OTHER TERMS RELATING TO DOCUMENTS

ಒಪ್ಪ, ವೊಪ್ಪ; Oppa, Voppa: ಗುರುತು, ಸಹಿ; Identity mark; Signature; ಹೆಗ್ಗಡೆಯ ವೊಪ್ಪ; (EC. VIII (O), Tl.24, 15th cent.).

ಚಿತ್ರಲಿಪಿಲೇಖ; Chitra-lipi-lēkha: ಅಕ್ಷರಗಳನ್ನು ಸುಂದರವಾಗಿ ಬರೆಯುವುದು; Writing the script in an attractive hand; ಛಪ್ಪನ್ನದೇಶ ಚಿತ್ರಲಿಪಿಲೇಖಕೋವಿದಂ; (SII. IX, II, 507, 1517).

ಪೊಸಗನ್ನಡ; Posagannaḍa: ಹೊಸಗನ್ನಡ ಭಾಷೆ; New Kannada language; Modern Kannada language; (KI. I, 25, 1186).

ಬರಹ (ಸ್ವಹಸ್ತ); Baraha (Svahasta): ಕೈಗುರುತು, ಸಹಿ; One's own hand, Signature; ವಿದ್ವಾಂಸುಗಳ ಸುಹಸ್ತದ ಬರಹಂಗಳು ಸಂಗಮದೇವಗಳ ಬರಹ ಶ್ರೀಧರ ದೀಕ್ಷಿತರ ಬರಹ ವಿರೂಪಾಕ್ಷಭಟ್ಟರ ಬರಹ . . . . ಬುಕ್ಕಂಣಗಳ ಬರಹ; (SII. XX, 232, 1412).

ಭಾಷಾಕ್ರಮ; Bhāshā-krama: ಶಾಸನದ ವಿವರ; ಪಾಠ; Text of the document; ಧರ್ಮಶಾಸನದ ಭಾಷಾಕ್ರಮವೆಂತೆಂದಡೆ; (SII. XV, 248, 1433).

ಮರ್ಯಾದೆ; Maryāde: ನಿಬಂಧನೆ, ನಿಯಮಗಳ ವಿವರಣ ಪತ್ರ; Ordiance; ಶ್ರೀ ಪೃಥ್ವೀವಲ್ಲಭಮಹಾರಾಜಾಧಿರಾಜ . . . . . . ಶ್ರೀ ಕನ್ನರದೇವನ ಮಾಡಿದ ಮರ್ಯ್ಯಾದೆ ಎಲೆಯ ಪೇಜೆಗೆ ಎರಡು ಪಣವಡ್ಡಂ ಸುಂಕಸಮುಚ್ಚಯ ನಡೆವುದು; (SII. IX, I, 76, 991); ಇನ್ತೀ ಮರ್ಯ್ಯಾದೆಯಂ ತಪ್ಪದೆ ಪ್ರತಿಪಾಳಿಸುವರ್; (Ibid. XV, 525, 1014-15). Cf. ಶಾಸನ ಮರ್ಯಾದೆ; Śāsana-maryāde below.

ಶಾಸನಪದ್ಧತಿ; Śāsana-paddhati: ರಾಜಶಾಸನವನ್ನು ಬರೆಯುವ ರೀತಿ; Format of a royal document; ರಚಿತಾದಿತ್ಯದೇವೇನ ಸೇಯಂ ಶಾಸನಪದ್ಧತಿಃ; (HAS. XVIII, 14, 1183).

ಶಾಸನಮರ್ಯಾದೆ; Śāsana-maryāde: ದತ್ತಿಯ ಕರಾರುಗಳು; Conditions of a grant; (EC. III(R), 455, 13th cent.).

ಶಾಸನ ಪಟೆ (ಪಟ್ಟೆ) Śāsana-paṭe (paṭṭe): ಶಾಸನದಲ್ಲಿ ಬರೆಯಿಸಿದ ವಿವರ; Details given in the inscription; ಭೂದಾನ ಧರ್ಮಶಾಸನದ ಪಟೆ; (SII. IX, II, 510, 1518).

ಶಾಸನದ ಭಾಷಾಕ್ರಮ; Śāsanada bhāshākrama; ರಾಜಶಾಸನದ ಕ್ರಮ ಮತ್ತು ವಿವರ; The order and details of a royal grant; (KI. III, I, 17, 1556).

ಸ್ವಹಸ್ತದೊಪ್ಪ; Svahastad-oppa: ಹಸ್ತಾಕ್ಷರ, ಸಹಿ, ರುಜು; Signature; ಆ ನಾಡವರುಗಳ ಸ್ವಹಸ್ತದೊಪ್ಪಗಳು ಆ ನಾಡ ಸೇನಬೋವ ಬಾಚಣ್ಣನ ಬರಹ ಮಂಗಳ; (EC. XI, Cd.32, 1286).

ಸಿವುಡು; Sivuḍu: ಸೂಡು; ಕಟ್ಟು; ಓಲೆಗಳ ಕಟ್ಟು; ಲೆಕ್ಕದ ಪುಸ್ತಕ; Bundle; Bundle of palm-leaves; Account book; (ಸಿ.ಚ. VIII, 70, 13th cent.).

ಸೀವುಡೆ; Sīvuḍe: ಸಿವುಡು, ಕವಳಿಗೆ, ಕಟ್ಟು, ಲೆಕ್ಕದ ಪುಸ್ತಕ (ನೀ.ವಾ.; ನೀ.ವಾ. ಕನ್ನಡ ವ್ಯಾಖ್ಯಾನ; Nī.Vā. Kannada commentary, XVIII, 52, 12th cent.).

ಸೀ(ಶೀ)ಘ್ರಲಿಖಿತ; Sī(Śī)ghra-likhita: ತೀವ್ರವಾಗಿ ಬರೆಯುವ ರೀತಿ; Mode of writing fast; ರಾಚೋಜನ ಸೀಘ್ರಲಿಖಿತ; (SII. IX, I, 115, 1054).

ಹಳಗನ್ನಡದ ಲಿಪಿ; Haḷagannaḍa-lipi: ಹಳಗನ್ನಡ ಬರಹ; Writing of old Kannada script; (ಬ.ಪು. II, 5, 53, 14th cent.).

ಅಧ್ಯಾಯ ೧೨ CHAPTER XII

ವೈಯಕ್ತಿಕ ದಾನ, ದತ್ತಿಗಳು

PERSONAL GRANTS AND GIFTS

(ವೈಯಕ್ತಿಕ ಉಂಬಳಿಗಳು, ಹಕ್ಕುಗಳು, ಮರ್ಯಾದೆಗಳು)

(PERSONAL FIEFS, RIGHTS AND PRIVILEGES

೧. ನಿರ್ದಿಷ್ಟ ಉದ್ಯೋಗ ಅಥವಾ ವೃತ್ತಿಗಾಗಿ ಹಾಕಿ ಕೊಟ್ಟ ಉಂಬಳಿಗಳು

1. GRANTS GIVEN FOR SPECIFIED WORK OR PROFESSION

ಅಕ್ಕರಿಗ ವೃತ್ತಿ; Akkariga-vṛitti: (ಅಕ್ಕರಿಗ - ವಿದ್ವಾಂಸ; Learned); ಉಪಾಧ್ಯಾಯನಿಗೆ ಕೊಟ್ಟ ದತ್ತಿ; Grant to a Teacher; Fellowship; ನಾಗದೇಸಿಗರ್ಗ್ಗೆ ನಿತ್ಯಸ್ಥಿತಿಯೆಂದು ಪೊಟಟ್ಟಾಹಾರಮುಂ ವರಿಷಕ್ಕೊಂದು ಕಪ್ಪಡವು ವನಿಕ್ಕಿಯೋದಿಸಿ ಗುಣಶಾಸನದಿನಾಳ್ವಕ್ಕರಿಗ ವೃತ್ತಿ ಮತ್ತರಿಪ್ಪತ್ತಯ್ದು ಮನೆಯೊಂದು; (EI. XX, 6, 1012).

ಅಣುಗಜೀವಿತ; Aṇuga-jīvita: ಪ್ರೀತಿ ಪಾತ್ರನಾದವನಿಗೆ, ವಿಶೇಷತಃ ರಾಜಕುಮಾರನಿಗೆ ಅವನ ಉಪಜೀವನಕ್ಕಾಗಿ ಕೊಟ್ಟ ದತ್ತಿ; Grant made to a favourite of a king, such as a prince, for his maintenance; ಶ್ರೀಮತು ಮಾರಸಿಂಗಪೆರ್ಮಾಡಿ ಪುರಿಗೆರೆ ಮೂನೂಱು ಬೆಳುವಲ ಮೂನೂಱುಮನಣುಗಜೀವಿತಮಾಗಾಳುತ್ತಿರೆ; (KI. V, 4, 970). Cf. ಕುಮಾರ ವೃತ್ತಿ, Kumāra-vṛitti below; ತ. ಪಿಳ್ಳೈವರಿ, Ta. Pillaivari.

ಅರ್ಧಮಾನ್ಯ; Ardha-mānya: ಉಂಬಳಿ ಅರ್ಧಭಾಗ; Half of grant; ಹಿಂಚಗೇರಿಯ ಮಂನೆಯ ಮೇಲಾಳ್ಕೆಯುಂ ಪ್ರಭುತ್ವದ ಅರ್ದ್ಧಮಾನ್ಯ; (SII. XX, 128, 1186).

ಅರ್ಧವೃತ್ತಿ; Ardha-vritti: ಉಪಜೀವಿತಕ್ಕಾಗಿ ಕೊಡುವ ಉಂಬಳಿಯ ಅರ್ಧಭಾಗ; Half the Portion of land granted for one's maintenance; ಪಾದಪೂಜೆಯನಿಕ್ಕಿ ಆ ಅರ್ದ್ಧವೃತ್ತಿಯ ಮಾಡಿದೊಕ್ಕಲ; (HAS. XVIII, 12, 1175).

ಅರಮಾನ್ಯ; ಅರೆಮಾನ್ಯ; Ara-mānya, Are-mānya: ದಾನವಾಗಿ ಕೊಟ್ಟ ದತ್ತಿಯ ಅರ್ಧಭಾಗ; Half of the grant given as gift; ಉಭಯಂವೆರಸಿ ಈ ಗ್ರಾಮಕೆ ಅಱೆಮಾನ್ಯವು ಮಠಕ್ಕೆ ಅಱಮಾನ್ಯವಾ[ಗಿ] ಕೊಟದು; (SII. IX, II, 466, 1472).

ಉಂಬಳಿ; ವುಂಬಳಿ; Uṁbaḷi; Vuṁbaḷi: ಕರಮುಕ್ತವಾಗಿ ಕೊಟ್ಟ ಭೂಮಿ; Land granted free of taxes; (SII, IX, II, 671, 1560)

ಊರುಂಬಳಿ; Ūr-umbaḷi: ಉಂಬಳಿಯಾಗಿ ಕೊಟ್ಟ ಊರು; A village granted as a gift; (EC. VIII(O), Tl.24, 15th cent.).

ಕಟ್ಟುಕೊಡಗಿ; Kaṭṭu-koḍagi: ಕೆರೆ ಕಟ್ಟಿಸಿದ್ದಕ್ಕಾಗಿ ಕೊಟ್ಟ ದತ್ತಿ; Grant for constructing a tank; ಕೆಱೆಕೊಡಗೆ ಹತ್ತುವೊರವನಿಕ್ಕಿದಡಿವುಗೆ ಕಟ್ಟುಕೊಡಗಿಯೆರಡರ ಮರಿಯಾದೆಯಲು; (EC. X(O), Sp.12, 1386).

ಕರಣಿಕರ ವರ್ತನೆ; Karaṇikara vartane: ಲೆಕ್ಕಪತ್ರಗಳ ಅಧಿಕಾರಿಗೆ ಹಾಕಿಕೊಟ್ಟ ಉಂಬಳಿ; Fief granted for an accounts official; (SII. IX, II, 663, 1556).

ಕಾಳಗಂಬದ ಮಾನ್ಯ; Kāḷagaṁbada mānya: ಧಾನ್ಯವನ್ನು ಒಕ್ಕುವ ಕಣದಲ್ಲಿ ಒಂದು ಅಳತೆ ಧಾನ್ಯವನ್ನು ಧರ್ಮಾರ್ಥವಾಗಿ ಕೊಡುವುದು; A measure of grains to be given as gift on the threshing floor; ಯೀ ಶಿಲಾಶಾಸನವ ಬರೆದ ಅಕಸಾಲೆ ಸಿರಿಯಣಗೆ ವೊಕುಳದ ಕಾಲಗಂಬದ ಮಾಂನ್ಯವನು ನಡೆಸಿಬಹನು; (SII. IX, II, 647, 1552).

ಕುಮಾರವೃತ್ತಿ; Kumāra-vṛitti: ರಾಜಕುಮಾರರ ನಿರ್ವಹಣೆಗೆ ಕೊಟ್ಟ ದತ್ತಿ; Grant for the upkeep of the order of the princes; ಆ ಚಾಳುಕ್ಯ ವಿಕ್ರಮಾದಿತ್ಯ ಗಂಗಪೆರ್ಮಾಡಿದೇವರು ನೊಳಂಬವಾಡಿ ಮೂವತಿಚ್ಚಾಸಿರಮುಮ ಕುಮಾರವೃತ್ತಿಯಿಂ ರಾಜ್ಯಂಗೆಯ್ಯುತ್ತಮಿರೆ; (SII. IX, I, 118, 1057); ಕುಮಾರ ವ್ರಿತ್ತಿಯಲು ಕೆಂಬಾಳ ಕಲ್ಲಗಉಡ ಕೆರೆಯಂ ಕಟ್ಟಿ ದೇವಾಲ್ಯವನೆತ್ತಿಸಿ ಬಿಟ್ಟ ಗದ್ದೆ ಕಂಡುಗ ನಾಲ್ಕು . . . . (EC. V(O), Cn.207, 1098).

ಕೊಡಗೆ, ಕೊಡಿಗಿ, ಕೊಡಂಗೈ; Koḍage, Koḍigi, Kodangai: ದಾನವಾಗಿ ಬಿಟ್ಟ ಭೂಮಿ; Gift land; ಶ್ರೀಮತು ಹನುಮಪ್ಪನಾಯಕರು ಶ್ರೀ ಕೃಷ್ಣರಾಯರಿಗೆ ಧರ್ಮವಾಗಬೇಕೆಂದು ಕೊಟ ಕೊಡಿಗಿ ಮಾನ್ಯದ ಹೊಲ; (EC. X(O), Mb.37, 1527); ಮತ್ತವಾ ಕೊಡಗೆಯೊಳಗ; (SII. XVIII, 121, 1122); ಕೆಱೆಗೆ ಬಿಟ್ಟ ಕೊಡಂಗೈಯ ಗಱ್ದೆ; (Ibid. 65, 1059).

ಗಣಭೋಗ; ಗಣವೃತ್ತಿ; Gaṇabhōga; Gaṇa-vṛitti; ಸಾಮೂಹಿಕವಾಗಿ ಉಪಭೋಗಿಸಲು ಕೊಟ್ಟ ಉಂಬಳಿ, ಹಲವು ಜನರಿಗೆ ಕೂಡಿ ಕೊಟ್ಟ ಉಂಬಳಿ; A grant given to a group of people to be enjoyed jointly; ಮಹಾಜನಂಗಳೊಳಗೆ ಗಣವೃತ್ತಿಮಂತರಪ್ಪ; (KI. II, 40, 1261; IEG. p.292).

ಗವುಡುಗೊಡಗಿ; Gavuḍugoḍagi: s.a. ಗೌಡಉಂಬಳಿ; Gauḍa-umbaḷi; (EC. VI(O), Cm.82, 13th cent.); ಹೊಂನಮಾರಗವುಡನ ಮಗ ಹೊಂನಮಾರಗವುಡಂ ಗವುಡುಗೊಡಗೆಯಾಗಿ; (Ibid. XII(O), Tm.27, 1287).

ಗೌಡಉಂಬಳಿ; Gouḍa-umbaḷi: ಕಾರ್ಯನಿರ್ವಹಣೆಗಾಗಿ ಗ್ರಾಮದ ಗಾವುಂಡನಿಗೆ ಕೊಟ್ಟ ಭೂದಾನ; Land granted to a village officer for carrying out his functions; (EC. VI(O), Tk.12, 1166).

ಗೌಡುಮಾನ್ಯ; Gauḍu-mānya: s.a. ಗೌಡಉಂಬಳಿ; Gauda-umbaḷi; (SII. XX, 248, 1228).

ಚಕ್ರವರ್ತಿದತ್ತಿ; Chakravarti-datti: ಚಕ್ರವರ್ತಿಯು ಕೊಟ್ಟ ದತ್ತಿ; Gift made by a sovereign; (SII. XI, I, 52, 1007).

ಜೋಶ್ಯರ ಮಾಂನ್ಯ; Jyōśyara mānya: ಜೋತಿಷಿಗೆ ಉಪಜೀವನಕ್ಕಾಗಿ ಕೊಟ್ಟ ಉಂಬಳಿ; Land given to an astrologer for maintenance; ಕೊಂಡಾಜ್ಯೋಶ್ಯರಿಗೆ ಯಿಕುಳದ ಹೊಂನೂ ಧಾರೆನೆರೆದು ಗ್ರಾಮದಲ್ಲಿ ಕುಟುಂಬ ವಾಸವಾಗಿ ಯಿರಬೇಕು ಯಂದು . . . . . . ಯೀ ಜ್ಯೋಶ್ಯರ ಮಾನ್ಯದೊಳಗೆ ಆರೊಬ್ಬರು ಅಭಿಲಾಷೆಪಟ್ಟು ತಕ್ಕೊಂಡವರು; (SII. IX, II, 544, 1532).

ತಳಾಱವೃತ್ತಿ; Taḷāra-vṛitti: ತಳವಾರನಿಗೆ ಉಪಭೋಗಕ್ಕೆಂದು ಕೊಟ್ಟ ಭೂಮಿ; Land granted to a Taḷāvara for maintenance; (SII. XX, 144, 1166).

ದಂಡಿಗೆ; Daṇḍige: ಪಲ್ಲಕ್ಕಿಯನ್ನು ಹೊರುವದರ ವೆಚ್ಚಕ್ಕಾಗಿ ಕೊಟ್ಟ ಉಂಬಳಿ; Land granted for expenses for bearing palanquin; ಆ ಹೊಂನಪ್ಪನ ಮಗಳು ಬೈಯಿಚವ್ವೆಗೆ ದಂಡಿಗೆಯ ಬೀಯಕೆ ಕೊಟ್ಟ ತಾವರೆಕೆಱೆ ಹೊಲದೊಳಗಣ; (EC. IX(O), Ma.81, 1340).

ದಂಡಿಗೆ ಉಂಬಳಿಗ್ರಾಮ; Danḍige-Umbaḷi-grāma: ಪಲ್ಲಕ್ಕಿಯನ್ನು ಹೊರುವವರಿಗೆ ಉಂಬಳಿ ಹಾಕಿಕೊಟ್ಟ ಊರು; Village granted as free gift for palanquin bearers; (EC. XII(O), Tm.59, 1543).

ದತ್ತಿ; Datti: ದಾನ, ಕೊಡುಗೆ; Gift, grant; (1) ದಯಾದತ್ತಿ (2) ಪಾತ್ರದತ್ತಿ (3) ಸಮದತ್ತಿ (4) ಸಕಳದತ್ತಿ; ದತ್ತಿಯೆಂಬುದು ದಯಾ, ಪಾತ್ರ, ಸಮ ಸಕಳ ಭೇದದಿಂ ಚತುರ್ವಿಧಮಕ್ಕುಂ (ಅಜಿ.ಪು. Aji.Pu. XII, 1 ವ, Pr.); ಎಂಟು ನಾಡ ಪದಿನರುವರುಂ ಅಯ್ಯಾವೊಳೆ ಪುರವರೇಶ್ವರರಪ್ಪ ಅಯ್ನೂರ್ವ್ವ ಸ್ವಾಮಿಗಳ್ ..... ಸಮಸ್ತ ತೆಲ್ಲಿಗರಯ್ವತ್ತೊಕ್ಕಲು ಮುಮುರಿದಂಣ್ಡಮು ...... ಬಿಟ್ಟ ದತ್ತಿ; (SII. IX, I, 139, 1074).

ದಾನಮೂಲ; Dāna-mūla: ದಾನದ ಮೂಲಕವಾಗಿ ಪಡೆದ ಒಡೆತನ; Right over a gift land; ಅವರ ದಾನಮೂಲವನು ತೊಡಸಿ ನಂಮ ಹದಿನೆಂಟು ಕಂಪಣ; (EC. VIII(O), Tl.196, 1405).

ದಾನಮೂಲಿ; Dāna-mūli: ದಾನಮೂಲದ ಹಕ್ಕನ್ನು ಪಡೆದವರು; Holders of the right of a gift land; ದಾನಮೂಲಿಗಳು ತೆರುವ ಹೊಂನಿನ ಮೇಲೆ ಹದಿಕೆಯನಿಕ್ಕಿಕೊಂಡು; (EC. VIII(O), Tl. 196, 1405).

ನಾಡ ತಳವಾರಿಕೆಯ ವರ್ತನೆ; Nāḍa-taḷavārikeya vartane: ನಾಡ ತಳವಾರತನಮಾಡುವುದಕ್ಕಾಗಿ ಹಾಕಿಕೊಟ್ಟ ಉಂಬಳಿ; Fief granted for holding the office of Talavāra of a region; (SII. IX, II, 663, 1556).

ನಾಯಕವಳಿತ; Nāyaka-vaḷita: ನಾಯಕನಿಗೆ ಕೊಟ್ಟ ಉಂಬಳಿ; A fief given to a Nāyaka; ಸಿಂದವಾಡಿಯಲು ಆದವಾನಿ ಮುಖ್ಯವಾಗಿ ಕೊಟ್ಟ ನಾಯಕವಳಿತದೊಳಗೆ; (SII. IX, I, 377, 1278).

ಪಲ್ಲಕ್ಕಿಯ ಉಂಬಳಿ; Pallakkiya Umbaḷi: s.a.ದಂಡಿಗೆಯ ಉಂಬಳಿ; Daṇḍigeya umbaḷi; ಶ್ರೀ ವೀರಪ್ರತಾಪ ಶ್ರೀವೀರಕೃಷ್ಣರಾಯರು . . . . ತಮಗೆ ಪಲ್ಲಕ್ಕಿ ಉಂಬಳಿಗೆ ಪಾಲಿಸಿದ ಪಾಂಡನಾಡ ವಳಿತಕೆ ಸಲುವ ಮೊರಬದಲಿ; (SII. IX, II, 523, 1528).

ಪ್ರತಿವ್ರಿತ್ತಿ; Prati-vritti: ಪುನರ್ದತ್ತಿ; ಮತ್ತೆ ದಾನ ಮಾಡುವದು; ಮೊದಲು ಕೊಟ್ಟ ದಾನವನ್ನು ನವೀಕರಿಸುವದು; Regranting a gift; renewal of an earlier grant; ಮಹಾಜನಂಗಳಿಗೆ ಪೂರ್ವದ ಬಳಿಗಾರ ಸ್ಥಳಂಗಳು . . . . . ನಿಟ್ಟೂರುಗಳೋಪಾದಿಯಾಗಿ ಪ್ರತಿವ್ರಿತ್ತಿ (EI. II, 40, 1261).

ಪ್ರಭುಮಾನ್ಯ; Prabhu-mānya: ಅರಸನಿಂದ ಉಂಬಳಿಯಾಗಿ ಪಡೆದ ಭೂಮಿ; Land gifted by the king; ತೆಂಕಲು ಕುಮುಸೆಯ ಪ್ರಭುಮಾನ್ಯಂ ಮೇರೆ ಪಡುವಲು ದೇವಣಗಾವೆಯ ಸೀಮೆ; (SII. XX, 154, 1172).

ಪ್ರಭುಸಾಮ್ಯ; Prabhu-sāmya: ಉಚ್ಚ ಅಧಿಕಾರಿಯ (ಪ್ರಭು) ಉಂಬಳಿಯ ಭೂಮಿ; Land granted for a person holding a high office (prabhu); ಮಹಾಪ್ರಧಾನಂ ಮನೆವೆರ್ಗ್ಗಡೆ ದಂಡನಾಯಕಂ ಕಂನಪಯ್ಯಂಗಟು ತನ್ನ ಪ್ರಭುಸಾಮ್ಯದೂರು ಕನ್ನವೂರಿಯ; (SII. XVIII, 96, 1089).

ಪಾದವೃತ್ತಿ; Pāda-vṛitti: ಉಪಜೀವಿತಕ್ಕಾಗಿ ಕೊಡುವ ಉಂಬಳಿಯ ಕಾಲುಭಾಗ; ¼ of the portion of land given for maintenance; (HAS. XVIII, 12, 1175).

ಬಾಳಜೀವಿತ; Bāḷajīvita: ಜೀವನೋಪಾಯಕ್ಕಾಗಿ ಕೊಟ್ಟ ಉಂಬಳಿ; Maintenance grant; ಸೇನಬೋವ ಸಿವಯ್ಯಂ ಶ್ರೀ ಮರುಳೇಶ್ವರದೇವರಿಗೆ [ದೀ]ಪಕ್ಕೆ ಕೊಟ್ಟ ಗಾಣವೆರಡು ಮಾದಿಗ ಬಾಳಜೀವಿತದಲ್ಲಿ ಕೊಟ್ಟು ನಡಸುವರು; (KI. II, 10, 1080);

ಬಿಲವೃತ್ತಿ; ಬೀಲವೃತ್ತಿ; **Biḷa-vṛitti, Bīḷa-vṛitti:** ರಾಜನು ತನ್ನ ಅಧೀನ ಅಧಿಕಾರಿಗೆ ಉಪಜೀವನಕ್ಕಾಗಿ ಕೊಟ್ಟ ದತ್ತಿ; Grant given by the king to his subordinate for his maintenance; ಶ್ರೀಮತ್ಪಂದಯ್ಯಂ; ..... ಬಿಲವೃತ್ತಿಯೊಳಾಳುತ್ತಿರೆ; (EC. XI(O), Cd.50, 968); ಶ್ರೀಮತ್ಕುಂನ್ದಮರಸರ್ ಬನವಾಸಿ ಪನ್ನಿರ್ಚ್ಛಾಸಿರಮುಂ ಸಾನ್ತಳಿಗೆ ಸಾಸಿರಮುಮಂ ಬಿಳವೃತ್ತಿಯಿಂ ತ್ರಿಭೋಗಾಭ್ಯಂತರಸಿದ್ಧಿಯಿನ್ದ ಮಾಳುತ್ತಮಿರೆ; (Ibid. VII(O), Sk.30, 1031).

ಬೀಳಾನುವೃತ್ತಿ; Bīḷānuvṛitti: ಕೈಕೆಳಗಿನ ಅಧಿಕಾರಿ ಅಥವಾ ಸಾಮಂತನಿಗೆ ರಾಜನು ಕೊಟ್ಟ ದತ್ತಿ; A fief granted by a king to his subordinate officer or chief; ಶ್ರೀಮನ್ಮಹಾಮಂಡಲೇಶ್ವರಂ ಲೋಕರಸನಟಲುಮೂನೂಱು ಮಿಱುತಿಮೂನೂಱುಮಂ ಬೀಳಾನುವೃತ್ತಿಯಿಂ ರಾಜ್ಯಂಗೆಯ್ಯುತ್ತಿಮಿರಲಾತನ; (APGAS. III, Gb.3, 1086).

ಭಿಕ್ಷಾಸ್ವಾಸ್ಥೆ; Bhikshā-svāsthe: ಯತಿಗಳಿಗೆ ದಾನವಾಗಿ ಬಂದ ಆಸ್ತಿ; Property got through donation to

ascetics; ಆನೆಗುಂದಿಯ ರಘುಪತಿತೀರ್ತ್ಥಶ್ರೀಪಾದ ವೊಡೆಯರು ಶ್ರೀನಿವಾಸತೀರ್ತ್ಥಶ್ರೀಪಾದವೊಡೆಯರೂ ಆರಾಧಿಸುವ ಶ್ರೀ ರಾಮಚಂದ್ರದೇವರ ನಯಿವೇದ್ಯ ನಂದಾದೀಪ್ತಿ ಅವರ ಭಿಕ್ಷಾಸ್ವಾಸ್ತೆಗೆ ಕೊಟ್ಟ ದಾನ ಶಿಲಾ ಶಾಸನ; (SII. IX, II, 520, 1526).

ಮನೆಯ ಸಾಮ್ಯ; Maneya sāmya: ಮನೆಯ ಒಡೆತನ; Ownership of a house; ಬೆಳ್ವನೂರ ಮೂಲಸ್ಥಾನದ ಕಲಿದೇವಸ್ವಾಮಿಗೆ ಹಿರಿಯ ಕೆರೆಯ ಕೆಳಗೆ ಗದ್ದೆ ಮ ೧ . . . . . ೧೨ ಮನೆಯ ಸಾಮ್ಯಮುಂ; (EC. XI(O), Dg.20, 1045).

ಮನ್ನೆಯ; Manneya: ಯಾವದೊಂದು ನಾಡಿನ ಅಥವಾ ಹಳ್ಳಿಯ ಉಂಬಳಿಗಾರ; Person holding the fief of an administrative division or one or more villages; ಪಾನುಂಗಲ್ಲಯ್ನೂರರ ಮನ್ನೆಯ ಸುಂಕವೆರ್ಗ್ಗಡೆ ದೂಡಿಯಮ್ಮನು; (EI. XVI, 11B (1037); ಎಡೆವಟ್ಟೆಪ್ರ್ವತ್ತಕ್ಕಂ ಜೋಗಯ್ಯಂ ಮನ್ನೆಯನಾಗಿ ಸುಖದಿನಾಳುತ್ತಿರೆ; (EC. VII(O), Sk.19, 1066); ಆ ಬೆಳವತ್ತಿಯ ಮನ್ನೆಯರನ್ವಯವೆನ್ತೆನೆ; (Ibid. Hl.45, 1175).

ಮನ್ನೆಯ ಭೂಮಿ; Manneya-bhūmi: ತೆರಿಗೆ ವಿನಾಯಿತಿಯಿಂದ ದಾನವಾಗಿ ಕೊಟ್ಟ ಭೂಮಿ; Land granted free of tax; ತತಶ್ಚೆ ಮನ್ನೆಯಭೂಮಿಃ ಉತ್ತರತಃ ಶಂಖಜಿನಾಲಯಸ್ಯ ಪರಿವಾರವಸತಿ ನಾಮಾಳಂಕಾರಭೂತಸ್ಯ ಧವಳಜಿನಾಲಯಸ್ಯ ಕ್ಷೇತ್ರಂ; (SII. XX, 205, 1247).

ಮನ್ನೆಯ ಸಾಮ್ಯ; Manneya sāmya: ಉಂಬಳಿ ಭೂಮಿಯ ಒಡೆತನ; Ownership of a gift land; ಶ್ರೀಮತ್ ಬಾಳಚನ್ದ್ರಪಣ್ಡಿತರ್ಗ್ಗೆ ಅಲ್ಲಿಯ ಬಡಗವೊಲದ ಮನ್ನೆಯ ಸಾಮ್ಯದ ಮಾನ್ಯವೊಲದೊಳಗೆ; (SII. XX, 21, 1090).

ಮನೋಜಿಕೆಯ ವ್ರಿತ್ತಿ; Manōjikeyavṛitti: ಕಲೆಯ ಕೌಶಲ್ಯಕ್ಕಾಗಿ ಕೊಟ್ಟ ಉಂಬಳಿ; Grant for ones mastery over artisanship; ಸೂತ್ರಧಾರಿ ಸಂಗೋಜಂಗೆ . . . . ಇಪ್ಪತ್ತು ಕೆಯ್ಯ ನಿವೇಶನವಿಪ್ಪತ್ತು ಮತ್ತರು ಕೆಯ್ಯಂ ಮನೋಜಿಕೆಯ ವ್ರಿತ್ತಿಯಾಗಿ ಬಿಟ್ಟರು; (SII. XX, 154, 1172).

ಮಂಡಳಿಕವೃತ್ತಿ; Maṇḍaḷika-vṛitti: ಮಾಂಡಲಿಕನ ಅಥವಾ ಸಾಮಂತನ ಅಧಿಕಾರ; Office of a feudatory; ಕಾದಂಬವಂಶವರ್ದ್ಧನಂ ಶ್ರೀಮತ್ತೈಲಹದೇವರಸರು ಹಾನುಂಗಲ್ಲಯ್ನೂಱು ಬನವಸೆಪನ್ನಿಚ್ಛಾಸಿರಕಂ ಮ್ತಂಣ್ಡಳಿಕವೃತ್ತಿಯೊಳಿರಲಾ ನಾಡೊಳು; (EC. VIII(O), Sb.325, 1175).

ಮಂಣಮಾನ್ಯ; Maṇṇa-mānya: ಉಂಬಳಿಯ ಭೂಮಿ; Grant land; (SII. VII, 349, 1406).

ಮಂನೆಯ; Manneya: ಮಂನೆಯತನ, ಉಂಬಳಿ; Ownership; Free gift; ಶ್ರೀಮತ್ಕಲಿಯಮ್ಮರಸಂ ಬಾಸವೂರ ನೂರನಾಲ್ವತ್ತರ ಮನ್ನೆಯದರುಸುಗೆಯ್ಯುತ್ತಮಿಬ್ದು; (EI. XIX, 29A, 1045).

ಮಾನ್ಯ; Mānya: ಉಂಬಳಿ; Free gift of land; ಊರೊಡೆಯರ್ಗ್ಗೆ ಮಾನ್ಯದ ಕೆಯ್ಮಮತ್ತರಿನ್ನೂಱು; (EI. XX, 6, 1012); ಊರೊಡೆಯ ನಾಗದೇವಯ್ಯಂಗಳ್ ತಮ್ಮ ಮಾನ್ಯದೊಳಗೆ . . . . ಬಾಣರಾಸಿಯ ಮಠಕ್ಕೆ ಕೊಟ್ಟ ಕೆಯ್ಮತ್ತ ೩೦; (SII. XV, 524, 1014).

ಮಾನ್ಯಕಾಱ; Mānyakāra: ಉಂಬಳಿಯನ್ನು ಪಡೆದವ; Holder of rent or tax free grant land; (SII. IX, I, 117, 1015); ಮಾಯಸಾಹಣಿ ರೇಚಗಾವುಣ್ಡ ಮುಖ್ಯವಾಗಿ ಸಮಸ್ತ ಮಾನ್ಯಕಾಱರುಂ; (Ibid. XX, 153, 1172; Ibid. XV, 177, 1242).

ಮಾನ್ಯದ ಕೆಯ್; Mānya-key: ಉಂಬಳಿಯ ಹೊಲ; Agricultural land given as grant; ಗಾವುಣ್ಡಸ್ವಾಮಿ ಮಾನ್ಯದ ಕೆಯ್ಯೊಳಗೆ ಕೊಣ್ಡು ಬಿಟ್ಟ ಮತ್ತರೊನ್ದು; (SII. XX, 55, 1082).

ಮಾನ್ಯದ ತೋಟ; Mānyada tōṭa: ಉಂಬಳಿಯಾಗಿ ಕೊಟ್ಟ ತೋಟ; A garden given as gift; ಮಾನ್ಯದ ತೋಟದೊಳಗೊಂದು ತೋಟಮುಮಂ; (KI. V, 25, 1139).

ಮಾನ್ಯದ ನೆಲ; Mānyada nela: ಉಂಬಳಿಯ ಭೂಮಿ; Land granted free of taxes; ಆ ಬಮ್ಮಯ್ಯಂ ತಂನ ಮಾನ್ಯದ ನೆಲನಾ ದೇವಾಲಯದಿಂ ಪತ್ತಿರೆ; (KI. I, 25, 1186).

ಮಾನ್ಯದ ಭೂಮಿ; Mānyada bhūmi: s.a. ಮಾನ್ಯದ ನೆಲ; Mānyada nela; ಮಾನ್ಯ ಭೂಮಿಯಲಿ ಮತ್ತರು ೨; (SII. XVIII, 244, 1262).

ಮಾನ್ಯದ ಹೊಲ; Mānyada hola: s.a. ಮಾನ್ಯದ ನೆಲ; Mānyada nela; (EC. IX(O), Bn.125, 15th cent.).

ಮೂಲಿಗ; Mūliga: (1) ಪರಂಪರೆಯಿಂದ ನಡೆದು ಬಂದ ಅಧಿಕಾರ (ಬಾಧ್ಯತೆ); Hereditary right; (2) ಪರಂಪರೆಯಿಂದ ಹಕ್ಕನ್ನು ಪಡೆದವ; Person holding hereditary right; ಮೂಲಿಗ ಸಾತಗೌಡಂ ತನ್ನ ಮೂಲಿಗವಾಂನ್ಯದೊಳಗಣ; (SII. XV, 177, 1242).

ಮೂಲಿಗಮಾನ್ಯ; ಮೂಲಿಗವಾನ್ಯ; Mūliga-mānya; Mūliga-vānya: ಮೂಲಿಗರಿಗೆ ಕೊಟ್ಟ ಉಂಬಳಿ; Grant made to the Mūligas; ಬಮ್ಮಿಮಯ್ಯಂ ತಂಮ ಮೂಲಿಗಮಾನ್ಯದ ಮೂಡಣಕೆಯಲು ಬಿಟ್ಟ ಕೆಯಿ; (SII. IX, I, 116, 1057) ಸಾತಗೌಡಂ ತನ್ನ ಮೂಲಿಗವಾಂನ್ಯದೊಳಗಣ; (SII. XV, 177, 1242).

ಮೂಲಿಗವೃತ್ತಿ; Mūliga-vṛitti: ಮೂಲಿಗತನವನ್ನು ಮಾಡುವದಕ್ಕಾಗಿ ಕೊಟ್ಟ ಭೂಮಿ; Land granted for performing the hereditary duty; ಭಂಡಾರಿ ಕೇತಣಗೆ ಮಂಗಪೋಟಿಯಲು ಮೂಲಿಗವ್ರಿತ್ತಿಯಾಗಿ ಕೊಟ್ಟ ಕ್ರಮವೆಂತೆಂದಡೆ; (EC. XI(O), Cl.43, 1108).

ರಾಯಸದವರ ವರ್ತ್ತನೆ; Rāyasadavara varttane: ಅರಸನ ಆಜ್ಞೆಯನ್ನು ತಲುಪಿಸುವವನ ನಿಶ್ಚಿತ ಸಂಬಳ; Royalty or regular payment of the officer in-charge of royal orders; (SII. IX, II, 681, 16th cent.).

ವೃತ್ತಿ; ವ್ರಿತ್ತಿ; Vṛitti; Vritti: ಉಪಜೀವನಕ್ಕಾಗಿ ಕೊಡುವ ಉಂಬಳಿ; Grant of land for one's livelihood; (APGAS. IX, 17, 1107; SII. XX, 82, 1122); ಇವು ಮೊದಲಾಗಿ ವೃತ್ತಿಯ ಬಳಿ ಮತ್ತರ ಬಳಿಯಲಾ; (HAS. XVIII, 12, 1175).

ವೃತ್ತಿಕಾಱ; Vṛittikāṟa: ಉಂಬಳಿಗಾರ ಅಥವಾ ವೃತ್ತಿಯನ್ನು ಪಡೆದವ; Holder of a grant land; ಇಲ್ಲಿಯ ವೃತ್ತಿಕಾಱರ್ ಕುಲಕರಣಿ ಸೋವಯ್ಯನುಂ; (SII. XX, 19, 1015); ಮೂವತ್ತು ವೃತ್ತಿಕಾಱರ ಕೈಯಲು ಆ ಗ್ರಾಮದ; (Ibid. IX, II, 451, 1447).

ವೃತ್ತಿಕ್ಷೇತ್ರ; Vṛitti-kshētra: ಉಪಜೀವನಕ್ಕಾಗಿ ಕೊಟ್ಟ ಉಂಬಳಿ ಅಥವಾ ದತ್ತಿ; Area of the land granted for maintenance; (SII. XVIII, 279, 1412).

ಶರೀರಜೀವಿತ; Śarīrajīvita: ಉಪಜೀವನಕ್ಕಾಗಿ ಕೊಟ್ಟ ಉಂಬಳಿ ಅಥವಾ ದತ್ತಿ; Grant given for one's own maintenance; (EI. XXVII, 32, 1115).

ಸರ್ವಮಾನ್ಯಸ್ಥಳ; Sarvamānya-sthaḷa: ಎಲ್ಲ ವಿಧದ ತೆರಿಗೆಗಳಿಂದ ಮುಕ್ತವಾದ ಉಂಬಳಿಯ ಸ್ಥಳ; A land grant, free from all kinds of taxes; (KI. III, I, 7, 1527).

ಸಾಮಂತಭೋಗ; Sāmanta-bhōga: ಸಾಮಂತನಿಗೆ ಕೊಟ್ಟ ಉಂಬಳಿ; Grant given to a subordinate chief; ಸಕ್ಕರಗೆ ೮೦ಱ ಬಳಿಯ ಭಾಯಿಗಾವೆಯ ಸಾವಂತ ಭೋಗಮಂ ಬಿಟ್ಟರು; (IND, 30, 1133).

ಸಾಮ್ಯವಂತ; Sāmyavanta: ದತ್ತಿಯನ್ನು ಪಡೆದವ; Holder of grant lands; ಗವುಡು ಪ್ರಜೆ ಮುಖ್ಯವಾಗಿ ಸಕಲ ಸಾಮ್ಯವಂತರೂ; (SII. XVIII, 388, 12th cent.).

ಸಾಮಂತಿಕೆ; Sāmantike: ಸಾಮಂತನ ಅಧಿಕಾರ; Office of Sāmanta; ದಂಡನಾಯಕರುಂ ಶ್ರೀಧರಯ್ಯಂಗಳು ಅವರವಾಡಿ ೭೦೦ ಬೋಧನ ೩೦೦ ಱ ಸಾಮಂತಿಕೆಯನಾಳುತ್ತಮಿರೆ; (IND. 30, 1133).

ಹೆಗ್ಗಡೆಯ ಬಾಳು; Heggaḍeya bāḷu: ಹೆಗ್ಗಡಗೆ ಸಲ್ಲುವ ಉಂಬಳಿ; Rent free holding of the Heggaḍe; (SII. IX, II, 426, 1402).

೨. ಶೌರ್ಯ, ಬಲಿದಾನಗಳಿಗಾಗಿ ಕೊಟ್ಟ ಉಂಬಳಿಗಳು

2. GRANTS FOR VALOUR AND SELF SACRIFICES

ಕಲ್ನಾಟು, ಕಲ್ನಾಡು; Kalnāṭu; Kalnāḍu: s.a. ನೆತ್ತರುಗೆಯ್; Nettarugei, below; ಮೂಲತಃ ಕಲ್ಲುನೆಡುವುದು ಅಂದರೆ ಸ್ಮಾರಕ ಸ್ತಂಭವನ್ನು ನೆಡುವುದು, ಬರಬರುತ್ತ ವೀರಯೋಧನ ಸಾಹಸಕ್ಕಾಗಿ, ಅವನ ಕುಟುಂಬದವರ ಜೀವಿತಕ್ಕಾಗಿ ಕೊಟ್ಟ ದತ್ತಿಯ ಅರ್ಥವನ್ನು ಪಡೆಯಿತು. Literally it means erection of stone. Gradually it acquired the meaning of a grant made for the valour and for the maintenance of the dependents of a deceased hero; ರಾಚೆಯಂ ಮುಳ್ತಗೆಯ ಕಲ್ನಾಟುವಡೆದು ಕಿಱ್ಱುವೊಕ್ಕಂ (EC. VIII(R), Ag.24, 10th cent.); ಸತ್ತು ಪಡೆದ ಕಲ್ನಾಡು (EC. I(R), 64, 10th cent.); ಎಱೆಯಂಗಂಗೆ ಕಲ್ನಾಡು; (Ibid. I(R), 97, 9th cent.).

ದಯಿರ್ಯ(ಧೈರ್ಯ)ಕೊಡಗಿ; Dayirya (Dhairya) koḍagi: ಧೈರ್ಯ ಪ್ರದರ್ಶನಕ್ಕಾಗಿ ಕೊಟ್ಟ ಕೊಡುಗೆ; Grant for

bravery; ತೊಱವಸಮುದ್ರದ ಗ್ರಾಮ ೧ನೂ ನಿನ್ನ ದಯಿರ್ಯ ಕೊಡಗಿಯಾಗಿ ಸರ್ಬ್ಬಮಾನ್ಯವಾಗಿ; (EC. X(O), Mr.87, 1406).

ನೆತ್ತರಕೊಡಿಗೆ; Nettara-koḍige: ವೀರಮರಣಕ್ಕಾಗಿ ಕೊಟ್ಟ ದತ್ತಿ; Grant for heroic death; ತಿಮ್ಮಯಗೆ ಕೊಟ್ಟ ನೆತ್ತರ ಕೊಡಿಗೆ ಹೊಲ; (EC. X(O), Sh.21, 10th cent.).

ನೆತ್ತರಕೊಡುಗೆ, ನೆತ್ತರುಕೊಡುಗೆ; Nettara-koḍuge, Nettaru-koḍage: s.a. ನೆತ್ತರಕೊಡಿಗೆ; Nettara-koḍige; ಮಾದೆಯನಾಯ್ಕನು ಕಾದಿ ಬಿದ್ದಲಿ ಆ ಕಲಿನಾಯಕ ... ನೆತ್ತರುಕೊಡುಗೆ ಭೂಮಿ; (EC. VII(O), Hl.110, 1185); ಬೈರನಾಯ್ಕರಿಗೆ ನೆತ್ತರುಗೊಡುಗೆಯಾಗಿ ಕೊಟ್ಟ ಕೆಯ್ಯ; (SII. XVIII, 279, 1412).

ನೆತ್ತರುಗೆಯ್; ನೆತ್ತರುಗೆಯಿ; Nettaru-gey, Nettaru-geyi: ಯುದ್ಧ ಮುಂತಾದವುಗಳಲ್ಲಿ ಹೋರಾಡಿ ಮರಣ ಹೊಂದಿದ ವೀರನ ಸ್ಮಾರಕವಾಗಿ ಮತ್ತು ಅವನ ವಂಶಜರ ಜೀವನಕ್ಕಾಗಿ ಕೊಟ್ಟ ದತ್ತಿ; Grant given to a hero in commemoration of his valour and for the maintenance of his dependents; ಸೋವೆಯ ನಾಯಕನು ತಲೆಗೊಟ್ಟದಕೆ ನೆತರುಗೆಯ್ಯಾಗಿ ಕೊಟ್ಟ ಕೆಯಿ; (SII. XVIII, 211, 1230; Ibid. 213, 1253).

ನೆತ್ತರುವೞಿ; Nettaru-vaṟi: s.a. ನೆತ್ತರುಗೆಯ್; Nettaru-gey; (EC. III(R), Hg.112, 9th-10th cent.).

ಬಾಳ್ಗಚ್ಚು; Bāḷ-gaḷchu: ವೈರಿಗಳನ್ನು ಕೊಂದು ತಂದ ಖಡ್ಗವನ್ನು ತೊಳೆಯಲಿಕ್ಕೆ ಅಂದರೆ ಧೈರ್ಯ ಸಾಹಸಗಳಿಗಾಗಿ ಕೊಟ್ಟ ದತ್ತಿ; Grant given for washing the stains of a sword, i.e., grant made for heroism.

ಯುದ್ಧ, ಗೋಗ್ರಹಣ ಮುಂತಾದ ಪ್ರಸಂಗಗಳಲ್ಲಿ ವೈರಿಗಳೊಡನೆ ಕಾದಿ ಮಡಿದ ವೀರನ ಧೈರ್ಯ ಸಾಹಸಗಳಿಗೆ ಮೆಚ್ಚಿ ಆತನ ಗೌರವಾರ್ಥವಾಗಿ ಹಾಗೂ ಆತನ ಕುಟುಂಬದವರ ನಿರ್ವಹಣೆಗಾಗಿ ಹಾಕಿ ಕೊಟ್ಟ ದತ್ತಿ; Grant made for the maintenance of the dependents of a hero who died in battle, in appreciation of his courage and valour; Compensatory grant made to the warrior's family; ಎಮ್ಮೊರ ಮಿನುಕಿ ಎಡೆಯೊಳ್ತಾಗಿ ತಱಿೞಿದು ಸಗ್ಗಮೇಱಿದಂ ಆತಂಗೆ ಬಾಣವಿದ್ಯಾಧರಂ ಮೆಚ್ಚಿ ಬಾಳ್ಗಚ್ಚು ಗೊಟ್ಟದು; (SII. IX, I, 4, 8th cent.); ಬವರದೊಳ್ಕೆಚ್ಚುಱುಬಿ ಸತ್ತೊ ಅವರ ಮಾಮ ತಿದ್ದುಮ್ಮಮೆವೆದೆಯ ಮಾದವಾಡಿಯ ಬಾಳ್ಗಚ್ಚು ಕೊಟ್ಟೊ; (EC. IV(R), Ch.237, 9th cent.) ಶ್ರೀ ಮುಪೊವ್ವಲ್ಲವೊಡೆಯುರ್ಮ್ಗ್ಗೆ ಪಾಡಿಯುಳೊಡ್ಡಿ ಬಾಣರಸರುಳ್ಕಾದಿ ಪಲರನಿಱಿದು ಬೀೞ್ದು ಬೀರಲೋಕಮೆಯ್ದಿದ ಅದಕ್ಕೆ ಮೆಚ್ಚಿ ...... ನೊಱಮ್ಬಾಧಿ ರಾಜರು ಸೂಱೂರಂ ಬಾಳ್ಗಚ್ಚು ಗೊಟ್ಟರ್; (EC. X(O), Kl.79, 9th cent.).

ರಕ್ತಕೊಡಗಿ; ರಕ್ತಕೊಡಗೆ; Raktakoḍagi; Rakta-koḍage: s.a. ನೆತ್ತರುಗೊಡಗೆ; Nettaru-goḍage above; (EC. III(R), Gu.54, 16th cent.); ಸಂಜರಕಾನನವರು ನಿಂಮ ತಂದೆ ದೇವಪ್ಪಗೌಡರನು ಅಂನ್ಯಾಯದಲ್ಲಿ ಕೊಂದದಕ್ಕೆ ...... ಹದಿನಾಡ ಸೀಮೆವೊಳಗಣ ಗಣಿಗನೂರ ಸ್ಥಳವನು ನಿಮಗೆ ರಕ್ತಕೊಡಗಿಯಾಗಿ ಕೊಟ್ಟೆವಾಗಿ .... ಯೀ ಗ್ರಾಮವನು ನೀವು ಪುತ್ರಪಉತ್ರಪರಂಪರೆಯಾಗಿ; (EC. IV(R), Yl.179, 1564).

ರಕ್ತಗೆಯ್, ರಕ್ತಗೆಯಿ; Raktagey, Raktageyi: s.a. ನೆತ್ತರುಗೊಡಗೆ; Nettaru-goḍage; ಆ ಸಿಂಗೆನಾಯಕ ಲಖೆನಾಯ್ಕ ಮಲ್ಲೆನಾಯ್ಕ ಭೈರೆನಾಯ್ಕರ ಮಕ್ಕಳು ಮಕ್ಕಳು ಪರ್ಯಂತ ಆ ರಕ್ತಗೆಯ್ಯ ಮಾಡಿಸಿಕೊಂಡು ಸುಖದಿಂ ಭೋಗಿಸುವರು; (SII. XVIII, 279, 1412).

ರಕ್ತಗೆಯಿವೃತ್ತಿ; Raktageyi-vṛitti: s.a. ನೆತ್ತರುಗೊಡಗೆ; Nettaru-goḍage; ಯಿ ರಕ್ತಗೆಯಿವೃತ್ತಿಕ್ಷೇತ್ರವನು ಅವನೋರ್ವ್ವನೂ ಪಾಲಿಸಿದಾತನು ವೊಂದು ಲಕ್ಷ ಕವಿಲೆಯ ವಾರಣಾಸಿಯಲಿ ಬಿಟ್ಟ ಫಲಕ್ಕೆ ಹೋಹನು; (SII. XVIII, 279, 1412).

ವಾಳ್ಗಚ್ಚು; Vālgaḷchu: s.a. ಬಾಳ್ಗಚ್ಚು; Bāḷgaḷchu; ಮಗನ್ಪಾಣ್ಡಪ್ಪ ಕಾಳೆಗದುಳ್ಸತ್ತಲ್ಲಿ .... ಕಱನಿಯುಂ ಅವರ ಮನೆಯುಂ ವಾಳ್ಗಚ್ಚುಪ್ರಸಾದಜ್ಗೆಯ್ದಾರ್; (EC. X(O), Mb.254, 9th cent.).

ವೀರಕೊಡಗಿ; Vīra-koḍagi: ವೀರತನದಿಂದ ಕಾದಿ ಮಡಿದವನ ಶೌರ್ಯ ಮತ್ತು ತ್ಯಾಗದ ಸಲುವಾಗಿ ಕೊಟ್ಟ ಉಂಬಳಿ; A grant in honour of a hero who died in a battle, in appreciation of his valour and sacrifice; ಸ್ವಸ್ತಿ ವೀರ ಸಮಸ್ತಗುಣಸಂಪನ್ನರಪ್ಪ ಚಟ್ಟಿ ರತ್ನಾವಳಿಯಪ್ಪ ಕೆಂಕೆಱೆಯ ಮಹಾಜನಂಗಳ ತುಱುವಂ ಕಳ್ಳರು ಕೊಂಡು ಹೋಹಲ್ಲಿ ಹುಯ್ಯಲಂ ಕೇಳ್ದು ಎಯ್ದಿ ಕಾದಿ ಹಲಬರಂ ಕೊಂದು ತುಱುವಂ ಮುಗುಳ್ಚಿ ವೀರಗಲಿಯಾಗಿ ಸುರಲೋಕಪ್ರಾಪ್ತನಾದಲ್ಲಿಗೆ ಮಹಾ ಜನಂಗಳು ಮೆಚ್ಚಿ ಕೊಡೆ ಕುದುರೆ ತಂಬಟ ಸಹಿತ

ವೀರಕೊಡಗಿ ಕಂಭ ೩೦ ವಂ ಜಕಗೌಡನ ತಮ್ಮ ಮರಿಯಂಗೆ ಕೊಟ್ಟ ತೇಜ; (EC. VI(O), Cm.157, 1195).

೩. ಸ್ಮಾರಕಗಳು

3. MEMORIALS

ಚಾಗದ ಕಂಬ; Chāgada kaṁba: ತ್ಯಾಗದ ಗುರುತಾಗಿ ನೆಟ್ಟ ಕಂಬ; Pillar set up in recognition of the sacrifies of a person; ಚಾಗದ ಕಂಬಮಂ ನಿರಿಸಿ; (ಪಂ.ಭಾ. Paṁ.Bhā. I, 50, 10th cent.).

ನಿಶಿಧಿ, ನಿಶಿಧಿಕಲ್ಲು; Niśidhi, Niśidhi-kallu: ಸಮಾಧಿ ಮರಣ ಹೊಂದಿದ ಜೈನ ಮುನಿಗಳ ಸ್ಮಾರಕ; Memorial of the Jaina monks who died by observing religious vow; ಗೌಜೆದ ವೆಗ್ಗಡೆಯ ಗುರುಗಳು ದೇವೇಂದ್ರಪಂಡಿತರಿಗೆ ಅವರ ಮದಮಾಳಿಗೆ ದೆಕ್ಕವ್ವೆಯ ನಿಶದಿಯ ಕಲ್ಲಂ ಮತ್ತವಾರದ ಗಾಮುಂಡ ಬೂಚಿವೆಗ್ಗಡೆ ನಾರಣವೆಗ್ಗಡೆಯ್ಯಂ ಪಡಿಕರಮಾದುನ ಮಾಬಲಯ್ಯನು ನಿಲಿಸಿದರು; (EC. VI(O), Cm.162, 1143).

ನಿಸಿದಿಕೆ; ನಿಸಿದಿಗೆ; Nisidike; Niśidige: s.a. ನಿಸಿಧಿ; Nishidhi; ಶ್ರೀಮನ್ನಾಗಚನ್ದ್ರಸಿದ್ಧಾನ್ತದೇವರ್ಮೊರಮ್ಬದ ಘಟಾನ್ತಕಿಯ ಬಸದಿಯೊಳ್ ಸಂನ್ಯಸನವಿಧಿಯಿಂ ಮುಡಿಪಿ ಸ್ವರ್ಗ್ಗಸ್ಥರಾದರವರ್ಗ್ಗೆ ...... ನಿಶದಿಗೆಯ ಕಲ್ಲಂ ನಿಲಿಸಿದರ್; (SII. XV, 530, 1059).

ಬಾಳಶಾಸನ; Bāḷa-śāsana: ಹೋರಾಟದಲ್ಲಿ ಮಡಿದ ವೀರನ ಸ್ಮಾರಕ ಶಾಸನ, ವೀರಗಲ್ಲು; Memorial stone erected in memory of a hero who died in the battle-field; ..... ಸತ್ತೊಡಬ್ಬಾಚರಿಯ ಅಕ್ಕಸಾಲದ ಬಾಳಸಾಸನದ ಕಲ್ಲು; (SII. IX, I, 29, 963).

ಬೀರಗಲ್ಲು; Bīragallu: s.a. ವೀರಗಲ್ಲು; Vīragallu, below; ಹಿಟಪ್ಪನ ಕೇತಂಣನ ಮಗ ಬೈರಿತಮ್ಮ ತಂನ ತಂಮ ಕೇಶಿಕಾಮೆಯಂಣನು ಹೂಯ್ಕಲಿ ಬಿದರೆ ಬೀರಗಲ್ಲನು ಹೊಯಿಸಿದನೂ; (EC. IV(O), Kr.1, 12th cent.).

ಬೀರದ ಶಾಸನ; Bīrada Śāsana: ಯುದ್ಧದಲ್ಲಿ ವೀರಮರಣವನ್ನು ಹೊಂದಿದ ವೀರನ ಹೆಸರಿನಲ್ಲಿ ಬರೆದ ಶಾಸನ; Inscription written to commemorate the death of hero in the battle; ಚಾಗದ ಕಂಬಮಂ ನಿಜಿಸಿ ಬೀರದ ಶಾಸನಮಂ ನೆಗಚ್ಚಿ; (ಪಂ.ಭಾ. Paṁ.Bhā. I, 50, 10th cent.).

ರಕ್ತಶಾಸನ; Raktaśāsana: ನಾಡಿಗಾಗಿ ರಕ್ತವನ್ನು ಹರಿಸಿದ ವೀರನ ವಂಶಜರ ಜೀವನೋಪಾಯಕ್ಕಾಗಿ ಕೊಟ್ಟ ದಾನದ ಶಾಸನ; Inscription recording grant for the maintenance of the family of the hero dying for the sake of the country; (EC. X(O), Mr.87, 1406).

ವೀರಗಲ್ಲು; Vīra-gallu: ಹೋರಾಟದಲ್ಲಿ ಮಡಿದ ವೀರನ ನೆನಪಿಗಾಗಿ ನಿಲ್ಲಿಸಿದ ಕಲ್ಲು; Hero-stone; Slab set up in memory of the hero who died fighting in a battle; ಯಿ ವೀರಗಲ್ಲ ಮಾಡಿಸಿ ನಿಲಿಸಿದನು ಹೆಂಮಾಡಿಗೌಡನ ಮಗ ಮಸಣಿತಂಮ ಕಂಡಳಿಸಿದ ರೂವಾರಿ ಬಯಿಬೋಜ; (EC. VI(O), Ck.4, 1140).

ವೀರಕೊಡಗಿ ಕಂಬ; Vīrakoḍagi-Kamba: ಯುದ್ಧದಲ್ಲಿ ಹೋರಾಡಿ ಮಡಿದ ವೀರನಿಗಾಗಿ ಕೊಟ್ಟ ದತ್ತಿ; Grant made in memory of the hero who died fighting in a battle; ವೀರಗಲಿಯಾಗಿ ಸುರಲೋಕ ಪ್ರಾಪ್ತನಾದಲ್ಲಿ ಮಹಾಜನಂಗಳು ಮೆಚ್ಚಿ ಕೊಡೆ ಕುದುರೆ ತಂಬಟ ಸಹಿತಂ ವೀರಕೊಡಗಿ ಕಂಬ ೩೦ವಂ; (EC. VI(O), Cm.157, 1195).

ವೀರಶಾಸನ; Vīr-śāsana: s.a. ವೀರಗಲ್ಲು; Vīragallu; ಸ್ವಾಮಿ ಸಂತೋಷಂಬಡೆದು ನಿಜಿಸಿದ ವೀರಸಾಸನ; (SII. XX, 125, 1185).

ಸಾಸನ(ಶಾಸನ) ವೀರಗಲ್ಲು; Sāsana(Śāsana)-vīragallu: ಮಡಿದ ವೀರನ ಶೌರ್ಯ, ಧೈರ್ಯ ಇತ್ಯಾದಿ ವಿವರಗಳ ಶಾಸನವುಳ್ಳ ವೀರಗಲ್ಲು; A herostone with an inscription describing the heroic deeds of the departed hero and the grants made etc.; ಮಡುತಳ್ಳಿಯಲು ಸತ್ತವರಿಂಗೆ ಹೊಂನ ಕೊಟ್ಟು ತಿದಿದಿಂಬಳಿಕ್ಕೆ ಸಾಸನವೀರಗಲ್ಲನಿಂದ ಪರದಯ್ಯ; (EC. VI(O), Cm.30, 1190).

೩. ಹಕ್ಕುಗಳು, ಮರ್ಯಾದೆಗಳು

3. RIGHTS AND PRIVILEGES

ಅಂಗಚಿತ್ತ; Angachitta: ಅರಸನಿಂದ ಪಡೆದ ಅಧಿಕಾರ ಮತ್ತು ಗೌರವ ಸೂಚಕವಾದ ಉಡುಗೊರೆ; A privilege

obtained from the king as a mark of honour; (ವಡ್ಡಾ, Vaḍḍā. p.182, l.6, 10th cent) ಕುನ್ತಳ ಚಕ್ರವರ್ತಿಯೊಳು ವಿದಿತವೆನಲ್ಕೆ ತಾನೆ ಪಡೆದು ಧರೆ ಬಣ್ಣಿಸಲಂಗಚಿತ್ತಮಂ ಸದಮಳರಾಜಚಿಹ್ನವನಗುರ್ವ್ವಿನ ಹೆಮ್ಮೆಯನೊಳ್ಪುವೆತ್ತ ಚಂದ್ರದ ಕೊಡೆಯಂ ಬಬಾಪ್ಪಮಮ ಶೋಭನಗೌಂಡನಿದೇಂ ಪ್ರಚಂಡನೋ; (KI. IV, 10, 1121; SII. XVIII, 117, 1121; ಪಂ.ರಾ. Paṁ.Rā. V, 13 ವ, Pr. 12th cent.).

ಅಡ್ಡಣಿಗೆ; Aḍḍaṇige: ರಾಜ ಚಿಹ್ನೆಗಳಲ್ಲಿ ಒಂದು; ಮಣೆ (ಪೀಠ); Wooden stool, being a part of royal symbols; ಪಟ್ಟಂಗಟ್ಟಿ ಏಱಕುದುರೆ ಕೊಡೆ ..... ಅಡ್ಡಣಿಗೆ ರಾಜಚಿನ್ಹವ ಕೊಟ್ಟು; (SII. IX, I, 41, 9th cent).

ಅಷ್ಟಭೋಗ; Ashṭa-bhōga: ಎಂಟು ಬಗೆಯ ಭೂಮಿಯ ಒಡೆತನದ ಅಧಿಕಾರಗಳು; (1) ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಅಗಾಮಿ, ಸಿದ್ಧ, ಸಾಧ್ಯ; Eight privileges connected with the enjoyment of rent free land; A treasure or hoard i.e. a natural hoard such as mines, a hidden treasure stored up by some one; water, rock, permanent or lasting benefits; future benefits, readymade benifits and possible gains; (IEG. p.30-31); (2) ವಿಕ್ರಯ, ದಾನ, ವಿನಿಮಯ, ಜಲ, ತರು, ಪಾಷಾಣ, ನಿಧಿ, ನಿಕ್ಷೇಪ; (SITI. Annexure, p.ix); ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಆಗಾಮಿ, ಸಿದ್ಧ, ಸಾಧ್ಯವೆಂಬ ಅಷ್ಟಭೋಗ ತೇಜ ಸ್ವಾಮ್ಯಗಳನ್ನು ಸರ್ವಮಾನ್ಯವಾಗಿ ಆ-ಚಂದ್ರಾರ್ಕಸ್ಥಾಯಿಯಾಗಿ ಅನುಭವಿಸಿಕೊಂಡು; (SII. IX, II, 466, 1472; EC. VI(O), Mg.88, 1515).

ಅಷ್ಟಭೋಗ ತೇಜಸ್ವಾಮ್ಯ; Ashṭabhōga-tējaswāmya: ಅಷ್ಟಭೋಗಗಳ ಸಂಪೂರ್ಣ ಒಡೆತನ; Absolute ownership of ashṭhabhōgas; (SII. IX, II, 486, 1472).

ಅನ್ದಳ; Andaḷa: ಪಲ್ಲಕ್ಕಿ, ಗೌರವ ಮತ್ತು ಸ್ಥಾನಮಾನಗಳನ್ನು ಸೂಚಿಸುವ ಚಿಹ್ನೆ; Palanquin, indicaiting the honour and position; (SII. XVIII, 117, 1121).

ಆಳಪಣ್ಟುವಕೆ; Āḷapaṇṭuvake: ರಾಜಚಿಹ್ನೆಗಳಲ್ಲಿ ಒಂದು; ಬೀಸಣಿಗೆ; A fan being a royal insignia; ಪಟ್ಟಂಗ್ರಟ್ಟಿ ಏಱಕುದುರೆ ಕೊಡೆ ಆಳಪಣ್ಟುವಕೆ ಕುಞ್ಚನ್ತಳಿಗೆ ..... ರಾಜಚಿನ್ಹವ ಕೊಟ್ಟು; (SII. IX, I, 41, 9th cent.). ಸಂ. ಆಲಾವರ್ತ; Sk. Ālāvarta.

ಉಭಯಸಾಮ್ಯ; Ubhaya-sāmya: ಎರಡು ವಿಧದ ಒಡೆತನ; Two kinds of ownership; (IEG. p.346); ಉಭಯ ಸಾಮ್ಯದಿಂ; (SII. XV, 92, 12th cent.; Ibid. XVIII, 154, 12th cent.).

ಏಕಭೋಗ; Ēkabhōga: ಅಧಿಕಾರ ಅಥವಾ ಉಂಬಳಿಯ ಸಂಪೂರ್ಣ ಉಪಭೋಗ; Complete enjoyment of an office or grant; (EC. III(R), Gu.90, 9th cent.); ಏಕಭೋಗ ಪ್ರಭು; (KI. V, 70, 1221); ದಾಸಗಾವುಣ್ಡನನ್ತೇಕಭೋಗದಿನೂರ್ಗ್ಗವುಣ್ಡುಗೆಯ್ಯುತ್ತಮಿಱ್ದು; (SII. XVIII, 93, 1088); ಬಮ್ಮಗಾವುಂಡ್ಡಂ ಪಶುಣ್ಡಿಗಂ ಸರವೂರ್ಗ್ಗವೇಕಭೋಗ ದಿನೂರ್ಗ್ಗಾವುಣ್ಡುಗೆಯ್ಯುತ್ತುಂ; (Ibid. 133, 1127; IEG. p.106).

ಏಕಾಯತ್ತ; Ēkāyatta: s.a. ಏಕಭೋಗ; Ēka-bhōga; ಸತ್ತಳಿಗೆಯೆಟ್ಟತ್ತುಮನೇಕಾಯತ್ತಮಾಱುತ್ತಿರೆ; (SII. XVIII, 48, 1033).

ಏಕಸ್ವಾಮ್ಯ; Ēkasvāmya: ಸಂಪೂರ್ಣ ಹಕ್ಕು; Sole right, monopoly; (EC. III(R), Gu.168, 1497).

ಏಱಕುದುರೆ; Ēṟa-kudure: ಬಹುಮಾನವಾಗಿ ಕೊಡುವ ಏರುವ ಕುದುರೆ; A swift horse presented as a privilege; a royal insignia; ಪಟ್ಟಂಗಟ್ಟಿ ಏಱಕುದುರೆ, ಕೊಡೆ .. ರಾಜಚಿಹ್ನವ ಕೊಟ್ಟು; (SII. IX, I, 41, 9th cent.).

ಕಾಹಳಿ; Kāhaḷi: ಗೌರವವನ್ನು, ಅಧಿಕಾರವನ್ನು, ಸೂಚಿಸಲು ಬಳಸುತ್ತಿದ್ದ ವಾದ್ಯ, ಕಹಳೆ; A musical instrument used as a mark of honour and authority; ಬಾದುವೆಯ ಕಾಹಳಿಗಳ ಕೈಯಲು; (SII. XV, 72, 1186).

ಕಾಳೆ; Kāḷe: ಕಹಳೆ; Kahaḷe; ಅಧಿಕಾರ, ಅಂತಸ್ತುಗಳನ್ನು ಸೂಚಿಸಲು ಬಳಸುತ್ತಿದ್ದ ವಾದ್ಯ, ಊದುವ ವಾದ್ಯ; ಪಂಚಮಹಾವಾದ್ಯಗಳಲ್ಲಿ ಒಂದು; A musical instrument used as a mark of authority or status; One among the five musical instruments; (EC. III(R), Nj.215, 1032).

ಕುಞ್ಚನ್ತಳಿಗೆ; Kañchantaḷige: ಒಂದು ರಾಜ ಚಿಹ್ನೆ; A royal insignia; (SII. IX, I, 41, 9th cent.).

ಕೊಡೆ; Koḍe: ಗೌರವ ಮತ್ತು ಅಧಿಕಾರ ಸೂಚಕ ಛತ್ರ; Umbrella indicating honour and authority; (SII. IX, I, 41, 9th cent.).

ಖಂಡಿಕೆ Khaṇḍike: ವಾದ್ಯ ವಿಶೇಷ, ಪಂಚ ಮಹಾವಾದ್ಯಗಳಲ್ಲಿ ಒಂದು; A musical instrument to be played before the privileged persons or a king; ಈಶಾನ ಈಶ್ವರ ಮುಡೆಯರ್ಗ್ಗೆ ಕೊಟ್ಟ ತಿವಳಿ ೧ ದಟ್ಟೆ ೩ ಖಣ್ಡಿಕೆ ೩ ಪಲಂ ೬ ಜಯಗಣ್ಟೆ ೧ ಪಲ .. ಕಾಳೆ ೩ ಪಲ ೧೫ ಅಗಲೀ ಪಞ್ಚಮಹಾಶಬ್ದವಂ ತ್ರಿಕಾಳಂ ಬಾಜಿಸುವುದಕ್ಕೆ; (EC. III(R), Nj.215, 1032).

ಗದ್ದಿಗೆ; Gaddige: ಕೂಡುವ ಮಣೆ, ಪೀಠ; A wooden seat to sit on; (SII. IX, I, 41, 9th cent.).

ಗೌಡುಗಾಹು; Gauḍugāhu: ಗೌಡನಿಗೆ ರಕ್ಷಣೆಗಾಗಿ ಕೊಟ್ಟ ಹಣ; Money granted to the village headman for protection; ಮಸಣಗೌಡಂಗೆ ಗೌಡುಗಾಹು ಹಣ ಮೂರು ಹಾಗ ೨; (EC. VI(O), Cm.87, 1180).

ಚಂದ್ರದ ಕೊಡೆ; Chandrada koḍe: ಗೌರವ ಮತ್ತು ಅಧಿಕಾರ ಸೂಚಕವಾಗಿ ಹಿಡಿಯುವ ಬಿಳಿ ಅಥವಾ ಕೆಂಪು ಕೊಡೆ; ರಾಜಚಿಹ್ನೆ; White or red umbrella held as a mark of honour and authority; Royal insignia; ಸದವಳ ರಾಜಚಿಹ್ನವನಗುರ್ವ್ವಿನ ಹೆಮ್ಮೆಯನೊಳ್ವವೆತ್ತ ಚಂದ್ರದ ಕೊಡೆಯಂ; (KI. IV, 10 1121).

ಚಿನ್ನದ ಕಕ್ಕಡೆ; Chinnada kakkaḍe: ಬಂಗಾರದ ಖಡ್ಗ; ಒಂದು ರಾಜಚಿಹ್ನೆಯಾಗಿದ್ದಿರಬೇಕು; Golden sword; probably a royal insignia; (KI. I, 69, 1522)

ಜಯಗಣ್ಟೆ; Jayagaṇṭe: s.a. ಜೇಗಣ್ಟೆ; Jēgaṇṭe; (EC. III(R), 215, 1032).

ಜೇಗಣ್ಟೆ; Jēgaṇṭe: ಜಯ ಸೂಚಕ, ಗೌರವ ಸೂಚಕ ಗಂಟೆ; ಪಂಚಮಹಾವಾದ್ಯಗಳಲ್ಲಿ ಒಂದು; Bell suggestive of victory and honour; (EC. III(R), Nj.215, 1032).

ತಿವಳಿ; Tivaḷi: ತ್ರಿವಳಿ; Trivaḷi; ಹಲಗೆಯಂಥ ಒಂದು ಚರ್ಮದ ವಾದ್ಯ; ಪಂಚಮಹಾವಾದ್ಯಗಳಲ್ಲಿ ಒಂದು; A tabor-like musical instrument; one among the five great musical instruments; (EC. III(R), Nj.215, 1032).

ತ್ರಿಭೋಗ; Tribhōga: ದತ್ತಿಯ ಮೂರು ವಿಧದ ಉಪಭೋಗ; ಬಹುಶಃ ದೇವರು, ಬ್ರಾಹ್ಮಣರು ಮತ್ತು ಸರಕಾರ ಈ ಮೂವರ ಸಂಯುಕ್ತ ಒಡೆತನ; Right of three types of enjoyment of a gift; A joint authority of God, Brāhmaṇas, and the Government; (IEG. p.343; SII, XX, 128, 1186; Ibid. XVIII, 216, 1234);

ತ್ರಿಭೋಗಾಭ್ಯಂತರ ಸಿದ್ಧಿ; Tribhōgabhyantara-siddhi: ಮೇಲೆ ಹೇಳಿದ ಮೂವರ ಸಂಯುಕ್ತ ಒಡೆತನದಿಂದ ಮುಕ್ತವಾದುದು; Free from the triple authority mentioned above; (SII. XX, 138, 1162; Ibid. 93, 11th cent.).

ತೇಜಮಾನ್ಯ;Tēja-mānya: ದತ್ತಿಯ ಮೇಲಿನ ಪೂರ್ಣ ಅಧಿಕಾರ; ತೇಜಸ್ವಾಮ್ಯ ಎಂದು ಕರೆಯಲ್ಪಡುತ್ತದೆ; Total ownership of the grant. Also called Tējasvāmya; (IEG. p.339); ಅಲ್ಲಿಯ ಗುಳಿಯ ಸುಂಕ ಕಬ್ಬುನದ ಸುಂಕ ತೇಜಮಾಂನ್ಯವಿಂತಿನಿತುವಂ; (EC. XII(O), Gb.45, 1233).

ತೇಜಸಾಮ್ಯ; ತೇಜಸ್ವಾಮ್ಯ; Tejasāmya; Tējasvāmya: ಒಡೆತನದ ಸಂಪೂರ್ಣ ಅಧಿಕಾರ; Ownership endowed with full authority; ಬ್ರಾಹ್ಮರು ಯಿಕ್ಕುವ ಮತ್ತರು ಮಗೆ ಯಿಂತಿವು ಮುಕ್ಯ ಅಷ್ಟಭೋಗ ತೇಜಸಾಮ್ಯ ಹಱವಣ ಮಗವಳಿ; (SII. XVIII, 51, 1033); ಬಾಚಲದೇವಿಯರು ...... ತವಗೆ ನಡೆವ ತೇಜಸ್ವಾಮ್ಯದಿಂದುಳ್ಳ ಧನ ಭೂಮಿಯನಿತುಮಂ; (SII. IX, I, 145, 1079; Ibid. IX, II, 466, 1472).

ತೇಜೋಪಭೋಗ; Tējōpabhōga: s.a. ತೇಜಸಾಮ್ಯ; ಅಕ್ಷಣಿಯಾಗಾಮಿ ಸಮಸ್ತತೇಜೋಪಭೋಗ; (HAS. XVIII, 12, 1175).

ದಟ್ಟೆ; Daṭṭe: ಒಂದು ವಿಧದ ವಾದ್ಯ; ಪಂಚಮಾಹಾ ವಾದ್ಯಗಳಲ್ಲಿಒಂದು; A kind of musical instrument; one of the five great musical instruments; (EC. III(R), Nj.215, 1032).

ಧವಳ ಶಂಖ; Dhavaḷa-śaṅkha: ಬಿಳಿಯ ಶಂಖ, ಒಂದು ಮರ್ಯಾದೆಯ ಚಿಹ್ನೆ; White conch, a privilege, honour; (SII. XX, 74, 1112).

ಧಾರೆಯ ಗಾಳೆ; Dhāreya gāḷe: ಗೌರವ; ಮರ್ಯಾದೆ; A privilege; an honour; ಪರನೃಪರಂ ಪಳಂಚಲೆದು ಬಂದಡೆ ವಿಕ್ರಮಚಕ್ರಿ ತಂನನಾದರಿಸಿ ....ಧವಳ ಶಂಖಮನಗ್ಗದ ಧಾರೆಯ ಗಾಳೆಯಂ ಬಿರುದಿನ ನಾಮಮಂ; (SII. XX, 74, 1122).

ಪಳಿಮರಿಯಾದೆ; Paḷi-mariyāde: ಪರಂಪರೆಯಿಂದ ನಡೆದು ಬಂದ ಮರ್ಯಾದೆ; Traditional privileges; ಹಂಜಮಾನದವರು ತಮ್ಮ ಪಳಿಮರಿಯಾದೆಯ ಹೊಂನಿನ ಕಟಳೆಯನು ಅರಮನೆಗೆ ಕೊಟ; (SII. IX, II, 459, 1465).

ಪಂಚಮಹಾವಾದ್ಯ; Pancha-mahā-vādya: ಪ್ರತಿಷ್ಠಿತ ಜನರ ಮುಂದೆ ಗೌರವಯುತವಾಗಿ ನುಡಿಸುವ ವಾದ್ಯಗಳು; Five musical instruments played before privileged persons; ಈಶಾನ ಈಶ್ವರಮುಡೆಯಗ್ಗ್ ಕೊಟ್ಟುದು ತಿವಳಿ ೧ ದಟ್ಟೆ ೧೫ ಖಣ್ಡಿಕೆ ೩ ಪಲಂ ೬ ಜಯಗಣ್ಟೆ ೧ ಪಲ . . . . ಕಾಳೆ ೩ ಪಲ ೧೫ ಅಗಲೀ ಪಞ್ಚಮಹಾಶಬ್ದವಂ ತ್ರಿಕಾಳಂ ಬಾಜಿಸುವುದಕ್ಕೆ; (EC. III(R), Nj.215, 1032).

ಪಂಚಮಹಾಶಬ್ದ; Panchamahāśabda: ಗೌರವ, ಮರ್ಯಾದೆ ಸೂಚಕವಾಗಿ ಹಿರಿಯ ಅಧಿಕಾರಿಗಳು, ಸಾಮಂತರು ಉಪಯೋಗಿಸುತ್ತಿದ್ದ ಐದು ಮಹಾವಾದ್ಯಗಳು; The five musical instruments used by high officers and feudatories as privileges; (SII. XX, 24, 1034-35). See ಪಂಚಮಹಾವಾದ್ಯ above.

ಪೆರ್ಮಟ್ಟಿಪಱೆಘೋಷ; Permaṭṭi-paṟe-ghōsha: ಗೌರವ, ಮರ್ಯಾದೆ ಸೂಚಕವಾಗಿ ಉಪಯೋಗಿಸುವ ಪೆರ್ಮ್ಮಟ್ಟಿ, ಪಱೆ ವಾದ್ಯಗಳು; Musical instruments Permaṭṭi and Paṟe used as privileges; (SII. XX, 34, 1053); Cf. ಪೆರ್ಮ್ಮಟ್ಟಿತೂರ್ಯ್ಯ ನಿರ್ಘೋಷ; Permaṭṭi-tūrya-nirghōsha.

ಬಿರುದಿನ ಕಂಕಣ; Birudina kankaṇa: ವೀರನಿಗೆ ತೊಡಿಸುವ ಕಂಕಣ; Wrist ornament worn by a hero; (KI. I, 69, 1522).

ಬಿರುದಿನ ನಾಮ; Birudina nāma: ಗೌರವ ಸೂಚಕವಾದ ಬಿರುದು; A title or epithet as a mark of prestige; (SII. XX, 74, 1112).

ಬಿರುದಿನ ಸತ್ತಿಗೆ; Birudina sattige: ಗೌರವ ಸೂಚಕವಾಗಿ ಉಪಯೋಗಿಸುವ ಛತ್ರಿ; Umbrella used as a privilege; (EC. VIII(O), Na.19, 1310).

ಬೆಳ್ಳಿಯ ಗುಂಡು; Beḷḷiya guṇḍu: ಶೌರ್ಯ, ಸಾಹಸಗಳನ್ನು ತೋರಿದ ವೀರನಿಗೆ ಉಡುಗೊರೆಯಾಗಿ ಕೊಡುವ ಬೆಳ್ಳಿಯ ಗುಂಡು; Silver ball presented to a hero for his exhibition of valour and adventure; ಉಜ್ಜಯಿನಿಯಂ ದಾಳಿಟ್ಟು ಸುಟ್ಟಲ್ಲಿ ತೋಳ್ವಲದಿಂ ಬೆಳ್ಳಿಯ ಗುಂಡುಗೊಂಡನದಟಂ ತ್ರೈಳೋಕ್ಯಮಲ್ಲಂ ನೃಪಂ; (SII. XX, 93, 11th cent.).

ಬೆಳ್ಗೊಡೆ; Beḷgoḍe: ಬಿಳಿಯ ಛತ್ರಿ, ಮರ್ಯಾದೆ, ಗೌರವಗಳ ಸೂಚಕ; White umbrella; mark of honour and privilege; (SII. XX, 74, 1122).

ಮನ್ನಣೆಯ ಬೆಳ್ಳಿಯ ಬಟ್ಟಲ ತಂಬುಲ; Mannaṇeya-beḷḷiya-baṭṭala-taṁbula: ಬೆಳ್ಳಿಯ ತಟ್ಟೆಯಲ್ಲಿ ವೀಳ್ಯವನಿಟ್ಟು ಕೊಡುವ ಆಹ್ವಾನ; Invitation by offering betel leaves on a silver plate; ಸಿಡಿವ ಮನ್ನಣೆಯ ಬೆಳ್ಳಿಯ ಬಟ್ಟಲ ತಂಬುಲಂ ಜಯಂಗೊಂಡು ಪಡೆದಂ ಕದಂಬಕುಳಭೂಷಣನೊಳ್ ನಿಜಗೋತ್ರದೀಪಕಂ; (SII. XX, 31, 1044-45).

ಯಜಮಾನಪ್ರಾಪ್ತಿ; Yajamāna-prāpti: ಒಡೆತನದ ಹಕ್ಕು; Title of ownership; ಎಸಗೂರ ಕ್ಷೇತ್ರದೊಳಗೆ ಆ ಪೆರುಮಾಳೆದೇವದಂಣ್ನಾಯಕರಿಗೆ ಯಜಮಾನಪ್ರಾಪ್ತಿಗೆ ಕೊಡಗಿಯಾಗಿ ಕಲ್ಲ ನೆಟ್ಟ ಕ್ಷೇತ್ರಉ; (EC. XI(O), Cd.32, 1286).

ಯಜಮಾನಿಕೆ; Yajamānike: ಒಡೆತನದ ಹಕ್ಕು; Title of ownership; (EC. XI(O), Dg.68, 1382).

ಸತಿಗೆ(ಸತ್ತಿಗೆ)ಯ ಕೊಡಗಿ; Satige(Sattige)ya koḍagi: ಗೌರವ ಸೂಚಕವಾಗಿ ಕೊಟ್ಟ ಕೊಡೆ (ಸತ್ತಿಗೆ); An umbrella granted as a privilege; (EC. XII(O), Gu.51, 1522).

ಸಾಮ್ಯ; Sāmya: ಒಡೆತನ, ಪ್ರಭುತ್ವ; Right, Ownership; ಪೂರ್ವದ ಭರಣಿಗರ ಸನ್ತತಿಯಲ್ಲದೆ ಪೆಱಗ್ಗ್ ಕೆಯ್ಮನೆಯಂ ಮಾಱಲಾಗದು ಪೂರ್ವ್ವಿಗರಾದೊಡ ಮಾರೊರ್ವ್ವರೊನ್ದೆ ಗೆಯ್ದು ಸಾಮ್ಯಮನಾಳ್ವುದು; (SII. XI, I, 64, 1028).

ಅಧ್ಯಾಯ ೧೩ CHAPTER XIII

ವೃತ್ತಿಗಳು, ವೃತ್ತಿಕಾರರು, ವೃತ್ತಿಸಂಘಗಳು

PROFESSIONS, PROFESSIONALS, PROFESSIONAL GUILDS

ಅಕ್ಕಸಾಲ; Akkasāla: ಅಕ್ಕಸಾಲತನ; Profession of goldsmith; ತನ್ನ ಹಿರಿಯಕ್ಕಸಾಲದ ಕೇಣಿಯಲು ...... ಬಿಟ್ಟ ಹಣ ಐದು; (SII. XX, 62, 1184).

ಅಕ್ಕಸಾಲೆವಾಳ; Akasālevāḷa: ಅಕ್ಕಸಾಲಿಗರ ಸಂಘದ ಮೇಲ್ವಿಚಾರಕ; Supervisor of the guild of goldsmiths; (SII. IX, I, 123, 1059).

ಅಕ್ಕಸಾಲದ ಕೇಣಿ; Akkasālada kēṇi: ಅಕ್ಕಸಾಲಿಗರ ಕೆಲಸ ಮಾಡುವ ಗುತ್ತಿಗೆ; A contract for doing goldsmith's work; (SII. XV, 559, 12th cent.).

ಅಕ್ಕಸಾಲಿ; ಅಕ್ಕಸಾಲೆ; Akkasāli; Akkasāle: ಅಕ್ಕಸಾಲಿಗ; Gold-smith; ದೂಸಿಗವಸರಕ್ಕಮಕ್ಕಸಾಲೆಗಂ ಹೊಂಗೆ ಹಣಂ; (EI. XIX, 4A, 1136); ಅಕ್ಕಸಾಲಿ ಕೇತನ ಭೂಮಿ; (SII. XX, 224, 1295).

ಅಕ್ಷಾರದವ; Akshāradava: ಶಾಸನಗಳ ಲೇಖಕ, ಅಕ್ಷರಗಳ ಲೇಖಕ; Scribe, writer of inscriptions; ಅಕ್ಷಾರದ ಗೋಪಂಣನ ಬರಹ; (EC. IV(R), Ch.64, 1380). (ಅಕ್ಷರವು ವಿದ್ವತ್ತಿನ ಪ್ರತೀಕ; Alphabet is a symbol of learning).

ಅಗಸಾಲೆಯರು; Agasāleyaru: s.a. ಅಕ್ಕಸಾಲೆ; Akkasāle; ಕಂಮಾಜಿರು ಅಗಸಾಲೆಯರು, ನಾಯಿಂದರು; (EC. IV, Yl.62, 14th cent.).

ಅಡವಳ; Aḍavaḷa: ಅಡಿಗೆಯವ; Cook; (ಕಾ.ಲೋ., Kā.Lō. I, 326, 12th century).

ಅಡುಗರಿಸು; Adugarisu: ಅಡುಗೆ ಮಾಡು; To cook; (SII. IX, II, 653, 1554).

ಅಡುಗೂಲಿ; Aḍugūli: ಅಡಿಗೆ ಮಾಡುವುದಕ್ಕಾಗಿ ಕೊಡುವ ಕೂಲಿ; Wages for cooking; (SII. IX, II, 678, 1563).

ಅಸಗ; Asaga: ಅಗಸ; Washerman; (SII. IX, I, 145, 1079; EC. X(O), Mr.30, 1475).

ಅಂಬಿಗ; Ambiga: ದೋಣಿ ನಡೆಸುವವ; Oarsman, boatman; ಆ ಹೊಳೆಯನೂ ಆನೆಗುಂದಿ ಅಂಬಿಗ ಬೋಉಗಣ್ಣ ತಿರುಗಿ ಕೊಟ್ಟು; (SII. IX, II, 534, 1531).

ಆಲವಟ್ಟದವ; Ālavaṭṭadava: ಬೀಸಣಿಕೆ ಬೀಸುವವ; A servant engaged in waving the fan; (ಬ.ಪು. Ba.Pu, II, 5, 45, 14th cent.). ಸಂ. ಆಲಾವರ್ತ; Sk. Ālāvarta = ಬೀಸಣಿಗೆ; Fan.

ಆಯಗಾರ; Āyagāra: ಧಾನ್ಯರೂಪದಲ್ಲಿ ವಾರ್ಷಿಕ ಆದಾಯ ಪಡೆಯುವ ಕುಶಲಕರ್ಮಿ; Skilled worker receiving annual remuneration in kind; ಆಯಗಾಱರಿಗೆ ಕೊಡುವ ಉಪ್ಪೂ ... (EC. XI(O), Mk.8, 1531).

ಇಟಿಗೆವೆಸನ; Iṭige-vesana: ಇಟ್ಟಿಗೆ ಕೆಲಸ; ಕಟ್ಟಡದ ಕೆಲಸ; Masonry, Building work; ಸುಕನಾಸಿಯ ಇಟಿಗೆವೆಸನಗೆಯ್ಸಿ; (SII. XVIII, 154, 12th cent.).

ಇಷ್ಟಕಾಕರ್ಮ; Ishṭakā-karma: ಇಟ್ಟಿಗೆಯಿಂದ ಕಟ್ಟುವ ಕೆಲಸ; Masonry; Brick-work; (KI. I, 25, 1186).

ಈಳಿಗ; Īḷiga: ಹೆಂಡ ಇಳಿಸುವವ; Toddy tapper; ಯೀಳಿಗರಾ ಪೆದಗೌಡನ ಮಗ ...... ನಾವು ಧರ್ಮದೋಣಿಗೆ ನೀರು ಯೆತುವನಿಗೆ .... ಯೀಚಲ ಮರನೂ ಬಿಟುಕೊಟ್ಟೆಉ; (SII. IX, II, 670, 1559).

ಉಗುರ ಭಂಡಾರಿ; Ugurabhaṇḍāri: ವೀಳೆದೆಲೆ ವ್ಯಾಪಾರ ಸಂಘದ ಕೋಶಾಧ್ಯಕ್ಷ; Treasury officer of the guild of betel-leaf merchants (SII. IX, II, 511, 1519)

ಉಪಾರ ಬೋವುಗಳು; Upāra-bōvugḷu: ಸಮುದ್ರ ದಂಡೆಯ ಮೇಲೆ ಉಪ್ಪು ಮಾಡುವವರು; Salt producers on the beaches of sea; ಸಾಗರ ಕುಲಕೆ ಚಿಂತಾಮಣಿಗಳು ಉಪಾರ ಬೋಉಗಳು ... ವೋಳೆವೊಂದಕೆ ಯಿಬಳ ಉಪಿನ ಲೆಕದಲು ಬಿಟು ಕೊಟಉ; (SII. IX, II, 670, 1559).

ಎಲೆಯ ಬೊಜಂಗರು; Eleya bojangaru: ವೀಳ್ಯದೆಲೆಯ ವ್ಯವಹಾರ ಮಾಡುವ ವರ್ಗದವರು; A community of dealers in betel leaves; (SII. XVIII, 117, 1121).

ಓಜಾಯಿತ; Ōjāyita: ಶ್ರೇಷ್ಠನಾದ ಶಿಲ್ಪಿ; Master sculptor; ಓಜಾಯಿತರ್ಗ್‌ರೆ ಮತ್ತರಮ್ಮೂರು; (SII. XVIII, 296, 1188).

ಕಬ್ಬಿಣ ಕೆಲಸ; Kabbiṇa-kelasa: ಕಮ್ಮಾರಿಕೆ; ಕಬ್ಬಿಣದ ಕೆಲಸ ಮಾಡುವಿಕೆ; Iron smithy; (EC. X(O), Bp.72, 1430).

ಕಬ್ಬಿಲ; Kabbila: ಮೀನುಗಾರ; Fisherman; (ಬ.ವ. 591, 12th cent.).

ಕಮ್ಮಟಕಾಱ; Kammaṭakāṟa: ಟಂಕಸಾಲೆಯನ್ನು ನಡೆಸುವವ; Person running the Mint; ಕಮ್ಮಟದ ಅಧಿಕಾರಿಗಳುಂ ಕಮ್ಮಟಕಾಱರುಂ ಊರೊಳಗಣ ಬ್ರಹ್ಮಜಿನಾಲಯಕ್ಕೆ ಬಿಟ್ಟ ಧರ್ಮ; (HAS. XVIII, 8, 1109).

ಕಮ್ಮಱ; Kammaṟa: s.a. ಕಮ್ಮಾರ; Kammāra, below; (EC. VI(O), Cm.7, 1061).

ಕಮ್ಮಾಱ; (ಕಂಮಾಱ, ಕಂಮಾರ, ಕರ್ಮ್ಮಾಱ); Kammāṟa; (Kaṁmāṟa, Kaṁmāra, Karmmāṟa); ಕಬ್ಬಿಣದ ಕೆಲಸದವ, ಲೋಹಕಾರ; Black-smith; ಕಮ್ಮಾಱ ಅಕ್ಕಸಾಲೆ ಅಸಗ ಸಮ್ಮಗಾಱ ದೇಡ; (SII. XX, 299, 12th cent.; EC. IX(O), Ma.15, 1315); ಬಡಗಿ ಬೇವೋಜನ ಮಗ ಚಾಜಓಜಗಳ ಕೈಯ್ಯಲೂ ಮರಗೆಲ್ಸವನೂ ಮಾಡ್ಸಿ ಕಂಮಾಱ ಅಂಜಲದಿವಿಂ ಗೋಜಗಳ ಕಯ್ಯಲು ಕದವಿಕ್ಕಿ ಕೂಬುನದ ಕೆಲ್ಸಗಳನು ಮಾಡ್ಸಿ; (EC. X(O), Mr.3 1430).

ಕರ್ಮ್ಮಾರಕುಳ; Karmmāra-kuḷa: ಕಮ್ಮಾರರ ವರ್ಗ; Class of iron smiths; (SII. IX, I, 971).

ಕಮ್ಮಱವಾಳ; Kammaṟavāḷa: ಕಮ್ಮಾರರ ಮೇಲ್ವಿಚಾರಕ; Chief of iron-smiths; (SII. IX, I, 123, 1059-60).

ಕಲ್‌ಸಿಪ್ಪಿಗ; Kal-sippiga: ಕಲ್-ಶಿಲ್ಪಿಗ; ಕಲ್ಲಿನಲ್ಲಿ ಮೂರ್ತಿ ಮುಂತಾದವನ್ನು ಕೊರೆಯುವವ, ಶಿಲ್ಪಿ, ಕಲ್ಕುಟಿಗ; Kal-śilpiga; Sculptor; (SII. XVIII, 70, 1064).

ಕಲುಕುಟಿಗ; ಕಲ್ಕುಟಿಗ; Kalukuṭiga, Kalkuṭiga; ಶಿಲ್ಪಿ, ಕಲ್ಕುಟಿಗ Sculptor, Stone cutter; ಜೀರ್ಣ್ನೋದ್ಧಾರದ ಬೆಸಕ್ಕೆ ಕೊಲ್ಚನುಣ್ಬು ಮಾಡುವ ಕಲುಕುಟಿಗ ವೋಜುಗಳು ನಾಲ್ವರ್ಗ್ಗೆ; (APGAS. III, Gb.3, 1086; SII. XX, 154, 12th cent.).

ಕಲ್ಕುಟಿಗಗೊತ್ತಳಿ; Kalkuṭiga-gottaḷi: ಕಲ್ಕುಟಿಗರ ಸಂಘ; Guild of stone cutters, sculptors; (EI. XII, 14, 1110).

ಕಲಿ(ಲು)ಕುಟಿಗವೋಜ; Kali(lu)kutigavōja; ಕಲ್ಲಿನ ಕೆಲಸಗಾರರ ಮುಖ್ಯಸ್ಥ; Head of the sculptors; (SII. IX, I, 240, 1142).

ಕಲ್ವೆಸನ; Kalvesana: ಶಿಲಾಕರ್ಮ, ಕಲ್ಲಿನ ಕೆಲಸ, ಕಲ್ಲಿನಲ್ಲಿ ದೇವಾಲಯದ ನಿರ್ಮಾಣ; Stone work, Construction of a temple in stone; ಕಲ್ವೆಸನೊಪ್ಪುತ್ತಿರೆ; (KI. I, 25, 1186).

ಕಂಚಕಾ(ಗಾ)ಱ; Kanchakā(gā)ṟa: ಕಂಚಿನ ಕೆಲಸ ಮಾಡುವವ; Brazier; ಪಟ್ಟಾಯಿಲ ಕಂಚಕಾಱ ರೇವಿಸೆಟ್ಟಿಯರು; (SII. XX, 225, 1304).

ಕಂಚಗಾಱಶ್ರೇಣಿ; Kaṁchagāṟa-śrēṇi: ಕಂಚಗಾರರ ಸಂಘ; Guild of Braziers; (EI. XIV, 14, 8th cent.).

ಕಂಚಗಾಱಗೊತ್ತಳಿ; Kaṁchagāṟa-gottaḷi: s.a. ಕಂಚಗಾರಶ್ರೇಣಿ; Kaṁchagāra-śrēni; (EI. XII, 37(d), 1110).

ಕಂಡರಣೆ; Kaṇḍaraṇe: ಕಲ್ಲಿನ ಮೇಲೆ ಅಕ್ಷರಗಳನ್ನು ಕೆತ್ತುವುದು; Engraving the letters on stone; (KI. I, 25, 1186).

ಕಾರುಕ; Kāruka: ಕುಶಲ ಕೆಲಸಗಾರ; Artisan; ಪಂಚಕಾರುಕ; (SII. IX, I, 324, 1197-98).

ಕಾಸಿಗ; Kāsiga: ಕುಶಲಕರ್ಮಿ, ಕಮ್ಮಾರ, ಶಿಲ್ಪಿ; Artisan, Blacksmith, Architect; (SII. IX, I, 60, 931); ಕಾಸಿಗ ಬೊಮ್ಮೋಜಂ ಕಂಡರಿಸಿದಂ; (SII. IX, I, 207,1124).

ಕುಱುಬ, ಕುಱುಂಬ; Kuṟuba, Kuṟuṁba: ಕುರಿ ಸಾಕುವವ; Shephered; (SII. XVIII, 111, 1115); ಕುಱುಬರಲ್ಲಿ ಕಂಬಳಿ ೧; (SII. XX, 347, 13th cent.).

ಕುಂಬಾಱ; Kuṁbāra: ಗಡಿಗೆ ಮಾಡುವವ; Potter; ಕುಂಬಾಱಂಗೆ ಮತ್ತರು ೨; (SII. IX, I, 133, 1068; Ibid. XX, 279, 1412).

ಕೂಲಿ; Kūli: ದುಡಿಮೆಯಿಂದ ಬರುವ ಹಣ; Wages; ಕಂಚುಗಾಱಱು ದೇವರುಪಕರಣಂಗಳೆಲ್ಲಮಂ ಕೂಲಿಯಂ ಕೊಳ್ಳದೆ ಮಾಡಿ; (SII. XV, 73, 1189).

ಕೆಲಸಿಗ; Kelasiga: ಕ್ಷೌರಿಕ; Barber; ತಂಮ ಕೆಲಸಿಗರಿಗೆ ರಾಯರಾಳುವ ರಾಜ್ಯದೊಳಗೆ ನಾವಿಂದರಿಗೆ; (SII. XV, 258, 1547).

ಕೈಕೂಲಿಕಾಱ; Kai-kūlikāṟa: ದಿನಗೂಲಿಯವ; Casual labourer; (ಬ.ಪು. Ba.Pu. V. 28, 13, 14th cent.).

ಕೊತ್ತಳಿ; Kottaḷi: ಬೇರೆ ಬೇರೆ ಉದ್ಯೋಗದವರ ಸಂಘ; Guilds of various professional communities; (EC. VII(O), Sk. 94, 1094); ಬೊಜಂಗರ ಕೊತ್ತಳಿ; (SII. XVIII, 171, 1145).

ಕೊತ್ತಳಿಯಾಳು; Kottaḷiyāḷu: ಕೊತ್ತಳಿಯ ಸದಸ್ಯ; A member of a guild; ಬೊಜಂಗರ ಕೊತ್ತಳಿಯಾಳ ಭಾಗವಂ ಮಕ್ಕಳ ಮಕ್ಕಳವರಂ ಕೊಟ್ಟು ಸಲಿಸಿದರ್; (SII. XVIII, 171, 1145).

ಕೊನೆಕಾಱ; Konekāṟa: ಅಡಕೆ, ತೆಂಗು, ಬಾಳೆ ಮುಂತಾದ ಮರಗಳ ಗೊನೆ ಇಳಿಸುವವ; A person engaged in cutting the bunches of betel nuts, coconuts, plantains etc.; (SII. XVIII, 111, 1115); ಕೋಟಿಗರುಂ ಕೊನೆಕಾಱರುಂ; (Ibid. IX, I, 141, 1079).

ಕೊಯ್ಲಾಳಿ; Koylāḷi: ವೀಳೆದೆಲೆಯನ್ನು ಕೊಯ್ಯುವವ; Person employed for plucking betel leaves; ಕೊಯ್ಲಾಳಿಗಳೆಲ್ಲರು; (SII, IX, I, 141, 1079; Ibid. XVIII, 111, 1115); ಕೊಯ್ಲಾಳಿಗಳಲಿ ಎಲೆ ಲಕ್ಕಕ್ಕೆ; (KI. VI, 39, 1188).

ಗಡ್ಡದ ಕೆಲಸಿ; Gaḍḍada kelasi: ಕ್ಷೌರಿಕ; Barber; ಗಡ್ಡದ ಕೆಲಸಿಗಳು ತಿಂಮೋಜ ಕೊಂಡೋಜ ಭದ್ರೋಜ ಯಿವರು ಮುವರುಗಳ ಕೆಲಸಕೆ ಮೆಚ್ಚಿ; (SII. XVIII, 285, 1550).

ಗಣಕ; Gaṇaka: ಜೋಯಿಸ (ಜ್ಯೋತಿಷಿ); Astrologer; ಸಕಲ ಗಣಕತಿಳಕಂ ಕವುಳಾವೋದಂ ರಾರಾಜಿಸುವ ಮೇದಿನಿಯೊಳು ವಿಬುಧಕೋಟಿಗಂಮಂ ಬಮ್ಮಂ; (EC. IX(R), Bl. 317, 1173).

ಗವಱೆ; Gavaṟe: ಮೇದ; ಮೇದಾರ; Basket maker; ಗವಱೆಗಳುಂ ಗಾತ್ರಿಗರುಮಂಕಿಕಾಱರುಂ; (EC. III, Nj.359, 12th cent.; EI. XIX, 4A, 1135).

ಗಾತ್ರಿಗ; Gātriga: ವೀಳ್ಯದೆಲೆ ವ್ಯವಹಾರದವ; Person dealing in betel leaves; ನಿಂಬರಾಜಂ ಗಾತ್ರಿಗ ಸಮೂಹಂ ಬೆರಸು; (SII. XVIII, 108, 1109; EI. XIX, 4A, 1135).

ಚಿತ್ರಕ; Chitraka: ಚಿತ್ರಕಾರ; Painter; (ಕು.ವ್ಯಾ.ಭಾ. ಉದ್ಯೋಗ ಪ. Ku.Vyā.Bhā. Udyōga Pa. 2, 27, c.1400).

ಚಿನ್ನಗೈಕ; Chinna-gaika: ಬಂಗಾರದ ಕೆಲಸ, ಅಕ್ಕಸಾಲೆತನ; Working on gold; gold-smithy; ಚಿನ್ನಗೈಕದವರುಂ ದೂಸಿಗರು ಮುಖ್ಯಮಾಗುಳಿದ ಪರದರುಂ; (EI. XIII, 3, 1204). ಚಿಂನಗೆಯಿಕದ ಬೆವಹಾರಿಗಳು (EC. VII(O), Sk. 118, 1150).

ಜಗತಿಯ ಕೊತ್ತಳಿ; Jagatiya kottaḷi: ಹೊರೆ ಹೊರುವವರ ಸಂಘ; The guild of load bearers; (EC. V(O), Ak.40, 1209).

ಜೇಡ; Jēḍa: ನೇಕಾರ; Wearer; (EC. VII(O), Sk.118, 1054).

ಜೇಡಗೊತ್ತಳಿ; Jēḍa-gottaḷi: ಜೇಡರ ಸಂಘ, ನೇಕಾರರ ಸಂಘ; Guild of weavers; (EC. V(O), Ak.40, 1209).

ಜ್ಯೋತಿರ್ವ್ರುತ್ತಿ; Jyōtir-vṛitti: ಜ್ಯೋತಿಃಷ ಶಾಸ್ತ್ರದಲ್ಲಿ ಪರಿಣತರಿಗೆ ಕೊಟ್ಟ ದತ್ತಿ; Grant of land given to astrologers; ದೈವಜ್ಞರಾದಿತ್ಯಭಟ್ಟೋಪಾಧ್ಯಾಯರ್ಗ್ಗಂ ವಿದ್ದಣಭಟ್ಟರ್ಗ್ಗಂ ಶ್ರೀಮತ್ ತ್ರೈಲೋಕ್ಯಮಲ್ಲ ಶ್ರೀಕೇಶವಪುರದ ಜ್ಯೋತಿರ್ವ್ರುತ್ತಿಯಂ ಜೋತಿಶ್ಯಾಸ್ತ್ರಪರೀಕ್ಷಪೂರ್ವ್ವಕಂ ದೇವರಿಗೆ ಪಾದಪೂಜೆಯಂ ಕೊಣ್ಡು; (APGAS. III, Mn.45, 1091).

ಜೋಯಿಸಿಗ; Jōyisiga: ಜ್ಯೋತಿಷಿ; Astrologer; (ಕಾ.ಲೋ. Kā.Lō. I, 323, 12th cent.)

ತಂಬುಲಿಗ; Taṁbuliga: ವೀಳ್ಯದೆಲೆಯನ್ನು ಬೆಳೆಯುವವ; Producer of betel leaves; (SII. XX, 148, 1074).

ತೆಲ್ಲಿಗಗೊತ್ತಳಿ; Telliga-gottali: s.a. ತೆಲ್ಲಿಗ ಶ್ರೇಣಿ; Telliga-śrēni; ತೆಲ್ಲಿಗಗೊತ್ತಳಿಗಳು ದೇವರ ನಂದಾದೀವಿಗೆಗೆ ಗಾಣಂಗಳಲೊಂದೊಂದು ಹಳಿಗೆ ಯೆಂಣ್ನೆಯಂ ಕೊಟ್ಟರು; (EI. V, 3, 1161).

ತೆಲ್ಲಿಗ ಶ್ರೇಣಿ; Telliga-śrēṇi: ಎಣ್ಣೆಗಾಣ ನಡೆಸುವವರ ಸಂಘ; Guild of oil-extractors; (EI. XIV, 14, 8th cent.).

ತೋಟಿಗ; Tōṭiga: ತೋಟದ ಕೆಲಸ ಮಾಡುವವ; Person working in a Garden; ತೋಟಿಗರು ತೋಟದಲು ಎಲೆಯ ಕೋಲಲು ಹಾಗಮಂ ಬಿಟ್ಟರು; (SII. XVIII, 177, 1160).

ತೋಂಟಿ; Tōṇṭi: s.a. ತೋಟಿಗ; Tōṭiga; ತೋಣ್ಟಿಗಳ್ಗೆ ನಾಲ್ಕು ಮತ್ತರ್; (SII. IX, I, 60, 931).

ದಾರುಕರ್ಮ; Dārukarma: ಕಟ್ಟಿಗೆ ಕೆಲಸ, ಬಡಿಗತನ; Wood-work, carpentry; (KI. I, 25, 1186).

ದೆಡ, ದೇಡ; Deḍa, Dēḍa: ಜೇಡ, ನೇಕಾರ; A weaver; (SII. XX, 299, 12th cent.); ದೇಡಮಗ್ಗ; (Ibid. 178, 1192).

ನಾಪಿತ, ನಾವಿದ; Nāpita, Nāvida: s.a. ಕೆಲಸಿ, ಕೆಲಸಿಗ; ಕ್ಷೌರಿಕ; Barber; (SII. XVIII, 279, 1412).

ನಾಯಿಂದ, ನಾವಿಲ, ನಾವಿಂದ; Nāyinda, Nāvila, Nāvinda: ಕ್ಷೌರಿಕ; Barber; (EC. X(O), Bp.72, 1430; SII. XV, 260, 1547; EC. IV(R), Yl.134, 1560).

ನೀರ ಎತುವನು; Nīra etuvanu: ಬಾವಿಯಿಂದಾಗಲಿ ಹಳ್ಳದಿಂದಾಗಲಿ ನೀರನ್ನು ಮೇಲಕ್ಕೆತ್ತುವವ; Water lifter from a well or a rivulet; ಧರ್ಮಡೋಣಿಗೆ ನೀರ ಎತುವನಿಗೆ ಮೋಳೆವೊಂದಕೆ ಯಿಬಳ ಉಪಿನ ಲೆಕದಲು ಬಿಟು ಕೊಟೆವು; (SII. IX, II, 670, 1559).

ಪಟ್ಟಸಾಲಿಗ; Paṭṭasāliga: ರೇಷ್ಮೆ ಬಟ್ಟೆಯನ್ನು ನೇಯುವವ; Weaver of silken cloth; (ಕಾ.ಲೋ. Kā.Lō. I, 323, 1150); ಪಟ್ಟಸಾಲಿಗ ಸೋಮಗೊಂಡನ ಮಗ ಕಲ್ಲಪ್ಪ; (SII. XVIII, 279, 1412).

ಪಂಚಕಾರುಕ; Pañchakāruka: ಐದು ಶಿಲ್ಪ ವರ್ಗದವರು; ಬಡಗಿ, ಅಕ್ಕಸಾಲಿಗ, ಕಮ್ಮಾರ, ಕಲ್ಕುಟಿಗ ಮತ್ತು ಕಂಚಗಾರ; The five artificers, artisans; carpenter, goldsmith, black-smith, stone cutter and brazier; (SII. IX, I, 324, 1197-98; EC. VII(O), Hl.71, 1396).

ಪಾಂಚಾಳ; Pāṅchāḷa: s.a. ಪಂಚಕಾರುಕ; Pañchakāruka; (EC. X(O), Bp.72, 1430).

ಪುಲ್ಲವಡುಗ; Pullavaḍuga: ಹೂಗಾರ, ಹೂವಾಡಿಗ; Florist; supplier of flowers; ಕಂಬೇಶ್ವರದೇವರ ಪುಲ್ಲವಡುಗ ನಾರಣಂಗೆ ಮತ್ತ ೩; (SII. IX, I, 155, 1086).

ಪುಲ್ಲವಡಗಿತ್ತಿ; Pullavaḍagitti: ಹೂವಾಡಗಿತ್ತಿ; Female florist; supplier of flowers; (ಕ.ಕಾವ. Ka.Kāva. 35 ವ, Pr. 13th cent.).

ಬಡಗಿ; Baḍagi: ಬಡಿಗ, ಮರದ ಕೆಲಸ ಮಾಡುವವ; Carpenter; (SII. XX, 299, 12th cent.).

ಬಡ್ಡಗಿವಾಳ; Baḍḍagivāḷa: ಬಡಿಗರ ಮೇಲ್ವಿಚಾರಕ; (SII. IX, I, 123, 1059).

ಬಣ್ಣಿಗೆ; Baṇṇige: ಕುಶಲಕೈಗಾರಿಕೆ; Handicraft; (EC. III(R), Nj.215, 1032).

ಬನಕಾಱ; Banakāṟa: ತೋಟಗಾರ; ಗಿಡಗಳನ್ನು ರಕ್ಷಿಸುವವ; Gardner, Keeper of groves of trees; ರೇವಣೇಶ್ವರದ ಗೋವೆಯ ಗೆಯ್ಯ ಸೀಮೆಯಿಂ ಪಡುವಲು ಬನವಂ ಪಲವು ಮರವನಿಟ್ಟು ಲೇಸಾಗಿ ಮಾಳ್ವನ್ನಾಗಿ ಬನಕಾಱ ಚವುಂಡೆಯಂಗೆ ಸರ್ವನಮಸ್ಯವಾಗಿ ಬಿಟ್ಟ; (SII. XX, 175, 1190).

ಬಳಗಾಱ, ಬಳೆಗಾಱ; Baḷagāṟa, Baḷegāṟa: ಬಳೆಗಾರ; ಬಳೆಮಾರುವವ; Bangle seller; (SII. IX, I, 41, 9th cent.; Ibid. XV, 73, 1189).

ಬಾಣಸಿಗ; Bāṇasiga: ಅಡಿಗೆಯವ; Cook; (ಕಾ.ಲೋ. Kā.Lō. I, 323, 12th cent.).

ಬಾಣಸಿಗಿತಿ, ಬಾಣಸಿಗಿತ್ತಿ, ಭಾಣಸಿತ್ತಿ; Bāṇasigiti, Bāṇasigitti, Bhāṇasitti: ಅಡಿಗೆಯವಳು; Female cook; ಅಂತು ೮೦ ಕ್ಕಮಟ್ಟಕ್ಕುವ ಬಾಣಸಿತ್ತಿಯರು ೩ ಗ್ಗೆ ಜೀವಿತಂ ಗ ೬ ಸೀರೆಗೆ ಪಣ ೬; (ಕಾ.ಲೋ. Kā.Lō. I, 331, 12th cent.; EC. VII(O), Sk.185, 1158).

ಬಿನು; Binu: ಉದ್ಯೋಗ; Profession; ಸೀಮೆಯಲೂಯಿದಂಥಾ ಅಂಗಡಿ ಮಗ್ಗ ಕುಟುಂಬ ಕುಂಭಾಱ ಅಸಗನಾಯಿಂದ ಬಾರಿಕ ಮಡಿಯವರು ಮುಂತಾದ ಸಮಸ್ತ ಬಿನುಗಳಿಗೆ ಜೋಳದ ಕಡಾಯವನು ಹಾಕಲಿಲ್ಲ; (SII. IX, II, 554, 1533).

ಬೀಣೆಗಾರ; Bīṇegāra: ವೀಣೆ ನುಡಿಸುವವ; A player on veeṇā; (ಕ.ಕಾ. Ka.Kā. 36, 13th cent.).

ಬೆಜ್ಜ; Bejja: ವೈದ್ಯ; Doctor; (ಕಾ.ಲೋ. Kā.Lō. I, 326, 1150).

ಬೆಳ್ಳಿಗಮ್ಮಟದವರು; Beḷḷigammaṭadavaru: ಟಂಕಸಾಲೆಯಲ್ಲಿ ಬೆಳ್ಳಿಯ ಕೆಲಸಮಾಡುವವರು; Silver smiths in the mint; ಮತ್ತಂ ಬೆಳ್ಳಿಗಮ್ಮಟದವರು ಅಜ್ಜಿಯ ವಸ್ತ್ರದಾನಕ್ಕೆಂದು; (SII. XV, 67, 1185).

ಬೊಜಂಗರು; Bojangaru: ವೀಳ್ಯದ ಎಲೆಗಳನ್ನು ಬಿಡಿಸುವವರು; People engaged in plucking betel leaves; ಬೊಜಂಗರ ಕತ್ತಿಗೆಗಡ್ಡ; (SII. XVIII, 111, 1115).

ಬೋಗಾಱ; Bōgāṟa: ಲೋಹದ ಕೆಲಸಗಾರ; Metal worker; ಬೋಗಾಱ ಮಹಾನಖರಂಗಳು ಕಂಚಿನ ಭಂಡವ ಕೊಂಡಲ್ಲಿ ಕೊಟ್ಟಲ್ಲಿ; (HAS. XVIII, 8, 1109).

ಬೋಗಾಱ ಮಹಾನಖರಂಗಳು; Bōgāṟa-mahānakharangaḷu: ಬೋಗಾರರ (ಕಬ್ಬಿಣ ಅಥವಾ ತಾಮ್ರದ ಕೆಲಸದವರು) ವ್ಯಾಪಾರಿ ಸಂಘ; Guilds of black-smiths and copper smiths; ಬೋಗಾಱ ಮಹಾನಖರಂಗಳು ಕಂಚಿನ ಭಂಡವ ಕೊಂಡಲ್ಲಿ ಕೊಟ್ಟಲ್ಲಿ; (HAS. 18, 8, 1109).

ಭಿಷಜ; Bhishaja: ವೈದ್ಯ; Doctor, Physician; (EI. XVII, 14, 1467).

ಮಡಿಯವರು; Maḍiyavaru: ಬಟ್ಟೆಯನ್ನು ಶುದ್ಧ ಮಾಡುವವರು; ಅಗಸರು; Cleaners of the clothes; Washer men; (SII. IX, II, 554, 1533).

ಮಡಿವಳ, ಮಡಿವಳ್ಳ, ಮಡಿವಾಳ; Maḍivaḷa, Maḍivaḷḷa, Maḍivāḷa: s.a. ಅಗಸ; Washerman; (ಕಾ.ಲೋ. Kā.Lō. I, 326, 12th cent.; EC. VI(O), Cm.7, 1061; SII. XVIII, 279, 1412).

ಮಡಿವಳ್ತಿ; Maḍivalti: ಅಗಸಗಿತ್ತಿ; Washerwoman; (ಕಾ.ಲೋ. Kā.Lō. I, 331, 12th cent.)

ಮರಕೆಲಸ; Marakelasa: ಬಡಿಗತನ; Carpentry; (EC. X(O), Bp.72,1430).

ಮರುದುಗಳ್; Marudugaḷ: ವೈದ್ಯರು; ಔಷಧಿ ಕೊಡುವ ವೈದ್ಯರು; Physicians; (EI. XXXVIII, 3, 9th cent.).

ಮಂತ್ರವಾದಿ; Mantravādi: ಮಾಟಗಾರ; Black-magician; (ಬ.ಪು. Ba.Pu. II, 8, 45, 14th cent.).

ಮಾದಾಱ; Mādāṟa: ಬಿದಿರಿನ ಬುಟ್ಟಿ ಮೊರ ಇತ್ಯಾದಿಗಳನ್ನು ಮಾಡುವವರು; Basket makers; ಮಡಿವಾಳ ಕೇತದೇವ, ನಾಪಿತ ನಾಗೋಜ, ಊರ ತಳವಾಱ ರಾಮಣ ಮಾದಾಱ ಬುಳ್ಳ ಸಹವಾಗಿ; (SII. XVIII, 279, 1412)

ಮಾಲಗಾಱ; ಮಾಲೆಗಾರ; Mālagāṟa; Mālegāra: ಹೂವಿನ ಮಾಲೆ ಕಟ್ಟಿ ಮಾರುವವ; Florist; (SII. IX, I, 133, 1068; Ibid. 103, 12th cent.; ಕ.ಕಾ. Ka.Kā. 43, ವ. Pr. 13th cent.).

ಮಾಲೆಗಾರ್ತಿ; Mālegārti: ಮಾಲೆ ಮಾಡಿ ಮಾರುವವಳು; Female florist; (ಕಾ.ಲೋ. Kā.Lō. I, 331, 12th cent. ಕ.ಕಾ. Ka.Kā. 35, 13th cent.).

ಮೇದರು; Mēdaru: ಮೇದಾರರು; Basket makers; (EI. XIX, 4B, 1143).

ಮೇಳಗಾರ; Mēḷagāra: ಸಂಗೀತದ ಹಿಮ್ಮೇಳದವ; Accompanyist in musical performance; (ಕ.ಕಾ. Ka.Kā. 36, 13th cent.).

ಮೊಘೆಯರು; Mogheyaru: ಮೀನುಗಾರರು; Fishermen; (SII. IX, II, 457, 1455).

ರಾಯರೂವಾರಿ; Rāyarūvāri: ಮೂರ್ತಿ ಶಿಲ್ಪಿ, ಕಟ್ಟಡನಿರ್ಮಾಣಗಳಲ್ಲಿ ಹೆಸರುವಾಸಿಯಾದವ, ಅರಸನಿಂದ ನೇಮಿಸಲ್ಪಟ್ಟ ರೂವಾರಿ, ಅರಸನಿಂದ ಮನ್ನಣೆ ಪಡೆದ ರೂವಾರಿ; Master sculptor, master architect; Royal sculptor; ಕಲ್ಯಾಣದ ರಾಯರೂವಾರಿ ಬಲ್ಲೋಜ ಕಂಡರಿಸಿದ; (SII. XX, 202, 1244).

ರೂವಾರಿ; Rūvāri: ರೂಪಕಾರ, ಶಿಲ್ಪಕಾರ; Sculptor, Architect; ರೂವಾರಿ ಸಂಗೋಜಂಗೆ ಗದ್ದೆ; (SII. XVIII, 117, 1121).

ವೀರಪಾಂಚಾಳರು; Vīra-pānchāḷaru: ಕುಶಲ ಕೆಲಸಗಾರರ ಐದು ವರ್ಗಗಳು; (1) ಬಡಗಿ (2) ಅಕ್ಕಸಾಲಿಗ (3) ಕಮ್ಮಾರ(4) ಶಿಲ್ಪಿ (5) ಕಂಚಗಾರ; Five classes of artisans such as (1) Carpenter (2) Goldsmith (3) Iron-smith (4) Artisan (5) Brazier; ಬಡಗಿ ಕಂಮಾರ ಅಕಸಾಲೆ .... ರೊಳಗಾದ ಸಮಸ್ತ ವೀರಪಂಚಾಳ; (EC. IX(O), Ma.15, 1315); ಬಡಿಗ, ನೇಕಾರ, ಕಾವಲಿಗ, ಅಗಸ ಮತ್ತು ಸಮಗಾರ ಅಥವಾ ಬಡಿಗ, ಕಂಚಗಾರ, ಕಮ್ಮಾರ, ಅಕ್ಕಸಾಲೆ ಮತ್ತು ಕಲ್ಕುಟಿಗ, ಈ ಐದು ಬಣದವರುಳ್ಳ ಸಂಘ; An association of five guilds viz. those of the carpenter, weaver, barber, washerman and shoemaker or those of the carpenter, brazier, iron-smith, gold smith and stone mason; (Kittel, p.967).

ವೆವಸಾಯಿ; Vevasāyi: ವ್ಯವಸಾಯ ಮಾಡುವವ, ಬೇಸಾಯಗಾರ, ಒಕ್ಕಲುತನ ಮಾಡುವವ; Agriculturist; (SII. IX, II, 633, 1548).

ವೈದ್ಯ; Vaidya: ರೋಗ ಚಿಕಿತ್ಸಕ; Physician; Doctor; (EC. VI(O), Mg.37, 1154; ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. I, 58, c.1400).

ಶಾಸನ ಲೇಖಕ; Śasana-lēkhaka: ಶಾಸನಗಳನ್ನು ಬರೆಯುವವ ಅಥವಾ ಕೊರೆಯುವವ; Writer of an inscription or an egrever; ತ್ರಷ್ಟಾ ಶ್ರೀ ಮುದ್ದಣಾಚಾರ್ಯಸೂನು ಶಾಸನ ಲೇಖಕ; (EC. VII(O), Sk.206, 1446).

ಶಾಸನಾಚಾರ್ಯ; Śāsanāchārya: ಶಾಸನವನ್ನು ಕೆತ್ತುವ ಶಿಲ್ಪಿ; Sculptor engraving inscription; ತ್ವಷ್ಟ್ರಾ ತಚ್ಛಾಸನಂ ಸ್ವಾಮಿಶಾಮೇನೇನ ವಿನಿರ್ಮಿತಂ । ಶಾಸನಾಚಾರ್ಯ ವರ್ಯೇಣ ನಾಗಿದೇವೇನ ಶಿಲ್ಪಿನಾ ॥ (EC. X(O), Gd.46, 1370).

ಶಿಲ್ಪಿಗ; Śilpiga: ಶಿಲ್ಪಕಾರ; Sculptor, architect; (ಕು.ವ್ಯಾ.ಭಾ.ಸಭಾ.ಪ. Ku.Vyā.Bhā. Sabhā Pa.VI, 23; ಉದ್ಯೋಗ ಪ. Udyōga Pa. II, 27, 1400).

ಶಿಳಾಕರ್ಮ; Śiḷākarma: ಕಲ್ಲಿನ ಕಟ್ಟಡದ ಕೆಲಸ; Stone construction; ಶಿಳಾಕರ್ಮ್ಮದಿಂ ದೇವಾಯತನಮಂ ನಿರ್ಮ್ಮಿಸುವುಪಕ್ರಮಮನೆತ್ತಿಕೊಂಡು; (KI. I, 25, 1186).

ಸಮ್ಮಗಾಱ; Sammagāṟa: ಚರ್ಮಗಾರ; ಚರ್ಮದ ಕೆಲಸ ಮಾಡುವವ; Leather worker; ಈ ಊರ ಸಮ್ಮಗಾಱರಾ ಕವಳ್ತೆಯಾನ್ವಿಟ್ಟಾರ್; (SII. XV, 450, 8th cent.; Ibid. XX, 299, 12th cent.; Ibid. 176, 1190; IKD. 9, 1142).

ಸ್ಥಪತಿ; Sthapati: ಶಿಲ್ಪಿ; Architect; (ಅಜಿ.ಪು. X, 1 ವ, Pr. 10th cent.).

ಸ್ವಯಂಪಾಕ ಊಳಿಗದವರು; Svayampāka Ūḷigadavaru: ಅಡಿಗೆ ಮನೆಯ ಕೆಲಸದವರು; Attendants in the kitchen; ದೇವರ ಪರಿಚಾರಕ ಸ್ವಯಂಪಾಕ ಊಳಿಗದವರು; (SII. IX, II, 564, 1534).

ಸುವರ್ಣಕಾರ; Suvarṇakāra: ಅಕ್ಕಸಾಲ; Goldsmith; (EI. XIV, 24, 5th cent.).

ಸೂತ್ರಧಾರ, ಸೂತ್ರಧಾರಿ; Sūtradhāra, Sūtradhāri: ಬಡಿಗ, ಶಿಲ್ಪಿ, ಕಲ್ಕುಟಿಗ; Carpenter, stone-worker, Architect; ಸ್ವಯಂಭೂದೇವರ ಸೂತ್ರಧಾರಿ ಬಮ್ಮೋಜನ ಪುತ್ರಂ; (SII. XX, 96, 11th cent.; EI. III, 18, 1222).

ಸಾಲಿಗ; Sāliga: ನೇಕಾರ; Weaver; ಕಾಸಿ ಕಮ್ಮಾಱನಾದ, ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ; (ಬ.ವ.

589, 12th cent.); ಸಾಲಿಗ ಸಮಯಂಗಳ್ ಗೌಡ ಮುಖ್ಯವಾಗಿ ನೂಲ ಪರ್ವ್ವಕ್ಕೆ ವರ್ಷಂಪ್ರತಿ; (EI. V, 3, 1161).

ಸಿಪ್ಪಿಗ; Sippiga: ಶಿಲ್ಪಕಾರ; Sculptor; ಸಿಪ್ಪಿಗ ಕುಳತಿಳಕಂ ತೊಳಗಿ ಬೆಳಗಿ ನೆಗಲ್ದಂತಿಪ್ಪ; (SII. XVIII, 70, 1064) Cf. ಸಿಂಪಿಗ, Simpiga, ಬಟ್ಟೆ ಹೊಲಿಯುವವ, ದರ್ಜಿ; tailor.

ಸುನ್ನವೆಸ; Sunnavesa: ಸುಣ್ಣ ಬಣ್ಣ ಬಳೆಯುವದು; ಸುಣ್ಣದ ಕೆಲಸ; White-washing; (APGAS. III, Gb.3, 1186).

ಸುಲಿಹಕಾಱ; Sulihakāṟa: ತೆಂಗಿನ ಕಾಯಿಗಳನ್ನು ಸುಲಿಯುವವ; Person peeling the cocoanuts; ಕೊನೆಕಾಱರ ಗುಡಿಗೆ ಪಣ ಸುಲಿಹಕಾಱರುಳಿಗೆ ಹಾಗ; (SII. XVIII, 111, 1115).

ಹನ್ನವಣ; ಹನ್ನವಳ; Hannavaṇa; Hannavaḷa: ವೀಳ್ಯದೆಲೆ ಇಳಿಸುವವ; Worker plucking betel leaves; ಹನ್ನವಳ ಸಾಸಿರ್ಬ್ಬರು ... ಗಾತ್ರವೊಂದಕ್ಕೆ ಬಿಟ್ಟ ಎಲೆ ಮುನ್ನೂಱು; (HAS. XVIII, 8, 1109).

ಹಿಟ್ಟು ಕುಟ್ಟುವ ಕೂಲಿ; Hiṭṭu kuṭṭuva kūli: ಅಡಿಗೆಗಾಗಿ ಹಿಟ್ಟನ್ನು ಕುಟ್ಟುವುದಕ್ಕಾಗಿ ಕೊಡುವ ಕೂಲಿ; Wages for pounding flour for cooking purpose; (SII. IX, II, 676, 1563).

ಹೂವಿನಕಾರ; Hūvinakāra: ಹೂಗಾರ; Florist; ಹೂವಿನಕಾರ ದುಗಣಸೆಟ್ಟಿಯ ಗಡಿಯಿಂದಂ; (SII. IX, II, 444, 1433).

ಹೊಱೆಗೂಲಿ; Hoṟegūli: ಹೊರೆಯನ್ನು ಒಯ್ಯುವದಕ್ಕಾಗಿ ಕೂಲಿ; Coolie for carrying load; (SII. IX, II, 653, 1554).

ಅಧ್ಯಾಯ ೧೪ CHAPTER XIV

ಧರ್ಮ ಮತ್ತು ಸಾಮಾಜಿಕ ಕಾರ್ಯಗಳಿಗೆ ಸಂಬಂಧಿಸಿದ ಪದಗಳು
TERMS RELATING TO RELIGIOUS AND SOCIAL WORK

೧. ಧಾರ್ಮಿಕ ವ್ಯಕ್ತಿಗಳು
1. RELIGIOUS PERSONS

ಕಪ್ಪಡಿಗ; Kappaḍiga: ಕಪ್ಪಡವನ್ನು ಉಟ್ಟವರು; ಕಪ್ಪಡವನ್ನು ಉಟ್ಟ ಸನ್ಯಾಸಿಗಳು; Mendicants; ಶ್ರೀ ಸ್ವಾಮಿದೇವರ ಸಂನಿಧಾನದಲು ಸ್ವಾಮಿ ಯಾತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಬಿಟ್ಟ; (SII. IX, I, 252, 1148); తే.కప్పడము; సన్యాసుల శాటి; (Inscriptional Glossory of A.P. p.60).

ತ್ರಿವರ್ಗಸಮಯಸಾಸಿರ್ವ್ವರ್; Trivarga-samaya-sāsivvar: ಮೂರು ಧರ್ಮಗಳ ಪ್ರಮುಖರು; Leaders of three religions; ತ್ರಿವರ್ಗ್ಗಸಮಯಸಾಸಿರ್ವ್ವರುಂ ಪುದ ಪಟ್ಟಣದ ಸನ್ನಿಧಾನದಲು; (SII. XV, 122, 1173).

ದಂಡಾಸನ; Daṇḍāsana: ಒಂದು ಬಗೆಯ ಯೋಗಾಸನ; A type of yogic posture; (EI. XXI, 40, 967).

ದಂಡಾಸನಿ; Daṇḍāsani: ದಂಡಾಸನದಲ್ಲಿರುವವ; Person in the Daṇḍāsana posture; ಶ್ರೀಮದ್ದಂಡಾಸನೀ ಗದಾಧರಬ್ರಹ್ಮ ... (SII. IX, I, 73, 976); ಶ್ರೀ ಮದ್ದಂಡಾಸನಿ ಪುರುಷೋತ್ತಮ ಬ್ರಹ್ಮಚಾರಿಯರಸರ್; (Ibid. XVII, 50, 1168).

ಧರ್ಮಪುರುಷ; Dharma-purusha: ಧರ್ಮದಂತೆ ನಡೆಯುವವ; Person who practices Dharma; (EC. X(O), Kl.105, 1390).

ಲೋಹಾಸನಿ; Lōhāsani: ಒಂದು ಬಗೆಯ ಆಸನದಲ್ಲಿರುವವ; A person in a type of yogic posture; ಶ್ರೀ ಸ್ವಾಮಿ ಕಾರ್ತಿಕೇಯದೇವತಪೋವನಾಧಿಪತಿಗಳಪ್ಪ ಶ್ರೀಮದ್ದಂಡಾಸನಿ ಲೋಹಾಸನಿ ಮಾಧವಬ್ರಹ್ಮಚಾರಿಯರಸರು; (SII. IX, I, 252, 1148).

ಸಮಯಚಕ್ರವರ್ತಿ; Samaya-chakravarti: ಯಾವದೊಂದು ಧರ್ಮದಲ್ಲಿ ಪಾರಂಗತರು; ಯಾವದೊಂದು ಧರ್ಮದ ಮುಖ್ಯರು; Expert in a religious sect; Chief of a religious sect; ಸಮಯಚಕ್ರವರ್ತಿ ಜಯಪತಿ ಸೆಟ್ಟಿ ಮುಖ್ಯವಾಗಿ; (EI. XIII, 3, 1204).

ಸಮೆಹದವರು; Samehadavaru: ಸಮಯದವರು; ಒಂದು ಧರ್ಮಕ್ಕೆ ಸೇರಿದವರು; Persons belonging to a religious group; ಸುಂಕದವರು ಸವೆುಹದವರು ಆರೊಬ್ಬರು ಯಿ ಧರ್ಮಕೆ ತಪ್ಪಿದರೆ; (EC. III, Hg.133, 1497).

೨. ಧಾರ್ಮಿಕ ವಿಧಿಗಳು
2. RELIGIOUS RITES

ಅಗ್ರಪೂಜೆ; Agrapūje: ಮೊದಲ ಸನ್ಮಾನ, ಮೊದಲ ಸ್ಥಾನ; ಮೊದಲ ಮರ್ಯಾದೆ; ಶ್ರೇಷ್ಠರಾದವರಿಗೆ ಸಭೆಯಲ್ಲಿ ಮಾಡುವ ಪ್ರಥಮ ಸನ್ಮಾನ; Honour given to the principal person present in the assemblies;

ಮದುವೆ ಮುಂಜಿಗಳಲು ಅಗ್ರಪೂಜೆ ಪಣ ೧; (EC. V(O), Cn.203, 1223; ಕು.ವ್ಯಾ.ಭಾ.ಸಭಾ ಪ. Ku.Vyā.Bhā. Sabhā Pa. VIII, 1, c.1400).

ಅಗ್ನಿಷ್ಟೋಮ; Agnishṭōma: ಅಗ್ನಿಯನ್ನು ಸ್ತುತಿಸುವುದಕ್ಕಾಗಿ ವಸಂತ ಋತುವಿನಲ್ಲಿ ನಡೆಸುವ ಯಜ್ಞ; A sacrifice in praise of Agni performed in spring; (EI, VII, 6, 930; SII. XI, II, 151, 1102).

ಅಷ್ಟಾಂಗಭಕ್ತಿ; Ashṭānga-bhakti: ಎಂಟು ಪ್ರಕಾರದ ಭಕ್ತಿ; (1) ಅರ್ಚನ (2) ವಂದನ (3) ಸ್ಮರಣ (4) ಪಾದಸೇವನ (5) ಸ್ನಾನ (6) ಪ್ರದಕ್ಷಿಣ (7) ಸಖ್ಯ ಮತ್ತು (8) ಆತ್ಮನಿವೇದನೆ (ಆತ್ಮಾರ್ಪಣೆ); Eight types of devotion like worship, folding hands in reverenee, serving the feet, bath, remembering with gratitude, circumbulation, intimate relationship and surrounder; (ಬ.ಪು. II, VI, 30, 14th cent.); ಸಂಪನ್ನಷ್ಟಾಂಗಭಕ್ತಿಕ್ರಮವಿಹಿತಶಿವಾಂಘ್ರಿದ್ವಯಾಂಭೋಜ ಪೂಜ; (EI. XIX, 3, 1250).

ಅಷ್ಟಾಂನಿಕ (ಅಷ್ಟಾಹ್ನಿಕ); Ashṭāṁnika (Ashṭāhnika): ಎಂಟು ವಿಧದ ಆಚರಣೆಗಳು; Eight types of rituals; (KI. III, I, 9, 1538).

ಆರಾಧನಾವಿಧಿ; Ārādhanā-vidhi: ಸಲ್ಲೇಖನ ಅಥವಾ ಉಪವಾಸದಿಂದ ಮರಣ; Vow of fasting unto death; ಶ್ರೀಪಾದಸನ್ನಿಧಿಯೊಳಾರಾಧನಾವಿಧಿಯಿಂ ಮೂರು ದೆವಸಂ ನೋನ್ತು ಸಮಾಧಿಯಂ ಸಾಧಿಸಿದಂ; (EC. II(R), 64, 10th cent.).

ಇಂದ್ರಪರ್ವ; Indra-parva: s.a. ಐಂದ್ರೋತ್ಸವ; Aindrōtsava, below. ಶ್ರೀ ಪಂಚಿಕೇಶ್ವರದಲಿ ಯಿಂದ್ರ ಪರ್ವದ ಧರ್ಮಕೆಯುಂ; (EC. VII(R), Ng.74, 1271).

ಏಕಾದಶೀಜಾಗರ; Ēkādaśī-jāgara: ಏಕಾದಶಿಯ ದಿವಸ ರಾತ್ರಿಯಿಡೀ ಎಚ್ಚರವಿದ್ದು ದೇವರ ಕೀರ್ತನೆ ಮುಂತಾದವನ್ನು ನಡೆಸುವದು; Keeping awake the whole night singing the glories of god on Ēkādasi day; (SII. X, II, 662, 1556).

ಐಂದ್ರೋತ್ಸವ; Aindrōtsava: ಇಂದ್ರನ ಸಲುವಾಗಿ ಮಾರ್ಗಶಿರ ಮತ್ತು ಪುಷ್ಯ ಮಾಸಗಳ ಕೃಷ್ಣಪಕ್ಷ ಅಷ್ಟಮಿಯಂದು ನಡೆಯುವ ಉತ್ಸವ; A festival honouring Indra, on the 8th day in the 2nd half of Mārgaśira and Pushya; (SII. XI, II, 159, 1111).

ಕ್ಷಿತಿರುಹನೋಂಪಿ; Kshitiruha-nōṁpi: ಹೆಚ್ಚಾಗಿ ಜೈನ ಮತದವರು ಪಾಲಿಸುವ ಗಿಡ ನೆಡುವ ವ್ರತ; A religious rite of planting trees, particularly by Jainas; ಕ್ಷಿತಿರುಹವಿದುವೊಂದ್ದು ನೋಂಪಿಯಾಟಿಸೆ ..... ಮಾಮರನಂ ನೇಱಿಲೆ ನೀಳೆಯಂ ಪಲಸುಮಂ ಖರ್ಜೂರವಂ ತೆಂಗುಮಂ ವರಪೂಗೀತರುವಂ ವನಸ್ಪತಿಯನತ್ಯಾನಂದದಿಂದಿಟ್ಟು; (SII. XX, 175, 1190).

ಗುಪ್ತಿ; Gupti: ದೇಹ, ಮಾತು, ಮನಸ್ಸುಗಳ ಅಶುಭ ಪ್ರವೃತ್ತಿಗಳನ್ನು ತಡೆಯುವುದು; To control the evil tendancies of the body, speech and mind; ವ್ರತಸಮಿತಿ ಗುಪ್ತಿ ಗುಪ್ತ ಮುನಿವೃನ್ದವನ್ದಿತಚರಣಕೂಚ ಆಚಾರ್ಯೋ ನಾಮಾಸೀತ್; (EC. XII(O), Gb.61, 812).

ಛತ್ರ; Chhatra: ಧರ್ಮಛತ್ರ; Free feeding house; ಬ್ರಾಹ್ಮಣರಿಗೆವು ತಪೋಧನರಿಗೆವು ದಿನಂಪ್ರತಿ ಆಯ್ವರಿಗೆ ಛತ್ರವಾಗಿ ನಡೆಸಬೇಕೆಂದು ಬಿಟ್ಟ ಭೂಮಿ; (SII. XVIII, 264, 1287).

ಜೋತಿಜಾತ್ರೆ; Jōti-jātre: ಜ್ಯೋತಿರ್ಲಿಂಗದ ಯಾತ್ರೆ; Pilgrimage to Jyōtirlinga; ಶ್ರೀಮಂತು ಕ್ರಿಷ್ಣಕನ್ನಿಹದೇವರು ಜೋತಿಜಾತ್ರೆ ಮಾಡಿ ಮಗುಳ ಬಂದು; (SII. IX, I, 69, 11th cent.).

ದೇವಾರ; Dēvāra: ದೇವರ ಸೇವೆ; Service in the temple; ದೇವಾರಂಗೆಯ್ವ ಬ್ರತಿಗಳ್; (EC. III(R), Nj.239, 10th cent.).

ಧವಿಸೆಯ ಪೂಜೆ; Dhaviseya pūje: ಒಂದು ವಿಧದ ಪೂಜೆ; A kind of worship; ಹೊಯ್ಸಳೇಶ್ವರ ಪಂಚಕೇಶ್ವರದೇವರ ಧವಿಸೆಯ ಪೂಜೆಗೆ; (EC. IX(O), Bl.293, 1220).

ನಾರಾಯಣಬಲಿ; Nārāyaṇa-bali; ಒಂದು ಧಾರ್ಮಿಕ ವಿಧಿ; ದುರ್ಮರಣ ಹೊಂದಿದವರ ಉತ್ತರ ಕ್ರಿಯೆ ಮಾಡುವಾಗ ನಾರಾಯಣ ಸಹಿತ ಐದು ದೇವರಿಗೆ ಕೊಡುವ ಬಲಿ ಎಂದೂ ಹೇಳಲಾಗುತ್ತದೆ; A religious rite; It is said that it

is an oblation given to five deities including Nārāyaṇa in performing the funeral rites of a person dying an unnatural death; ಲಜ್ಜೀಶ್ವರನ್ನಾವು ಗ್ರಾವುನ್ನಾರಾಯಣಬಲ್ಯುಪ ಹಾರಾರ್ಥಂ; (KI. V, 1, 578).

ಪಂಚಮಹಾಯಜ್ಞ; Pancha-mahāyajña: ಬ್ರಾಹ್ಮಣನು ಮಾಡಬೇಕಾದ ಐದು ಯಜ್ಞಗಳು; (1) ಬ್ರಹ್ಮಯಜ್ಞ (2) ಪಿತೃಯಜ್ಞ (3) ದೇವಯಜ್ಞ (4) ಭೂತಯಜ್ಞ (5) ಮನುಷ್ಯಯಜ್ಞ; Five duties enjoyed on a brāhmaṇa; (1) Pursuilt of studies (2) Oblation to ancesters (3) Sacrificial offering to gods (4) Offering to the five elements (5) Entertaining guests; ಪಂಚಮಹಾಯಜ್ಞ ವ್ರತಸಂಚಿತ ಪುಣ್ಯಪ್ರಭಾವರ್; (KI. V, 26, 1147).

ಪಾದಪೂಜೆ; Pādapūje: ಪಾದಗಳನ್ನು ತೊಳೆದು ಪೂಜೆಮಾಡುವದು; Worshiping the feet; ಮದುವೆ ಮುಂಜಿಗಳಲು ಅಗ್ರಪೂಜೆ ಪಣ ೧ ವೃತ್ತಿಯ ಕ್ರಿಯಂಗಳಲ್ ಪಾದಪೂಜೆ ಪ ೧; (EC. V(O), Cn.203, 1223).

ಪಿತೃಪರ್ವ; Pitṛi-parva: ಪಿತೃತಿಥಿ ಅಥವಾ ಶ್ರಾದ್ಧದಿನ; ಅಮವಾಸ್ಯೆ; Anniversary of the manes; Amavāsyā day (EI, IV, 6, 945); ಪಿತೃಪರ್ಬಾರ್ಥಂ ನಿವರ್ತನಮೇಕಂ; (EI. XXXIV, 7, 1247).

ಮುತ್ತಿನ ತುಲಾಪುರುಷ; Muttina tulāpurusha: ತುಲಾಪುರುಷದ ಒಂದು ವಿಧ, ಮುತ್ತಿನೊಂದಿಗೆ ತೂಗುವದು; A variety of Tulāpurusha; weighing a person aginst pearls; (SII. IX, II, 547, 1532) See ತುಲಾಪುರುಷ below.

ವ್ರತಸಮಿತಿ; Vrata-samiti: ವ್ರತ ಸಮೂಹ, ಪಂಚಾಣುವ್ರತ, ಪಂಚಮಹಾವ್ರತ; (EC. VII(R), Ng.26, 1168).

ಸಮಾಧಿವಿಧಿ; Samādhi-vidhi: ಜೈನರು ಪಾಲಿಸುವ ಅಮರಣಾಂತ ಉಪವಾಸ; Fasting unto death performed by the Jain ascetics as a religious rite; ಸನ್ಯಸನಂ ನೆಜೆದೊಪ್ಪೆ ನಾಕಸಂಗತಿ ವಡೆದಳ್ಸಮಾಧಿ ವಿಧಿಯಿಂ ವರೆ ಜಕ್ಕಲೆಯೇಂ ಕೃತಾರ್ತ್ಥೆಯೋ; (EC. VII(O), Sk.196, 1212).

ಸಹಗಮನ; Sahagamana: ಮೃತ ಪತಿಯ ದೇಹದೊಡನೆ ಪತ್ನಿಯು ಸತಿ ಹೋಗುವದು; Self immolation of the wife at the time of the husband's death; ಬೀರಗಉಡನು ಹಾಯ್ದು ಹೊಯಿಸಿಕೊಂಡು ಬಿದಲ್ಲಿ ಆತನ ಮದವಳಿಗೆ ಗೌರಾಯಿ ಸಹಗಮನವ ಮಾಡಿ ವೀರಸ್ವರ್ಗ್ಗವ ಪಡದರು; (EC. VIII(O), Sa.74, 1421).

ಸರಸ್ವತಿಯ ಭೋಜನ; Sarasvatiya-bhojana: ಉತ್ಸವದ ಸಮಯದಲ್ಲಿ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸಿಗಳಿಗಾಗಿ ಏರ್ಪಡಿಸುವ ಭೋಜನ; Free feeding of the students and others in an educational institution on special occasions; ತಮ್ಮ ವಕ್ಯಣ ಶಾಲೆಯಲು ಐಂದ್ರೋತ್ಸವದ ಪೂಜೆಯಂ ಮಾಡಿ ಸರಸ್ವತಿಯ ಭೋಜನಕ್ಕೆಂದು ಬಿಟ್ಟ ಗದ್ಯಾಣಂ; (SII. XI, II, 159, 1111).

೩. ದಾನಗಳು

3. GIFTS

ಆಹಾರದಾನ; Āhāra-dāna: ಅನ್ನಸಂತರ್ಪಣೆಗಾಗಿ ಸತ್ರಗಳನ್ನು ನಿರ್ಮಿಸುವದು; Installation of free feeding houses; (SII. XI, I, 64, 1028).

ಉದಕದಾನ; Udaka-dāna: ಅರವಟ್ಟಿಗೆಗಳ ಮುಖಾಂತರ ನೀರನ್ನು ದಾನವಾಗಿ ಕೊಡುವದು; Free supply water through installing water-sheds; (SII. XI, I, 64, 1028).

ಉಭಯಮುಖಿ (ಗೋದಾನ); Ubhayamukhi (gōdāna): ಈಯಲಿರುವ ಆಕಳನ್ನು ದಾನವಾಗಿ ಕೊಡುವುದು; Donating of a cow which is about to calve; ವಾರಾಣಾಸಿಯ ಕುರುಕ್ಷೇತ್ರಂ ಗಯೆಯೆಂಬೀ ತೀರ್ಥಸ್ನಾಂಗಳೊಳುಭಯಮುಖಿ; (EC. XI(O), Cd.78, 1060).

ಕನ್ಯಾದಾನ; Kanyā-dāna: ಕನ್ಯೆಯನ್ನು ಅಲಂಕಾರ ಮಾಡಿ ತಕ್ಕ ವರನಿಗೆ ಮದುವೆಮಾಡಿ ಕೊಡುವುದು; Offering the daughter bedectked with ornaments, in marriage to a bride-groom; ಅನ್ನಂ ಸುವರ್ನ್ನಕೆಜೆಯುಂ ಸನ್ನುತ ಗೋದಾನ ಭೂಮಿದಾನ ಸಿವಾಲ್ಯ ಕನ್ಯಾದಾನಂಗಳನತ್ಯೋನ್ನತದಿ ಮಾಡಿಸಿದ; (EC. VI(R), 62, 1140; SII. XI, I, 64, 1028).

ಗೋದಾನ; Gōdāna: ಆಕಳನ್ನು ದಾನವಾಗಿ ಕೊಡುವುದು; Donation of cows; (EC. VI(R), Kr.62, 1140; Ibid. 69, 1242).

ಗೋಸಹಸ್ರ; Gō-sahasra: ಸಾವಿರ ಆಕಳುಗಳನ್ನು ದಾನವಾಗಿ ಕೊಡುವ ವಿಧಿ; A rite of donating one thousand cows; (EC. VI(R), Kr.71, 1462).

ಗೋಸಾಸ; Gōsāsa: s.a. ಗೋಸಹಸ್ರ; Gōsahasra; ದಾನಮುಂ ಕೊಟ್ಟು ಗೋಸಾಸ ಇಟ್ಟೋ; (SII. XVIII, 31, 9th cent); ಧರ್ಮ್ಮಮಜ್ಜೆಯ್ದು ಗೋಸಾಸಮಿಟ್ಟು ನಿಜೆಸಿ ಮೇಣ್ಪಿ; (SII. XVIII, 313, 9th cent).

ಚಿತ್ರಗೋಸಾಸ; Chitra-gōsāsa: ಚಿತ್ರ ಗೋಸಹಸ್ರ; Chitra-gōsāhasra; ಚಿನ್ನ, ಮುತ್ತು ಅಥವಾ ಇತರ ವಸ್ತುಗಳಿಂದ ಅಲಂಕೃತವಾದ ಸಾವಿರ ಗೋವುಗಳನ್ನು ದಾನವಾಗಿ ಕೊಡುವುದು; Donating thousand cows decorated with gold and other objects; ತಾಣಗುನ್ದೂರ ಮಹಾಜನದ ಪರಕೆಯೊಳ್ ಚಿತ್ರಗೋಶಸಮಿಟ್ಟೆರಡು ಕೆಜೆಯ ಕಟ್ಟಿ; (SII. XVIII, 20, 916).

ತುಲಾಪುರುಷ; Tulāpurusha: ಒಬ್ಬ ವ್ಯಕ್ತಿಯನ್ನು ಮುತ್ತು ರತ್ನಗಳು ಅಥವಾ ಇತರ ವಸ್ತುಗಳೊಡನೆ ತೂಗಿ ಅವನ ಭಾರದ ಆ ವಸ್ತುಗಳನ್ನು ದಾನಮಾಡುವುದು; Weighing a person against gold and precious stones or other articles and donating these articles equal to the weight of the person; (SII. XVIII, 159, 1157; EC. III(R), Gu.147, 1448).

ಪೃಥ್ವೀದಾನ; Prithvī-dāna: ಭೂಮಿದಾನ; Grant of land; (SII. XV, 31, 1146).

ಭೂಮಿದಾನ; Bhūmi-dāna: ಭೂಮಿಯನ್ನು ದಾನಮಾಡುವುದು; Donating the land; ಅನ್ನಂ ಸುವರ್ನ್ನ ಕೆಜೆಯುಂ ಸನ್ನುತ ಗೋದಾನ ಭೂಮಿದಾನ ಸಿವಾಲ್ಯ ಕನ್ಯಾದಾನಂಗಳನತ್ಯೋನ್ನತದಿಂ ಮಾಡಿಸಿದ; (EC. VI(R), Kr.62, 1140; Ibid. III(R), Gu.147, 1448).

ಭೈಷಜ್ಯದಾನ; Bhaisajya-dāna: ಪುಕ್ಕಟೆಯಾಗಿ ಔಷಧಿಗಳು ದೊರೆಯುವಂತೆ ವ್ಯವಸ್ಥೆ ಮಾಡುವುದು; Arrangement for free supply of medicines; (SII. XI, I, 64, 1028).

ಮಹಾಭೂತಘಟ; Mahābhūta-ghaṭa: ಒಂದು ಮಹಾದಾನದ ಹೆಸರು; A kind of great gift; ಆದಜೊಳಗಣ ಮಹಾಭೂತಘಟವೆಂಬ ಮಹಾದಾನವನು (EC. III(R), Gu.26, 1506).

ವಿಶ್ವಚಕ್ರ; Viśva-chakra: ಒಂದು ಮಹಾದಾನದ ಹೆಸರು; One of the Mahādānas; ಯುಗಾದಿಪರ್ವ್ವನಿಮಿತ್ತಂ ವಿಶ್ವಚಕ್ರಂ ಮೊದಲಾಗಿ ಪಲವುಂ ಮಹಾದಾನಂಗಳಂ; (SII. IX, I, 158, 1092).

ಸಪ್ತಸಾಗರದಾನ; Saptasāgara-dāna: ಒಂದು ದಾನದ ಹೆಸರು; A type of donation; (SII. XV, 31, 1146); ಸಪ್ತಸಾಗರದಾನಸ್ಯ ವೇಳಾಯಾಂ ಶಿವಸನ್ನಿಧೌ; (EC. VI(R), Kr.71, 1462).

ಸರ್ವಸ್ವದಾನ; Sarvasva-dāna: ಇದ್ದುದೆಲ್ಲವನ್ನು ದಾನವಾಗಿ ಕೊಡುವದು; Gifting away all posessions of oneself; ನಾನಾದಾನದೊಳಧಿಕನ್ತಾನೆನೆ ಸತ್ವರ್ವ್ವದಾನವಂ ಮಾಡಿದನನ್ತೇನಧಿಕನೋ ಶಿವರಾಜಚಮೂನಾಥಂ; (SII. IX, I, 153, 1083).

ಸುವರ್ಣಮೇರುದಾನ; Suvarṇa-mēru-dāna: ಬಂಗಾರದಿಂದ ಮಾಡಿದ ಪರ್ವತದ ಆಕಾರದ ವಸ್ತುವಿನ ದಾನ; Donating an object of gold made in the shape of a mountain; ತುಂಗಭದ್ರಾ ತೀರದಲಿ ಶ್ರೀ ವಿಠಲೇಶ್ವರನ ಸಂನಿಧಿಯ ಮಾಡಿದ ಸುವರ್ಣ ಮೇರುದಾನಕ್ಕೆ; (SII. IX, II, 557, 1533).

ಹಿರಣ್ಯಗರ್ಭದಾನ; Hiraṇyagarbha-dāna: ಚಿನ್ನದಿಂದ ಮಾಡಿದ ಗರ್ಭವನ್ನು ಸಕಲ ಸಂಸ್ಕಾರದೊಂದಿಗೆ ದಾನ ಮಾಡುವುದು; Gifting away the golden pot shaped like a garbha for the purpose of donation; (EC. VII(R), Ng.64, 1145; SII, XVIII, 159, 1157).

ಹಿರಣ್ಯದಾನ; Hiraṇya-dāna: ಬಂಗಾರವನ್ನು ದಾನವಾಗಿ ಕೊಡುವುದು; Giving gold as gift; (SII. XI, I, 64, 1028).

ಹೇಮಾಶ್ವದಾನ; Hēm-āśva-dāna: ಬಂಗಾರದಿಂದ ಮಾಡಿದ ಕುದುರೆಯನ್ನು ದಾನಮಾಡುವುದು; Donating a horse made of gold; ಹೇಮಾಶ್ವದಾನಂ ವ್ಯಧಾಜ್ಜೇತಾ ನೃಸಿಂಹನೃಪಾತ್ಮಜೋ ಕೃಷ್ಣ; (EC. VII(R), Ng.160, 1513).

೪. ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಸಂಬಂಧಿಸಿದ ಇತರ ಪದಗಳು

4. OTHER TERMS RELATING TO RELIGIOUS AND SOCIAL WORK

ಅನುಷ್ಠಾನಭವನ; Anushṭhāna-bhavana: ಜಪತಪಾದಿ ಕಾರ್ಯಗಳನ್ನು ಮಾಡುವ ಮನೆ; A hall to observe japa, tapa and the like; ಏಕದಣ್ಡಿ ತ್ರಿದಣ್ಡಿ ಸ್ನಾತಕ ..... ಬ್ರಹ್ಮಚಾರಿ ಹಂಸಪರಮ ಹಂಸಾನುಷ್ಠಾನಭವನಮುಂ (APGAS. III, Gb.III, 1056).

ಅರಭಾವಿ; Arabhāvi: ಧರ್ಮಾರ್ಥ ಬಾವಿ; Charity well; ಕೇಶಿಮಯ್ಯ ಪ್ರಭು ಸದ್ವೃತ್ತನರಭಾವಿಯಂ ವಿಳಸತ್ತೇಜಂ ಪರಹಿತಾರ್ತ್ಥವಮಂ ಮಾಡಿಸಿದಂ; (SII. XVIII, 68, 1062).

ಅಱವಟಿಗೆ, ಅಱವಂಟಿಗೆ; Aṟavaṭige, Aṟavaṇṭige: ಹಾದಿಕಾರರಿಗೆ ಕುಡಿಯುವ ನೀರನ್ನು ಧರ್ಮಾರ್ಥವಾಗಿ ಕೊಡುವ ಸ್ಥಳ; Place for free supply of water for travellers and others; (SII. XV, 542, 1049-50); ಅಱವಂಟಿಗೆಯ ನೀರನೆಱೆವ ಬ್ರಾಹ್ಮಣಗೆ ಮತ್ತರು ೪; APGAS, IX, 23, 1134); ಯೀ ಮೂಱುವ್ರಿತ್ತಿಯ ಬೆಳೆಯ ಆದಾಯವನು ಮೂರು ಭಾಗವ ಮಾಡಿ ಆ ಅಱವಟಿಗೆಯ ನಡಸುವ ವಿರುಪಣಂಗಳಿಗೆ ವೊಂದು ಭಾಗೆ ಅಱವಟಿಗೆಗೆ ನೀರ ಹೊಯಿವದಕ್ಕೆ ಮರಗಳಿಗೆ ನೀರನೆಱೆವದಕೆ ಮಾಳಿಗೆ ಗಿಳಿಲಾದರೆ ಕಟ್ಟುವದಕ್ಕೆ ಅರವಟಿಗೆಗೆ ಗುಡಾಣ ಬಿಂದಿಗೆ ಕರಗ ಮೊಘೆಗಳ ಕ್ರಯಕ್ಕೆ ಸುತ್ತಣ ಮನಿ ಅಣಿಮಾಡಿಕೊಂಡು ಯಿಹದಕ್ಕೆ ಬಾವಿ ಹೂಳಿದರೆ ತೋಡುವದಕ್ಕೆ ಯಿಪ್ಪರ ಉಪಕ್ಷಯಕ್ಕೆ ಮಿಕ್ಕ ಎರಡು ಭಾಗೆ ಸಲುಉದು; (SII. IX, II, 436, 1412).

ಅಱವಟ್ಟಿಗೆಯ ಧರ್ಮ; Aṟavaṭṭigeya dharma: ಅರವಟ್ಟಿಗೆಯ ಏರ್ಪಾಡಿಗಾಗಿ ಕೊಟ್ಟ ದಾನ; Free gift for maintaining a water shed; (EC. VII(O), Hl.18, 1286; SII. IX, II, 436, 1412).

ಗೋಗ್ರಾಸ; Gōgrāsa: ಆಕಳುಗಳಿಗೆ ಆಹಾರದ ವ್ಯವಸ್ಥೆ; Arrangement for feeding cows; ಗವಾಂ ಸ್ವಚ್ಛಂದಪಾನಾಹಾರನಿಮಿತ್ತಂ ಜಲದ್ರೋಣ್ಯೌ ಗೋಗ್ರಾಸಶ್ಚ; (IND. 2, 10th cent.).

ಗೋಪ್ರಚಾರ; Gōprachāra: ಗೋಮಾಳ, ದನಗಳು ಮೇಯುವ ಸ್ಥಳ; Land meant for the grazing of the cattle; (SII. IX, I, 158, 1092). ಗೋಪ್ರಚಾರವೆಂದರೆ ಒಂದು ಭೂಮಿಯ ಅಳತೆಯೆಂಬ ಬಗ್ಗೆ ಅಳತೆಗಳು, ತೂಕಗಳು, ಭೂಮಾಪನ ವಿಭಾಗವನ್ನು ನೋಡಿರಿ; For Gōprachāra meaning a land measure, see section on Measures and Weights, Land measures.

ಗೋವಿನ ಅರವಟಿಗೆ; Gōvina-aravaṭige: ದನಗಳಿಗಾಗಿ ನೀರು ಪೂರೈಕೆಯ ವ್ಯವಸ್ಥೆ; Arrangement for supply of water to the cattle; (SII. IX, II, 503, 1516).

ಜನಪದಕಲ್ಯಾಣರ್; Janapada-kalyāṇar: ಜನಹಿತ ಕಾರ್ಯಗಳಲ್ಲಿ ನಿರತರಾದವರು, ಗ್ರಾಮ ಸೇವಕರು; People engaged in welfare work; (ಅಜಿ.ಪು. Aji.Pu. X, 1 ವ, Pr. 10th cent.).

ಜನಪದಕಲ್ಯಾಣಿಯರ್; Janapada-kalyāṇiyar: ಜನಹಿತಕಾರ್ಯದಲ್ಲಿ ತೊಡಗಿದ ಹೆಂಗಸರು, ಕಲ್ಯಾಣ ಕಾರ್ಯಕರ್ತೆಯರು, ಗ್ರಾಮ ಸೇವಕಿಯರು; Female workers engaged in welfare activities, Social welfare female workers; (ಅಜಿ.ಪು. Aji.Pu. X, 1, ವ. Pr. 10th cent.).

ಜಲದ್ರೋಣಿ; Jaladrōṇi: ದನಕರುಗಳಿಗಾಗಿ ಧರ್ಮಾರ್ಥವಾಗಿ ಇಟ್ಟ ನೀರಿನ ದೋಣಿ; Trough for supply of free water to the cattle; (IND. 2, 10th cent.).

ದ್ವಿಜಾನ್ನಗೃಹಸತ್ರ; Dvij-ānnagṛiha-satra: ಬ್ರಾಹ್ಮಣರಿಗಾಗಿ ಇರುವ ಅನ್ನಛತ್ರ; Free feeding house for brāhmaṇas; ಅನ್ಯತಾಟಾಕದೊಳೆಯ್ದೆ ದೇವತಾನಿಳಯ ಮಹಾದ್ವಿಜಾನ್ನಗೃಹ ಸತ್ರ ನಿಕೇತನ ದಿವ್ಯದೀರ್ಗ್ಘಿಕಾವಳಿಗಳನೊಪ್ಪೆ ಮಾಡಿಸಿದ; (KI. V, 14, 1099).

ಧರ್ಮದೋಣಿ; Dharma-ḍōṇi: ಧರ್ಮಾರ್ಥವಾಗಿ ನೀರು ಪೂರೈಸುವುದಕ್ಕೆಂದು ಇಟ್ಟ ಡೋಣಿ; A stone tub for the free supply of water; ಧರ್ಮದೋಣಿಗೆ ನೀರ ಹೊಯಿವದಕೆ ಉ(ಊ)ರಿಗೆ ಪಡುವಲು; (SII. IX, II, 670, 1559).

ಧರ್ಮಸಂತೆ; Dharma-sante: ಸುಂಕವನ್ನು ಹಾಕದಿರುವ ಸಂತೆ; A market place; free of tax; ನೆರಪಿಯವರೆಲ್ಲರಂ ಕುಳ್ಳರಿಸಿಯೆ ಕೇಳ್ದ ಧರ್ಮಸಂಥೆ ಯೆನಿಸಿಯೆ ಧರೆಯೊಳಗೆ ಧರ್ಮಸಂತೆಯಾಚಂದ್ರಾರ್ಕ್ಕಂ ॥

ನೆರೆದೀ ಸಂಘೆಯೊಳಾನೆ ಮಾಣಿಕ ..... ಪಲವು ಭಂಡಂ ಮಾಱಲೇನಾದಡಂ ಪಿರಿದುಂ .... ಆದಾಯಂ ಸುಂಕವೆಂದಂದವನ್ನಿರ್ಗ್ಗರುತಂ ರೌರವದಲ್ಲಿ ಸಕುಟುಂಬಂ ಬೀಳ್ವರಂನ್ತಾತ್ಕ್ಷಣಂ; (SII. XX, 175, 1190).

ಧರ್ಮೇತ; Dharm-ēta: ಧರ್ಮಾರ್ಥವಾಗಿ ನೀರು ಪೂರೈಸಲು ನೀರನ್ನೆತ್ತುವ ಸಾಧನ, ಏ(ಯಾ)ತ; Free lift service for lifting of water for supply of water; ಪಟ್ಟಣದ ಧರ್ಮ್ಮೇತಕ್ಕೆ ಬಿಟ್ಟ ಮತ್ತರು ಪನ್ನೆರಡು; (SII. IX, I, 131, 11th cent.).

ಪ್ರಪೆ; Prape: s.a. ಅರವಟ್ಟಿಗೆ; Aravaṭṭige; ಪ್ರಪೆ ಗೋಪ್ರಚಾರ ವಿಶಾವಸಥ ಮುರಾರಿಭವನ; (SII. IX, I, 158, 1090).

ಸರ್ವಲೋಕಾಶ್ರಯಮಂಡಪ; Sarvalōkāśraya-maṇḍapa: ಸಾರ್ವಜನಿಕ ಉಪಯೋಗಕ್ಕಾಗಿರುವ ಛತ್ರ; ಮಂಟಪ, ಧರ್ಮಛತ್ರ; (Pavilion for public use; choultry; ಸುವಿಹಿತಪ್ರಾವರಣಾಸ್ತರಣಾದಿಪರಿಕರಃ ಸರ್ವ್ವಲೋಕಾಶ್ರಯನಾಮಾ ಮಂಡಪಃ; (IND. 2, 10th cent.).

ಅಧ್ಯಾಯ ೧೫ CHAPTER XV

ಅರಸೊತ್ತಿಗೆಗೆ ಸಂಬಂಧಿಸಿದ ಪದಗಳು
TERMS RELATING TO ROYALTY

೧. ಬಿರುದುಗಳು
1. EPITHETS

ಚಕ್ರವರ್ತಿ; Chakravarti: ಸಾರ್ವಭೌಮ, ಅಧಿರಾಜ; Sovereign; (EC, X(O), Kl.170, 11th cent.).

ಪಟ್ಟಮಹಾದೇವಿ; Paṭṭamahādēvi: ರಾಜನ ಕೂಡ ಪಟ್ಟಕಟ್ಟಿಸಿಕೊಂಡ ರಾಣಿ; The chief queen coronated along with the king; (EC. II(R), 517, 1181; IND. 30, 1133).

ಸಾರ್ವಭೌಮ; Sārvabhauma: ಸರ್ವಭೂಮಿಪಾಲರ ಅಧಿರಾಜ; Universal monarch; ಕ್ರಮೇಣ ಪ್ರಾಪ್ತ ಸಾರ್ವ್ವಭೌಮಪದಜ್ಞತಾಪಾನುರಾಗಾವನತ ಸಾಮನ್ತ ಮಕುಟ; (EC. X(O), Kl.63, 757).

ಸುರತಾಣ, ಸುರತ್ರಾಣ; Suratāṇa, Suratrāṇa: ಸುಲ್ತಾನ್; Sultan; ಸುರತಾಣ ಮಹಮಂದ; (ARIE. 62-63, B. 744, 14th cent.); ಮಹಾರಾಜಾಧಿರಾಜ ಶ್ರೀ ಸುರತಾಣ ಮಹಮುದರಾಜ್ಯೇ; (EI. XXXII, 19, 1326); ಹಿಂದುರಾಯ ಸುರತ್ರಾಣ; (EC. XI(O), Dg. 29, 15th cent.).

೨. ವಿಶೇಷ ಮರ್ಯಾದೆಗಳು ಮತ್ತು ಉತ್ಸವಗಳು
2. PREVILEGES AND FESTIVITIES

ಕಪ್ಪ; ಕಪ್ಪಕಾಣಿಕೆ; Kappa; Kappa-kāṇike: ಅರಸನಿಗೆ ಸಾಮಂತರಿಂದ ಸಲ್ಲತಕ್ಕ ಹಣ; Tributes from subordinate rulers; ದನ್ತಿಗನ ಮೇಗೆಟ್ಟು ಕಪ್ಪಗೊಳಲ್ಬನ್ದಲ್ಲಿ (EI. XXXIII, 60, 804); ಬಲ್ಲಹ ಕಾಡುವೆಟ್ಟಿಯ ಕಪ್ಪಗೊಡದೆಟ್ಟಿನ್ದನ್ದು; (SII. IX, I, 6, 9th cent.); ಪ್ರತ್ಯಂತವಾಸಿಗಳಿಪ್ಪ ಚೇರ ಚೋಳ ಪಾಣ್ಡ್ಯ ಪಲ್ಲವ ಪ್ರಭೃತಿಗಳನಲೆದಾಟನ್ದು ಕಪ್ಪಮಂ ಕೊಂಡು; (EC. VII(O), Sk.130, 1075); ಚರಾದಾಯ ಮಗ್ಗಮನೆ ಆಡುದೆರೆ ..... ಕಪ್ಪ ಕಾಣಿಕೆ; (Ibid. III(R), Gu.86, 16th cent.).

ಪಟ್ಟಕಟ್ಟು; ಪಟ್ಟಂಗಟ್ಟು; Paṭṭakaṭṭu; Paṭṭaṁ-gaṭṭu: ಪಟ್ಟವನ್ನು ಕಟ್ಟುವುದು; ಅಧಿಕಾರ ವಹಿಸಿಕೊಡುವುದು; To perform the coronation ceremony; to invest with authority; (HAS. XVIII, 16, 1191; EC. III(R), Gu.219, 10th cent.).

ಪಟ್ಟಬಂಧೋತ್ಸವ; Paṭṭabandhōtsava: ಅರಸೊತ್ತಿಗೆಯ ಅಧಿಕಾರವನ್ನು ಪಡೆಯುವ ಉತ್ಸವ; ಹಣೆಗೆ ಪಟ್ಟವನ್ನು

ಕಟ್ಟುವ ಉತ್ಸವ; Festival of tying a golden fillet to the forehead of prince as a mark of assuming the royal authority; ಹೊಯ್ಸಳ ಬಲ್ಲಾಳದೇವರ್ ಶ್ರೀಮದ್ರಾಜಧಾನಿ ದೋರಸಮುದ್ರದಲು ...... ಆದಿವಾರದಂದು ಪಟ್ಟಬಂಧೋತ್ಸವದಲು; (EC. VI(O), Kd.4, 1173).

ಪಟ್ಟಬದ್ಧೋತ್ಸಾಹ; Paṭṭabaddhōtsātha: s.a. ಪಟ್ಟಬಂಧೋತ್ಸವ; Paṭṭabandhōtsava; ಹೊಯ್ಸಳ ಶ್ರೀ ವೀರನಾರಸಿಂಹದೇವರಸರ ಪಟ್ಟಬದ್ಧೋತ್ಸಾಹ ವಾದೆರಡನೆಯ ವಿಷುಸಂವತ್ಸರದ; (EC. IX(R), Bl.256, 1221).

ಪಟ್ಟಾಭಿಷೇಕ; Paṭṭābhishēka: ಸಾಂಪ್ರದಾಯಿಕವಾಗಿ ಸಿಂಹಾಸನದ ಮೇಲೆ ಕುಳ್ಳಿರಿಸಿ ಅಧಿಕಾರವನ್ನು ವಹಿಸಿಕೊಡುವುದು; ಪಟ್ಟವನ್ನು ಕಟ್ಟುವ ಮೊದಲು ಅಭಿಷೇಕ ಮಾಡುವುದು; Traditional way of bestowing the rulership by seating the prince on an elevated seat; Annointing the prince on the occasion of coronation; ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಕೃಷ್ಣರಾಯಮಹಾರಾಯರ ಪಟ್ಟಾಭಿಷೇಕೋತ್ಸವ ಪುಣ್ಯಕಾಲದಲು; (EI. I, 42, 1508).

ಮುದ್ರೆಯುಂಗುರ; Mudrey-ungura; ರಾಜನ ಅಧಿಕಾರವನ್ನು ಪ್ರತಿನಿಧಿಸುವ ರಾಜನ ಮುದ್ರೆಯುಳ್ಳ ಉಂಗುರ; A ring with royal seal representing the king's authority; ಅವರ ಮುದ್ರೆಯುಂಗುರವ ಧರಿಸಿ ಶ್ರೀ ಮನ್ಮಹಾಪ್ರಧಾನ ರಾಮಚಂದ್ರದಣಾಯಕ್ಕರು; (SII. IX, II, 460, 1465).

ರಾಜ್ಯಾಭಿಷೇಕ; Rājyābhishēka: s.a. ಪಟ್ಟಾಭಿಷೇಕ; Paṭṭābhishēka; (EI. XVIII, 26, 871).

ರಾಜಮುದ್ರೆ; Rāja-mudre: ಅರಸನ ಮುದ್ರೆ, ಅಧಿಕಾರ ಮುದ್ರೆ; The king's seal, seal of authority; ಬೊಂಮಿದೇವರಸರ ಅಧಿಕಾರಿ ರಾಮುಮಲ್ಲಯ ಸಹಿತ ರಾಜಮುದ್ರೆಯಲ್ಲಿಗೆ; (EC. VIII(O), Sb.387, 1249).

೩. ಅರಮನೆ ಇತ್ಯಾದಿಗಳಿಗೆ ಸಂಬಂಧಿಸಿದ ಪದಗಳು

3. TERMS RELATING TO PALACE ETC.

ಅರಮನೆ; Aramane: ರಾಜನ ವಾಸಸ್ಥಾನ; Palace, Residence of the royal family; ಪುರೋಹಿತ ಸಂಗಮದೇವಗಳು ಅರಮನೆಯ ವಿದ್ವಾಂಸುಗಳನು ಕೂಡಿಕೊಂಡು; (SII. XX, 232, 1412).

ಅರಮನೆಯ ಭಂಡಾರ; Aramaneya bhaṇḍāra: ಅರಮನೆಯ ಕೋಶ; Royal treasury; (SII. IX, II, 675, 1562).

ಅರಮನೆಯ ಭಂಡಾರಸ್ಥಳ; Aramaneya bhaṇḍāra-sthaḷa: ಅರಮನೆಯ ಭಂಡಾರದ ಸ್ಥಾನ; Place of the royal treasury; (SII. IX, II, 675, 1516).

ಏಕಾಂತ ಮಂದಿರ; Ēkānta-mandira: ಮಂತ್ರಾಲೋಚನೆಯ ಮಂದಿರ; Hall for confidential discussions; (ಕು.ವ್ಯಾ.ಭಾ.ಆದಿ ಪ. Ku.Vyā.Bhā. Ādi Pa. XVI, 40, c. 1400).

ಒಡ್ಡೋಲಗ; ವಡ್ಡೋಲಗ; Oḍḍōlaga; Vaḍḍōlaga: ಅರಸನ ಆಸ್ಥಾನ; The royal court; (ಪಂ.ಭಾ. Paṁ.Bhā. IX, 28, ವ Pr. 10th cent.); ಸುಖಸತ್ಕಥಾವಿನೋದ ದಿನಾಳುತ್ತವಿರ್ದ್ದ ವಡ್ಡೋಲಗದ ಸಮಯದೊಳ್; (EC. VII(O), Sk.119, 1181); ಸುಖಸಂಕಥಾವಿನೋದದಿ ನಿರಲೊಂದು ದೆವಸದ ವಡ್ಡೋಲಗದವಸರದೊಳ್; (SII. XX, 49, 1076).

ಓಲಗಗೊಡು; Ōlagagoḍu: ಸಭೆ ಸೇರುವುದು; To assemble in the meeting; ನಿಜರಾಜಮಂದಿರದಾಸ್ಥಾನ ಮಂಟಪದೊಳೋಲಗಂಗೊಟ್ಟು; (SII. XX, 49, 1076).

ಓಲಗಶಾಲೆ; Ōlaga-śāle: ಆಸ್ಥಾನ ಭವನ; Court hall; (SII. XX, 179, 12th cent.).

ಚತುಃಶಾಲೆ; Chatuḥ-śāle: ಚೌಕಾದ ವಿಶಾಲ ಭವನ; Spacious square hall; (ಪಂ.ಭಾ. Paṁ.Bhā. III, 22 ವ, Pr. 10th cent.).

ಚಿತ್ರಶಾಲೆ; Chitra-śāle: ಚಿತ್ರಗಳಿಂದ ಅಲಂಕೃತವಾದ ಭವನ; A hall decorated with pictures; (SII. XX, 179, 12th cent; ಕು.ವ್ಯಾ.ಭಾ.ಗದಾ ಪ. Ku.Vyā.Bhā. Gadā Pa. III, 40, c. 1400).

ಪಟ್ಟಾವಣೆ; Paṭṭāvaṇe; ಸಿಂಹಾಸನ; Royal throne; (ಕ.ಕಾ. Ka.Kā. 165, ವ. Pr. 13th cent.).

ಪೆಂಡವಾಸ; Peṁḍavāsa; ಅಂತಃಪುರ; Harem; ಪೆಂಡವಾಸದೆಳೆವೆಂಡಿರಿಂದಂ (ವಡ್ಡಾ. Vaḍḍā. p.137, l.12, 10th cent.; ಆದಿ ಪು. Ādi Pu. X, 41, 10th cent.)

ಮಹಾಸ್ಥಾನ; Mahā-sthāna: ಆಸ್ಥಾನ ಭವನ; Royal court; (ಜೈ.ಭಾ. XVII, 30, 16th cent.).

ರಾಜಭಂಡಾರ; Rāja-bhaṇḍāra: ಅರಸನ ಕೋಶ; Royal treasury; (T.T.D.I.No. 200).

ರಾಣಿವಾಸ; ರಾಣೀವಾಸ; Rāṇivāsa, Rāṇīvāsa: ರಾಣಿಯರ ಅಂತಃಪುರ; Queens' apartments; (EC. III(R), Nj.262, 969).

ಸಿಂಹವಿಷ್ಟರ; Simhavishṭara: ಸಿಂಹಾಸನ, ಅರಸನ ಗದ್ದುಗೆ; The royal throne; ಬೆಳ್ಗೊಡೆಗಳಂ ಭಣ್ಡಾರಮಂ ಸಿಂಹವಿಷ್ಟರಮಂ ವಾಜಿಗಳಂ; (SII. XX, 74, 1112).

ಸಿಂಹಾಸನ; Simhāsana: ಅರಸನ ಆಸನ, ಅಧಿಕಾರ; The throne; Royal seat; authority; ನಂಮ ರಾಜ್ಯದ ಸಿಂಹಾಸನಕ್ಕೆ ಆಪ್ತರಾದ ಪಟ್ಟದವರು ನಂಜದೇವರಿಗೆ; (EC. X(O), Kl. 64, 15th cent).

೪. ಅಧಿಕಾರಿಗಳು ಮತ್ತು ಇತರರು

4. OFFICERS AND OTHERS

ಅನ್ತಃಪುರಪೆರ್ಗ್ಗಡೆ-ವೆರ್ಗ್ಗಡೆ; Antaḥpura-perggaḍe-verggaḍe: ಅರಮನೆಯ ಆಡಳಿತದ ಅಧಿಕಾರಿ; Officer for the management of the palace; ಶ್ರೀಮದಂತಃಪುರವೆರ್ಗ್ಗಡೆ ದಂಡನಾಯಕಂ ನಾಮದೇವಯ್ಯಂಗಟು; (SII. XX, 64, 1100; APGAS. III, Hd.1, 1126-27).

ಅಂತಃಪುರ ಮಹತ್ತರಿ; Aṁtaḥpura-mahattari: ಅರಮನೆಯ ರಾಣೀವಾಸದ ಮುಖ್ಯಾಧಿಕಾರಿ; Female chief of the harem in the palace; (ಪು.ಪು., Pu.Pu. XIII, 91, ವ, Pr., 13th cent.).

ಅನ್ತಃಪುರಾಧ್ಯಕ್ಷ; Antaḥpur-ādhyaksha: ಅರಮನೆಯ ಆಡಳಿತದ ಮುಖ್ಯಾಧಿಕಾರಿ; Chief or head of the management of the palace; ಶ್ರೀಮನ್ಮಹಾಪ್ರಧಾನನಂತಃಪುರಾಧ್ಯಕ್ಷ ಸಹವಾಸಿಗರಧಿಷ್ಠಾಯಕಂ; (EC. VII(O), Sk.106, 1098; EI. XIII, 28B, 1125; SII. XX, 140, 1164).

ಅರಮನೆಯ ಅಧಿಕಾರಿ; Aramaneya adhikāri: ಅರಮನೆಯ ಆಡಳಿತಕ್ಕೆ ಸಂಬಂಧಿಸಿದ ಅಧಿಕಾರಿ; Officer connected with the management of the palace; (EC. VII(R), Ag.2, 13th cent.).

ಅರಮನೆಯ ಅರಸಾಳು; Aramaneya arasāḷu: ಅರಮನೆಯಲ್ಲಿಯ ಅರಸನ ಅಂಗರಕ್ಷಕ; Body guard of the king in the palace; ಅರಮನೆಯ ಅರಸಾಳುಗಳೂ ಬೈಚೆಯ ಸಾಹಣಿಯರು ಮುಂದಿಟ್ಟು; (EC. XI(O), Hr.97, 1313).

ಅರಮನೆಯ ಬೇಹಾರಿ; Arameneya bēhāri: ಅರಮನೆಗೆ ಸಾಮಾನು ಪೂರೈಸುವ ವ್ಯಾಪಾರಿ; Merchant supplying articles to the palace; ಅವರ ಅರಮನೆಯ ಬೇಹಾರಿಗಳು ಗುಂತುಳಾಪುರದ ಅಕ್ಕನ ಚೆಂನಿಸೆಟ್ಟಿಯರ ಮಕ್ಕಳು ಹೊಂನಿಸೆಟ್ಟಿಯರೂ; (EC. VII(R), Ng.87, 1511).

ಅರಸಾಳು; Arasāḷu: (1) ಅರಸನ ಸೇವಕ, ಅಂಗರಕ್ಷಕ; Servant or the body guard of the king; (EC. VII(O), Sk.131, 1104); (2) ಅರಸನ ದೂತ; Messenger of the king; ಮಹಾಜನಂಗಳಿಗೆ ಬಿನ್ನವತ್ತಳೆಯ ತಂದ ಅರಸಾಳು ಮಾದಯ್ಯಂ; (EC. XI(O), Hk.122, 1268); (3) ಭಟ, ಸೈನಿಕ; Policeman, soldier; ಅರಸಾಳುಗಳೂರಂ ಪೊಕ್ಕಂದು; (EI. XXIX, 29, 10th cent.).

ಅರಸಿಯ ಪೆರ್ಗ್ಗಡೆ; Arasiya perggaḍe: ಅರಸಿಯ ಸಿಬ್ಬಂದಿಯ ಅಧಿಕಾರಿ; Officer of the establishment of the queen; ಅರಸಿಯ ಪೆರ್ಗ್ಗಡೆ ಕನ್ನಯ್ಯ; (EI. IV, 50, 975).

ಅಂಗರಕ್ಕ; Angarakka: ಅಂಗರಕ್ಷಕ; Body guard; ಶ್ರೀಮದಂಗರಕ್ಕ ಬೆಳ್ಳಪ್ಪನಾಯಕಂಗಂ; (EC. V(O), Cn.210, 1228).

ಅಂಘರಕ್ಕ; ಅಂಘರಿಕ: Angharakka; Angharika: s.a. ಅಂಗರಕ್ಕ; Angarakka; ಶ್ರೀಮದಂಘರಕ್ಕಂ ಅಸಗಂ ಇಂದಪಯ್ಯನಾಯಕ; (SII. XVIII, 69, 1063); ಕಾವ ಅಂಘರಿಕನೊಬ್ಬ; (EC. XII(O), Ck.2, 1272).

ಅಂತವುರಾಧಿಕಾರಿ; Antavur-ādhikāri: ಅಂತಃಪುರದ ಅಧಿಕಾರಿ; Officer of the queen's appartments of

the palace; ಹೇರಿಗಲಾಳಸಂಧಿವಿಗ್ರಹದ ಮಹಾಪದವಿಯ ಸಿರಿಕರಣದ ಸಂಪದದಂತವುರಾಧಿಕಾರಿ ಕೇಶವದೇವಂ; (EI. XVI, 8C, 1147).

ಆಸ್ಥಾನವಸ್ತುನಾಯಕ; Āsthāna-vastu-nāyaka: ಸಭಾಗೃಹದ ಅಧಿಕಾರಿ; Officer in charge of the royal court, Manager of the assembly hall; ಮಹಾಸಾಮನ್ತಾಧಿಪತಿ, ಮಹಾಪ್ರಚಣ್ಡನಾಯಕಂ ಆಸ್ಥಾನವಸ್ತುನಾಯಕಂ; (SII. VI, 571, 1070; KI. II, 16, 1122; SII. IX, I, 223, 1127).

ಕುಸುಮರಚನಾಧ್ಯಕ್ಷ; Kusuma-rachan-ādhyaksha: ಅರಮನೆಯನ್ನು ಹೂಗಳಿಂದ ಸಿಂಗರಿಸುವದರ ಮೇಲ್ವಿಚಾರಕ; Officer in-charge of the floral decoration of the palace; ರಾಮಕ್ಷ್ಮೋಣೀಪತಿರ್ಯದುಪುಂಗವಃ ಕುಸುಮ ರಚನಾಧ್ಯಕ್ಷಂ ದಕ್ಷಂ ಪ್ರಸಾದಪರೋಕರೋತ್; (EI. XXV, 21, 1310).

ಗೃಹಪತಿ; Gṛihapati: ಅರಮನೆಯ ಅಧಿಕಾರಿ; Palace officer; (ಅಜಿ.ಪು. Aji.Pu. X, 1 ವ, Pr. 10 cent.) Cf. ಮನೆವೆರ್ಗ್ಗಡೆ below.

ಗೃಹಮಹತ್ತರ; Gṛiha-mahattara: s.a. ಗೃಹಪತಿ; Gṛihapati; (ನೇ.ಪು. Nē.Pu. VIII, 62 ವ, Pr. 12th cent.; ಅ.ಪು. A.Pu. XII, 79, 13th cent.; ಪು.ಪು. IV, 1, ವ. Pr. 13th cent.).

ಗೃಹಮಂತ್ರಿ; Gṛiha-mantri: s.a. ಗೃಹಪತಿ; Grihapati above; ಗೃಹಮಂತ್ರಿ ಜಗನ್ನುತ ಮಂತ್ರಿಕೂಟಮಂ; (EC. VI(O), Kd.95, 1224).

ಗೃಹವನಮಹತ್ತರ; Gṛiha-vana-mahattara: ಅರಮನೆಯ ಉಪವನದ ಮೇಲಿನ ಅಧಿಕಾರಿ; An officer of the palace gardens; (ಮ.ಪು. Ma.Pu. IV, 24, 12th cent.).

ಗೃಹಸಚಿವ; Gṛiha-sachiva: s.a. ಗೃಹಪತಿ; Gṛihapati; (ಪು.ಪು. Pu.Pu. IV, 76, 13th cent.).

ಗೃಹಾಮಾತ್ಯ; Gṛih-āmātya: s.a. ಗೃಹಸಚಿವ; Gṛiha-sachiva; (ಶಾಂತೀ ಪು. Śāṁtī Pu. XV, 90, 13th cent.).

ಗೋಮಂಡಳಾಧ್ಯಕ್ಷ; Gō-maṇḍaḷ-ādhyaksha: ಅರಮನೆಯ ಗೋಸಮೂಹದ ಮೇಲಿನ ಅಧಿಕಾರಿ; Officer in charge of the heards of cows in the palace; (ಪಂ.ಭಾ. Paṁ.Bhā. VIII, 54 ವ, Pr. 10th cent.).

ದೌವಾರಿಕ; Dauvārika: ದ್ವಾರಪಾಲ; Dvārapālaka; ಬಾಗಿಲು ಕಾಯುವ ಸೇವಕ; (SII. IX, I, 193, 1115-16; ಮ.ಪು. Ma.Pu. V, 27 ವ Va.).

ನೃಪಕರಣ; Nripakaraṇa; ರಾಜಲೇಖಕ; A scribe attached to the king; (ಸೂ.ಸು. Sū.Su. XVII, 28, 13th cent).

ಪಟ್ಟದ ಭಂಡಾರಿ; Paṭṭada bhaṇḍāri: ಅರಸನ ಭಂಡಾರದ ಅಧಿಕಾರಿ; Officer of the royal treasury; (EC. III(R), Nj.395, 1514).

ಪಡಿಯರ; ಪಡಿಯಱ; Paḍiyara; Paḍiyaṟa: ದ್ವಾರಪಾಲಕ; ಬಾಗಿಲು ಕಾಯುವವ; ಸೇವಕ; Door keeper; attendant; (ವಡ್ಡಾ. Vaḍḍā. p.66, l.27, etc. 10th cent.; SII. IX, I, 133, 1068; EC. IX(R), Bl.554, 1191; ಕ.ಕಾ. Ka.kā. 71, 13th cent.; ಕು.ವ್ಯಾ.ಭಾ. ಗದಾ ಪ. Ku.Vyā.Bhā Gadā Pa. III, 38, c.1400) ಸಂ. ಪ್ರತೀಹಾರಿ; Sk. Pratīhāri.

ಪಡಿಯರಿತಿ; Paḍiyariti: ಪಡಿಯರ ಪದದ ಸ್ತ್ರೀಲಿಂಗ ರೂಪ; ಸೇವಕಿ; ದ್ವಾರಪಾಲಕಿ; Female form of Paḍiyara; A female door keeper, an attendant; ಪಿರಿಯ ಪಡಿಯಱಿತಿ ಮಲ್ಲವ್ವೆಯ ಮಗ ಸೋವಣ್ಣನುಂ ಶ್ರೀ ವೀರ ಬಲ್ಲಾಳದೇವರ ಕಾರುಣ್ಯಮಂ ಪಡೆದು; (EC. IX(R), Bl.554, 1191; ಅ.ಪು. A.P.u. VI, 42, 13th cent.).

ಪಡಿಹಾರ; ಪಡಿಹಾರಕ; ಪಡಿಹಾರಿ; Paḍihāra; Paḍihāraka, Paḍihāri: ಬಾಗಿಲು ಕಾಯುವವ; ರಕ್ಷಣಾಕಾರ್ಯಕರ್ತ; Door-keeper, guard; ಪಡಿಹಾರರ್ ಮಾಣಿಸದಂತು (ನೀ.ವಾ.ಕ. ವ್ಯಾಖ್ಯಾನ. Nī.Vā. K. Comm. XXVII, 34); ಪಡಿಹಾಱ ರಾತಯ್ಯನ ಕಯ್ಯಿಂದ; (SII. XX, 206, 13th cent.; ಕು.ವ್ಯಾ.ಭಾ.ಉದ್ಯೋಗ ಪ. Ku.Vyā.Bhā. Udyōga Pa. II, 47, c.1400); ಸಂ. ಪ್ರತೀಹಾರ; Sk. Pratīhara, See ಮಹಾಪ್ರತೀಹಾರ, Mahāpratīhāra, below.

ಪಸಾಯಿತ, ಪಸಾಯ್ತ; Pasāyita, Pasāyta: ಅರಸನಿಗೆ ಆಪ್ತನಾದ ಅಧಿಕಾರಿ; ಅರಮನೆಯ ಉಸ್ತುವಾರಿ ನೋಡಿಕೊಳ್ಳುವವ; ಮಾನ ಸನ್ಮಾನ ಉಡುಗೊರೆಗಳ

ವಿತರಣೆ ಇತ್ಯಾದಿಗಳ ಮೇಲ್ವಿಚಾರಕ; Officer close to the king, overseeing the arrangements in palace, supervising protocol, presentation of gifts etc. Favourite; (SII. XI, I, 68, 1033; Ibid. 113, 1074; KI. V, 14, 1099); ತ್ರಿಭುವನಮಲ್ಲ ಪಸಾಯ್ತಂ ಬಂಕಿದೇವಂ; (SII. XVIII, 130, 11th cent.); ಶ್ರೀಮತು ಪಸಾಇತಂ ಕುಂಚಯನಾಯಕನ ಸರ್ವಾಧಿಕಾರಿ; (SII. XVIII, 178, 1163; ಕು.ವ್ಯಾ.ಭಾ.ಅರಣ್ಯ ಪ. Ku.Vyā.Bhā. Araṇya Pa. XVIII, 25, c.1400). Usually translated as 'Master of Robes'. ಸಂ. ಪ್ರಸಾದ > ಪಸಾಯ > ಪಸಾಯಿತ, ಪಸಾಯ್ತ; Sk. Prasāda > Pasāya > Pasāyita, Pasāyta. ಪಸಾಯ = ದಾನ; ಉಡುಗೊರೆ; gift; (ನೀ.ವಾ. ಕ.ವ್ಯಾಖ್ಯಾನ. Nī.Vā. K. Comm. XXVI, 46, 12th cent.).

ಪಸಾಯ್ತೆ; Pasāyte: ಪಾಸಾಯ್ತ ಶಬ್ದದ ಸ್ತ್ರೀಲಿಂಗ ರೂಪ; ಅಂತಃಪುರದ ಉಸ್ತುವಾರಿಯ ಅಧಿಕಾರಿಣಿ; Feminine form of pasāyta; Female officer for queens' apartment; (ಕು.ವ್ಯಾ.ಭಾ.ಸಭಾ ಪ. Ku.Vyā.Bhā. Sabhā Pa. V, 69, c.1400; Kittel Pasayte).

ಪ್ರತೀಹಾರ; ಪ್ರತೀಹಾರಕ; Pratīhāra; Pratīhāraka: s.a. Paḍihāra; ಯಥಾವಸರಮ ಪ್ರತೀಹಾರಸಂಗಂ ದ್ವಾರಂ ಕಾರಯೇತ್; (ನೀ.ವಾ. Nī.Vā. XVII, 34, 10th cent.; ಪಂ.ರಾ. Paṁ.Rā. II, 2, 12th cent.).

ಬಾಗಿಲ ದಳವಾಯಿ; Bāgila-daḷavāyi: ಅರಮನೆಯ ಕಾವಲುಗಾರರ ಮೇಲಿನ ಅಧಿಕಾರಿ; Chief of the palace guards; ಅಚುತರಾಯ ಮಹಾರಾಯರ ಬಾಗಿಲ ದಳವಾಯಿ ವೆಂಗಳರಾಜ ಮಹಾಅರಸುಗಳು; (EC. VI, Kd.160, 1542).

ಬಾಣಸವೆರ್ಗ್ಗಡೆ; ಬಾಣಸುವೆರ್ಗ್ಗಡೆ; Bāṇasa-verggaḍe; Bāṇasu-vergaḍe: ಅರಮನೆಯ ಭೋಜನ ವ್ಯವಸ್ಥೆಯ ಅಧಿಕಾರಿ; Officer in charge of the royal kitchen ಶ್ರೀಮನ್ಮಹಾಸಪ್ರಧಾನಂ ಬಾಣಸವೆರ್ಗ್ಗಡೆ ದಣ್ಡನಾಯಕನನನ್ತಪಾಳಯ್ಯಂಗಳ್; (SII. XX, 987, 12th cent.).

ಭಾಣಸು; Bhāṇasu: ಬಾಣಸವೆರ್ಗಡೆತನ; Office of Bāṇasaverggaḍe; ಕೇಳಿಂ ಸತ್ಯಾಶ್ರಯ ಙೂಪಾಳಕನಲ್ಪಡೆದೊನಲ್ತೆ ಸಾಮನ್ತಿಕೆಯಂ ಮಾಳಪರಾಜಂ ಭಾಣಸು ಸೂಳೆವಳಿಕೆ ಗನ್ಧಗಜದ ಸಾಹಣಮಿನಿತಂ; (SII. XVIII, 82, 11th cent.).

ಮನೆ ಅಧಿಕಾರಿ; ಮನೆಯ ಅಧಿಕಾರಿ; Mane-adhikāri; Maneya adhikāri: ಅರಮನೆಯ ಅಧಿಕಾರಿ; Officer in charge of the palace; ಬಲ್ಲುಗಿದೇವರಾಣಯನ ಮನೆ ಅಧಿಕಾರಿ; (SII. XX, 330, 1278).

ಮನೆಯ ಮಂತ್ರಿ; Maneya mantri: s.a. ಮನೆಯ ಅಧಿಕಾರಿ; Maneya adhikāri; (EC. VI(O), Cm.87, 13th cent.).

ಮನೆಯ ತಳವಾಱ; Maneya taḷavāṟa: ಅರಮನೆಯ ರಕ್ಷಣೆಯ ಅಧಿಕಾರಿ; Officer of the palace security; ಸಾತಿಗ್ರಾಮದ ಸೋವಣ್ಣವೊಡೆಯರ ಮನೆಯ ತಳವಾಱ; (EC. V(O), Cn.153, 1478).

ಮನೆಯ ಪ್ರಧಾನ, ಮನೆಯ ಪ್ರಧಾನಿ; Maneya pradhāna, Maneya pradhāni: ಅರಮನೆಯ ಹಿರಿಯ ಅಧಿಕಾರಿ; Chief officer of the palace; ಹೊಯಸಣ ವೀರಬಲಾಳದೇವರಸರ ಕುಮಾರ ಹಂಪೆವೊಡೆಯರ ಮನೆಯ ಪ್ರಧಾನ; (EC. IV(O), Yd.29, 1342; Ibid. VIII(O), Tl.125, 1376); ಸಾಳುವ ನರಸಿಂಗರಾಜ ವೊಡೆಯರ ಮನೆಯ ಪ್ರಧಾನ ವಿರೂಪಾಕ್ಷದೇವ ಅಂಣಗಳು ಕೊಟ ಧರ್ಮಶಾಸನ; (Ibid. VII(R), Ng.108, 1484).

ಮನೆಯ ಮಹಾಪ್ರಧಾನ; Maneya mahāpradhāna: ಅರಮನೆಯ ಆಡಳಿತದ ಮುಖ್ಯಾಧಿಕಾರಿ; Chief officer of the administration of the palace; ವೀರನಂಜಯರಾಯ ಒಡೆಯರ ಮನೆಯ ಮಹಾಪ್ರಧಾನ; (EC. III(R), Gu.135, 1492; Ibid. Nj.335, 1495).

ಮನೆಯ ಸರ್ವಪ್ರಧಾನ; Maneya sarvapradhāna: ಅರಮನೆಯ ಸರ್ವಾಧಿಕಾರಿ; Officer in the over all charge of the palace; (EC. VIII(O), Na.47, 1062).

ಮನೆವೆರ್ಗ್ಗಡೆ; Mane-verggaḍe: s.a. ಮನೆಯ ಅಧಿಕಾರಿ; Maneya Adhikāri; ಶ್ರೀಮನ್ಮನೆವೆರ್ಗ್ಗಡೆ ಪಲ್ಲವಾಭರಣ ಬ್ರಹ್ಮಾಧಿರಾಜಪ್ಪರ್ದಡೆಪನ್ನೆರಡುಮನಾಳುತ್ತಮಿರೆ; (EC. XI(O), Dg.126, 1037); ಮೈಳಲಮಹಾದೇವಿಯರ

ಮನೆವೆರ್ಗ್ಗಡೆ ಶ್ರೀಮದ್ದಂಡನಾಯಕ ಲಕ್ಕರಸ; (EI. XIII, 28B, 1125).

ಮಹಾಪಸಾಯ(ಯಿ)ತ; Mahāpasāya(yi)ta: ಅರಸನು ಕೊಡುವ ಉಡುಗೊರೆಗಳಿಗೆ ಸಂಬಂಧಿಸಿದ ಹಿರಿಯ ಅಧಿಕಾರಿ; A senior officer in charge of the presents and gifts to be made by the king; (SII. XV, 30, 1145); ಮಹಾಪಸಾಯಿತಂ ಕುಮಾರಂ ಬೊಮ್ಮಿದೇವರಸರು; (SII. XX, 127, 1186); See ಪಸಾಯ್ತ; Pasāyta above.

ರಾಜಗುರು; Rāja-guru: (1) ರಾಜಮರ್ಯಾದೆಯನ್ನು ಪಡೆದ ಧಾರ್ಮಿಕ ಗುರುಗಳ ಬಿರುದು. (2) ರಾಜಮನೆತನದಿಂದ ಗೌರವಿಸಲ್ಪಡುತ್ತಿದ್ದ ಧಾರ್ಮಿಕ ಗುರು. (3) ಅರಸನಿಗೆ ಸಲಹೆ ಕೊಡುತ್ತಿದ್ದ ಧರ್ಮ ಗುರು; (1) Honorific title given to a head of religious institution. (2) A saint highly respected by the royal family (3) A religious teacher advising the king; ಹೊಯ್ಸಳ ರಾಯರಾಜಗುರುಗಳುಮಪ್ಪ ಶ್ರೀಮಾಘನಂದಿ ಸೈದ್ಧಾನ್ತಚಕ್ರವರ್ತಿಗಳ್; (EC. II(R), 456, 1282).

ರಾಜಾವಾಸಮುಖ್ಯ; Rājāvāsa-mukhya: ಅರಮನೆಯ ಮುಖ್ಯಾಧಿಕಾರಿ, ಮನೆವೆರ್ಗ್ಗಡೆ; Chief officer in charge of the palace; ವೀರಬಲ್ಲಾಳ ಪೃಥ್ವೀಶ್ವರರಾಜಾವಾಸಮುಖ್ಯಂ ...... ಸಕಳ ಗುಣ ಸಮುದ್ರಂ ರುದ್ರಂ; (EC. IX(R), Bl.438, 1186).

ರಾಣಿವಾಸದ ಪೆರ್ಗಡೆ; Rāṇi-vāsada pergaḍe: ಅಂತಃಪುರದ ಮೇಲ್ವಿಚಾರಕ; An officer in charge of the queens' residence; (ಧರ್ಮಾ. Dharmā. 5, 131, 12th cent.).

ರಾಣಿಯವಾಸಂಗಳ ರಾಜಾಧ್ಯಕ್ಷ; Rāṇiyavāsaṁgaḷa rājādhyaksha: ರಾಣಿಯರ ಅಂತಃಪುರಗಳ ಮೇಲಧಿಕಾರ; Office of the superintending officer of the queen's apartments; (SII. XI, I, 173, 1124).

ರಾಯಮಹತ್ತರ; Rāya-mahattara: ಅರಸನ ಉಚ್ಚ ಅಧಿಕಾರಿ; A high officer of the king; ರಾಯಮಹತ್ತರ ಭಿಲ್ಲವರಾಯ ತನೂಜಾತ; (SII. IX, I, 254, 1144).

ರಾಯರಾಜಗುರು; Rāya-rājaguru: ಅರಸನ ರಾಜಗುರು; Rājaguru of the king; ರಾಯರಾಜಗುರು ಭೂಮಂಡಳಾಚಾರ್ಯ್ಯ .... ಲಾಕುಳೀಶ್ವರದೇವರ ಕುಮಾರ ಚಿಕ್ಕದೇವಅಯಗಳಿಗೆ; (SII. XX, 230, 1368). See ರಾಜಗುರು above.

ರಾಯರಾಹುತ; Rāya-rāhuta: ಅರಸನ ಕಾವಲುಗಾರ, ಅರಮನೆಯ ಕಾವಲುಪಡೆಯ ಅಧಿಕಾರಿ; King's guard, Officer of the palace protection force; (SII. XVIII, 225, 1246).

ರಾಯಸೂತ್ರಧಾರಿ; Rāya-sūtradhāri: ರಾಜನು ನಿಯಮಿಸಿದ ಪ್ರಮುಖ ಶಿಲ್ಪಿ; State architect; ರಾಯಸೂತ್ರಧಾರಿ ಗೋಪೋಜನ ತಮ್ಮ ಸೂಲೋಜ ಕಂಡಳಿಸಿದ; (EC. V(O), Ak.123, 1237).

ಸದನಮಹತ್ತರ; Sadana-mahattara: s.a.; ಗೃಹಮಹತ್ತರ; Gṛiha-mahattara above ಅ.ಪು. A.Pu. IV, 50, 13th cent.).

ಸಜ್ಜೆವಳ, ಸಜ್ಜೆವಳ್ಳ; Sajjevaḷa, Sajjevaḷḷa: ಅರಮನೆಯ ಮಲಗುವ ಮನೆಯ ಅಧಿಕಾರಿ; Officer for the royal sleeping apartments; (ಕಾ.ಲೋ. Kā.Lō. I, 326, 1150; ನೇ.ಪು. Nē.Pu. I, 120 ವ, Pr. 12th cent.).

ಸೆಜ್ಜೆಯ ಭಂಡಾರಿ; Sejjeya Bhaṇḍāri: ಅರಮನೆಯ ಮಲಗುವ ಮನೆಯ ಪರಿಕರಗಳಿಗೆ ಸಂಬಂಧಿಸಿದ ಅಧಿಕಾರಿ; Officer in charge of stores of sleeping apartment in the palace; (EI. XIII, 28B, 1126) 'Minister in charge of the stores of the bedchamber;' (Ibid. p. 325).

ಸೌದರೆ, ಸೌಧೊರೆ; Saudare, Saudhore: ಚೌಧುರಿ, ಅರಮನೆಯ ಸಂರಕ್ಷಕರ ಮುಖ್ಯಸ್ಥ; Chief of the royal guards; (APGAS. III, Alampur 11, 1067; EI, XXXVIII, 24, 1134; SII. XX, 175, 1190).

ಸೌವಿದಲ್ಲ; Sauvidalla: s.a. ಅನ್ತಃಪುರವೆರ್ಗ್ಗಡೆ; Antaḥapura-verggaḍe above; (ಅ. ಪು. A.Pu. II, 56, ವ. 13th cent.) ಸಂ. ಕಂಚುಕೀ; Sk. Kanchuki.

ಹಿರಿಯ ಮನೆವೆರ್ಗ್ಗಡೆ; Hiriya maneverggaḍe: ಅರಮನೆಯ ಆಡಳಿತಕ್ಕೆ ಸಂಬಂಧಿಸಿದ ಹಿರಿಯ ಅಧಿಕಾರಿ; A senior officer dealing with the management of the palace; (EC. VI(O), Cm.43, 12th cent.).

೫. ಪರಿವಾರ - ಪರಿಚಾರಕವರ್ಗ

5. ROYAL ENTOURAGE AND ATTENDANTS

ಅಡಪ, ಹಡಪ; Adapa, Hadapa: ತಾಂಬೂಲಾದಿಗಳನ್ನು ಇಡುವ ಚೀಲ, ಕರಂಡ, ಅಡಪದ ದಾಸಿರಾಜ (KI. VI, 39, 1181).

ಅಡಪವಳ, Aḍapavaḷa: s.a. ಹಡಪವಳ Haḍapavaḷa below; (ಕಾ.ಲೋ. Kā.Lō, I, 326, 12th cent.).

ಅರಮನೆಯ ವೋದುವ(ವಳು); Aramaneya vōduva(vaḷu): ಅರಮನೆಯಲ್ಲಿ ಕಾವ್ಯ ಓದುವವಳು; Reciter of poetry in the palace; ಪ್ರೌಢದೇವರಾಯಮಹಾರಾಯರ ಅರಮನೆಯ ವೋದುವ ಹೊಂನಂಮವಗಳು; (SII. IX, II, 458, 1458).

ಊಳಿಗ; Ūḷiga: ಸೇವೆ; ಕೃಷ್ಣದೇವರಾಯಮಹಾರಾಯರ ಊಳಿಗದ ಜಕಣನಾಯಕರ ಮಕ್ಕಳು ಬಸವಪ್ಪನಾಯಕರು; (EC. IX(R), Bl. 159, 1524).

ಊಳಿಗದವರು; Ūḷigadavaru: ಸೇವಕರು; Servants; ಕೊಪದ ಊಳಿಗದವರು ಕಾಯಿದುಕೊಂಡು ಅಘಣಿ ಪುಷ್ಪವನು ತಂದು ಕೊಟ್ಟು ಸೇವೆಯನು ಮಾಡುವರು; (EC. III(R), Nj.272, 1411).

ಊಳಿಗದ ಹಿರಿಯ; Ūḷigada hiriya: ಊಳಿಗದವರ ಮುಖಂಡ; Chief of the attendants; ಊಳಿಗದ ಹಿರಿಯ ಮಲ್ಲಪ್ಪನಾಯಕ; (SII. IX, II, 574, 1536).

ಕುಮಾರವರ್ಗ; Kumāra-varga: ರಾಜಕುಮಾರರ ವರ್ಗ; Group of princes; ಅವರ ರಾಣಿವಾಸಂಗಳಿಗೂ ಅವರ ಕುಮಾರವರ್ಗವೂ; (SII. VII, 184, 1456).

ಗರುಡ; Garuḍa: ಅರಸನ ರಕ್ಷಣೆಯ ಸಲುವಾಗಿ ತನ್ನನ್ನೇ ಮುಡಿಪಾಗಿಟ್ಟು ಒಡೆಯನೊಂದಿಗೆ ಸಾವನ್ನಪ್ಪಲು ಸಿದ್ಧವಿರುವ ಸೇವಕ; Servant totally dedicated to the service of protecting the king and ready to lay down his life for the sake of his master; ನಾರಸಿಂಹದೇವರಸರ ಕೊಡೆ ಕಂನೆಯನಾಯಕನ ಮಗ ರಂಗೆಯನಾಯಕಂ ತಂನ ಹೆಂಡತಿ..... ಮಾನಿಸಲೆಂಕಿತಿಯರುಂ ಇಪ್ಪತ್ತು ಮಾನಿಸಲೆಂಕರುಂ ಬೆರಸು ಗಜಮಸ್ತಕದಮೇಲೆ ಆರು ಬಾರಿ ಗರುಡನನಪ್ಪಿ ಬಾಸೆಯಂ ಪೂರೈಸ್ಸಿದನು; (EC. VI(R), Kr.84, 1291; Ibid. Kr.82, 1256).

ಜಗತೀಸಮೂಹ; Jagatī-samūha: ಆಸ್ಥಾನದವರು; Courtiers; ಭತ್ತಕೇರಿಯ ಕಾಳಿಸೆಟ್ಟಿಯುಂ ಜಗತೀಸಮೂಹಂ ಬೆರಸಿ ನಾಲ್ವರ್ವ್ವೋವುಗಳುಮಱುವತ್ತು ಕೊತ್ತಳಿಯುಂ ನಗರದ ವಶವರ್ತಿಗಳುಮಿಟ್ಟು; (EC. VII(O), Sk.94, 1094).

ಪರಿವಾರ; Parivāra: ಸೇವಕವರ್ಗ; Retinue; (EC. IX(R), Bl.171, 1382).

ರಾಜಪ್ರಸಾದಿ; Rāja-prasādi: ರಾಜನ ಕೃಪೆಗೆ ಪಾತ್ರರಾದವ; Favourite of the king; ಅನ್ಯಾನಪಿ ರಾಜಪ್ರಸಾದಿನಶ್ಚಾಟಭಟವಲ್ಲಭಜಾತೀಯಾನ್; (EI. VI, 13(b), 13th cent.).

ರಾಜಪುತ್ರ; Rāja-putra: ಅರಸನ ಮಗ; King's son, Prince; (EI. VI, 13B, 13th cent.).

ರಾಜಸೇವೆ; Rāja-sēve: ರಾಜನ ಸೇವೆ, ಅರಮನೆಯಲ್ಲಿ ಸೇವೆ ಸಲ್ಲಿಸುವದು; Service of the king, service in the palace; (ಕು.ವ್ಯಾ.ಭಾ.ವಿರಾಟ ಪ. Ku.Vyā.Bhā. Virāṭa Pa. I, 18, c.1400).

ರಾಜಸೇವ್ಯ; Rāja-sēvya: ರಾಜರ ಆದರಕ್ಕೆ ಪಾತ್ರನಾದವ; Honoured by the king; ರಾಜಸೇವ್ಯ ಪ್ರಭುರಾಜ ಚಟ್ಟನ ಪುತ್ರ; (SII. XX, 133, 1067).

ರಾಣಿವಾಸ; Rāṇivāsa: ಅಂತಃಪುರದಲ್ಲಿ ವಾಸಿಸುವ ರಾಣಿಯರ ಸಮೂಹ; Group of queens living in the harem; ರಾಣಿವಾಸಂಗಳಿಗೂ ಅವರ ಕುಮಾರವರ್ಗವೂ; (SII. VII, 184, 1456).

ರಾಜ್ಯದೃಷ್ಟಿಸ್ವರೂಪರು; Rājyadṛiṣhti-svarūparu: ರಾಜ್ಯದ ಹಿತದ ದೃಷ್ಟಿಯೇ ಮೈತಾಳಿದಂಥವರು; ರಾಜ್ಯದ ಹಿತವನ್ನೇ ದೃಷ್ಟಿಯಲ್ಲಿಟ್ಟುಕೊಂಡವರು; Embodiments of welfare of the kingdom; keeping in mind the welfare of the kingdom; ಶ್ರೀಧರದೇವ ಮುಖ್ಯ ಕರಣಂಗಳ್ ರಾಜ್ಯದೃಷ್ಟಿಸ್ವರೂಪರುಮೀಯೂರೊಡೆಯರ್ಮ್ಮಹಾಜನಮುಂ; (SII. XV, 17, 1158).

ರಾಯಕುವರ; Rāya-kuvara: ಅರಸನ ಮಗ, ಅರಸನ ಮಗನ ಬಿರುದು; King's son; King's son's title; (ಕು.ವ್ಯಾ.ಭಾ.ಅರಣ್ಯ ಪ. Ku.Vyā.Bhā. Araṇya Pa. XVIII, 25, c.1400).

ಲೆಂಕ; Lenka: ಆನುವಂಶಿಕ ನಿಷ್ಠಾವಂತ ಸೇವಕ; ಆಪ್ತ ಸೇವಕ; Hereditary devoted servant; Personal attendant ಲೆಂಕಸಾಸಿರ್ವ್ವರ್; (SII. IX, I, 104, 1046); ಬಲ್ಲಾಳದೇವನೊಡನೆ ಸಿವನೆಯನಾಯಕಂ ತಂನ ಲೆಂಕರಯ್ವರು ವೆರಸಿ ಭಾಸೆಯಂ ಪೂರೈಸಿದರು; (EC. VI(R), Kr.82, 1256; ಯ.ಚ. Ya.Cha. I, 40, 13th cent.).

ಲೆಂಕವಾಳಿ; Lemkavāḷi: ಆನುವಂಶಿಕ ಲೆಂಕರ ಪಡೆ; Hereditary squad of the Lenkas; ಅನ್ವಯಾಗತ ಲೆಂಕವಾಳಿಯ ನಾಯಕರ ಅನ್ವಯಕ್ರಮವೆಂತೆಂದಡೆ; (EC. VI(R), Kr. 84, 1291).

ಲೆಂಕಿ; ಲೆಂಕಿತಿ; Leṁki; Lenkiti: ನಿಷ್ಠಾವಂತ ಸೇವಕಿ; Devoted female servant; ಲಖೆಯನಾಯಕಂ ತಂನ ಹೆಂಡತಿ ಗಂಗಾದೇವಿಯುಂ ಅಯ್ವರು ಲೆಂಕರುಂ ಮೂವರು ಲೆಂಕಿತಿಯರುವೆರಸಿ ಬಾಸೆಯಂ ಪೂರೈಯ್ಸಿದನು; (EC. VI(R), Kr. 84, 1292).

ವೇತ್ರಿಕರು; Vētrikaru: ವೇತ್ರಧಾರಿ; ಬೆತ್ತದವರು; ದಂಡ ಹಿಡಿದ ಸೇವಕರು; Staff bearers; Servants holding the staff; ವೇತ್ರಿಕರಿಗೆ ಕರಿಯ ನೆಲಂ ಮತ್ತರ್ ೧೩; (APGAS. III, Md.5, 973).

ಹಡಪಗಿತ್ತಿ; Hadapagitti: **ರಾಣಿಯ ಸಂಚಿ ಅಥವಾ ಚೀಲವನ್ನು ಹಿಡಿಯುವವಳು;** A lady attendant holding the bag of betel leaves and nuts of the queen. See **ಹಡಪವಳ;** Hadapavaḷa below.

ಹಡಪದಧಿಷ್ಠಾಯಕ; Haḍapadadishṭhāyaka; ಅರಸನ ಅಥವಾ ಹಿರಿಯ ಅಧಿಕಾರಿಯ ತಾಂಬೂಲದ ಪೆಟ್ಟಿಗೆ ಇತ್ಯಾದಿಗಳ ಮೇಲ್ವಿಚಾರಕ; Officer supervising the supply of betel leaves etc., to the king or officers; (SII. XV, 32, 1147).

ಹಡಪವಳ; Haḍapavaḷa: ಚೀಲವನ್ನು ಅಥವಾ ಕರಂಡಕವನ್ನು ಹಿಡಿಯುವವ; ಅರಸನ ಅಥವಾ ಉಚ್ಚ ಅಧಿಕಾರಿಯ ತಾಂಬೂಲದ ಚೀಲವನ್ನು ಹಿಡಿಯುವ ಅಧಿಕಾರಿ; A person holding the bag; an officer for carrying the bag or box with betel leaves and betelnuts of the king or the high officers. (SII, IX, I, 232, 1135; Ibid. XV, 27, 1144).

ಹಡಪಾಳಿ; Haḍapāḷi: s.a. ಹಡಪವಳ; Haḍapavaḷa; (ಕು.ವ್ಯಾ.ಭಾ. ಸಭಾ ಪ. Ku.Vyā.Bhā. Sabhā Pa. I, 58, c.1400).

ಹಡಿಯರ; Haḍiyara: s.a. ಪಡಿಯರ, Paḍiyara above; ಹಿರಿಯ ಹಡಿಯರ ಸಂಗಣ್ಣನ ವಧು ಮಲ್ಲವ್ವೆಯ ಮಗ (EC. IX(R), Bl. 553, 1190).

*****

ಶಬ್ದಸೂಚಿ

ಅ

ಇ

ಈ

ಉ

ಊ

ಋ

ಎ

ಏ

ಐ

ಒ

ಓ

ಕ

ಖ

ಗ

ಘ

ಚ

ಛ

ದ

ಧ

ನ

ಫ

ಬ

ಭ

ಮ

ಯ

ರ

ಲ

ವ

ಹ

INDEX

A

B

C

D

E

G

H

I

J

K

L

M

N

O

P

R

S

T

Y